ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
'ಕೋಟಿ' ಸಿನಿಮಾ ಮೂಲಕ ಚಂದನವನಕ್ಕೆ ಹೆಜ್ಜೆ ಇಟ್ಟಿರುವ ಮೋಕ್ಷ ಕುಶಾಲ್‌ಗೆ ಭಿನ್ನ ಪಾತ್ರಗಳ ಹಂಬಲ

ಆಳ-ಅಗಲ
ಸತತ ಇಳಿಕೆಯ ಹಾದಿಯಲ್ಲಿ ವಿದೇಶಿ ನೇರ ಹೂಡಿಕೆ
ವೇತನಕ್ಕಾಗಿ 'ಟ್ರೈ ಮಳಿಗೆ' ಸಿಬ್ಬಂದಿ ಅಲೆದಾಟ 4B
ಮೂರನೇ ಸಲ ಸಿಕ್ಕಿಬಿದ್ದ ಆರೋಪಿ 9

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
73,885	22,488	₹74,650 (ಬೆಂಗಳೂರು)	₹96,300 (ಬೆಂಗಳೂರು)	83.29

ಪ್ರಜ್ವಲ್ ರೇವಣ್ಣ ಬಂಧನ

ಜರ್ಮನಿಯಿಂದ ಬಂದ ಸಂಸದ • ಸಿಐಡಿ ಸೆಲ್‌ನಲ್ಲಿ ಇರಿಸಿ ಎಸ್‌ಐಟಿ ವಿಚಾರಣೆ

ಪ್ರಜಾವಾಣಿ ವಾರ್ತೆ

ಪ್ರಜ್ವಲ್ ರೇವಣ್ಣ

ಬೆಂಗಳೂರು: 'ಲೈಂಗಿಕ ದೌರ್ಜನ್ಯ ಹಾಗೂ ಅತ್ಯಾಚಾರ' ಆರೋಪದಡಿ ಬಂಧನ ಭೀತಿಯಿಂದ ತಲೆಮರೆಸಿಕೊಂಡಿದ್ದ ಹಾಸನ ಸಂಸದ ಪ್ರಜ್ವಲ್ ರೇವಣ್ಣ ಅವರನ್ನು ಎಸ್‌ಐಟಿ ಅಧಿಕಾರಿಗಳು ನಗರದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಗುರುವಾರ ತಡರಾತ್ರಿ ಬಂಧಿಸಿದ್ದಾರೆ.

ಲೋಕಸಭಾ ಚುನಾವಣೆಯ ಮತದಾನದ ನಂತರ ದೇಶದಿಂದ ಪರಾರಿಯಾಗಿದ್ದ ಪ್ರಜ್ವಲ್, 35 ದಿನಗಳ ಬಳಿಕ ಜರ್ಮನಿಯಿಂದ ನಗರದ ವಿಮಾನ ನಿಲ್ದಾಣಕ್ಕೆ ಗುರುವಾರ ತಡರಾತ್ರಿ 12.50 ಗಂಟೆಗೆ ಸುಮಾರಿಗೆ ಬಂದಿಳಿದರು. ನಿಲ್ದಾಣದಲ್ಲಿ ಮೊಕ್ಕಾಂ ಹೂಡಿದ್ದ ಎಸ್‌ಐಟಿ ಅಧಿಕಾರಿಗಳು, ಕೇಂದ್ರ ಕೈಗಾರಿಕಾ ಭದ್ರತಾ ಪಡೆಯ (ಸಿಐಎಸ್‌ಎಫ್) ಸಿಬ್ಬಂದಿ ಹಾಗೂ ವಲಸೆ ಅಧಿಕಾರಿಗಳ ಸಹಾಯದಿಂದ ಪ್ರಜ್ವಲ್‌ನನ್ನು ಬಂಧಿಸಿದರು.

ಹೊಳೆನರಸೀಪುರ ಟೌನ್ ಹಾಗೂ ಸಿಐಡಿ ಠಾಣೆಗಳಲ್ಲಿ ದಾಖಲಾಗಿರುವ 'ಲೈಂಗಿಕ ದೌರ್ಜನ್ಯ ಹಾಗೂ ಅತ್ಯಾಚಾರ' ಪ್ರಕರಣದ ಪ್ರಮುಖ ಆರೋಪಿ ಪ್ರಜ್ವಲ್, ಬಂಧನ ಭೀತಿಯಲ್ಲಿ ತಲೆಮರೆಸಿ ಕೊಂಡಿದ್ದ. ಇವರ ಬಂಧನಕ್ಕೆ ಬ್ಲೂ ಕಾರ್ನರ್ ನೋಟಿಸ್ ಹಾಗೂ ನ್ಯಾಯಾಲಯದಿಂದ ವಾರಂಟ್ ಜಾರಿಯಾಗಿತ್ತು.

ಪ್ರಕರಣದ ಸಂಬಂಧ ಅಜ್ಞಾತ ಸ್ಥಳದಿಂದ ಇತ್ತೀಚೆಗೆ ವಿಡಿಯೊ ಬಿಡುಗಡೆ ಮಾಡಿದ್ದ ಪ್ರಜ್ವಲ್, 'ಮೇ 31ರಂದು ಶುಕ್ರವಾರ ಎಸ್‌ಐಟಿ ಅಧಿಕಾರಿಗಳ ಎದುರು ವಿಚಾರಣೆಗೆ ಹಾಜರಾಗುತ್ತೇನೆ' ಎಂದು ಹೇಳಿದ್ದರು.

5B ಪುಟ ನೋಡಿ

ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್ 2 ನಲ್ಲಿ ಸಿಐಎಸ್‌ಎಫ್ ಸಿಬ್ಬಂದಿ ಗುರುವಾರ ತಡರಾತ್ರಿ ಬಿಗಿ ಭದ್ರತೆ ಕೈಗೊಂಡಿದ್ದರು –ಪ್ರಜಾವಾಣಿ ಚಿತ್ರ/ ಎಂ.ಎಸ್.ಮಂಜುನಾಥ್

'ನ್ಯಾಯಾಲಯಕ್ಕೆ ಹಾಜರು ಸಾಧ್ಯತೆ'

ಸಿಐಡಿ ಕಟ್ಟಡದಲ್ಲಿರುವ ಸೆಲ್‌ನಲ್ಲಿ ಪ್ರಜ್ವಲ್ ಅವರನ್ನು ಇರಿಸಿರುವ ಎಸ್‌ಐಟಿ ಅಧಿಕಾರಿಗಳು, ಶುಕ್ರವಾರ ನ್ಯಾಯಾಲಯಕ್ಕೆ ಹಾಜರುಪಡಿಸುವ ಸಾಧ್ಯತೆ ಇದೆ. ಜೊತೆಗೆ, ವಿಚಾರಣೆಗಾಗಿ ಕಸ್ಟಡಿಗೆ ಪಡೆಯಲು ಸಿದ್ಧತೆ ಮಾಡಿಕೊಂಡಿದ್ದಾರೆ.

'ಪ್ರಜ್ವಲ್ ಬಂಧನಕ್ಕೆ ನ್ಯಾಯಾಲಯದಿಂದ ವಾರಂಟ್ ಜಾರಿಯಲ್ಲಿದೆ. ಹೀಗಾಗಿ, ಪ್ರಜ್ವಲ್ ಅವರನ್ನು ಬಂಧಿಸಲಾಗಿದೆ. ಅವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗುವುದು. ಪ್ರಕರಣದಲ್ಲಿ ಇದುವರೆಗೂ ಕಲೆಹಾಕಿರುವ ಮಾಹಿತಿಯನ್ನು ನ್ಯಾಯಾಲಯಕ್ಕೆ ತಿಳಿಸಲಾಗುವುದು. ಆರೋಪಿ ವಿಚಾರಣೆ ಅಗತ್ಯವಿರುವುದಾಗಿ ನ್ಯಾಯಾಲಯಕ್ಕೆ ಹೇಳಿ ಕಸ್ಟಡಿಗೆ ಪಡೆಯಲಾಗುವುದು' ಎಂದು ಎಸ್‌ಐಟಿ ಮೂಲಗಳು ಹೇಳಿವೆ.

2023–24ನೇ ಸಾಲಿನಲ್ಲಿ ಖರ್ಚೇ ಆಗದ ₹1,038 ಕೋಟಿ

'ನಿಧಿ' ಬಳಕೆ: ಶಾಸಕರ ನಿರಾಸಕ್ತಿ

• ರಾಜೇಶ್ ರೈ ಚಟ್ಲ

ಬೆಂಗಳೂರು: ತಮ್ಮ ಕ್ಷೇತ್ರದ ಅಭಿವೃದ್ಧಿಗೆ ವಿಶೇಷ ಅನುದಾನ ನೀಡುವಂತೆ ಗೋಗರೆಯುವ ಶಾಸಕರು, ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ (ಶಾಸಕರ ನಿಧಿ) ರಾಜ್ಯ ಸರ್ಕಾರ ಪ್ರತಿಯೊಬ್ಬ ಸದಸ್ಯರಿಗೆ ಬಿಡುಗಡೆ ಮಾಡಿದ ತಲಾ ₹2 ಕೋಟಿಯನ್ನೇ ಬಳಕೆ ಮಾಡಿಲ್ಲ.

ಈ ಯೋಜನೆಯಡಿ 2023–24ನೇ ಸಾಲಿನಲ್ಲಿ (ಮಾರ್ಚ್ ಅಂತ್ಯದವರೆಗೆ) ಕೇವಲ ₹218.23 ಕೋಟಿ (ಶೇ 17.36) ವೆಚ್ಚ ಮಾಡಲಾಗಿದೆ. ಶಾಸಕರ ನಿಧಿಯ ₹1,038 ಕೋಟಿ ಜಿಲ್ಲಾಧಿಕಾರಿಗಳ ಪಿ.ಡಿ (ವೈಯಕ್ತಿಕ ಠೇವಣಿ) ಖಾತೆಯಲ್ಲಿ ವೆಚ್ಚವಾಗದೆ ಉಳಿದಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ನಡೆದ ಎಲ್ಲ ಇಲಾಖೆಗಳ ಕಾರ್ಯದರ್ಶಿಗಳು ಮತ್ತು ಇಲಾಖೆಗಳ ಮುಖ್ಯಸ್ಥರ ಸಭೆಯಲ್ಲಿ ಈ ವಿಷಯ ಪ್ರಸ್ತಾಪವಾಗಿದೆ. ಅನುದಾನ ವೆಚ್ಚ ಆಗದಿರುವುದಕ್ಕೆ ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ ಮುಖ್ಯಮಂತ್ರಿ, ಅನುದಾನವನ್ನು ಎರಡು ವರ್ಷಕ್ಕೂ ಹೆಚ್ಚು ಅವಧಿಯಿಂದ ಖರ್ಚು ಮಾಡದಿದ್ದರೆ ಅದನ್ನು ಹಿಂಪಡೆಯಲಾಗುವುದು ಎಂದು ಕಟ್ಟುನಿಟ್ಟಿನ ಎಚ್ಚರಿಕೆ ನೀಡಿದ್ದಾರೆ ಎಂದು ಗೊತ್ತಾಗಿದೆ.

ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯ ಅನುದಾನವನ್ನು ತ್ವರಿತವಾಗಿ ಖರ್ಚು ಮಾಡಲು ಮುಖ್ಯಮಂತ್ರಿ ಸೂಚಿಸಿದ್ದಾರೆ.

9ನೇ ಪುಟ ನೋಡಿ

ವೆಚ್ಚ ಆಗದಿರಲು ಕಾರಣಗಳೇನು?

- ಶಾಸಕರು ನೀಡಿರುವ ಕ್ರಿಯಾ ಯೋಜನೆಗಳಿಗೆ ಸಮಯಬದ್ಧವಾಗಿ ಜಿಲ್ಲಾಧಿಕಾರಿಗಳು, ಉಪ ವಿಭಾಗಾಧಿಕಾರಿಗಳು ಅನುಮೋದನೆ ನೀಡದಿರುವುದು
- ಆಡಳಿತಾತ್ಮಕ ಅನುಮೋದನೆ ನೀಡಿರುವ ಕಾಮಗಾರಿಗಳಿಗೆ ಶೇ 40ರಷ್ಟು ಮುಂಗಡ ಅನುದಾನವನ್ನು ಸಂಬಂಧಿಸಿದ ಅನುಷ್ಠಾನ ಸಂಸ್ಥೆಗಳಿಗೆ ವರ್ಗಾಯಿಸದೇ ಇರುವುದು
- ಆಡಳಿತಾತ್ಮಕ ಅನುಮೋದನೆ ನೀಡಿರುವ ಕಾಮಗಾರಿಗಳನ್ನು ಅನುಷ್ಠಾನ ಇಲಾಖೆ, ಏಜೆನ್ಸಿಗಳ ಕಾರ್ಯನಿರ್ವಾಹಕ ಎಂಜಿನಿಯರ್‌ಗಳು ಆರಂಭ ಮಾಡದೇ ಇರುವುದು
- ಪೂರ್ಣಗೊಳಿಸಿದ ಕಾಮಗಾರಿಗಳಿಗೆ ಹಣ ಪಾವತಿ ಆಗದೇ ಇರುವುದು

ಶಾಸಕರ 'ನಿಧಿ' ಬಳಕೆಯ ಸ್ಥಿತಿಗತಿ

₹670 ಕೋಟಿ	2022–23ರ ಅಂತ್ಯಕ್ಕೆ ಬಾಕಿ
₹594 ಕೋಟಿ	2023–24ರಲ್ಲಿ ಬಿಡುಗಡೆಯಾದ ಶಾಸಕರ ನಿಧಿ
₹1,264 ಕೋಟಿ	2023–24 ರಲ್ಲಿ ಬಳಕೆಗೆ ಲಭ್ಯವಿದ್ದ ಅನುದಾನ
₹218.23	ಕೋಟಿವೆಚ್ಚವಾದ ಮೊತ್ತ

2023–24 ನೇ ಸಾಲು

1,703	ಅನುಮೋದಿತ ಹೊಸ ಕಾಮಗಾರಿಗಳು
503	ಆರಂಭಗೊಂಡ ಕಾಮಗಾರಿಗಳು
44	ಪೂರ್ಣಗೊಂಡಿರುವ ಕಾಮಗಾರಿಗಳು
1,156	ಆರಂಭವಾಗದ ಕಾಮಗಾರಿಗಳು

ಕಾಮಗಾರಿಗಳ ಒಟ್ಟು ಚಿತ್ರಣ

31,236	ಮುಂದುವರಿದ ಒಟ್ಟು ಕಾಮಗಾರಿಗಳು
16,892	ಆರಂಭವಾಗಿರುವ ಕಾಮಗಾರಿಗಳು
7,474	ಪೂರ್ಣಗೊಂಡ ಕಾಮಗಾರಿಗಳು
7,147	ಆರಂಭವೇ ಆಗದ ಕಾಮಗಾರಿಗಳು
5,547	ಆಡಳಿತಾತ್ಮಕ ಅನುಮೋದನೆಯನ್ನೇ ನೀಡದ ಕಾಮಗಾರಿಗಳು

ಅನುದಾನ ಬಳಕೆ– ಶಾಸಕರ ನಿರ್ಲಕ್ಷ್ಯ

2023–24ನೇ ಸಾಲಿನಲ್ಲಿ ಶಾಸಕರು ₹151.57 ಕೋಟಿ ಮತ್ತು ಪರಿಷತ್ ಸದಸ್ಯರು ₹43 ಕೋಟಿ ಮೊತ್ತದ ಕ್ರಿಯಾಯೋಜನೆಗಳನ್ನು ನಮೂದಿಸಿದ್ದಾರೆ. ತಮ್ಮ ಪಾಲಿಗೆ ಲಭ್ಯವಿದ್ದ ಅನುದಾನವನ್ನು ಸಮರ್ಪಕವಾಗಿ ಬಳಕೆ ಮಾಡುವಲ್ಲಿ ಶಾಸಕರು ನಿರ್ಲಕ್ಷ್ಯ ವಹಿಸಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಮಲ್ಲೇಶ್ವರಂ
ಸುದರ್ಶನ್ ಜುವೆಲ್ಲರ್ಸ್
916 BIS ಹಾಲ್ಮಾರ್ಕ್ ಜುವೆಲ್ಲರಿ
ಅತ್ಯಂತ ಕಡಿಮೆ ಚಿನ್ನದ ದರ
₹6670/gm
ಬೆಳ್ಳಿ ದರ: ₹95/gm
ವೇಸ್ಟೇಜ್ 3% ರಿಂದ ಪ್ರಾರಂಭ
ಬೆಳ್ಳಿ ಲೇಖನಗಳ ಮೇಲೆ ಮೇಕಿಂಗ್ ಚಾರ್ಜಸ್ ಇಲ್ಲ
ನಿಯಮಗಳು ಮತ್ತು ಷರತ್ತುಗಳು ಅನ್ವಯ
Ph- 080-29909733/ 9513394070

ಆಂಧ್ರ, ತೆಲಂಗಾಣಕ್ಕೆ ಹಣ ವರ್ಗಾವಣೆ: ಅಶೋಕ ಆರೋಪ

'ತಲೆದಂಡಕ್ಕೆ ವಾರ ಗಡುವು'

ಪ್ರಜಾವಾಣಿ ವಾರ್ತೆ

ಬಿ.ನಾಗೇಂದ್ರ

ಬೆಂಗಳೂರು: ಕರ್ನಾಟಕ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣಕ್ಕೆ ಸಂಬಂಧಿಸಿದಂತೆ ಸಚಿವ ಬಿ.ನಾಗೇಂದ್ರ ಅವರನ್ನು ಜೂನ್ 6ರ ಒಳಗೆ ಸಂಪುಟದಿಂದ ವಜಾ ಮಾಡಬೇಕು. ಇಲ್ಲವಾದರೆ ರಾಜ್ಯವ್ಯಾಪಿ ಉಗ್ರ ಹೋರಾಟ ನಡೆಸುವುದಾಗಿ ವಿರೋಧ ಪಕ್ಷ ಬಿಜೆಪಿ, ರಾಜ್ಯ ಸರ್ಕಾರಕ್ಕೆ ಎಚ್ಚರಿಕೆ ನೀಡಿದೆ.

ಈ ಹಗರಣದ ವ್ಯಾಪ್ತಿ ನೆರೆಯ ರಾಜ್ಯಗಳಿಗೂ ವ್ಯಾಪಿಸಿರುವುದರಿಂದ ಪ್ರಕರಣದ ತನಿಖೆಯನ್ನು ಸಿಬಿಐಗೆ ಒಪ್ಪಿಸಬೇಕು ಎಂದು ಒತ್ತಾಯಿಸಿದೆ.

ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರು ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ದಲಿತ ವರ್ಗದವರಿಗೆ ಸೇರಿದ ಹಣವನ್ನು ಸರ್ಕಾರ ಲೂಟಿ ಮಾಡಿದೆ. ಈ ಹಣವನ್ನು ಆಂಧ್ರ ಪ್ರದೇಶ, ತೆಲಂಗಾಣ ಮುಂತಾದ ಕಡೆಗಳಲ್ಲಿ ಡ್ರಾ ಮಾಡಿಕೊಳ್ಳಲಾಗಿದೆ. ಇವೆಲ್ಲ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗಮನಕ್ಕೆ ಬರದೇ ನಡೆಯಲು ಸಾಧ್ಯವೇ' ಎಂದು ಪ್ರಶ್ನಿಸಿದರು.

9ನೇ ಪುಟ ನೋಡಿ

ಲೋಕಸಭಾ ಚುನಾವಣೆಗಾಗಿ ಹಣ ವರ್ಗಾವಣೆಯೇ: ವಿಜಯೇಂದ್ರ ಪ್ರಶ್ನೆ

ಶಿವಮೊಗ್ಗ: ವಾಲ್ಮೀಕಿ ನಿಗಮದ ನೂರಾರು ಕೋಟಿ ಹಣ ಲೋಕಸಭಾ ಚುನಾವಣೆಗೂ ಮುನ್ನ ಅಕ್ರಮವಾಗಿ ತೆಲಂಗಾಣಕ್ಕೆ ವರ್ಗಾವಣೆ ಆಗಿದೆ. ಇದು ಚುನಾವಣೆಯಲ್ಲಿ ಬಳಕೆಯಾಗಿರುವ ಸಾಧ್ಯತೆ ಇದೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅನುಮಾನ ವ್ಯಕ್ತಪಡಿಸಿದರು.

ಆತ್ಮಹತ್ಯೆ ಮಾಡಿಕೊಂಡ ಚಂದ್ರಶೇಖರನ್ ಅವರ ಮನೆಗೆ ಭೇಟಿ ನೀಡಿ ಕುಟುಂಬಕ್ಕೆ ಸಾಂತ್ವನ ಹೇಳಿದ ಬಳಿಕ ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಚುನಾವಣೆ ಸಂದರ್ಭದಲ್ಲಿ ಕಾಂಗ್ರೆಸ್ ಹೈಕಮಾಂಡ್‌ಗೆ ಕರ್ನಾಟಕವು ಎಟಿಎಂ ರೀತಿ ಬಳಕೆಯಾಗಿದೆ ಎಂಬ ಬಿಜೆಪಿ ಆರೋಪಕ್ಕೆ ಈ ಪ್ರಕರಣವೇ ಪುರಾವೆ. ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ಸಾಕ್ಷ್ಯ ಕೇಳುತ್ತಿದ್ದರು. ಈಗ ಸಾಕ್ಷ್ಯ ದೊರೆತಿದೆ ಎಂದು ಅವರು ಹೇಳಿದರು.

9ನೇ ಪುಟ ನೋಡಿ

ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಲ್ಲಿ ನಡೆದ ಅಕ್ರಮ ಹಣ ವರ್ಗಾವಣೆ ಕುರಿತಂತೆ ಸಚಿವ ಬಿ. ನಾಗೇಂದ್ರ ಅವರನ್ನು ಕರೆಯಿಸಿ ಮಾಹಿತಿ ಪಡೆಯುತ್ತೇವೆ
ಡಿ.ಕೆ. ಶಿವಕುಮಾರ್, ಉಪ ಮುಖ್ಯಮಂತ್ರಿ

ಕೇರಳ, ಈಶಾನ್ಯಕ್ಕೆ ಮುಂಗಾರು

ನವದೆಹಲಿ: ನೈರುತ್ಯ ಮುಂಗಾರು ಕೇರಳ ಮತ್ತು ಈಶಾನ್ಯ ಭಾರತವನ್ನು ಏಕಕಾಲಕ್ಕೆ ಗುರುವಾರ ಪ್ರವೇಶಿಸಿದೆ. ಪರಸ್ಪರ ದೂರದಲ್ಲಿರುವ ಎರಡು ಪ್ರದೇಶಗಳು ಒಂದೇ ದಿನ ಮುಂಗಾರು ಮಳೆಯ ಮೊದಲ ಸಿಂಚನ ಸಂಭ್ರಮಿಸಿದ ಅಪರೂಪದ ವಿದ್ಯಮಾನಕ್ಕೆ ದೇಶ ಸಾಕ್ಷಿಯಾದಂತಾಗಿದೆ.

11ನೇ ಪುಟ ನೋಡಿ

ಮುಖ್ಯಾಂಶಗಳು
- ಮುಂದಿನ ವಾರ ಕರ್ನಾಟಕಕ್ಕೆ ಮುಂಗಾರು ಪ್ರವೇಶ
- ಕೇರಳದ ಹಲವೆಡೆ ಭಾರಿ ಮಳೆ
- ಅಸ್ಸಾಂ, ಮಣಿಪುರದಲ್ಲಿ ಪ್ರವಾಹ ಪರಿಸ್ಥಿತಿ

ನೈರುತ್ಯ ಮುಂಗಾರು ಗುರುವಾರ ಕೇರಳ ಕರಾವಳಿ ಪ್ರವೇಶಿಸಿದ್ದು, ಕೋವಳಂನ ಗ್ರೋವ್ ಬೀಚ್‌ನಲ್ಲಿ ಪ್ರವಾಸಿಗರು ಸಂಭ್ರಮಿಸಿದರು –ಪಿಟಿಐ ಚಿತ್ರ

ಚಿನಕುರುಳಿ
ಪ್ರಕಾಶ್ ಶೆಟ್ಟಿ



7ನೇ ಹಂತ: ಬಹಿರಂಗ ಪ್ರಚಾರಕ್ಕೆ ತೆರೆ

ನವದೆಹಲಿ: ಲೋಕಸಭಾ ಚುನಾವಣೆಯ ಏಳನೇ ಮತ್ತು ಕೊನೆಯ ಹಂತದ ಮತದಾನದ ಬಹಿರಂಗ ಪ್ರಚಾರಕ್ಕೆ ಗುರುವಾರ ಸಂಜೆ ತೆರೆ ಬಿದ್ದಿತು. ಈ ಬಾರಿ ಒಟ್ಟು 75 ದಿನ ಬಹಿರಂಗ ಪ್ರಚಾರ ನಡೆದಿದ್ದು, 1951–52ರ ಲೋಕಸಭಾ ಚುನಾವಣೆ ಬಳಿಕ ಇಷ್ಟು ಸುದೀರ್ಘ ಅವಧಿಯ ಪ್ರಚಾರ ನಡೆದಿರುವುದು ದೇಶದ ಇತಿಹಾಸದಲ್ಲಿ ಇದೇ ಮೊದಲು.

ಶನಿವಾರ (ಜೂನ್ 1) ನಡೆಯಲಿರುವ ಕೊನೆಯ ಹಂತದಲ್ಲಿ ಏಳು ರಾಜ್ಯಗಳು ಮತ್ತು ಒಂದು ಕೇಂದ್ರಾಡಳಿತ ಪ್ರದೇಶದ (ಚಂಡೀಗಢ) ಒಟ್ಟು 57 ಲೋಕಸಭಾ ಕ್ಷೇತ್ರಗಳ ಮತದಾರರು ಹಕ್ಕು ಚಲಾಯಿಸಲಿದ್ದಾರೆ.

ಪಂಜಾಬ್‌ನ ಎಲ್ಲ 13 ಕ್ಷೇತ್ರಗಳು, ಪ್ರಧಾನಿ ನರೇಂದ್ರ ಮೋದಿ ಅವರು ಸ್ಪರ್ಧಿಸಿರುವ ವಾರಾಣಸಿ ಸೇರಿದಂತೆ ಉತ್ತರ ಪ್ರದೇಶದ 13, ಪಶ್ಚಿಮ ಬಂಗಾಳದ 9, ಬಿಹಾರದ 8, ಒಡಿಶಾದ 6, ಹಿಮಾಚಲ ಪ್ರದೇಶದ 4, ಜಾರ್ಖಂಡ್‌ನ 3 ಹಾಗೂ ಚಂಡೀಗಢದ ಒಂದು ಕ್ಷೇತ್ರಗಳಿಗೆ ಮತದಾನ ನಿಗದಿಯಾಗಿದೆ.

ಮೊದಲ ಆರು ಹಂತಗಳಲ್ಲಿ ಒಟ್ಟು 486 ಕ್ಷೇತ್ರಗಳಿಗೆ ಮತದಾನ ಮುಗಿದಿದೆ. ಎಲ್ಲ 543 ಕ್ಷೇತ್ರಗಳ ಮತ ಎಣಿಕೆ ಜೂನ್ 4ರಂದು ನಡೆಯಲಿದೆ.

ಪ್ರಧಾನಿ ಮೋದಿ ಮತ್ತು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಕೊನೆಯ ದಿನ ಪಂಜಾಬ್‌ನಲ್ಲಿ ಪ್ರಚಾರ ಕೈಗೊಂಡರು.

ಇನ್ನಷ್ಟು ಸುದ್ದಿಗಳು 8

ಸರ್ವ ಸಮುದಾಯ ಸೇರಿ ಮೊಹರಂ ದೇವರ ಮೂರ್ತಿ ತಯಾರಿ

ಭಾವೈಕ್ಯದ ಸಂಭ್ರಮ ತಂದ 'ಇಮಾವಪ್ಪ'

• ರಾಮು ಅರಕೇರಿ

ಸಂಡೂರು (ಬಳ್ಳಾರಿ): ಇಲ್ಲಿನ ಕೃಷ್ಣಾನಗರ ಗ್ರಾಮದ ದರ್ಗಾದಲ್ಲಿ 'ಮೊಹರಂ' ದೇವರನ್ನು ಮುಸ್ಲಿಮರು 'ಇಮಾವಪ್ಪ' (ಇಮಾಮಪ್ಪ) ಎಂದು ಕರೆದರೆ, ಹಿಂದೂಗಳು 'ಚಂದ್ರಶೇಖರ' ಎಂದು ಪೂಜಿಸುತ್ತಾರೆ.

ಇಡೀ ಗ್ರಾಮಸ್ಥರು ಒಟ್ಟಾಗಿ 'ಹಿರೇದೇವರು' ಎನ್ನುತ್ತಾರೆ. ಈ ದೈವದ ಮೂರ್ತಿ ತಯಾರಿಕೆ ಕಾರ್ಯ ಪೂರ್ಣಗೊಂಡಿದ್ದು, ಊರಿನ ಗ್ರಾಮಸ್ಥರು ಸಂಭ್ರಮದಲ್ಲಿ ಇದ್ದಾರೆ.

ಸುಮಾರು ₹20 ಲಕ್ಷ ವೆಚ್ಚದಲ್ಲಿ ಸಿದ್ಧವಾದ ದೇವರ ಮೂರ್ತಿಗೆ ಸಂಡೂರಿನ ಒಂದಿಬ್ಬರು ದಾನಿಗಳು ದೊಡ್ಡ ಮೊತ್ತದ ದೇಣಿಗೆ ನೀಡಿದ್ದು ಹೊರತುಪಡಿಸಿದರೆ ಇನ್ನುಳಿದ ಖರ್ಚನ್ನು ಗ್ರಾಮಸ್ಥರೇ ಭರಿಸಿದ್ದಾರೆ. ಮೂರ್ತಿ ತಯಾರಿಕೆಗೆಂದೇ ಪ್ರತಿ ಮನೆಯವರು ₹500 ರಿಂದ ₹1,000ವರೆಗೆ ದೇಣಿಗೆ ನೀಡಿದ್ದಾರೆ. ಇನ್ನೂ ಕೆಲವರು ₹5 ಸಾವಿರ, ₹10 ಸಾವಿರ ಕೊಟ್ಟಿದ್ದಾರೆ. ಕೆಲವರು ಅಗತ್ಯ ಬಂಗಾರ ಸೇರಿಸಿ, ಮೂರ್ತಿ ತಯಾರಿಕೆಗೆ ಕೈಜೋಡಿಸಿದ್ದಾರೆ.

ಹಿಂದೂಗಳಿಂದಲೂ ಪೂಜಿಸಲ್ಪಡುವ ಮೊಹರಂ ದೇವರ ಮೂರ್ತಿ ತಯಾರಿಕೆ ಕಾರ್ಯ ಪೂರ್ಣಗೊಂಡ ಕಾರಣ ಗ್ರಾಮದ ಸರ್ವ ಸಮುದಾಯದವರು ಸೇರಿ ಪೂಜಾ ವಿಧಿವಿಧಾನವನ್ನು ಗುರುವಾರ ನೆರವೇರಿಸಿದರು.

ಇಮಾವಪ್ಪನ ಮೂರ್ತಿ ಸಿದ್ಧವಾಗಿದ್ದಕ್ಕೆ ಗ್ರಾಮದ ಊರಮ್ಮ, ಈಶ್ವರ, ಆಂಜನೇಯ, ತಾಯಮ್ಮ, ಭರಮಪ್ಪ, ಭೀಮತೀರ್ಥ, ಬಾಬಾಯ್ಯ ದರ್ಗಾದಲ್ಲೂ ಪೂಜಾ ಕಾರ್ಯ ನಡೆದವು. ವಿವಿಧ ದರ್ಗಾಗಳಲ್ಲೂ ವಿಶೇಷ ಪೂಜೆ ನಡೆಯಿತು. ಹೀಗಾಗಿ ಇಡೀ ಊರಲ್ಲಿ ಹಬ್ಬದ ವಾತಾವರಣವಿತ್ತು.

ಸಂಭ್ರಮದ ಭಾಗವಾಗಿ ಹುಗ್ಗಿ, ಅನ್ನ ಸಂತರ್ಪಣೆ ನಡೆಯಿತು. ವಿಶೇಷವೆಂದರೆ, ಈ ದಾಸೋಹಕ್ಕೆ ಗ್ರಾಮದ ಪ್ರತಿ ಮನೆಗಳಿಂದಲೂ ಬೆಲ್ಲ, ಅಕ್ಕಿ, ತುಪ್ಪ, ಗೋಧಿ ನೀಡಲಾಗಿತ್ತು. ದೇವರ ಕಾರ್ಯಕ್ಕೆ ತಮ್ಮ ಪಾಲು ಸಮರ್ಪಿಸಿದ ಧನ್ಯತೆ ಗ್ರಾಮಸ್ಥರಲ್ಲಿ ಕಂಡು ಬಂತು.

ಸುಮಾರು ₹20 ಲಕ್ಷದಲ್ಲಿ ನಿರ್ಮಾಣಗೊಂಡಿರುವ ಮೊಹರಂ ದೇವರು

ಮಾಬು ಸುಬಾನಿ ಹಬ್ಬವಿದ್ದರೆ ಹಿಂದೂಗಳೂ ಆಚರಿಸುತ್ತೇವೆ. ಯುಗಾದಿ, ದಸರಾ ಹಬ್ಬಗಳಲ್ಲಿ ಮುಸ್ಲಿಮರು ಹಿಂದೂ ದೇವರುಗಳಿಗೆ ಎಡೆ ಕೊಡುತ್ತಾರೆ
ಪೋತಲಿಂಗಪ್ಪ, ಮುಖಂಡ, ಕೃಷ್ಣಾನಗರ ಗ್ರಾಮ

ಎಲ್ಲರೂ ಒಂದಾಗಿ ಜೀವನ ಸಾಗಿಸುತ್ತಿದ್ದೇವೆ. ಧಾರ್ಮಿಕ ವಿಚಾರಗಳಲ್ಲೂ ಪರಸ್ಪರ ಸಂಪ್ರದಾಯಗಳನ್ನು ಗೌರವಿಸುವ ವಾತಾವರಣ ನಮ್ಮ ಊರಿನಲ್ಲಿದೆ
ಬಾಣದಾರ್ ಸುಬಾನ್ ಸಾಬ್, ಮುಖಂಡ, ಕೃಷ್ಣಾನಗರ ಗ್ರಾಮ

10 ಮಲಬಾರ್ ವಾಗ್ದಾನಗಳು
ಸಂಪೂರ್ಣ ಪಾರದರ್ಶಕತೆ | ಖಚಿತ ಜೀವನಪರ್ಯಂತ ಉಚಿತ ಮೇಯಿಂಟೆನೆನ್ಸ್ | ಚಿನ್ನ ವಿನಿಮಯದಲ್ಲಿ ಶೂನ್ಯ ಕಡಿತ | 100% HUID ಅನುಸರಣೆಯ ಚಿನ್ನ | ಪರೀಕ್ಷಿಸಲಾಗಿರುವ ಮತ್ತು ಪ್ರಮಾಣೀಕೃತ ವಜ್ರಗಳು
ಬೈಬ್ಯಾಕ್ ಗ್ಯಾರಂಟಿ | ಆಭರಣವು ಪೂರಕ ವಿಮೆಗೆ ಒಳಪಡುತ್ತದೆ. | ನ್ಯಾಯಯುತ ಬೆಲೆಯ ನೀತಿಗಳು | ಜವಾಬ್ದಾರಿಯುತ ಮೂಲದ ಉತ್ಪನ್ನಗಳು | ಕಾರ್ಮಿಕರಿಗೆ ನ್ಯಾಯಯುತ ಅಭ್ಯಾಸಗಳು
ಬೆಂಗಳೂರು: ಎಂ.ಜಿ ರೋಡ್ | ಡಿಕೆನ್ಸನ್ ರಸ್ತೆ | ಜಯನಗರ | ರಾಜಾಜಿನಗರ | ಕೋರಮಂಗಲ | ಫೀನಿಕ್ಸ್ ಮಾರ್ಕೆಟ್‌ಸಿಟಿ | ಮಾರತ್ತಹಳ್ಳಿ | ಬನ್ನೇರುಘಟ್ಟ ರಸ್ತೆ ಕಮ್ಮನಹಳ್ಳಿ | ಮಲ್ಲೇಶ್ವರಂ | ಹೆಚ್‌ಎಸ್‌ಆರ್ ಲೇಔಟ್ | ಬನಶಂಕರಿ | ಯಲಹಂಕ | ಫೋರಮ್ ಸೌತ್ ಬೆಂಗಳೂರು | ಆರ್‌ಆರ್ ನಗರ | ಫೀನಿಕ್ಸ್ ಮಾಲ್ ಆಫ್ ಏಷ್ಯಾ, ಹೆಬ್ಬಾಳ | ಮೈಸೂರು | ಮಂಡ್ಯ | ಹಾಸನ | ಚಿಕ್ಕಮಗಳೂರು | ಮಂಗಳೂರು | ಉಡುಪಿ | ಬೆಳಗಾವಿ | ಹುಬ್ಬಳ್ಳಿ | ಧಾರವಾಡ | ವಿಜಯಪುರ | ಕಲಬುರಗಿ ಬೀದರ್ | ಬಳ್ಳಾರಿ | ದಾವಣಗೆರೆ | ಶಿವಮೊಗ್ಗ | ತುಮಕೂರು | ರಾಯಚೂರು
Call: 1800 572 0916 | BUY ONLINE AT: malabargoldanddiamonds.com
INDIA | AUSTRALIA | CANADA | UK | USA | SINGAPORE | MALAYSIA | UAE | QATAR | KSA | OMAN | KUWAIT | BAHRAIN
ಷರತ್ತುಗಳು ಅನ್ವಯ

ಶುಕ್ರವಾರದ ಉಷ್ಣಾಂಶ 33° ಗರಿಷ್ಠ 23° ಕನಿಷ್ಠ

ಹವಾಮಾನ ಮುನ್ಸೂಚನೆ
ಮೋಡ ಕವಿದ ವಾತಾವರಣ ಇರಲಿದ್ದು, ಅಲ್ಲಲ್ಲಿ ತುಂತುರು ಮಳೆ ಬೀಳುವ ಸಾಧ್ಯತೆ ಇದೆ.

ತಾಪಮಾನ — ಶನಿವಾರ 33° 23° | ಭಾನುವಾರ 33° 23° | ಸೋಮವಾರ 33° 23°

ಸೂರ್ಯೋದಯ: ಬೆ. 5:52 ಸೂರ್ಯಾಸ್ತ : ಸ. 6:42 ಚಂದ್ರೋದಯ: ರಾ. 12:04 ಚಂದ್ರಾಸ್ತ: ಬೆ. 11:59 ಗುರುವಾರದ ಹವಾಮಾನ : ಗರಿಷ್ಠ 33° ಕನಿಷ್ಠ 22°

ಪ್ರಜಾವಾಣಿ

ಸುಧಾ, ಮಯೂರ ಓದಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ಮೂಲಸೌಕರ್ಯ ವಿಭಾಗ–ರಾಮೂ ನರಸಿಂಹರಾಜ ಚೌಕ, ಬೆಂಗಳೂರು–560 002.
ಸಂಖ್ಯೆ:ಕಾಪಾಅ/ರಮೂ/ಮೂಲ ವಿಭಾಗ/ಟೆಂಡರ್/02/2024–25 ದಿನಾಂಕ:30.05.2024

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) (ದ್ವಿಲಕೋಟೆ ಪದ್ಧತಿ)
(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)
ಕಾರ್ಯಪಾಲಕ ಅಭಿಯಂತರರು, (ಮೂಲಸೌಕರ್ಯ ವಿಭಾಗ–ರಮೂ) ಇವರು Underground vehicular viaduct (Tunnel) ಗೆ ಸಂಬಂಧಿಸಿದಂತೆ ತದ್ರೂಪಿ ಕಾಮಗಾರಿಗಳನ್ನು ನಿರ್ವಹಿಸಿರುವ ಹೆಸರಾಂತ ಸಮಾಲೋಚಕರಿಂದ ಈ ಕೆಳಕಂಡ ಸೇವೆಗಳಿಗಾಗಿ ಬಿಡ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ನಿಯೋಜನೆಯ ಹೆಸರು
1.	ಹೆಬ್ಬಾಳ ಎಸ್ಟೀಮ್ ಮಾಲ್ ಜಂಕ್ಷನ್‌ನಿಂದ ರೇಷ್ಮೆ ಮಂಡಳಿ ಕೆಎಸ್‌ಆರ್‌ಪಿ ಜಂಕ್ಷನ್‌ವರೆಗೆ underground vehicular viaduct (Tunnel) ನಿರ್ಮಾಣ ಕಾಮಗಾರಿಗಾಗಿ ವಿಸ್ತೃತ ಯೋಜನಾ ವರದಿ ಸಿದ್ಧಪಡಿಸಲು ಸಲಹೆ ಸೇವೆಗಳನ್ನು ಒದಗಿಸುವುದು. ಯೋಜನೆಯ ಮೊತ್ತ: ರೂ.8000.00 ಕೋಟಿಗಳು, ಇಎಂಡಿ ಮೊತ್ತ: ರೂ.10.00 ಲಕ್ಷಗಳು (ರೂ. 1.00 ಲಕ್ಷ ಕೆಪಿಪಿಪಿ ಮೂಲಕ ಮತ್ತು ಉಳಿದ ರೂ.9.00 ಲಕ್ಷಗಳು ಬ್ಯಾಂಕ್ ಖಾತರಿ/ಎಫ್‌ಡಿಆರ್ ಮೂಲಕ)

• ಫ್ಲಾಟ್‌ಫಾರ್ಮ್‌ನಲ್ಲಿ ಆರ್‌ಎಫ್‌ಪಿಗಳು ಈಗಾಗಲೇ ಪೂರ್ವಾರ್ಹತೆ ಹೊಂದಿರುವ ಸಮಾಲೋಚಕರಿಗೆ ತೆರೆದಿರುತ್ತವೆ.

ಟೆಂಡರ್ ವೇಳಾಪಟ್ಟಿ: (1) ಬಿಡ್ ಪೂರ್ವಭಾವಿ ಸಭೆಯನ್ನು ಪ್ರಧಾನ ಅಭಿಯಂತರರ ಕಚೇರಿ, ಬೃ.ಬೆಂ.ಮ.ಪಾಲಿಕೆ, 1ನೇ ಮಹಡಿ, ಅನೆಕ್ಸ್ ಕಟ್ಟಡ–2, ನರಸಿಂಹರಾಜ ಚೌಕ, ಬೆಂಗಳೂರು – 560 002 ಇಲ್ಲಿ ದಿನಾಂಕ **07.06.2024**ರ ಸಂಜೆ **4:00** ಗಂಟೆಗೆ ನಡೆಸಲಾಗುವುದು. (2) ಭರ್ತಿ ಮಾಡಿದ ಪ್ರಸ್ತಾವನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ **14.06.2024**ರ ಸಂಜೆ **4:00** ಗಂಟೆಯೊಳಗೆ. (3) ತಾಂತ್ರಿಕ ಪ್ರಸ್ತಾವನೆಗಳನ್ನು ತೆರೆಯುವ ದಿನಾಂಕ **15.06.2024**ರ ಸಂಜೆ **4:05** ಗಂಟೆಯ ನಂತರ. (4) ಆರ್ಥಿಕ ಪ್ರಸ್ತಾವನೆಗಳನ್ನು ತಾಂತ್ರಿಕ ಪ್ರಸ್ತಾವನೆಗಳಿಗೆ ಅನುಮೋದನೆ ದೊರೆತ ನಂತರ ತೆರೆಯಲಾಗುವುದು. **ಸಹಿ/– ಕಾರ್ಯಪಾಲಕ ಅಭಿಯಂತರರು, ಮೂಲಸೌಕರ್ಯ ವಿಭಾಗ–ರಮೂ**

AstraZeneca
ಆಸ್ಟ್ರಾಜೆನೆಕ ಫಾರ್ಮಾ ಇಂಡಿಯಾ ಲಿಮಿಟೆಡ್
(CIN: L24231KA1979PLC003563)
ರಿಜಿಸ್ಟರ್ಡ್ ಆಫೀಸ್: ಬ್ಲಾಕ್ ಎನ್1, 12ನೇ ಮಹಡಿ, ಮಾನ್ಯತಾ ಎಂಬಸಿ ಬಿಸಿನೆಸ್ ಪಾರ್ಕ್, ರಾಚೇನಹಳ್ಳಿ, ಔಟರ್ ರಿಂಗ್ ರೋಡ್, ಬೆಂಗಳೂರು – 560 045
ಇಮೇಲ್: comp.secy@astrazeneca.com ವೆಬ್: www.astrazeneca.com/india
ದೂರವಾಣಿ: +91 80 67748000, ಫ್ಯಾಕ್ಸ್: +91 80 6774 8557

ಸದಸ್ಯರಿಗೆ ಸೂಚನೆ

ಮೇ 27, 2024ರ ಅಂಚೆ ಮತದಾನ ಸೂಚನೆಯಲ್ಲಿ ಹೇಳಿರುವಂತಹ ವ್ಯವಹಾರಗಳು ಮತ್ತು ಅದಕ್ಕೆ ಸಂಬಂಧಿಸಿದಂತಹ ವಿವರಣಾತ್ಮಕ ಹೇಳಿಕೆಗಳ ಬಗ್ಗೆ ತನ್ನ ಸದಸ್ಯರ ಅನುಮೋದನೆಯನ್ನು ಅಂಚೆ ಮತದಾನ ಸೂಚನೆಯ (ಕೇವಲ ರಿಮೋಟ್ ಇ–ಮತದಾನದ ಮೂಲಕ ಮಾತ್ರವೇ) ಮೂಲಕ ಕೋರುತ್ತ ಕಂಪನಿಯು, ಕಂಪನಿಗಳ (ಆಡಳಿತ ಮತ್ತು ನಿರ್ವಹಣೆ) ನಿಯಮಾವಳಿಯ, 2014 ('ನಿಯಮಾವಳಿ') ಜೊತೆಗೆ ಓದಿಕೊಂಡಂತೆ ಕಂಪನಿಗಳ ಕಾಯಿದೆ, 2013 ('ಕಾಯಿದೆ') ರ 108, 110 ಕಲಮುಗಳು ಮತ್ತು ಅನ್ವಯವಾಗುವಂತಹ ಇತರ ನಿಬಂಧನೆಗಳ, ಸಾಮಾನ್ಯ ಸಭೆಗಳ ಕುರಿತಾದ ಸೆಕ್ರೆಟೇರಿಯಲ್ ಮಾನದಂಡ (SS-2) ಮತ್ತು ಸೆಬಿ (ಲಿಸ್ಟಿಂಗ್ ಬಾಧ್ಯತೆಗಳು ಮತ್ತು ಬಹಿರಂಗಪಡಿಸಬೇಕಾದ ಅಗತ್ಯತೆಗಳು) ನಿಬಂಧನೆಗಳು, 2015 ('ಲಿಸ್ಟಿಂಗ್ ನಿಬಂಧನೆಗಳು') [ಇದರಲ್ಲಿ, ಸದ್ಯ ಜಾರಿಯಲ್ಲಿ ಇರುವಂತಹ, ಅದರ ಯಾವುದೇ ಶಾಸನಬದ್ಧ ಮಾರ್ಪಾಡು(ಗಳು) ಅಥವಾ ಪುನಃ–ವಿಧಿಸಿರುವ ಕಾನೂನು(ಗಳು) ಸೇರುತ್ತವೆ], ಸಾಮಾನ್ಯ ಸುತ್ತೋಲೆ ಸಂ. 14/2020 ದಿನಾಂಕ ಏಪ್ರಿಲ್ 8, 2020 ಮತ್ತು ಸಾಮಾನ್ಯ ಸುತ್ತೋಲೆ ಸಂ. [illegible]

ಇಲೆಕ್ಟ್ರಾನಿಕ್ ವೋಟಿಂಗ್‌ಗೆ ಸಂಬಂಧಿಸಿದಂತೆ ಏನಾದರೂ ಪ್ರಶ್ನೆಗಳಿದ್ದರೆ: www.evoting.nsdl.com ನ ಡೌನ್‌ಲೋಡ್ ವಿಭಾಗಗಳಲ್ಲಿರುವ ಸಾಮಾನ್ಯವಾಗಿ ಕೇಳುವ ಪ್ರಶ್ನೆಗಳು (FAQs) ಮತ್ತು ಷೇರುದಾರರಿಗಾಗಿ ಇ–ವೋಟಿಂಗ್ ಬಳಕೆದಾರರ ಕೈಪಿಡಿಗಳನ್ನು ಪರಾಮರ್ಶಿಸಬಹುದು ಅಥವಾ ವಿನಂತಿ ಇಮೇಲ್ ಅನ್ನು evoting@nsdl.co.in ಗೆ ಕಳುಹಿಸಬಹುದು. ಇಲೆಕ್ಟ್ರಾನಿಕ್ ವೋಟಿಂಗ್‌ಗೆ ಸಂಬಂಧಿಸಿದಂತೆ ದೂರುಗಳೇನಾದರೂ ಇದ್ದರೆ ದಯವಿಟ್ಟು ಸಂಪರ್ಕಿಸಿ: ಶ್ರೀ ಸೋನಿ ಸಿಂಗ್, ಅಸಿಸ್ಟೆಂಟ್ ಮ್ಯಾನೇಜರ್ ಅಥವಾ ಶ್ರೀಮತಿ ಸರಿತಾ ಮೊಟೆ, ಅಸಿಸ್ಟೆಂಟ್ ಮ್ಯಾನೇಜರ್ NSDL 4ನೇ ಮಹಡಿ, 'ಎ' ಶಾಖೆ, ಟ್ರೇಡ್ ವರ್ಲ್ಡ್, ಕಮಲಾ ಮಿಲ್ಸ್ ಕಾಂಪೌಂಡ್, ಸೇನಾಪತಿ ಬಾಪಟ್ ಮಾರ್ಗ್, ಲೋವರ್ ಪರೇಲ್, ಮುಂಬೈ– 400 013, ದೂರವಾಣಿ: 022 – 4886 7000/022 – 2499 7000.

ಅಸ್ಟ್ರಾಜೆನಿಕ ಫಾರ್ಮ ಇಂಡಿಯಾ ಲಿಮಿಟೆಡ್ ಪರವಾಗಿ

ಸ್ಥಳ: ಬೆಂಗಳೂರು
ದಿನಾಂಕ: ಮೇ 27, 2024

ಮಾನಸ. ಆರ್
ಕಂಪನಿ ಸೆಕ್ರಟರಿ

ರೆಸಾರ್ಟ್‌ಗೆ ಕುಮಾರಸ್ವಾಮಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ತಮ್ಮ ಕುಟುಂಬದ ಜತೆ ವಿಶ್ರಾಂತಿಗಾಗಿ ಕಬಿನಿ ಪ್ರವಾಸ ಕೈಗೊಂಡಿದ್ದಾರೆ.

ಆರೆಂಜ್ ಕೌಂಟಿ ರೆಸಾರ್ಟ್‌ನಲ್ಲಿ ತಂಗಿರುವ ಅವರು, ಗುರುವಾರ ಕಬಿನಿ ಹಿನ್ನೀರಿನಲ್ಲಿ ಬೋಟ್ ಮೂಲಕ ಜಲ ಸಂಚಾರ ನಡೆಸಿದರು. ನಂತರ ಸಫಾರಿಗೆ ಹೋಗಿದ್ದರು. ಕುಮಾರಸ್ವಾಮಿ ಅವರ ಜತೆ ಪತ್ನಿ ಅನಿತಾ ಕುಮಾರಸ್ವಾಮಿ, ಪುತ್ರ ನಿಖಿಲ್, ಸೊಸೆ ರೇವತಿ, ಮೊಮ್ಮಗ ಅವ್ಯಾನ್ ದೇವ್ ಇದ್ದಾರೆ.

ನೈಋತ್ಯ ರೈಲ್ವೆ
ಟೆಂಡರ್ ಸೂಚನೆ ಸಂ. HiringBlacksmith-SNT-15No, ದಿನಾಂಕ: 27.05.2024
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರಣೆ	ಅಂದಾಜು ಮೌಲ್ಯ
ಬೆಂಗಳೂರು ವಿಭಾಗದ ಎಸ್&ಟಿ ನಿರ್ವಹಣಾ ಚಟುವಟಿಕೆಗಳಲ್ಲಿ ಸಹಾಯಕ್ಕಾಗಿ ಕಮ್ಮಾರರನ್ನು ಹೊರಗುತ್ತಿಗೆ ನೀಡುವುದು.	ರೂ. 1,29,90,120/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 18–06–2024, 15:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಹಿರಿಯ ವಿಭಾಗೀಯ ಸಿಗ್ನಲ್ ಮತ್ತು ಟೆಲಿಕಾಂ ಇಂಜಿನಿಯರ್ ಬೆಂಗಳೂರು
PUB/122/AAV/PRB/SWR/2024-25
South Western Railway-SWR SWRRLY SWRRLY

ಕಲುಷಿತಗೊಂಡ ನೀರು, ಪರಿಸರವೂ ಹಾಳು: ನಾಗರಿಕರ ಆತಂಕ

ರಾಮಪ್ಪನ ಕೆರೆ: ತ್ಯಾಜ್ಯ ತೆರವಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ಬೆಂಗಳೂರು ದಕ್ಷಿಣ ತಾಲ್ಲೂಕಿನ ಪುನುಗುಮಾರನ ಹಳ್ಳಿಯ ರಾಮಪ್ಪನ ಕೆರೆಯಲ್ಲಿ ಬಿರು ಬೇಸಿಗೆಯಲ್ಲೂ ನೀರು ಸಂಗ್ರಹವಾಗಿದ್ದು, ಸುತ್ತಲಿನ ಅಂತರ್ಜಲ ಹೆಚ್ಚಲು ಕಾರಣವಾಗಿದೆ.

ಸಮೃದ್ಧ ಜಲರಾಶಿ ಇರುವ ಈ ಕೆರೆಯ ಒಂದು ಬದಿ ಘನ ತ್ಯಾಜ್ಯ, ಕಸ ಕಡ್ಡಿ, ನರ್ಸರಿಯಲ್ಲಿ ಉಪಯೋಗಕ್ಕೆ ಬಾರದ ಮಣ್ಣು, ಕಲ್ಲು ಸುರಿಯುತ್ತಿದ್ದಾರೆಂದು ನಾಗರಿಕರು ಬೇಸರ ವ್ಯಕ್ತಪಡಿಸಿದ್ದಾರೆ.

ರಾಮಪ್ಪನ ಕೆರೆಗೆ ಗಣಪತಿಹಳ್ಳಿ, ಪುನುಗುಮಾರನಹಳ್ಳಿ, ಬಸಪ್ಪನಪಾಳ್ಯ, ಕೇತೋಹಳ್ಳಿ ಭಾಗದಿಂದ ನೀರುಗಾಲುವೆ ಮೂಲಕ ಮಳೆ ನೀರು ಹರಿದು ಬರುತ್ತದೆ. ಹೀಗಾಗಿ ಎರಡ್ಮೂರು ವರ್ಷಗಳ ಹಿಂದೆ ತುಂಬಿದ ಕೆರೆಯಲ್ಲಿ ಈಗಲೂ ನೀರಿದೆ. ಆದರೆ, ಇತ್ತೀಚೆಗೆ ಕೆರೆ ಸುತ್ತ ತ್ಯಾಜ್ಯ ಸುರಿಯುತ್ತಿದ್ದು, ಇದರಿಂದ ಕೆರೆ ನೀರು ಕಲುಷಿತಗೊಂಡು, ಪರಿಸರವೂ ಹಾಳಾಗುತ್ತಿದೆ ಎಂದು ಸ್ಥಳೀಯರು ಆತಂಕ ವ್ಯಕ್ತಪಡಿಸಿದ್ದಾರೆ.

ನಾಲ್ಕು ವರ್ಷಗಳ ಹಿಂದೆ ಹೀಗೆ ತ್ಯಾಜ್ಯಗಳಿಂದ ತುಂಬಿ ಹೋಗಿ, ಕೆರೆಗೆ ಮಳೆ ನೀರು ಹರಿಯುವ ನೀರುಗಾಲುವೆಗಳು ಮುಚ್ಚಿ ಹೋಗಿದ್ದವು. ಮಳೆ ಬಂದಾಗ ಕೆರೆ ಸೇರುತ್ತಿದ್ದ ಅಲ್ಪಸ್ವಲ್ಪ ಮಳೆ ನೀರು ಡಿಸೆಂಬರ್ ವೇಳೆಗೆ ಖಾಲಿಯಾಗುತ್ತಿತ್ತು. ಕೆರೆಯ ಪರಿಸ್ಥಿತಿ ಗಮನಿಸಿದ್ದ ಯುದ್ಧ ಭೂಮಿ ಹೋರಾಟ ಸೇನೆ ರಾಜ್ಯ ಘಟಕದ ಅಧ್ಯಕ್ಷ ಹೇಮಂತ್ ರಾಜ್, 2019ರಲ್ಲಿ ಕೆರೆ ಸ್ವಚ್ಛತೆಗೆ ಮುಂದಾದರು. ಕಂದಾಯ ಇಲಾಖೆಯ ಅನುಮತಿಯೊಂದಿಗೆ, ಸ್ವಂತ ಹಣದಿಂದ ಜೆಸಿಬಿ, ಟ್ರ್ಯಾಕ್ಟರ್‌ಗಳನ್ನು ಬಳಸಿ. ಕೆರೆ ಸ್ವಚ್ಛಗೊಳಿಸಿದರು. ನೀರುಗಾಲುವೆಗಳ ಒತ್ತುವರಿ ತೆರವುಗೊಳಿಸಿ, ಮಳೆ ನೀರು ಸರಾಗವಾಗಿ ಹರಿಯುವಂತೆ ಮಾಡಿದರು. 2020ರಲ್ಲಿ ಉತ್ತಮ ಮಳೆ ಬಂತು ಕೆರೆ ಭರ್ತಿಯಾಯಿತು. ಸ್ವಚ್ಛಗೊಂಡ ಕೆರೆಗೆ ಕಂದಾಯ ಇಲಾಖೆ ಕೆರೆಯ ಸುತ್ತ ತಂತಿ ಬೇಲಿ ನಿರ್ಮಿಸಿತ್ತು.

'ಈಗ ಮತ್ತೆ ಕೆರೆಗೆ ತ್ಯಾಜ್ಯ ತುಂಬುವ ಕೆಲಸವಾಗುತ್ತಿದೆ. ಕೆರೆಯ ಸುತ್ತ ಹಾಕಿದ ತಂತಿ ಬೇಲಿ ಕಿತ್ತುಹಾಕಲಾಗಿದೆ. ಸಂಬಂಧಪಟ್ಟವರು ಇದನ್ನು ತಡೆದು ಕೆರೆಯನ್ನು ರಕ್ಷಿಸಬೇಕು' ಎಂದು ನಾಗರಿಕರು ಒತ್ತಾಯಿಸಿದ್ದಾರೆ.

ಬೆಂಗಳೂರು ದಕ್ಷಿಣ ತಾಲ್ಲೂಕಿನ ಪುನುಗುಮಾರನಹಳ್ಳಿಯ ರಾಮಪ್ಪನ ಕೆರೆ ಅಂಗಳದಲ್ಲಿ ಸುರಿಯಲಾದ ತ್ಯಾಜ್ಯದ ರಾಶಿ

ಪುನುಗುಮಾರನ ಹಳ್ಳಿಯ ರಾಮಪ್ಪನ ಕೆರೆ

ಕೆರೆ ರಕ್ಷಿಸಿ

'ರಾಮಪ್ಪನಕೆರೆ, ರಾಮೋಹಳ್ಳಿ ಕೆರೆಗಳಲ್ಲಿ ಬೇಸಿಗೆಯಲ್ಲೂ ನೀರಿದ್ದರಿಂದ ಸುತ್ತಲಿನ ಕೊಳವೆಬಾವಿಗಳಲ್ಲಿ ನೀರು ಬತ್ತಿ ಹೋಗಲಿಲ್ಲ. ಇದರಿಂದ ಜನ ಜಾನುವಾರುಗಳಿಗೆ, ಪಕ್ಷಿಗಳಿಗೆ ಕುಡಿಯುವ ನೀರಿನ ಸಮಸ್ಯೆಯಾಗಲಿಲ್ಲ. ಕೃಷಿ, ನರ್ಸರಿ ಚಟುವಟಿಕೆಗಳಿಗೂ ತೊಂದರೆ ಆಗಲಿಲ್ಲ. ಕೆರೆಗಳನ್ನು ರಕ್ಷಿಸುವ ಅಗತ್ಯವಿದೆ' ಎಂದು ಪುನುಗು ಮಾರನಹಳ್ಳಿಯ ನರ್ಸರಿ ಮಾಲೀಕ ರೇವಣ್ಣ ಹೇಳಿದರು.

ನೈಋತ್ಯ ರೈಲ್ವೆ
ಟೆಂಡರ್ ಸೂಚನೆ ಸಂ. Hiring-MP-FOIS-Railnet ದಿನಾಂಕ: 27.05.2024
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರಣೆ	ಅಂದಾಜು ಮೌಲ್ಯ
2 ವರ್ಷಗಳ ಅವಧಿಗೆ ಡಿಆರ್‌ಎಂ ಕಟ್ಟಡ ಸಂಬಂಧಿತ ಕಛೇರಿಗಳು, ರೈಲ್ವೆ ಕಾಲೋನಿ, ಬೆಂಗಳೂರು ಮತ್ತು ಯಶವಂತಪುರದಲ್ಲಿ ಹೊಸ ಸಂಪರ್ಕವನ್ನು ಒದಗಿಸುವುದರ ಜೊತೆಗೆ ರೈಲ್ ನೆಟ್ / ಎಫ್ ಓಐಎಸ್ ನೆಟ್‌ವರ್ಕ್‌ನ ನಿರ್ವಹಣೆ ಮತ್ತು ಮೇಲ್ವಿಚಾರಣೆಗಾಗಿ ಹೆಚ್ಚು ನುರಿತ, ಅರೆ–ಕುಶಲ ಮತ್ತು ಕೌಶಲ್ಯರಹಿತ ಮಾನವಶಕ್ತಿಯನ್ನು ನೇಮಿಸಿಕೊಳ್ಳುವುದು.	ರೂ. 88,80,408/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 18–06–2024, 15:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಹಿರಿಯ ವಿಭಾಗೀಯ ಸಿಗ್ನಲ್ ಮತ್ತು ಟೆಲಿಕಾಂ ಇಂಜಿನಿಯರ್ ಬೆಂಗಳೂರು
PUB/120/AAV/PRB/SWR/2024-25
South Western Railway-SWR SWRRLY SWRRLY

ನೈಋತ್ಯ ರೈಲ್ವೆ
ಟೆಂಡರ್ ಸೂಚನೆ ಸಂ.: Hiring-TechAst-DataAnly ದಿನಾಂಕ: 27.05.2024
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರಣೆ	ಅಂದಾಜು ಮೌಲ್ಯ
ನೈಋತ್ಯ ರೈಲ್ವೆಯ ಬೆಂಗಳೂರು ವಿಭಾಗದಲ್ಲಿ 24 ತಿಂಗಳ ಅವಧಿಗೆ ಎಸ್ & ಟಿ ನಿರ್ವಹಣಾ ಚಟುವಟಿಕೆಗಳಲ್ಲಿ ತಾಂತ್ರಿಕ ಸಹಾಯಕ್ಕಾಗಿ ಮಾನವ ಸಂಪನ್ಮೂಲ (ತಂತ್ರಜ್ಞರು/ವೈರ್‌ಮೆನ್) ಮತ್ತು ಪರೀಕ್ಷಾ ಕೊಠಡಿಯ 24x7 ಕಾರ್ಯಾಚರಣೆಗಾಗಿ ಡೇಟಾ ವಿಶ್ಲೇಷಕರ ನೇಮಕ	ರೂ. 4,15,59,000/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 18–06–2024, 15:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಹಿರಿಯ ವಿಭಾಗೀಯ ಸಿಗ್ನಲ್ ಮತ್ತು ಟೆಲಿಕಾಂ ಇಂಜಿನಿಯರ್ ಬೆಂಗಳೂರು
PUB/121/AAV/PRB/SWR/2024-25
South Western Railway-SWR SWRRLY SWRRLY

ಪಾದಚಾರಿ ಮಾರ್ಗಕ್ಕೆ ಮರ ಹನನ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ಕೊಟ್ಟಿಗೆಪಾಳ್ಯ ವಾರ್ಡ್ ಸುಮನಹಳ್ಳಿ ರಸ್ತೆಯಲ್ಲಿ ರಾಮಕೃಷ್ಣಪ್ಪ ಲೇಔಟ್, ಗಂಗಮ್ಮ ಗಾರ್ಡನ್, ಮಾಳಗಾಳವರೆಗಿನ ರಸ್ತೆಯ ಎರಡು ಬದಿಯಲ್ಲಿ ಪಾದಚಾರಿ ಮಾರ್ಗ ನಿರ್ಮಾಣಕ್ಕಾಗಿ ಹತ್ತಾರು ಮರಗಳನ್ನು ಕಡಿದು ಹಾಕಲಾಗಿದೆ.

ಹೊಸ ವರ್ತುಲ ರಸ್ತೆಯ ಅಂಡರ್‌ಪಾಸ್‌ನಿಂದ ಮಾಳಗಾಳದ ಬಸ್ ತಂಗುದಾಣದವರೆಗೆ ಪಾದಚಾರಿ ಮಾರ್ಗ ನಿರ್ಮಿಸಲು ಮಣ್ಣು ಅಗೆದು ಅಲ್ಲಿದ್ದ ಮರದ ಬೇರುಗಳನ್ನು ಕತ್ತರಿಸಿ ಹಾಕಿದ್ದಾರೆ. ಇದರಿಂದ ಕೆಲವು ಮರಗಳು ಉರುಳಿವೆ. ಈ ಬಗ್ಗೆ ನಾಗರಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ರಾಮಕೃಷ್ಣಪ್ಪ ಲೇಔಟ್, ಇಂದಿರಾ ಕ್ಯಾಂಟೀನ್‌ವರೆಗಿರುವ ರಸ್ತೆಯ ಒಂದು ಭಾಗದಲ್ಲಿ ಇಂದಿರಾ ಕ್ಯಾಂಟೀನ್, ಒಣಕಸ ಸಂಗ್ರಹದ ಘಟಕ, ಮತ್ತೊಂದು ಭಾಗದಲ್ಲಿ ಬೋಸ್ಕೊ ವೃತ್ತಿಪರ ತರಬೇತಿ ಕೇಂದ್ರವಿದೆ. ಈ ರಸ್ತೆಯಲ್ಲಿ ಪಾದಚಾರಿ ಮಾರ್ಗದ ಅವಶ್ಯಕತೆಯಿರಲಿಲ್ಲ' ಎಂದು ಇಲ್ಲಿನ ನಿವಾಸಿಗಳು ದೂರಿದರು.

'ಅವಶ್ಯಕತೆ ಇಲ್ಲದಿದ್ದರೂ ಅಭಿವೃದ್ಧಿ ಹೆಸರಿನಲ್ಲಿ ಮರಗಳ ಮಾರಣ ಹೋಮ ಮಾಡುವುದು ಎಷ್ಟು ಸರಿ' ಎಂದು ಸ್ಥಳೀಯ ನಿವಾಸಿ ಲತಾ ಪ್ರಶ್ನಿಸಿದ್ದಾರೆ.

ಬಿಬಿಎಂಪಿ ಲಗ್ಗೆರೆ ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ವರನಾರಾಯಣ ಅವರು ಮಾತನಾಡಿ, 'ನನ್ನ ಅವಧಿಯಲ್ಲಿ ಈ ಕಾಮಗಾರಿಗಳು ಪ್ರಾರಂಭ ಆಗಿರಲಿಲ್ಲ' ಎಂದು ಪ್ರತಿಕ್ರಿಯಿಸಿದರು.

ಪಾದಚಾರಿ ಮಾರ್ಗದಲ್ಲಿ ಬುಡಸಹಿತ ಉರುಳುವ ಸ್ಥಿತಿಯಲ್ಲಿರುವ ಮರ

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLICNOTICE
Public are hereby informed that my client proposes to purchase the Schedule Property from Owners Smt. Narayanamma W/o. Nanjappa, Narendra Kumar and others. Persons having any right or title in the Schedule Property may lodge their objections to the undersigned along with supporting documentary evidence within 10 days from the date of this publication. Objections received thereafter will not be binding on my clients and my client will proceed to purchase the Schedule Property as if there are no claimants / objections.
SCHEDULE PROPERTY
Item No. 1:- All that piece and parcel of the agricultural lands bearing Sy.No.79/1, admeasuring 38 Guntas situated at Chikkabanahalli Village, Bedarahalli Hobli, Bangalore East Taluk, Bangalore and bounded on: **East by :** Sy. No.79/2; **West by:** remaining portion of 79/1; **North by :** Sy.No. 30/1; **South by :** Sy. No.78; Item No. 2:- All that piece and parcelof the agricultural lands bearing Sy. No. 54/2, admeasuring 15 Guntas situated at Chikkabanahalli Village, Bidarahalli Hobli, Bangalore East Taluk, Bangalore and bounded on: **East by** : Sy. No. 13; **West By:** Sy.No.54/1; **North by :** Sy.No. 54/1; **South by** : Sy. No.56 & 57/1 ;
Sd/-
(Muktha K), Advocate,
No.8, Prestige Nebula, Infantry Road, Bengaluru-560001
Ph :7795346343
Bangalore

JOB OPPORTUNITIES

Wanted

WANTED FEMALE Office Assistant- any Degree, Good Communication Skills English & Hindi for Pvt Ltd Company in Rajajinagar Contact: 9108458798/ 9845579620

Teachers/ Professors

IMMEDIATELY REQUIRED TEACHERS for CODING and COMPUTER SCIENCE, PE TEACHER, Smart and YOUNG ACCOUNTANT. Contact:ROYALPUBLIC SCHOOL: 9035033560

EDUCATIONAL

Admission

MBA ADMISSION All Specialisations. Weekend Classes by Experienced Lecturers of Reputed Colleges Ravikumar: 9341273990

EXPERT COACHING Available for All Subjects and All Standards both State and Central Syllabus 9341273990

REAL ESTATE BUYING

General

General

WANTED AGRICULTURE/ Residential/ Commercial/ Industrial Lands for JV or Purchase in BLR. 9916310226/ 9620253180. vernadevelopers1@gmail.com Barton Centre, MG Road.

CONNECT

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE SELLING

Commerical

Vidyaranyapura

EXCELLENT SEMI Commercial Site, 2000 SQFT South West Corner for sale at Vidyaranyapura. Contact:98455 83070

Sites

Bannerghatta Road

SITE 30X40 for sale at NISARGA layout Bannerghatta Road West facing. Near to Lotus Restaurant Entrance. Interested buyers Contact:7676858184

Intl Airport Road

LAND SALE North Bangalore 60*40 Airport Park, NRI World, Chikkajala, Devanahalli Taluk, Bangalore. Contact: 9844045517

Kempegowda Layout

***NAADAPRABHU* KEMPEGOWDA** LAYOUT 1st Block 'H' Sector 30x40 East Facing Site Price: 82,50,000/-. Contact: 9686469799

PERSONAL

Change of Name

I, JASWANTH, residing at Bengaluru-16 have changed my name as JASWANTH SOHANLAL, vide affidavit dated 30/5/2024 before Notary K.S. Bammappanavar, Bengaluru

CHANGE OF NAME
I, **JOHN WINSTON RAJKUMAR CHINNIAH** Residing at No.01, 2nd Main, MES Ring Road, Bahubali Nagar, P.O. Jalahalli, Bangalore-560013, have changed my name to **J W R CHINNIAH** vide affidavit dated 24.5.2024 before notary Jalandhara, Bangalore. Henceforth I shall be called **J W R CHINNIAH** only.

I, SOWPARNA, D/o Govindaraj, #2056, 16th D Main, HAL 2nd Stage, Indiranagar, Bengaluru-8 have changed my name as SOWPARNA GOVINDARAJ Vide affidavit dated 30/05/2024 before Notary L. Puttaraju, Bangalore

DH DECCAN HERALD Classifieds More value, more impact
NAME CHANGE ಪ್ರಜಾವಾಣಿ
@50/-* PER WORDS
Book your Name Change Ad in DH All Karnataka + Prajavani Bengaluru City All Days
www.dhclassifieds.com
BOOK NOW
For more details contact:
+91 7795158424 | +91 9901641752
+91 9731810277 | +91 9900428036
*Conditions apply

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

ವಕೀಲೆ ಚೈತ್ರಾವತಿ ಶಂಕಾಸ್ಪದ ಸಾವು ಪ್ರಕರಣ: ಸಿಸಿಬಿ ತನಿಖೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಎಎಸ್ ಅಧಿಕಾರಿ ಶಿವಕುಮಾರ್ ಅವರ ಪತ್ನಿಯೂ ಆಗಿರುವ ಹೈಕೋರ್ಟ್ ವಕೀಲೆ ಚೈತ್ರಾವತಿ ಗೌಡ (34) ಅನುಮಾನಾಸ್ಪದ ಸಾವು ಪ್ರಕರಣದ ತನಿಖೆಯನ್ನು ಸಿಸಿಬಿಗೆ ವಹಿಸಲಾಗಿದೆ.

ಸಂಜಯ್ ನಗರ ಠಾಣೆ ವ್ಯಾಪ್ತಿಯ ಅಪಾರ್ಟ್‌ಮೆಂಟ್ ಸಮುಚ್ಚಯ-ವೊಂದರ ಫ್ಲ್ಯಾಟ್‌ನಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಚೈತ್ರಾವತಿ ಅವರ ಮೃತದೇಹ ಪತ್ತೆಯಾಗಿತ್ತು. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ಸಹಾಯಕ ಆಯುಕ್ತ ಶಿವಕುಮಾರ್ ಪತ್ನಿಯಾಗಿದ್ದ ಚೈತ್ರಾವತಿ ಸಾವಿನಲ್ಲಿ ಹಲವು ಸಂಶಯಗಳಿದ್ದವು. ಹೀಗಾಗಿ, ಪೊಲೀಸರು ಅನುಮಾನಾಸ್ಪದ ಸಾವು ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಿದ್ದರು.

'ಚೈತ್ರಾವತಿ ಅವರ ಸಾವಿನ ಬಗ್ಗೆ ಸಮಗ್ರ ತನಿಖೆ ನಡೆಸಬೇಕು' ಎಂದು ಆಗ್ರಹಿಸಿ ಬೆಂಗಳೂರು ವಕೀಲರ ಸಂಘದ ಪದಾಧಿಕಾರಿಗಳು ಕಮಿಷನರ್ ಅವರಿಗೆ ಮನವಿ ಸಲ್ಲಿಸಿದ್ದರು. ಇದರ ಬೆನ್ನಲ್ಲೇ ಪ್ರಕರಣವನ್ನು ಸಿಸಿಬಿಗೆ ವಹಿಸಿ ಕಮಿಷನರ್ ಆದೇಶ ಹೊರಡಿಸಿದ್ದಾರೆ.

ಹಳೇ ದಿನಾಂಕದ ಮರಣಪತ್ರ: 'ಚೈತ್ರಾವತಿಗೌಡ ಆತ್ಮಹತ್ಯೆ ಮಾಡಿಕೊಂಡಿದ್ದ ಫ್ಲ್ಯಾಟ್‌ನಲ್ಲಿ ಮರಣಪತ್ರ ಸಿಕ್ಕಿತ್ತು. ಆದರೆ, ಅದರಲ್ಲಿ ಹಳೇ ದಿನಾಂಕ ನಮೂದಿಸಲಾಗಿತ್ತು. ಇದು ಸಂಶಯಕ್ಕೆ ಕಾರಣವಾಗಿದೆ' ಎಂದು ಸಿಸಿಬಿ ಮೂಲಗಳು ಹೇಳಿವೆ.

'ಚೈತ್ರಾ ಅವರ ಮೊಬೈಲ್ ಕರೆಗಳ ವಿವರಗಳನ್ನು ಸಂಗ್ರಹಿಸಿ ಪರಿಶೀಲಿಸಲಾಗುತ್ತಿದೆ. ಸೂಕ್ತ ಪುರಾವೆಗಳನ್ನು ಸಂಗ್ರಹಿಸಿ ಪತಿ, ಕುಟುಂಬಸ್ಥರು, ಸಂಬಂಧಿಕರು, ಸ್ನೇಹಿತರು ಹಾಗೂ ಇತರರನ್ನು ವಿಚಾರಣೆ ನಡೆಸಬೇಕಿದೆ' ಎಂದು ತಿಳಿಸಿವೆ.

'ಮರಣೋತ್ತರ ಪರೀಕ್ಷೆ ವರದಿ ಪರಿಶೀಲಿಸಲಾಗುತ್ತಿದೆ. ಕೌಟುಂಬಿಕ, ವೃತ್ತಿ ಸೇರಿದಂತೆ ಎಲ್ಲ ಆಯಾಮದಲ್ಲಿ ತನಿಖೆಯನ್ನು ಮುಂದುವರಿಸಲಾಗಿದೆ' ಎಂದು ಹೇಳಿವೆ.

'ಲಿಕ್ವಿಡ್ ನೈಟ್ರೋಜನ್' ನಿಷೇಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರ್ವಜನಿಕರ ಆರೋಗ್ಯದ ದೃಷ್ಟಿಯಿಂದ ಸಿಹಿ ತಿನಿಸುಗಳು ಹಾಗೂ ಆಹಾರ ಪದಾರ್ಥಗಳಲ್ಲಿ 'ಲಿಕ್ವಿಡ್ ನೈಟ್ರೋಜನ್' ಬಳಕೆಯನ್ನು ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆ ನಿಷೇಧಿಸಿದೆ.

ಈ ಬಗ್ಗೆ ಇಲಾಖೆ ಆಯುಕ್ತರು ಪ್ರಕಟಣೆ ಹೊರಡಿಸಿದ್ದಾರೆ. ರಾಜ್ಯದ ಕೆಲವು ಪ್ರದೇಶಗಳಲ್ಲಿ 'ಸ್ಮೋಕಿಂಗ್ ಬಿಸ್ಕತ್ತು, ಸಿಹಿ ತಿನಿಸುಗಳು ಹಾಗೂ ಆಹಾರ ಪದಾರ್ಥಗಳ ಸೇವನೆ ಸಂದರ್ಭದಲ್ಲಿ 'ಲಿಕ್ವಿಡ್ ನೈಟ್ರೋಜನ್' ಬಳಕೆ ಮಾಡಲಾಗುತ್ತಿದೆ. ಆದರೆ, ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ 2006ರ ನಿಯಮಗಳ ಪ್ರಕಾರ 'ಲಿಕ್ವಿಡ್ ನೈಟ್ರೋಜನ್' ಅನ್ನು ಹೈನು ಉತ್ಪನ್ನ ಹಾಗೂ ಐಸ್‌ಕ್ರೀಂ ತಯಾರಿಕೆಗೆ ಮಾತ್ರ ಬಳಸಲು ಅನುಮೋದನೆಯಿದೆ ಎಂದು ತಿಳಿಸಲಾಗಿದೆ.

ಸಿಹಿ ತಿನಿಸುಗಳು, ಆಹಾರ ಪದಾರ್ಥಗಳನ್ನು ಸೇವನೆಗೆ ಒದಗಿಸುವಾಗ 'ಲಿಕ್ವಿಡ್ ನೈಟ್ರೋಜನ್' ಉಪಯೋಗಿಸುವುದನ್ನು ನಿಷೇಧಿಸಲಾಗಿದೆ ಎಂದು ಪ್ರಕಟಣೆಯಲ್ಲಿ ಹೇಳಲಾಗಿದೆ.

ಕೆಲ ದಿನಗಳ ಹಿಂದೆ ಇಲ್ಲಿನ 12 ವರ್ಷದ ಬಾಲಕಿಯೊಬ್ಬಳು ವಿವಾಹ ಸಮಾರಂಭದಲ್ಲಿ 'ಸ್ಮೋಕಿ ಪಾನ್' (ಲಿಕ್ವಿಡ್ ನೈಟ್ರೋಜನ್ ಪಾನ್) ಸೇವಿಸಿ, ಅಸ್ವಸ್ಥಳಾಗಿದ್ದಳು. ಬಳಿಕ ಅವಳ ಹೊಟ್ಟೆಯಲ್ಲಿ ರಂಧ್ರವಾಗಿ, ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ವೈದ್ಯರು ಚಿಕಿತ್ಸೆ ನೀಡಿದ್ದರು.

ಇ–ಟಿಕೆಟ್ ಖರೀದಿ ನಿರ್ಬಂಧ ಸಡಿಲಿಕೆ

ಬೆಂಗಳೂರು: ರೈಲುಗಳಲ್ಲಿ ಕಾಯ್ದಿರಿಸದ ಆಸನಗಳಿಗೆ ಯುಟಿಎಸ್ ಮೊಬೈಲ್ ಅಪ್ಲಿಕೇಶನ್ ಮೂಲಕ ಇ–ಟಿಕೆಟ್ ಖರೀದಿಗೆ ಇದ್ದ 'ದೂರ'ದ ನಿರ್ಬಂಧವನ್ನು ರೈಲ್ವೆ ಇಲಾಖೆ ಸಡಿಲಿಸಿದೆ.

ಹಿಂದೆ ಉಪನಗರದ ನಿಲ್ದಾಣಗಳಾದರೆ 20 ಕಿ.ಮೀ. ವರೆಗೆ ಹಾಗೂ ಉಪನಗರವಲ್ಲದ ನಿಲ್ದಾಣಗಳಾದರೆ 50 ಕಿ.ಮೀ. ದೂರದವರೆಗೆ ಮಾತ್ರ ಪ್ರಯಾಣಿಸಲು ಯುಟಿಎಸ್ (ಅನ್ ರಿಸರ್ವ್‌ಡ್ ಟಿಕೆಟಿಂಗ್ ಸಿಸ್ಟಂ) ಮೊಬೈಲ್ ಅಪ್ಲಿಕೇಶನ್‌ನಲ್ಲಿ ಟಿಕೆಟ್ ಖರೀದಿಸಬಹುದಿತ್ತು. ಈಗ ದೂರದ ನಿರ್ಬಂಧ ಮತ್ತು ಭೌಗೋಳಿಕ ಮಿತಿಯನ್ನು ತೆಗೆದು ಹಾಕಲಾಗಿದೆ. ಇದರಿಂದ ಯಾವುದೇ ಊರಿಗೆ ಹೋಗುವುದಿದ್ದರೂ ಇ–ಟಿಕೆಟ್ ಖರೀದಿಗೆ ಅವಕಾಶ ಸಿಕ್ಕಿದಂತಾಗಿದೆ.

ರೈಲು ನಿಲ್ದಾಣದ ಒಳಗೆ ಅವಕಾಶವಿಲ್ಲ: ರೈಲು ಹತ್ತಿದ ಬಳಿಕ ಇ–ಟಿಕೆಟ್ ಖರೀದಿಸುವ ಮೂಲಕ ಈ ಸೌಲಭ್ಯ ದುರುಪಯೋಗ ಪಡಿಸಿಕೊಳ್ಳುವುದನ್ನು ತಪ್ಪಿಸಲು ಇರುವ ನಿರ್ಬಂಧ ಮಾತ್ರ ಮುಂದುವರಿಸಲಾಗಿದೆ. ರೈಲಿನಲ್ಲಿ ಅಥವಾ ರೈಲು ನಿಲ್ದಾಣದ ಆವರಣದಲ್ಲಿ ಇರುವಾಗ ಇ–ಟಿಕೆಟ್ ಖರೀದಿಗೆ ಅವಕಾಶ ನೀಡಿಲ್ಲ. ರೈಲು ನಿಲ್ದಾಣದಿಂದ ಕನಿಷ್ಠ 5 ಮೀಟರ್‌ಗಿಂತ ಹೊರಗೆ ಇರಬೇಕು. ಗರಿಷ್ಠ ಎಷ್ಟು ದೂರದಲ್ಲಿದ್ದರೂ ಇ–ಟಿಕೆಟ್ ಖರೀದಿಸಬಹುದು. ಆದರೆ, ಟಿಕೆಟ್ ಖರೀದಿಸಿದ ಒಂದು ಗಂಟೆ ಒಳಗೆ ಪ್ರಯಾಣ ಪ್ರಾರಂಭಿಸಬೇಕು ಎಂದು ನೈರುತ್ಯ ರೈಲ್ವೆ ಬೆಂಗಳೂರು ವಿಭಾಗದ ಸಾರ್ವಜನಿಕ ಸಂಪರ್ಕ ಅಧಿಕಾರಿ ತ್ರಿನೇತ್ರ ಕೆ.ಆರ್. ತಿಳಿಸಿದ್ದಾರೆ.

ಕಾಯ್ದಿರಿಸದ, ಕಾಗದರಹಿತ ಟಿಕೆಟ್‌ಗಳನ್ನು, ಪ್ಲಾಟ್‌ಫಾರ್ಮ್ ಅಥವಾ ಸೀಸನಲ್ ಟಿಕೆಟ್‌ಗಳನ್ನು ಖರೀದಿಸಲು ದೂರದ ಮಿತಿ ಮತ್ತು ಪ್ರಯಾಣದ ದೂರದ ನಿರ್ಬಂಧ ತೆಗೆದಿರುವುದು ಬಳಕೆದಾರರಿಗೆ ಅನುಕೂಲವಾಗಿದೆ. ಯುಟಿಎಸ್ ಮೊಬೈಲ್ ಅಪ್ಲಿಕೇಶನ್‌ನಲ್ಲಿ ಟಿಕೆಟ್ ಖರೀದಿಸಿದವರಿಗೆ ಶೇ 3ರಷ್ಟು ರಿಯಾಯಿತಿ ದೊರೆಯಲಿದೆ.

ಹೈಕಮಾಂಡ್ ಜತೆ ಚರ್ಚಿಸಿರುವ ಸಿ.ಎಂ, ಡಿಸಿಎಂ ● 7 ಸ್ಥಾನಗಳಿಗೆ 14 ಅಭ್ಯರ್ಥಿಗಳ ಹೆಸರು ಅಖೈರು

ಪರಿಷತ್: ಕಾಂಗ್ರೆಸ್ ಸಂಭಾವ್ಯರ ಪಟ್ಟಿ ಸಿದ್ಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆಯಿಂದ ವಿಧಾನ ಪರಿಷತ್‌ನ 11 ಸ್ಥಾನಗಳಿಗೆ ಜೂನ್ 13ರಂದು ನಡೆಯಲಿರುವ ಚುನಾವಣೆಗೆ ಪಕ್ಷದ ಅಭ್ಯರ್ಥಿಗಳ ಆಯ್ಕೆ ಕುರಿತಂತೆ ಹೈಕಮಾಂಡ್ ನಾಯಕರ ಜೊತೆ ಚರ್ಚಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಪಕ್ಷ ಗೆಲ್ಲಲು ಅವಕಾಶ ಇರುವ ಏಳು ಸ್ಥಾನಗಳಿಗೆ 14 ಅಭ್ಯರ್ಥಿಗಳ ಹೆಸರುಗಳ ಪಟ್ಟಿಯನ್ನು ಅಂತಿಮಗೊಳಿಸಿದ್ದಾರೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಸಮುದಾಯವಾರು ಟಿಕೆಟ್ ನೀಡುವ ಕುರಿತಂತೆ ಚರ್ಚೆ ನಡೆದಿದ್ದು, ಹಿಂದುಳಿದ ವರ್ಗಕ್ಕೆ ಎರಡು, ಲಿಂಗಾಯತ, ಒಕ್ಕಲಿಗ, ಮುಸ್ಲಿಂ, ಕ್ರಿಶ್ಚಿಯನ್, ಎಸ್‌ಸಿ (ಬಲ), ಮಹಿಳೆ ಸಮುದಾಯಕ್ಕೆ ತಲಾ ಒಂದರಂತೆ ಟಿಕೆಟ್ ಹಂಚಿಕೆ ಮಾಡುವ ಬಗ್ಗೆ ಚರ್ಚೆ ನಡೆದಿದೆ. ಜೂನ್ 2ರಂದು ಅಭ್ಯರ್ಥಿಗಳ ಹೆಸರು ಅಂತಿಮಗೊಳ್ಳುವ ಸಾಧ್ಯತೆಯಿದೆ.

ವಿಧಾನಸಭೆ ಚುನಾವಣೆಯಲ್ಲಿ ವರುಣಾ ಕ್ಷೇತ್ರವನ್ನು ಬಿಟ್ಟುಕೊಟ್ಟಿರುವ ಯತೀಂದ್ರ ಸಿದ್ದರಾಮಯ್ಯ, ಸಚಿವ ಎನ್.ಎಸ್. ಬೋಸರಾಜು, ಹಾಲಿ ಸದಸ್ಯ, ಮುಖ್ಯಮಂತ್ರಿಯ ರಾಜಕೀಯ ಕಾರ್ಯದರ್ಶಿಯೂ ಆಗಿರುವ ಕೆ. ಗೋವಿಂದರಾಜು, ಕೆಪಿಸಿಸಿ ಖಜಾಂಚಿ ವಿನಯ್ ಕಾರ್ತಿಕ್, ಕಾರ್ಯಾಧ್ಯಕ್ಷ ವಸಂತಕುಮಾರ್, ಉಪಾಧ್ಯಕ್ಷ ವಿ.ಆರ್. ಸುದರ್ಶನ್ ಮುಂತಾದವರ ಹೆಸರು ಮುಂಚೂಣಿಯಲ್ಲಿದೆ ಎಂದೂ ಮೂಲಗಳು ಹೇಳಿವೆ.

ಪರಿಷತ್ ಚುನಾವಣೆ

65 ಸಂಭಾವ್ಯ ಅಭ್ಯರ್ಥಿಗಳ ಪಟ್ಟಿ: 'ನಾವು 65 ಸಂಭಾವ್ಯ ಅಭ್ಯರ್ಥಿಗಳ ಪಟ್ಟಿ ಕೊಟ್ಟಿದ್ದೇವೆ. ಹೈಕಮಾಂಡ್ ನಾಯಕರು ಅಂತಿಮ ತೀರ್ಮಾನ ತೆಗೆದುಕೊಳ್ಳಲಿದ್ದಾರೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, 'ಪಕ್ಷದಲ್ಲಿ 300ಕ್ಕೂ ಹೆಚ್ಚು ಆಕಾಂಕ್ಷಿಗಳಿದ್ದಾರೆ. ಯತೀಂದ್ರ ಅವರ ವಿಚಾರದಲ್ಲಿ ಹೈಕಮಾಂಡ್ ನಾಯಕರು ಈ ಹಿಂದೆಯೇ ಮಾತು ಕೊಟ್ಟಿದ್ದರು. ಬೆಂಗಳೂರಷ್ಟೇ ಅಲ್ಲದೆ, ಕರಾವಳಿ ಕರ್ನಾಟಕ, ಮಧ್ಯ ಕರ್ನಾಟಕ, ಕಲ್ಯಾಣ ಕರ್ನಾಟಕ ಸೇರಿದಂತೆ ಎಲ್ಲ ವಲಯಗಳಿಂದಲೂ ಟಿಕೆಟ್ ಆಕಾಂಕ್ಷಿಗಳಿದ್ದಾರೆ. ಮಂಗಳೂರಿನಲ್ಲಿ 21, ಚಿಕ್ಕಮಗಳೂರಿನಲ್ಲಿ 9 ಆಕಾಂಕ್ಷಿಗಳಿದ್ದಾರೆ' ಎಂದರು.

'ಅಭ್ಯರ್ಥಿಗಳ ಆಯ್ಕೆ ವಿಚಾರದಲ್ಲಿ ಪಕ್ಷದ ಹಿರಿಯರ ಅಭಿಪ್ರಾಯ ಕೇಳಬೇಕಿತ್ತು' ಎಂಬ ಗೃಹ ಸಚಿವ ಜಿ. ಪರಮೇಶ್ವರ ಹೇಳಿಕೆ ಬಗ್ಗೆ ಕೇಳಿದಾಗ, 'ನಾವು ಅವರ ಅಭಿಪ್ರಾಯ ಕೇಳಿದ್ದೇವೆ. ಪರಮೇಶ್ವರ ಅವರು ಮುಖ್ಯಮಂತ್ರಿ ಅವರನ್ನು ಭೇಟಿ ಮಾಡಿದ್ದಾರೆ' ಎಂದರು.

'ಆಯ್ಕೆಗೆ ಮಾನದಂಡ ಏನು' ಎಂದು ಕೇಳಿದಾಗ, 'ಸಂಘಟನೆಗೆ ಆದ್ಯತೆ ನೀಡಲಾಗುವುದು. ಅನೇಕ ಪ್ರಮುಖರು, ಹಿರಿಯರು, ಚುನಾವಣೆಯಲ್ಲಿ ಸೋತವರು, ವಿಧಾನಸಭೆ ಟಿಕೆಟ್ ತ್ಯಾಗ ಮಾಡಿರುವವರು ಟಿಕೆಟ್ ಕೇಳಿದ್ದಾರೆ' ಎಂದರು.

'ಸಚಿವ ಎನ್.ಎಸ್. ಬೋಸರಾಜು ಅವರು ಮುಂದುವರಿಯುತ್ತಾರೆಯೇ?' ಎಂಬ ಪ್ರಶ್ನೆಗೆ, 'ಈ ಬಗ್ಗೆಯೂ ಹೈಕಮಾಂಡ್ ನಾಯಕರು ತೀರ್ಮಾನಿಸಲಿದ್ದಾರೆ' ಎಂದರು.

ಜೂನ್ 2ರಂದು ಸಿಎಲ್‌ಪಿ ಸಭೆ

'ಬೆಂಗಳೂರಿನ ಖಾಸಗಿ ಹೋಟೆಲ್‌ನಲ್ಲಿ ಜೂನ್ 2ರಂದು ಸಂಜೆ 6 ಗಂಟೆಗೆ ಶಾಸಕಾಂಗ ಪಕ್ಷದ ಸಭೆ ನಡೆಯಲಿದೆ. ಈ ಸಭೆಯಲ್ಲಿ ಪರಿಷತ್ ಚುನಾವಣೆ ಸೇರಿದಂತೆ ಕೆಲವು ವಿಚಾರಗಳನ್ನು ಚರ್ಚಿಸಲಾಗುವುದು. ಜೂನ್ 1ರಂದು ಕರೆಯಲಾಗಿದ್ದ ಪಕ್ಷದ ಪದಾಧಿಕಾರಿಗಳ ಸಭೆಯನ್ನು ಮುಂದೂಡಲಾಗಿದೆ' ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಡಿ.ಕೆ. ಸುರೇಶ್ ಹೆಸರು ಚರ್ಚೆಯಾಗುತ್ತಿರುವ ಬಗ್ಗೆ ಕೇಳಿದಾಗ, 'ಇದು ಶುದ್ಧ ಸುಳ್ಳು. ಮೊದಲು ಸ್ಥಳೀಯ ಸಂಸ್ಥೆಗಳ ಚುನಾವಣೆಗಳು ಮುಗಿಯಲಿ. ನಾನು ಅಧಿಕಾರ ಬಿಡುವ ವೇಳೆಗೆ ಎಲ್ಲವನ್ನೂ ಒಂದು ಹಂತಕ್ಕೆ ತಂದು ನಿಲ್ಲಿಸಬೇಕು. ರೇಸ್ ಕೋರ್ಸ್ ರಸ್ತೆಯ ಕಾಂಗ್ರೆಸ್ ಭವನ ಕಟ್ಟಡ ದುರ್ಬಲವಾಗುತ್ತಿದ್ದು, ಹೊಸ ಕಟ್ಟಡ ನಿರ್ಮಾಣ ಮಾಡಬೇಕಿದೆ' ಎಂದರು.

ರಾಜ್ಯ ಆಳುತ್ತಿರುವ 'ಅಲ್ಟ್ರಾ ಎಕ್ಸ್‌ಟ್ರೀಮ್' ಎಡಪಂಥೀಯರು: ಬಿ.ಎಲ್.ಸಂತೋಷ್



ಉಡುಪಿ: 'ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರ ನಡೆಸುತ್ತಿಲ್ಲ, ಅಲ್ಟ್ರಾ ಎಕ್ಸ್‌ಟ್ರೀಮ್ ಎಡಪಂಥೀಯರು ಆಡಳಿತ ನಡೆಸುತ್ತಿದ್ದಾರೆ. ರಾಜ್ಯ ಶಿಕ್ಷಣ ನೀತಿ ಅನುಷ್ಠಾನ ಸಮಿತಿಯಲ್ಲಿ ಹಿಂದೂ ವಿರೋಧಿಗಳನ್ನೇ ತುಂಬಿಸಲಾಗಿದೆ' ಎಂದು ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಆರೋಪಿಸಿದರು.

ನಗರದಲ್ಲಿ ಜಿಲ್ಲಾ ಬಿಜೆಪಿ ವತಿಯಿಂದ ಗುರುವಾರ ನಡೆದ ನೈರುತ್ಯ ಪದವೀಧರ ಮತ್ತು ಶಿಕ್ಷಕರ ಕ್ಷೇತ್ರದ ಚುನಾವಣೆಯ ನಾಯಕರ ಜಿಲ್ಲಾಮಟ್ಟದ ಸಮಾವೇಶ ಉದ್ಘಾಟಿಸಿ ಮಾತನಾಡಿದರು.

'ರಾಜ್ಯ ಶಿಕ್ಷಣ ನೀತಿ ಈವರೆಗೂ ಜಾರಿಯಾಗಿಲ್ಲ. ರಾಜ್ಯ ಸರ್ಕಾರದಲ್ಲಿ ತಾಳ- ಮೇಳದ ಕೊರತೆ ಇದೆ' ಎಂದರು.

'ಉಚಿತ ಭಾಗ್ಯಗಳನ್ನು ಬಡವರು ತೆಗೆದುಕೊಳ್ಳುತ್ತಿದ್ದಾರೆ. ಆದರೆ, ರಾಜ್ಯದಲ್ಲಿ ನೌಕರರಿಗೆ ಸಂಬಳ ಕೊಡಲು ದುಡ್ಡಿಲ್ಲ. ಚುನಾವಣೆ ನಂತರ ಯಾವ ಬಿಟ್ಟಿ ಭಾಗ್ಯವೂ ಸಿಗಲ್ಲ, ಮೂರು ತಿಂಗಳ ಅಕ್ಕಿ ಹಣ ಬಂದಿಲ್ಲ ಎಂದ ಅವರು, ರಾಜ್ಯದಲ್ಲಿ ಅಧಿಕಾರಿಗಳು ಯಾವುದೇ ಆದೇಶಗಳಿಗೆ ಸಹಿ ಹಾಕುತ್ತಿಲ್ಲ. ಕರ್ನಾಟಕದ ಸ್ಥಿತಿಯು ತೆಲಂಗಾಣದಂತೆ ಆಗಿದೆ' ಎಂದು ಆರೋಪಿಸಿದರು.

'ಕೈ' ಅಭ್ಯರ್ಥಿಗಳ ಗೆಲುವು– ಬಸವರಾಜ ಗುರಿಕಾರ ವಿಶ್ವಾಸ

ಬೆಂಗಳೂರು: 'ಶಿಕ್ಷಕ ಮತ್ತು ಪದವೀಧರ ಕ್ಷೇತ್ರಗಳಿಂದ ವಿಧಾನಪರಿಷತ್‌ನ ಆರು ಸ್ಥಾನಗಳಿಗೆ ನಡೆಯಲಿರುವ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳು ಗೆಲ್ಲಲಿದ್ದಾರೆ. ಬೆಂಗಳೂರು ಪದವೀಧರ ಕ್ಷೇತ್ರದ ಪಕ್ಷದ ಅಭ್ಯರ್ಥಿ ರಾಮೋಜಿ ಗೌಡರಿಗೆ ಈ ಹಿಂದೆ ಸಿಗದಂಥ ಅಭೂತಪೂರ್ವ ಬೆಂಬಲ ಸಿಗಲಿದೆ' ಎಂದು ಕೆಪಿಸಿಸಿ ಶಿಕ್ಷಕರ ಘಟಕದ ಅಧ್ಯಕ್ಷ ಬಸವರಾಜ ಗುರಿಕಾರ ವಿಶ್ವಾಸ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, 'ರಾಮೋಜಿ ಗೌಡ ಅವರು ಕಳೆದ ಎರಡು ಬಾರಿ ಅತ್ಯಲ್ಪ ಮತಗಳ ಅಂತರದಿಂದ ಸೋಲಬೇಕಾಯಿತು. ಈ ಬಾರಿ ಮತದಾರರು ಅವರ ಪರವಾಗಿದ್ದಾರೆ. ಅಲ್ಲದೇ ಎರಡು ವರ್ಷಗಳಿಂದ ಉದ್ಯೋಗ ಮೇಳ ಸೇರಿದಂತೆ ಅನೇಕ ಕೆಲಸಗಳನ್ನು ಮಾಡುತ್ತಿದ್ದಾರೆ. ಮತದಾರರ ನೋಂದಣಿ ಕಾರ್ಯ ನಡೆಸಿ ಸಾಕಷ್ಟು ಉತ್ತಮ ಕೆಲಸ ಮಾಡಿದ್ದಾರೆ' ಎಂದರು.

'ದೇವರಾಜ ಅರಸು ಅವರು ಪದವೀಧರರಿಗೆ ಭತ್ಯೆ ಆರಂಭಿಸಿದರು. ಗುಂಡೂರಾವ್ ಅವರು ನಿರುದ್ಯೋಗ ಭತ್ಯೆ ಪಡೆಯುತ್ತಿದ್ದ ಪದವೀಧರರನ್ನು ಕಾಯಂಗೊಳಿಸುವ ಕೆಲಸ ಮಾಡಿದರು. ಈಗ ಯುವನಿಧಿ ಎನ್ನುವ ಗ್ಯಾರಂಟಿ ನೀಡಿ ಪಕ್ಷ ಯುವಕರಲ್ಲಿ ಆಶಾಕಿರಣ ಮೂಡಿಸುವ ಕೆಲಸ ಮಾಡಿದೆ' ಎಂದರು.

'ಶಿಕ್ಷಣ ಕ್ಷೇತ್ರಕ್ಕೆ ಕಾಂಗ್ರೆಸ್ ಸಾಕಷ್ಟು ಕೊಡುಗೆ ಕೊಟ್ಟಿದೆ. 11,494 ಶಿಕ್ಷಕರ ಹುದ್ದೆ, 35 ಸಾವಿರ ಅತಿಥಿ ಶಿಕ್ಷಕರ ಹುದ್ದೆ, 2,372 ಶಾಲೆಗಳ ಪೈಕಿ 7,342 ಕೊಠಡಿಗಳ ದುರಸ್ತಿಗೆ ₹ 70 ಕೋಟಿ ಅನುದಾನ. ವಿದ್ಯಾರ್ಥಿಗಳಿಗೆ ಪೌಷ್ಟಿಕ ಆಹಾರ ನೀಡುವ ಸಲುವಾಗಿ ₹ 280 ಕೋಟಿ ಅನುದಾನ. 45 ಲಕ್ಷ ವಿದ್ಯಾರ್ಥಿಗಳಿಗೆ ₹ 143 ಕೋಟಿ ವೆಚ್ಚದಲ್ಲಿ ಎರಡು ಜೊತೆ ಸಮವಸ್ತ್ರ, ರಾಜ್ಯದ ವಿಶ್ವವಿದ್ಯಾನಿಲಯಗಳಿಗೆ ₹350 ಕೋಟಿ ಅನುದಾನ ನೀಡಲಾಗಿದೆ. ಅತಿಥಿ ಉಪನ್ಯಾಸಕರಿಗೆ ₹ 5 ಸಾವಿರದಿಂದ ₹ 8 ಸಾವಿರ ಸಂಬಳ ಹೆಚ್ಚಳ ಮಾಡಲು ತೀರ್ಮಾನಿಸಲಾಗಿದೆ. 60 ವರ್ಷ ಪೂರೈಸಿದ ಅತಿಥಿ ಉಪನ್ಯಾಸಕರಿಗೆ ₹ 5 ಲಕ್ಷ ಇಡಗಂಟು ನೀಡುವ ಹೊಸ ಯೋಜನೆ ಜಾರಿಗೆ ತಂದಿದೆ. ರಜೆ ಸೌಲಭ್ಯ, ₹ 5 ಲಕ್ಷ ಮೊತ್ತದ ವೈದ್ಯಕೀಯ ಸೌಲಭ್ಯ, ಕೋರಿಕೆಯ ವರ್ಗಾವಣೆ ಸೇರಿದಂತೆ ಅನೇಕ ಶಿಕ್ಷಕ ಪರ ಕೆಲವನ್ನು ಕಾಂಗ್ರೆಸ್ ಮಾಡಿದೆ' ಎಂದರು.

ಸರ್ಕಾರಿ ನೌಕರರ ಸಂಘದ ನಿಕಟಪೂರ್ವ ಅಧ್ಯಕ್ಷ ಮಂಜೇಗೌಡ, ನಿಕಟಪೂರ್ವ ಕಾರ್ಯದರ್ಶಿ ಮಾಲತೇಶ್ ಅಣ್ಣಿಗೇರಿ, ಮುಖಂಡರಾದ ಎ.ಸಿ. ಹರಿಪ್ರಸಾದ್ ಇದ್ದರು.

ಬೆಂಗಳೂರು ಪದವೀಧರ ಕ್ಷೇತ್ರ: ಆನಂದ್ ಮನವೊಲಿಕೆ

ಬೆಂಗಳೂರು: ಬೆಂಗಳೂರು ಪದವೀಧರ ಕ್ಷೇತ್ರಕ್ಕೆ ಟಿಕೆಟ್ ಸಿಗದೇ ಬೇಸರಗೊಂಡಿದ್ದ ಬಿಜೆಪಿ ಮುಖಂಡ ಎ.ಎಚ್.ಆನಂದ್ ಅವರನ್ನು ಗುರುವಾರ ಭೇಟಿ ಮಾಡಿದ ಡಾ.ಸಿ.ಎನ್.ಅಶ್ವತ್ಥನಾರಾಯಣ ಅವರು ಪ್ರಚಾರದಲ್ಲಿ ತೊಡಗಿಸಿಕೊಳ್ಳುವಂತೆ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಕ್ಷೇತ್ರದ ಅಭ್ಯರ್ಥಿ ಅ.ದೇವೇಗೌಡ, ಬಿಜೆಪಿಯ ಮುಖ್ಯ ವಕ್ತಾರ ಅಶ್ವಥನಾರಾಯಣ ಮತ್ತು ಇತರರು ಆನಂದ್ ಅವರ ಮನವೊಲಿಸಿದರು. ಪ್ರಚಾರದಲ್ಲಿ ತೊಡಗಿಕೊಳ್ಳುವುದಾಗಿ ಆನಂದ್ ಭರವಸೆ ನೀಡಿದರು.

ಅಧಿಕಾರಿಗಳೊಂದಿಗೆ ಕಾವೇರಿ ಐದನೇ ಹಂತದ ಕುಡಿಯುವ ನೀರಿನ ಯೋಜನೆ ಕಾಮಗಾರಿ ಪರಿಶೀಲಿಸಿದ ಶಾಸಕ ಎಸ್. ಮುನಿರಾಜು

ಕುಂಟುತ್ತಾ ಸಾಗುತ್ತಿದೆ ಕಾಮಗಾರಿ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: 110 ಹಳ್ಳಿಗೆ ನೀರು ಒದಗಿಸುವ ಕಾವೇರಿ ಐದನೇ ಹಂತದ ಕುಡಿಯುವ ನೀರಿನ ಯೋಜನೆ ಕುಂಟುತ್ತಾ ಸಾಗುತ್ತಿದ್ದು, ನೆಲಗದರನಹಳ್ಳಿ ಮುಖ್ಯರಸ್ತೆಯಲ್ಲಿ ನಡೆಯುತ್ತಿರುವ ಕಾಮಗಾರಿ ಸ್ಥಳಕ್ಕೆ ಶಾಸಕ ಎಸ್.ಮುನಿರಾಜು ಭೇಟಿ ನೀಡಿ ಪರಿಶೀಲಿಸಿದರು.

ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ಚಿಕ್ಕಸಂದ್ರ, ಅಬ್ಬಿಗೆರೆ, ಶೆಟ್ಟಿಹಳ್ಳಿ, ಗೆಳೆಯರ ಬಳಗ, ಸಿಡೇದಹಳ್ಳಿ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆ ಉಲ್ಬಣಿಸಿದ್ದು ಶೀಘ್ರವಾಗಿ ಕಾವೇರಿ ಐದನೇ ಹಂತದ ಯೋಜನೆ ಮುಗಿದರೆ ನೀರಿನ ಸಮಸ್ಯೆ ಸ್ವಲ್ಪಮಟ್ಟಿಗೆ ಬಗೆಹರಿಸಬಹುದು. ವಾರಕ್ಕೆ ಒಮ್ಮೆಯಾದರೂ ನೀರು ಬಿಡುತ್ತಿಲ್ಲ, ಕೊಳವೆಬಾವಿ ಬತ್ತಿದ್ದು, ನೀರು ಬಿಟ್ಟರೆ ಅರ್ಧ ಸಂಪು ಕೂಡ ತುಂಬುವುದಿಲ್ಲ. ಟ್ಯಾಂಕರ್ ನೀರು ಬಳಸಬೇಕಾಗಿದೆ ಎಂದು ಸ್ಥಳೀಯರ ಗಮನ ಸೆಳೆದರು.

ಈಗಾಗಲೇ ಬೆಂಗಳೂರು ಜಲ ಮಂಡಳಿ ಅಧ್ಯಕ್ಷರು, ಮುಖ್ಯ ಎಂಜಿನಿಯರ್ ಕೂಡ ಆಗಮಿಸಿ ಪರಿಶೀಲಿಸಿ ಶೀಘ್ರ ಕಾಮಗಾರಿ ಮುಗಿಸುವಂತೆ ಸೂಚಿಸಿದ್ದರು. ಆದರೂ ಸಹ ಕಾಮಗಾರಿ ಕುಂಟುತ್ತಾ ಸಾಗುತ್ತಿದೆ ಎಂದು ಸ್ಥಳೀಯರು ಹೇಳಿದರು.

'ಈ ಹಿಂದಿನ ಹತ್ತು ವರ್ಷಗಳಲ್ಲಿ ಈ ತರಹ ನೀರಿನ ಸಮಸ್ಯೆ ಇರಲಿಲ್ಲ. ಏಳೆಂಟು ತಿಂಗಳಿಂದ ನೀರಿನ ಸಮಸ್ಯೆ ತೀವ್ರವಾಗಿದೆ. ಜಲ ಮಂಡಳಿ ಹಿರಿಯ ಅಧಿಕಾರಿಗಳು ಸಹ ಬಂದು ಸಮಸ್ಯೆ ಆಲಿಸಿದ್ದಾರೆ. ಶೀಘ್ರ ಕಾಮಗಾರಿ ಮುಗಿದರೆ ನೀರಿನ ಸಮಸ್ಯೆ ಬಗೆಹರಿಯುವುದು' ಎಂದು ಶಾಸಕ ಮುನಿರಾಜು ತಿಳಿಸಿದರು.

ಗೃಹಬಳಕೆ ಸಿಲಿಂಡರ್: ವಾಣಿಜ್ಯ ಬಳಕೆ ಬೇಡ

ಬೆಂಗಳೂರು: ಹೋಟೆಲ್ ಹಾಗೂ ಇತರೆ ವಾಣಿಜ್ಯ ಸ್ಥಳಗಳಲ್ಲಿ ಗೃಹಬಳಕೆಯ ಸಿಲಿಂಡರ್‌ಗಳ ಬಳಸದಂತೆ ಗ್ರಾಹಕ್ ದಕ್ಷತಾ ಫೌಂಡೇಶನ್ ಮನವಿ ಮಾಡಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಫೌಂಡೇಶನ್‌ನ ಕರ್ನಾಟಕ ವಿಭಾಗದ ಮುಖ್ಯಸ್ಥ ಚೇತನ್ ಕುಮಾರ್, 'ಇತ್ತೀಚೆಗೆ ಬಹುತೇಕ ವಾಣಿಜ್ಯ ಸಂಸ್ಥೆಗಳು ಹಾಗೂ ವಾಹನಗಳಲ್ಲಿ ವಾಣಿಜ್ಯ ಸಿಲಿಂಡರ್ ಬದಲಿಗೆ, ಗೃಹಬಳಕೆ ಸಿಲಿಂಡರ್ ಬಳಸುತ್ತಿದ್ದು, ಇದರಿಂದ ಸರ್ಕಾರಕ್ಕೆ ನಷ್ಟವಾಗುತ್ತಿದೆ' ಎಂದು ಹೇಳಿದರು.

ಬೆಂಗಳೂರು ಸೇರಿದಂತೆ ನಗರ ಪ್ರದೇಶದ ಹೋಟೆಲ್, ಪಬ್‌ಗಳಲ್ಲಿ ಗೃಹಬಳಕೆಯ ಸಿಲಿಂಡರ್‌ಗಳನ್ನು ಅಕ್ರಮವಾಗಿ ಬಳಕೆ ಮಾಡಲಾಗುತ್ತಿದೆ. ರಾಜ್ಯದಲ್ಲಿ ಈಗಾಗಲೇ 25ರಿಂದ 30 ಕಡೆ ಅಡುಗೆ ಅನಿಲ ಸಿಲಿಂಡರ್ ಸೋರಿಕೆಯಾಗಿ ಸ್ಫೋಟಗಳು ಸಂಭವಿಸಿವೆ. ಈ ಬಗ್ಗೆ ನಾವು ಇಂಡಿಯನ್ ಆಯಿಲ್, ಭಾರತ್ ಪೆಟ್ರೋಲಿಯಂ ಕಂಪನಿಗಳ ಪ್ರಾದೇಶಿಕ ಕಚೇರಿಗಳಲ್ಲಿ ದೂರು ಸಲ್ಲಿಸಿದ್ದೇವೆ. ಆದರೆ, ಅವರು ಯಾವುದೇ ರೀತಿಯ ಕ್ರಮಗಳನ್ನು ಕೈಗೊಂಡಿಲ್ಲ' ಎಂದು ದೂರಿದರು.

ಮೇ ಫ್ಲವರ್

ನಗರದ ಕಬ್ಬನ್ ಪಾರ್ಕ್‌ನಲ್ಲಿ ಅರಳಿರುವ ಗುಲ್‌ಮೊಹರ್ ಹೂವು ಮತ್ತು ಅವುಗಳ ನಡುವೆ ಕುಳಿತಿರುವ ಪಾರಿವಾಳಗಳು ದೃಶ್ಯಕಾವ್ಯದಂತೆ ಗೋಚರಿಸಿದವು

–ಪ್ರಜಾವಾಣಿ ಚಿತ್ರ/ಎಂ.ಎಸ್. ಮಂಜುನಾಥ್

ಸಿ.ಎಂ ನಿವಾಸಕ್ಕೆ ಮುತ್ತಿಗೆ ಯತ್ನ

ಬೆಂಗಳೂರು:ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದಿರುವ ₹187 ಕೋಟಿ ಹಗರಣದ ಹೊಣೆ ಹೊತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವ ನಾಗೇಂದ್ರ ಅವರು ರಾಜಿನಾಮೆ ನೀಡಬೇಕೆಂದು ಆಗ್ರಹಿಸಿ ಬಿಜೆಪಿ ಎಸ್.ಟಿ ಮೋರ್ಚಾ ಕಾರ್ಯಕರ್ತರು ಗುರುವಾರ ಮುಖ್ಯಮಂತ್ರಿಗಳ ಗೃಹ ಕಚೇರಿಗೆ ಮುತ್ತಿಗೆ ಹಾಕಲು ಪ್ರಯತ್ನಿಸಿದರು.

ಮುಖ್ಯಮಂತ್ರಿ ಗೃಹ ಕಚೇರಿ 'ಕೃಷ್ಣಾ' ಬಳಿ ಏಕಾಏಕಿ ನುಗ್ಗಿದ ಬಿಜೆಪಿ ಕಾರ್ಯಕರ್ತರು ಸಚಿವರಿಗೆ ಧಿಕ್ಕಾರ', 'ಸರ್ಕಾರಕ್ಕೆ ಧಿಕ್ಕಾರ' ಮುಂತಾದ ಘೋಷಣೆಗಳನ್ನು ಹಾಕಿದರು. ತಕ್ಷಣವೇ ಪೊಲೀಸರು ಅವರನ್ನು ವಶಕ್ಕೆ ತೆಗೆದುಕೊಂಡರು.

ಶಾಂತಿಯುತ ಪ್ರತಿಭಟನೆ ಮುಂದಾದ ಪಕ್ಷದ ಕಾರ್ಯಕರ್ತರನ್ನು ಬಂಧಿಸಿ, ಪೊಲೀಸರು ಅವರ ವಿರುದ್ಧ ಅವಹೇಳನಕಾರಿಯಾಗಿ ಮಾತನಾಡಿದ್ದಾರೆ. ಕೂಡಲೇ ಕಾರ್ಯಕರ್ತರನ್ನು ಬಿಡುಗಡೆ ಮಾಡಬೇಕು ಎಂದು ವಿರೋಧಪಕ್ಷದ ನಾಯಕ ಆರ್.ಅಶೋಕ ಅವರು ಪೊಲೀಸರನ್ನು ಒತ್ತಾಯಿಸಿದರು.

ಅಡುಗೆ ಅನಿಲ ಸೋರಿಕೆಯಿಂದ ಸ್ಫೋಟ: ಐವರಿಗೆ ಗಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಪಿಗೆಹಳ್ಳಿ ಠಾಣೆ ವ್ಯಾಪ್ತಿಯಲ್ಲಿರುವ ಮನೆಯೊಂದರಲ್ಲಿ ಅಡುಗೆ ಅನಿಲ ಸೋರಿಕೆಯಾಗಿ ಸ್ಫೋಟ ಸಂಭವಿಸಿದ್ದು, ಮನೆಯಲ್ಲಿದ್ದ ಐವರು ಗಾಯಗೊಂಡಿದ್ದಾರೆ.

'ಎಂ.ಎಸ್. ನಗರದ ಮನೆಯಲ್ಲಿ ಬುಧವಾರ ತಡರಾತ್ರಿ ಅವಘಡ ಸಂಭವಿಸಿದೆ. ಮದನ್ ಬಹೋರಾ (32), ಆತನ ಪತ್ನಿ ಪ್ರೇಮಾ ಜಾಲಾ (28), ಮಕ್ಕಳಾದ ಮೀರಾದಾ (12), ಒಹೋರಾ (10) ಮತ್ತು ಪ್ರಶಾಂತ್ (6) ಗಾಯಗೊಂಡಿದ್ದಾರೆ. ಎಲ್ಲರೂ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಮದನ್ ಆರೋಗ್ಯ ಸ್ಥಿತಿ ಚಿಂತಾಜನಕವಾಗಿದೆ' ಎಂದು ಪೊಲೀಸರು ಹೇಳಿದರು.

'ನೇಪಾಳದ ಮದನ್, ಕೆಲಸ ಹುಡುಕಿಕೊಂಡು ಕುಟುಂಬ ಸಮೇತನಗರಕ್ಕೆಬಂದಿದ್ದರು.ಆಹಾರಪೂರೈಕೆಕಂಪನಿಯೊಂದರ ಡೆಲಿವರಿ ಬಾಯ್ ಕೆಲಸ ಮಾಡುತ್ತಿದ್ದರು. ಪತ್ನಿ ಮನೆಯಲ್ಲಿರುತ್ತಿದ್ದರು. ಖಾಸಗಿ ಶಾಲೆಯೊಂದರಲ್ಲಿ ಮಕ್ಕಳು ಓದುತ್ತಿದ್ದರು.'

'ಪತ್ನಿ ಪ್ರೇಮಾ ಹಾಗೂ ಮಕ್ಕಳು ಬುಧವಾರ ರಾತ್ರಿ ಊಟ ಮಾಡಿ, ಅಡುಗೆ ಮನೆ ಹಾಗೂ ಕೊಠಡಿಯ ಎಲ್ಲ ಕಿಟಕಿಗಳನ್ನು ಬಂದ್ ಮಾಡಿ ಮಲಗಿದ್ದರು. ಮದನ್ ಅವರು ಕೆಲಸ ಮುಗಿಸಿಕೊಂಡು ರಾತ್ರಿ 11 ಗಂಟೆಗೆ ಮನೆಗೆ ವಾಪಸು ಬಂದಿದ್ದರು. ಅವರು ಸಹ ಊಟ ಮಾಡಿ ಮಲಗಿದ್ದರು. ಪತ್ನಿ ಪ್ರೇಮಾ ಅವರು ತಡರಾತ್ರಿ ಎಚ್ಚರಗೊಂಡಿದ್ದರು. ಅಡುಗೆ ಅನಿಲದ ವಾಸನೆ ಬಂದಿತ್ತು' ಎಂದು ತಿಳಿಸಿದರು.

'ಪತಿ ಮದನ್ ಅವರನ್ನು ಎಬ್ಬಿಸಿದ್ದ ಅವರು, ಅಡುಗೆ ಮನೆಗೆ ಹೋಗಿ ಅನಿಲದ ಸಿಲಿಂಡರ್ ಪರಿಶೀಲಿಸುವಂತೆ ಹೇಳಿದ್ದರು. ಅಡುಗೆ ಮನೆಗೆ ಹೋಗಿದ್ದ ಮದನ್, ಕಿಟಕಿ ಬಾಗಿಲು ತೆರೆಯದೇ ಗ್ಯಾಸ್ ಸ್ಟೌವ್ ಎದುರು ಏಕಾಏಕಿ ಬೆಂಕಿ ಕಡ್ಡಿ ಗೀರಿದ್ದರು. ಇದರಿಂದಾಗಿ ಬೆಂಕಿ ಹೊತ್ತಿಕೊಂಡು ಸ್ಫೋಟ ಸಂಭವಿಸಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಮದನ್ ಅವರಿಗೂ ಹೆಚ್ಚು ಬೆಂಕಿ ತಗುಲಿತ್ತು. ಅಡುಗೆ ಮನೆಗೆ ಹೊಂದಿಕೊಂಡಂತೆ ಮಲಗಿದ್ದ ಪತ್ನಿ ಹಾಗೂ ಮಕ್ಕಳಿಗೂ ಬೆಂಕಿ ತಾಗಿತ್ತು.'

'ಗಾಯಾಳುಗಳ ಕೂಗಾಟ ಕೇಳಿದ್ದ ಸ್ಥಳೀಯರು ರಕ್ಷಣೆಗೆ ಹೋಗಿದ್ದರು. ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ಬಂದಿದ್ದರು. ನಂತರ, ಗಾಯಾಳುಗಳನ್ನು ರಕ್ಷಿಸಿ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಸ್ಫೋಟದ ಸಂಬಂಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.



ಅನಿಲ ಸೋರಿಕೆಯಿಂದ ಸಂಭವಿಸಿದ್ದ ಸ್ಫೋಟದಿಂದ ಅಡುಗೆ ಮನೆಯ ಬಾಗಿಲು ಮುರಿದು ಬಿದ್ದಿದೆ

'ರಕ್ತದ ಕ್ಯಾನ್ಸರ್ ಚಿಕಿತ್ಸೆಗೆ ದಾನಿಗಳ ಕೊರತೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವ ರಕ್ತ ಕ್ಯಾನ್ಸರ್ ದಿನದ ಪ್ರಯುಕ್ತ ಡಿಕೆಎಂಎಸ್–ಬಿಎಂಎಸ್‌ಟಿ ಫೌಂಡೇಶನ್ ನಗರದಲ್ಲಿ ರಕ್ತದ ಕ್ಯಾನ್ಸರ್ ಹಾಗೂ ರಕ್ತದ ಆಕರ ಕೋಶ (ಬ್ಲಡ್ ಸ್ಟೆಮ್ ಸೆಲ್) ದಾನದ ಬಗ್ಗೆ ಜಾಗೃತಿ ಮೂಡಿಸಿತು.

ನಗರದ ಮಾಲ್‌ಗಳಲ್ಲಿ ಫೌಂಡೇಶನ್ ಸದಸ್ಯರು ಭಿತ್ತಿ ಪತ್ರ ಪ್ರದರ್ಶನ, ನೃತ್ಯ ಸೇರಿ ವಿವಿಧ ಕಾರ್ಯಕ್ರಮಗಳ ಮೂಲಕ ಜಾಗೃತಿ ಮೂಡಿಸಿದರು. ಇದೇ ವೇಳೆ ರಕ್ತದ ಆಕರ ಕೋಶ ದಾನ ಮಾಡುವಂತೆಯೂ ನೆರೆದಿದ್ದವರಿಗೆ ಫೌಂಡೇಶನ್ ಸದಸ್ಯರು ಮನವಿ ಮಾಡಿಕೊಂಡು, ದಾನಿಗಳ ನೋಂದಣಿ ಅಭಿಯಾನವನ್ನೂ ನಡೆಸಿದರು. ಜನರಿಗೆ ರಕ್ತ ಕ್ಯಾನ್ಸರ್ ಕುರಿತ ಪ್ರಶ್ನೆ ಕೇಳಲಾಯಿತು.

ಈ ವೇಳೆ ಮಾತನಾಡಿದ ಫೌಂಡೇಷನ್‌ನ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಪ್ಯಾಟ್ರಿಕ್ ಪಾಲ್, 'ಭಾರತದಲ್ಲಿ ಪ್ರತಿ ವರ್ಷ ಒಂದು ಲಕ್ಷ ರಕ್ತದ ಕ್ಯಾನ್ಸರ್ ಪ್ರಕರಣಗಳು ವರದಿಯಾಗುತ್ತಿವೆ. ಶೇ 0.09 ಮಂದಿ ಮಾತ್ರ ರಕ್ತದ ಆಕರ ಕೋಶ ದಾನಕ್ಕೆ ಹೆಸರು ನೋಂದಾಯಿಸಿಕೊಂಡಿ ದ್ದಾರೆ. ಇದರಿಂದಾಗಿ ರಕ್ತ ಸಂಬಂಧಿ ಸಮಸ್ಯೆಗಳಿಗೆ ಚಿಕಿತ್ಸೆ ನೀಡುವಲ್ಲಿ ದಾನಿಗಳ ಕೊರತೆ ದೊಡ್ಡ ಸವಾಲಾಗಿದೆ. ರಕ್ತದ ಕ್ಯಾನ್ಸರ್ ಹಾಗೂ ರಕ್ತ ಸಂಬಂಧಿ ಕಾಯಿಲೆಯಿಂದ ಬಳಲುತ್ತಿರುವ ರೋಗಿಗಳನ್ನು ಕಾಪಾಡಲು ರಕ್ತದ ಆಕರಕೋಶ ಸಹಾಯಕ. ಆರೋಗ್ಯವಂತ ವ್ಯಕ್ತಿಗಳು ರಕ್ತದ ಆಕರಕೋಶ ದಾನ ಮಾಡುವ ಮೂಲಕ ರೋಗಿಗಳ ಚೇತರಿಕೆಗೆ ನೆರವಾಗಬೇಕು' ಎಂದು ಹೇಳಿದರು.

ಡಿಕೆಎಂಎಸ್–ಬಿಎಂಎಸ್‌ಟಿ ಫೌಂಡೇಶನ್ ಸದಸ್ಯರು ರಕ್ತದ ಕ್ಯಾನ್ಸರ್ ಬಗ್ಗೆ ಜಾಗೃತಿ ಮೂಡಿಸಿದರು

ನಿರ್ಮಾಪಕ ಸತೀಶ್‌ರಿಂದ ಹಲ್ಲೆ: ಸುರೇಶ್ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗೋವಾದಲ್ಲಿ ಸೋಮವಾರ ಕನ್ನಡ ಸಿನಿಮಾ ನಿರ್ಮಾಪಕರ ನಡುವೆ ಗಲಾಟೆ ನಡೆದಿದ್ದು ನಿಜ. ನಿರ್ಮಾಪಕ ಸತೀಶ್ ಹಲವರ ಮೇಲೆ ಹಲ್ಲೆ ನಡೆಸಿದ್ದು, ಅವರ ಮೇಲೆ ಶಿಸ್ತುಕ್ರಮ ಜರುಗಿಸಲಾಗುವುದು' ಎಂದು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಎನ್.ಎಂ.ಸುರೇಶ್ ತಿಳಿಸಿದರು.

ಗುರುವಾರ ವಾಣಿಜ್ಯ ಮಂಡಳಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ನಿರ್ಮಾಪಕ ದಶಾವರ ಮಂಜುನಾಥ್ ಮೇಲೆ ಸತೀಶ್ ಮಾರಣಾಂತಿಕ ಹಲ್ಲೆ ನಡೆಸಿದ್ದಾರೆ. ಗಲಾಟೆ ಬಿಡಿಸಲು ಹೋದ ನನ್ನ ಮೇಲೆ ಹಾಗೂ ಎ.ಗಣೇಶ್ ಮೇಲೆ ಹಲ್ಲೆ ನಡೆಸಿದ್ದಾರೆ. ವಾಣಿಜ್ಯ ಮಂಡಳಿ ಗೌರವ ಬೀದಿಗೆ ಬರಬಾರದು ಎಂಬ ಕಾರಣಕ್ಕೆ ವಿಷಯ ಬಹಿರಂಗಪಡಿಸಲಿಲ್ಲ. ತಾಂತ್ರಿಕ ಕಾರಣದಿಂದ ದೂರು ನೀಡಿರಲಿಲ್ಲ. ಅದಕ್ಕೆ ಕ್ಷಮೆ ಇರಲಿ. ಗೋವಾಕ್ಕೆ ತೆರಳಿ ದೂರು ನೀಡುತ್ತೇವೆ. ಮಂಡಳಿಯಲ್ಲಿ ತೀರ್ಮಾನಿಸಿ ಸತೀಶ್ ವಿರುದ್ಧ ಶಿಸ್ತುಕ್ರಮ ತೆಗೆದುಕೊಳ್ಳುತ್ತೇವೆ' ಎಂದುತಿಳಿಸಿದರು.

'ಮಂಡಳಿ ಅಧ್ಯಕ್ಷನಾದ ಬಳಿ ಪದಾಧಿಕಾರಿಗಳನ್ನ ಪ್ರವಾಸಕ್ಕೆ ಕರೆದುಕೊಂಡು ಹೋಗಬೇಕು ಎಂಬ ಆಸೆಯಿತ್ತು. ಹಾಗಾಗಿ 52 ಜನ ಗೋವಾಕ್ಕೆ ಹೋಗಿದ್ದೆವು. ಬೈಲಾ ವಿಷಯಕ್ಕಾಗಲಿ, ಚುನಾವಣೆ ವಿಷಯಕ್ಕಾಗಲಿ ನಡೆದ ಗಲಾಟೆ ಅಲ್ಲ. ಪಾರ್ಟಿ ಮುಗಿಸಿ ಊಟ ಮಾಡುವಾಗ ನಡೆದ ಘಟನೆ. ಘಟನಾ ಸ್ಥಳದ ಸಿಸಿಟಿವಿ ದೃಶ್ಯಗಳನ್ನು ತರಿಸಿ ಶೀಘ್ರದಲ್ಲಿ ಎಲ್ಲವಕ್ಕೂ ಸಾಕ್ಷಿ ನೀಡುತ್ತೇವೆ. ಇಡೀ ಚಿತ್ರೋದ್ಯಮ ಈ ಘಟನೆ ಒಕ್ಕೊರಲಿನಿಂದ ವಿರೋಧಿಸುತ್ತದೆ. ಗಲಾಟೆಯಲ್ಲಿ ರಕ್ತ ಕೋಡಿ ಹರಿದು ಹೋಗ್ತಿದೆ ಅನ್ನಿಸಿತು. ಸತೀಶ್ ಅವರನ್ನು ತಡೆಯಲು ಹೋದಾಗ, ಗನ್ ಇದೆ ತೆಗೆಯಲಾ ಎಂದು ಅತಿರೇಕದಿಂದ ವರ್ತಿಸಿದರು' ಎಂದು ಸುರೇಶ್ ದೂರಿದರು.

ಎ.ಗಣೇಶ್ ಕೂಡ, ಭಾ.ಮಾ. ಹರೀಶ್, ಸಾ.ರಾ.ಗೋವಿಂದು ಮೊದಲಾದವರು ಘಟನೆ ಕುರಿತು ಮಾತನಾಡಿದರು. ವಾಣಿಜ್ಯ ಮಂಡಳಿ ಬಹುತೇಕ ಪದಾಧಿಕಾರಿಗಳು ಸುದ್ದಿಗೋಷ್ಠಿಯಲ್ಲಿ ಹಾಜರಿದ್ದರು.

ಹಲ್ಲೆ ನಡೆಸಿಲ್ಲ: 'ಗೋವಾಕ್ಕೆ ಪ್ರವಾಸಕ್ಕೆ ಹೋಗಿದ್ದೆವು. ಕ್ಲಬ್‌ನಲ್ಲಿ ಪಾರ್ಟಿ ಆಯೋಜಿಸಿದ್ದರು. ರಥಾವರ ಮಂಜುನಾಥ್ ಬಂದು ಬೈಲಾ ಕುರಿತು ಜಗಳಕ್ಕೆ ಬಂದರು. ಅವಾಚ್ಯ ಶಬ್ದಗಳಿಂದ ನಿಂದಿಸಿ ಹೊಡೆಯಲು ಬಂದರು. ನೂಕಾಟದಲ್ಲಿ ಬಿದ್ದು ಏಟಾಗಿದೆಯೇ ಹೊರತು ನಾನು ಯಾವುದೇ ರೀತಿಯಲ್ಲಿ ಹಲ್ಲೆ ನಡೆಸಿಲ್ಲ. ನನ್ನದು ತಪ್ಪಿಲ್ಲ. ಕಾನೂನು ಪ್ರಕಾರ ಹೋರಾಟ ಮಾಡುತ್ತೇನೆ' ಎಂದು ಆಂತರ್ಯ ಸತೀಶ್ ಪ್ರಜಾವಾಣಿಗೆ ತಿಳಿಸಿದ್ದಾರೆ.

ಅಕ್ರಮ ವಾಸ: 25 ಬಾಂಗ್ಲಾ ಪ್ರಜೆಗಳು ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಡಿ ಮೂಲಕ ಅಕ್ರಮವಾಗಿ ನುಸುಳಿ ನಗರದಲ್ಲಿ ವಾಸವಿದ್ದ ಬಾಂಗ್ಲಾದೇಶದ 25 ಪ್ರಜೆಗಳನ್ನು ಸಿಸಿಬಿ ಪೊಲೀಸರು ಪತ್ತೆ ಮಾಡಿದ್ದು, ಮಾನವ ಕಳ್ಳ ಸಾಗಣೆಯಲ್ಲಿ ತೊಡಗಿದ್ದ ಆರೋಪದಡಿ ಮೂವರನ್ನು ಬಂಧಿಸಿದ್ದಾರೆ.

'ಬಾಂಗ್ಲಾದೇಶದ ಪ್ರಜೆಗಳು ನಗರದಲ್ಲಿ ಅಕ್ರಮವಾಗಿ ವಾಸವಿರುವ ಬಗ್ಗೆ ಮಾಹಿತಿ ಬಂದಿತ್ತು. ಸಿಸಿಬಿ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಲಾಗಿತ್ತು. ವಿಶೇಷ ಕಾರ್ಯಾಚರಣೆ ನಡೆಸಿ ಬಾಂಗ್ಲಾ ಪ್ರಜೆಗಳನ್ನು ಪತ್ತೆ ಮಾಡಲಾಗಿದೆ' ಎಂದು ಸಿಸಿಬಿ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ರಾಮಮೂರ್ತಿನಗರ, ಮಾರತ್ತಹಳ್ಳಿ, ಬೆಳ್ಳಂದೂರು, ಬಂಡೇಪಾಳ್ಯ, ವರ್ತೂರು ಹಾಗೂ ಹೆಬ್ಬಗೋಡಿ ಠಾಣೆ ವ್ಯಾಪ್ತಿಯಲ್ಲಿ ಕಾರ್ಯಾಚರಣೆ ನಡೆಸಲಾಯಿತು. ತಾತ್ಕಾಲಿಕ ಶೆಡ್‌ಗಳಲ್ಲಿ ಉಳಿದು ಕೊಂಡಿದ್ದ ಬಾಂಗ್ಲಾದ 25 ಪ್ರಜೆಗಳನ್ನೂ ವಶಕ್ಕೆ ಪಡೆಯಲಾಯಿತು' ಎಂದು ತಿಳಿಸಿದರು.

'ವಶಕ್ಕೆ ಪಡೆದಿರುವ ಪ್ರಜೆಗಳ ಪೈಕಿ ಇಬ್ಬರು, ಅಪರಾಧ ಹಿನ್ನೆಲೆಯುಳ್ಳವರು. ಸುಲಿಗೆ ಪ್ರಕರಣದಲ್ಲಿ ಜೈಲಿಗೂ ಹೋಗಿ ಜಾಮೀನು ಮೇಲೆ ಹೊರಗೆ ಬಂದಿದ್ದರು. ಉಳಿದಂತೆ, ಐದು ಪ್ರಜೆಗಳು ತಲೆಮರೆಸಿಕೊಂಡಿದ್ದಾರೆ' ಎಂದು ಹೇಳಿದರು.

ದಾಖಲೆ ಜಪ್ತಿ: 'ಬಾಂಗ್ಲಾದೇಶ ಹಾಗೂ ಭಾರತದ ಹಲವು ಗುರುತಿನ ಚೀಟಿಗಳು ಪ್ರಜೆಗಳ ಬಳಿ ಸಿಕ್ಕಿವೆ. ಅವುಗಳನ್ನು ಜಪ್ತಿ ಮಾಡಿ, ಪರಿಶೀಲಿಸಲಾಗುತ್ತಿದೆ' ಎಂದು ಸಿಸಿಬಿ ಮೂಲಗಳು ತಿಳಿಸಿವೆ.

'ಮಾನವ ಕಳ್ಳ ಸಾಗಣೆಯಲ್ಲಿ ತೊಡಗಿದ್ದ ಮೂವರು, ಬಾಂಗ್ಲಾ ಪ್ರಜೆಗಳನ್ನು ಅಕ್ರಮವಾಗಿ ನಗರಕ್ಕೆ ಕರೆಸಿದ್ದರು. ಕಟ್ಟಡ ನಿರ್ಮಾಣ ಹಾಗೂ ಇತರೆ ಕಡೆಗಳಲ್ಲಿ ಪ್ರಜೆಗಳು ಕೆಲಸ ಮಾಡುತ್ತಿದ್ದರು. ಇನ್ನು ಹಲವರು ನಗರದಲ್ಲಿ ನೆಲೆಸಿರುವ ಮಾಹಿತಿ ಇದ್ದು, ಪರಿಶೀಲಿಸಲಾಗುತ್ತಿದೆ' ಎಂದು ಹೇಳಿವೆ.

ನಗರದಲ್ಲಿ ಇಂದು

'ತ್ರಿಫಲ ವೈವಿಧ್ಯ' ಪ್ರದರ್ಶನ ಮೇಳ–2024: ಆಯೋಜನೆ ಮತ್ತು ಸ್ಥಳ: ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆ (ಐಐಎಚ್‌ಆರ್), ಹೆಸರಘಟ್ಟ, ಬೆಳಿಗ್ಗೆ 10.30

'ಸ್ವಾಭಿಮಾನಿ ಪುಸ್ತಕ ಪ್ರಶಸ್ತಿ ಪ್ರದಾನ–2023': ಕೆ.ವಿ. ಪ್ರಭಾಕರ್, ಅಧ್ಯಕ್ಷತೆ: ದ್ವಾರನಕುಂಟೆ ಪಾತಣ್ಣ, ಅತಿಥಿ: ಸಿ. ಸೋಮಶೇಖರ್, ತೀರ್ಪುಗಾರರು: ಎಚ್. ಎಲ್. ಪುಷ್ಪ, ಸತ್ಯಮಂಗಲ ಮಹಾದೇವ, ಉಪಸ್ಥಿತಿ: ವೈ.ಬಿ.ಎಚ್. ಜಯದೇವ್, ಪ್ರಶಸ್ತಿ ಪುರಸ್ಕೃತರು: ಎಚ್.ಎಸ್.ಎಂ. ಪ್ರಕಾಶ್, ಎಚ್.ಟಿ. ಪೋತೆ, ಫಾತಿಮಾ ರಲಿಯಾ, ಸಂತೋಷ ನಾಯಕ, ಇಂದಿರಾ ಕೃಷ್ಣಪ್ಪ, ಎಂ.ಎಸ್. ಮಣಿ, ಆಯೋಜನೆ: ಸ್ವಾಭಿಮಾನಿ ಕರ್ನಾಟಕ ವೇದಿಕೆ, ಸ್ಥಳ: ಶೇಷಾದ್ರಿಪುರಂ ಕಾಲೇಜಿನ ಸಭಾಂಗಣ, ಶೇಷಾದ್ರಿಪುರ, ಬೆಳಿಗ್ಗೆ 10.45

'ಅಕ್ಕಯ್_ಕರುಣೆಗೊಂದು ಸವಾಲು' ಪುಸ್ತಕ ಬಿಡುಗಡೆ: ಡಾಲಿ ಧನಂಜಯ್, ಮಂಜುನಾಥ್ ಗೌಡ, ಆಯೋಜನೆ: ಒಂದೆಡೆ, ಸ್ಥಳ: ಡಾಲಿ ಧನಂಜಯ್ ಅವರ ಮನೆ, ಜೆ.ಪಿ. ನಗರ, ಬೆಳಿಗ್ಗೆ 11

ಯಶಸ್ವಿ ಭವ: 2023ರ ಯುಪಿಎಸ್‌ಸಿ ಪರೀಕ್ಷೆಯಲ್ಲಿ ಸಾಧನೆಗೈದವರಿಗೆ ಸನ್ಮಾನ: ಅತಿಥಿಗಳು: ಜಿ. ಪ್ರಸನ್ನ ಕುಮಾರ್, ಸಂತೋಷ್ ಕುಮಾರ್ ತನೇಜ, ಅಧ್ಯಕ್ಷತೆ: ಎಚ್.ಎಸ್. ಅಶೋಕ್, ಆಯೋಜನೆ ಮತ್ತು ಸ್ಥಳ: ಚಾಣಕ್ಯ ವಿಶ್ವವಿದ್ಯಾಲಯ, ಬೆಳಿಗ್ಗೆ 11

ಕಲಾಕೃತಿಗಳ ಸಮಾವೇಶ: ಆಯೋಜನೆ: ಹೆರಿಟೇಜ್ ಫೌಂಡೇಶನ್ ಆಫ್ ಆರ್ಟ್ ಆ್ಯಂಡ್ ಕಲ್ಚರ್, ಸ್ಥಳ: ಬಾಲಭವನ, ಕಬ್ಬನ್ ಉದ್ಯಾನ, ಮಧ್ಯಾಹ್ನ 2.30

ಬಸವ ಜಯಂತಿ, ಅಕ್ಕಮಹಾದೇವಿ ಜಯಂತಿ, 'ಬಸವಶ್ರೀ', 'ಅಕ್ಕಮಹಾದೇವಿ', 'ಕಾಯಕರತ್ನ', 'ಕಾಯಕ ಯೋಗಿ' ಪ್ರಶಸ್ತಿ ಪ್ರದಾನ: ಸಾನ್ನಿಧ್ಯ: ಸಿದ್ಧಲಿಂಗ ಸ್ವಾಮೀಜಿ, ಉದ್ಘಾಟನೆ: ಶಾಮನೂರು ಶಿವಶಂಕರಪ್ಪ, ಅತಿಥಿಗಳು: ಈಶ್ವರ್ ಖಂಡ್ರೆ, ಎಂ.ಬಿ. ಪಾಟೀಲ, ಶರಣಬಸಪ್ಪ ದರ್ಶನಾಪೂರ, ಅಧ್ಯಕ್ಷತೆ: ವಿಶ್ವನಾಥಯ್ಯ, ಪ್ರಶಸ್ತಿ ಪುರಸ್ಕೃತರು: ಅರವಿಂದ ಜತ್ತಿ, ಶಾಲಿನಿ, ಟಿ.ಪಿ. ಕಲ್ಲೇಶ್, ತಿಪ್ಪೇಶಪ್ಪ, ಆಯೋಜನೆ: ಬಸವೇಶ್ವರ ಸೇವಾ ಸಮಿತಿ, ಅಕ್ಕನ ಬಳಗ ಮಹಿಳಾ ಸಮಾಜ, ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾ ಬೆಂಗಳೂರು ನಗರ ಜಿಲ್ಲಾ ಘಟಕ, ಸ್ಥಳ: ವೀರಶೈವ–ಲಿಂಗಾಯತ ಭವನ, ಸದಾಶಿವನಗರ, ಮಧ್ಯಾಹ್ನ 3

ಟಿ.ಆರ್. ಚಂದ್ರಶೇಖರ್ ಅವರ 'ಭಾರತ ಒಕ್ಕೂಟ ವ್ಯವಸ್ಥೆ' ಪುಸ್ತಕ ಬಿಡುಗಡೆ: ಬರಗೂರು ರಾಮಚಂದ್ರಪ್ಪ, ಅತಿಥಿ: ಜೈಕುಮಾರ್ ಎಚ್.ಎಸ್., ಅಧ್ಯಕ್ಷತೆ: ವಿ.ಆರ್. ಸುದರ್ಶನ್, ಆಯೋಜನೆ: ಜನ ಪ್ರಕಾಶನ, ಬಂಡಾಯ ಸಾಹಿತ್ಯ ಸಂಘಟನೆ, ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನದ ಸಭಾಂಗಣ, ಎನ್.ಆರ್. ಕಾಲೊನಿ, ಸಂಜೆ 5



ಬರಗೂರು ರಾಮಚಂದ್ರಪ್ಪ

ಚೈತನ್ಯ ಸಂಜೆ 'ಆರಂಭ ಮಾಡುವೆನು ವಚನ ವ್ಯಾಖ್ಯಾನ' ಉಪನ್ಯಾಸ: ಅಂಬಿಕಾ ಚಂದ್ರಶೇಖರ್, ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ಉಪಸ್ಥಿತಿ: ಶಾಂತಾಮಣಿ ಮೃತ್ಯುಂಜಯ, ಸುಧಾ ನಾಗರಾಜ್, ನಾ. ಮಲ್ಲಿಕಾರ್ಜುನ್, ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಸ್ಥಳ: ಜೆಎಸ್‌ಎಸ್ ಕಾಲೇಜಿನ ಸಭಾಂಗಣ, ಜಯನಗರ, 8ನೇ ವಿಭಾಗ, ಸಂಜೆ 5.30

ಹರಿದಾಸ ಮಂಜರಿ: ಗಾಯನ: ಸುಮಲತಾ ಮಂಜುನಾಥ್, ಕೀ–ಬೋರ್ಡ್: ಟಿ.ಎಸ್. ರಮೇಶ್, ತಬಲಾ: ಎಸ್. ಮೋಹನ್, ಆಯೋಜನೆ ಮತ್ತು ಸ್ಥಳ: ಅಭಯ ಲಕ್ಷ್ಮಿ ನರಸಿಂಹಸ್ವಾಮಿ ದೇವಸ್ಥಾನ, ತ್ಯಾಗರಾಜನಗರ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ.
nagaradalli_indu@prajavani.co.in

ಕೇರಳ ವಿದ್ಯಾರ್ಥಿಗಳು ಗುರಿ; ಗಾಂಜಾ ಕೈಗಿಟ್ಟು ವಿಡಿಯೊ ಮಾಡುತ್ತಿದ್ದ ಆರೋಪಿಗಳು

'ಸಿಬಿಐ' ಸೋಗಿನಲ್ಲಿ ಸುಲಿಗೆ: ನಾಲ್ವರು ಬಂಧನ

ಪ್ರಜಾವಾಣಿ ವಾರ್ತೆ

ಅನಂತಕೃಷ್ಣನ್

ಆದರ್ಶ

ದೀಪಕ್ ಚಂದ್ರ

ಪ್ರಮೋದ್

ಬೆಂಗಳೂರು: 'ಡ್ರಗ್ಸ್ ಪ್ರಕರಣದಲ್ಲಿ ಜೈಲಿಗೆ ಕಳುಹಿಸುತ್ತೇವೆ' ಎಂಬುದಾಗಿ ಸಿಬಿಐ ಅಧಿಕಾರಿಗಳ ಸೋಗಿನಲ್ಲಿ ವಿದ್ಯಾರ್ಥಿಗಳನ್ನು ಬೆದರಿಸಿ ಹಣ ಸುಲಿಗೆ ಮಾಡುತ್ತಿದ್ದ ನಾಲ್ವರು ಆರೋಪಿಗಳನ್ನು ಸೋಲದೇವನಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಕೇರಳದ ಅನಂತಕೃಷ್ಣನ್ (23), ಎ.ಎಸ್. ಪ್ರಮೋದ್ (42), ಆದರ್ಶ (22) ಹಾಗೂ ದೀಪಕ್ ಆರ್. ಚಂದ್ರ (37) ಬಂಧಿತರು. ಎರಡು ಕಾರು, ಪಿಸ್ತೂಲ್, ಕೈ ಕೋಳ, ಲಾಠಿ, ಸಿಬಿಐ ಟ್ರಸ್ಟ್ ಹೆಸರಿನಲ್ಲಿದ್ದ ಗುರುತಿನ ಚೀಟಿಗಳು, ಬ್ಯಾಟನ್ ಹಾಗೂ 4 ಮೊಬೈಲ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಹೆಸರಘಟ್ಟ ಮುಖ್ಯರಸ್ತೆಯ ಎಜಿಬಿ ಬಡಾವಣೆಯಲ್ಲಿ ವಿದ್ಯಾರ್ಥಿಯೊಬ್ಬರು ವಾಸವಿದ್ದಾರೆ. ಮೇ 27ರಂದು ರಾತ್ರಿ ಮನೆಗೆ ನುಗ್ಗಿದ್ದ ಆರೋಪಿಗಳು, ಸಿಬಿಐ ಅಧಿಕಾರಿಗಳು ಎಂಬುದಾಗಿ ಹೇಳಿ ಬೆದರಿಸಿದ್ದರು. ತಾವು ತಂದಿದ್ದ ಗಾಂಜಾವನ್ನು ವಿದ್ಯಾರ್ಥಿ ಬಳಿ ಕೊಟ್ಟು ವಿಡಿಯೊ ಚಿತ್ರೀಕರಣ ಮಾಡಿದ್ದರು. '₹ 3 ಲಕ್ಷ ನೀಡಬೇಕು. ಇಲ್ಲದಿದ್ದರೆ, ವಿಡಿಯೊವನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹರಿಬಿಡುತ್ತೇವೆ. ಜೊತೆಗೆ, ನಿನ್ನನ್ನು ಬಂಧಿಸಿ ಜೈಲಿಗೆ ಕಳುಹಿಸುತ್ತೇವೆ' ಎಂಬುದಾಗಿ ಬೆದರಿಸಿದ್ದರು' ಎಂದಿದ್ದಾರೆ.

'ತಮ್ಮ ಬಳಿ ಹಣವಿಲ್ಲವೆಂದು ವಿದ್ಯಾರ್ಥಿ ಹೇಳಿದ್ದರು. ಮೊಬೈಲ್ ಕಸಿದುಕೊಂಡಿದ್ದ ಆರೋಪಿಗಳು, ಯುಪಿಐ ಮೂಲಕ ಒತ್ತಾಯದಿಂದ ತಮ್ಮ ಖಾತೆಗೆ ಹಂತ ಹಂತವಾಗಿ ₹90 ಸಾವಿರ ವರ್ಗಾಯಿಸಿಕೊಂಡಿದ್ದರು. ಮರುದಿನ ಉಳಿದ ಹಣ ನೀಡುವಂತೆ ಹೇಳಿ ಸ್ಥಳದಿಂದ ಪರಾರಿಯಾಗಿದ್ದರು. ಈ ಬಗ್ಗೆ ವಿದ್ಯಾರ್ಥಿ ದೂರು ನೀಡುತ್ತಿದ್ದಂತೆ, ತನಿಖೆ ಕೈಗೊಂಡು ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಹೇಳಿದರು.

ತಂಗಿ ಮಾತನಾಡಿಸಲು ಬರುತ್ತಿದ್ದ: 'ಆರೋಪಿಗಳ ಪೈಕಿ ಒಬ್ಬಾತನ ತಂಗಿ, ಪತಿಯೊಂದಿಗೆ ಬೆಂಗಳೂರಿನಲ್ಲಿ ವಾಸವಿದ್ದಾರೆ. ತಂಗಿಯನ್ನು ನೋಡಲು ಆರೋಪಿ ಆಗಾಗ ಬೆಂಗಳೂರಿಗೆ ಬಂದು ಹೋಗುತ್ತಿದ್ದ. ಹೆಚ್ಚಿನ ಹಣ ಸಂಪಾದಿಸಲು ಮುಂದಾಗಿದ್ದ ಆರೋಪಿ, ಸ್ನೇಹಿತರನ್ನು ತನ್ನೊಂದಿಗೆ ಕರೆದುಕೊಂಡು ಬಂದು ವಿದ್ಯಾರ್ಥಿಗಳನ್ನು ಬೆದರಿಸಿ ಸುಲಿಗೆ ಮಾಡಲಾರಂಭಿಸಿದ್ದ' ಎಂದು ತಿಳಿಸಿದರು.

ಆರೋಪಿಗಳ ಬಳಿ ನಕಲಿ ಗುರುತಿನ ಚೀಟಿ

'ಸಿಬಿಐ ಟ್ರಸ್ಟ್ ಹೆಸರಿನಲ್ಲಿ ಆರೋಪಿಗಳು ನಕಲಿ ಗುರುತಿನ ಚೀಟಿ ಮಾಡಿಸಿಕೊಂಡಿದ್ದರು. ಬೆಂಗಳೂರಿನಲ್ಲಿ ಉಳಿದುಕೊಂಡಿರುವ ಕೇರಳದ ವಿದ್ಯಾರ್ಥಿಗಳ ಮನೆ ವಿಳಾಸವನ್ನು ಆರೋಪಿಗಳು ಪತ್ತೆ ಮಾಡುತ್ತಿದ್ದರು' ಎಂದು ಪೊಲೀಸರು ಹೇಳಿದರು.

'ಮನೆಗಳಿಗೆ ನುಗ್ಗುತ್ತಿದ್ದ ಆರೋಪಿಗಳು, ಸಿಬಿಐ ಗುರುತಿನ ಚೀಟಿ ತೋರಿಸಿ ಬೆದರಿಸುತ್ತಿದ್ದರು. ತಮ್ಮ ಬಳಿಯ ಗಾಂಜಾವನ್ನೇ ವಿದ್ಯಾರ್ಥಿಗಳ ಕೈಗೆ ಕೊಟ್ಟು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದರು. ಮರ್ಯಾದೆಗೆ ಹೆದರಿ ವಿದ್ಯಾರ್ಥಿಗಳು ಹಣ ನೀಡುತ್ತಿದ್ದರು. ಆರೋಪಿಗಳು ಇದುವರೆಗೂ ಹಲವು ವಿದ್ಯಾರ್ಥಿಗಳನ್ನು ಸುಲಿಗೆ ಮಾಡಿರುವ ಮಾಹಿತಿ ಇದೆ' ಎಂದು ತಿಳಿಸಿದರು.

ಮೋಕ್ಷ ಕುಶಾಲ್

ಕೊಡಗಿನ ಕುವರಿಗೆ ಭಿನ್ನ ಪಾತ್ರಗಳ ಹಂಬಲ

ಕನ್ನಡ ಚಿತ್ರರಂಗಕ್ಕೆ ಕೊಡಗಿನ ಮತ್ತೋರ್ವ ಕುವರಿ ಕಾಲಿಟ್ಟಿದ್ದಾರೆ. ಧನಂಜಯ ನಟನೆಯ 'ಕೋಟಿ' ಸಿನಿಮಾ ಮೂಲಕ ಮೋಕ್ಷ ಕುಶಾಲ್ ಚಂದನವನಕ್ಕೆ ಪ್ರವೇಶ ಮಾಡಿದ್ದಾರೆ. ಈ ಸಿನಿಮಾ ಜೂನ್ 14ರಂದು ತೆರೆಕಾಣುತ್ತಿದ್ದು, ಅವರೊಂದಿಗೆ ಮಾತಿಗಿಳಿದಾಗ ತಮ್ಮ ಕನಸು ಹಂಚಿಕೊಂಡರು.

ಅಭಿಲಾಷ್ ಪಿ.ಎಸ್.

• ನಿಮ್ಮ ಹಿನ್ನೆಲೆ...

ನಾನು ಕೊಡಗಿನ ಹುಡುಗಿ. ವಿರಾಜಪೇಟೆಯಲ್ಲಿ ಹುಟ್ಟಿ ಬೆಂಗಳೂರಿನಲ್ಲಿ ಬೆಳೆದವಳು. ಜೆಎಸ್‌ಎಸ್ ಕಾಲೇಜಿನಲ್ಲಿ ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್ ಓದಿದೆ. ಎಂಜಿನಿಯರಿಂಗ್ ಡಿಗ್ರಿ ಪಡೆದು ಐಟಿ ಕ್ಷೇತ್ರಕ್ಕೆ ಕಾಲಿಡಲು ಇಷ್ಟವಿರಲಿಲ್ಲ. ನಮ್ಮದು ಮಧ್ಯಮ ವರ್ಗದ ಕುಟುಂಬ. ಹೀಗಾಗಿ ಮಗಳು ಒಳ್ಳೆಯ ಡಿಗ್ರಿ ಪಡೆದಿರಬೇಕೆಂಬ ಹಂಬಲ ಅಪ್ಪನಿಗೆ ಇತ್ತು. ಹೀಗಾಗಿ ಎಂಜಿನಿಯರಿಂಗ್ ಪೂರ್ಣಗೊಳಿಸಿದೆ. ಓದುತ್ತಿರುವಾಗಲೇ ಮಾಡೆಲಿಂಗ್ ಕ್ಷೇತ್ರಕ್ಕೆ ಕಾಲಿಟ್ಟಿದ್ದೆ. ಪ್ರಸಾದ್ ಬಿದ್ದಪ್ಪ ಅವರ ಜೊತೆ ಸುಮಾರು ಎರಡು ವರ್ಷ ಪ್ರೊಫೆಷನಲ್ ಮಾಡೆಲಿಂಗ್ ಮಾಡಿದ್ದೇನೆ. ಈ ಕ್ಷೇತ್ರದಲ್ಲಿ ನಾನಂದುಕೊಂಡಂತೆ ಹೆಚ್ಚಿನ ಪ್ರಯೋಗ ಮತ್ತು ಬೆಳವಣಿಗೆಗೆ ಅವಕಾಶ ಸಿಗಲಿಲ್ಲ. ಈ ಸಂದರ್ಭದಲ್ಲಿ ನಟನೆಯತ್ತ ಗಮನಹರಿಸಿದೆ. ಮೊದಲಿಗೆ 'ಇನ್‌ಸೈಡ್ ಎ ಗರ್ಲ್' ಎನ್ನುವ ಹಿಂದಿ ಕಿರುಚಿತ್ರದಲ್ಲಿ ನಟಿಸಿದೆ.

• 'ಕೋಟಿ' ಪ್ರಾಜೆಕ್ಟ್ ಸಿಕ್ಕಿದ್ದು ಹೇಗೆ?

'ಕೋಟಿ' ಸಿನಿಮಾಗೂ ಮುನ್ನ ಸಿಂಪಲ್ ಸುನಿ ಅವರು ನಿರ್ದೇಶಿಸಿರುವ 'ಮೋಡ ಕವಿದ ವಾತಾವರಣ' ಸಿನಿಮಾದಲ್ಲಿ ನಟಿಸಿದ್ದೆ. ಅದು ಇನ್ನಷ್ಟೇ ಬಿಡುಗಡೆಯಾಗಬೇಕಿದೆ. ಈ ಸಿನಿಮಾದ ಮಾತಿನ ಭಾಗ ಶೂಟಿಂಗ್ ಪೂರ್ಣಗೊಂಡ ಸಂದರ್ಭದಲ್ಲಿ 'ಕೋಟಿ' ಸಿನಿಮಾದ ಅವಕಾಶ ಬಂದಿತು. ಸುನಿ ಅವರೇ ನನ್ನನ್ನು ಶಿಫಾರಸು ಮಾಡಿದರೆಂದು ನನಗೆ ಆ ಮೇಲೆ ತಿಳಿಯಿತು. ಆಡಿಷನ್ ನೀಡಿಯೇ ನಾನು 'ಕೋಟಿ'ಗೆ ಆಯ್ಕೆಯಾದೆ. 'ಮೋಡ ಕವಿದ ವಾತಾವರಣ' ಸಿನಿಮಾಗೂ ಆಡಿಷನ್ ಮೂಲಕವೇ ಆಯ್ಕೆಯಾಗಿದ್ದೆ. ನನಗೆ ಸಿನಿಮಾ ಕ್ಷೇತ್ರದ ಹಿನ್ನೆಲೆ, ಸಂಬಂಧ ಸ್ವಲ್ಪವೂ ಇಲ್ಲ.

• ನಟನೆ ಮೇಲೆ ಆಸಕ್ತಿ ಹುಟ್ಟಿದ್ದು...

ಚಿಕ್ಕವಯಸ್ಸಿನಿಂದಲೂ ಓದಿನ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ಹೆಚ್ಚು ಭಾಗವಹಿಸುತ್ತಿದ್ದೆ. ಕ್ರೀಡೆ ಮೇಲೆ ಹೆಚ್ಚಿನ ಆಸಕ್ತಿ ಇತ್ತು. ಹಲವು ಸ್ಪರ್ಧೆಗಳಲ್ಲೂ ಭಾಗವಹಿಸಿ ಗೆದ್ದಿದ್ದೇನೆ. ನಾಟಕ, ನೃತ್ಯ ಮುಂತಾದ ಚಟುವಟಿಕೆಗಳಲ್ಲೂ ಸಕ್ರಿಯವಾಗಿ ತೊಡಗಿಸಿಕೊಂಡು ಬಂದಿದ್ದೇನೆ. ನನ್ನ ಒಲವಿನ ಬಗ್ಗೆ ಮನೆಯಲ್ಲಿ ಹೇಳಿಕೊಂಡಿದ್ದೆ. ಆರಂಭದಲ್ಲಿ ಹೆಚ್ಚಿನ ಪ್ರೋತ್ಸಾಹ ಸಿಗಲಿಲ್ಲ. ಆದರೂ ನನಗೇನು ಇಷ್ಟವೋ ಆ ದಾರಿಯಲ್ಲಿ ಹೆಜ್ಜೆ ಹಾಕುವ ಅಪಾಯ ಎದುರು ಹಾಕಿಕೊಂಡೆ. ಮಾಡೆಲಿಂಗ್ ನಂತರ ನಟನೆಯತ್ತ ಮುಖ ಮಾಡಿದೆ.

• ಧನಂಜಯ ಜೊತೆಗೆ ನಟನೆಯ ಅನುಭವ ಹೇಗಿತ್ತು?

ಧನಂಜಯ ಅವರು ನಟಿಸಿರುವ ಕೆಲವು ಸಿನಿಮಾಗಳನ್ನು ನೋಡಿದ್ದೇನೆ. ಅವರ ಕೆಲಸದ ಶೈಲಿ, ಲೀಲಾಜಾಲವಾಗಿ ನಟಿಸುವ ಸಾಮರ್ಥ್ಯ ನೋಡಿ ಬೆರಗಾಗಿದ್ದೇನೆ. 'ಕೋಟಿ' ಸಿನಿಮಾ ಆರಂಭಕ್ಕೂ ಮುನ್ನ ಕಾರ್ಯಾಗಾರ ಮಾಡಿದ್ದರು. ಅದಕ್ಕೆ 'ಡಾಲಿ' ಎನ್ನುವ ವ್ಯಕ್ತಿಯ ವ್ಯಕ್ತಿತ್ವ ತಲೆಯಲ್ಲಿಟ್ಟುಕೊಂಡು ಹೋಗಿದ್ದೆ. ಆದರೆ ಅವರೊಂದಿಗೆ ಒಡನಾಡಿದ ಬಳಿಕ ಅವರು 'ಧನಂಜಯ' ಆಗಿ ನನ್ನ ಮನಸ್ಸಿನಲ್ಲಿ ಉಳಿದರು. 'ಡಾಲಿ' ಎನ್ನುವ ವ್ಯಕ್ತಿತ್ವದ ತದ್ವಿರುದ್ಧ ಅವರು. ನನ್ನೊಳಗಿದ್ದ ಭಯವೂ ಅಂದೇ ಮಾಯವಾಯಿತು. ಅವರ ಆ ನಗು, ಸೆಲೆಬ್ರಿಟಿ ಎನ್ನುವ ಅಹಂ ಇಲ್ಲದ ವ್ಯಕ್ತಿತ್ವ, ನಟನೆ ವೇಳೆ ಎಡವಿದರೆ ಸಹಾಯ ಮಾಡುವ ಗುಣ ಹಿಡಿಸಿತು. ತೆರೆಹಂಚಿಕೊಳ್ಳಲು ಅವರೊಬ್ಬ ಅತ್ಯುತ್ತಮ ಕಲಾವಿದ.

ಜೊತೆಗೆ ನಿರ್ದೇಶಕ ಪರಮ್ ಅವರೂ ಹೋಂವರ್ಕ್ ಮಾಡಿಕೊಂಡೇ ಸಿನಿಮಾ ಕ್ಷೇತ್ರಕ್ಕೆ ಇಳಿದವರಂತೆ ಕಂಡುಬಂದರು. ಅವರಿಗೆ ಸಿನಿಮಾ ಮೇಲೆ ಇರುವ ಆಸಕ್ತಿ ಶೂಟಿಂಗ್ ವೇಳೆ ಸ್ಪಷ್ಟವಾಗಿ ಗೋಚರಿಸುತ್ತಿತ್ತು.

• 'ಕೋಟಿ' ಸಿನಿಮಾದಲ್ಲಿನ ನಿಮ್ಮ ಪಾತ್ರ...

'ನವಮಿ'ಎಂಬ ಪಾತ್ರವನ್ನು ನಿರ್ವಹಿಸಿದ್ದು, ಆಕೆ ಸಾಧಾರಣ ಹುಡುಗಿ, ಬಲುಚೂಟಿ, ಕೊಂಚ ತುಂಟತನ ಉಳ್ಳವಳು. ಚಾರ್ಟೆಡ್ ಅಕೌಂಟೆಂಟ್ ಆಗಿ ಕಾರ್ಯನಿರ್ವಹಿಸುವ ಪಾತ್ರ. ಚಿತ್ರದಲ್ಲಿ ಗ್ಲ್ಯಾಮರ್‌ಗಾಗಿ ನನ್ನನ್ನು ಬಳಸಿಕೊಂಡಿಲ್ಲ. ನಟನೆಯ ಸಾಮರ್ಥ್ಯವನ್ನು ಪ್ರದರ್ಶಿಸಲು ಹೆಚ್ಚು ಅವಕಾಶವಿರುವ ಪಾತ್ರ ದೊರೆತಿದೆ.

• ಮೋಕ್ಷ ಮುಂದಿನ ಹೆಜ್ಜೆ...

ಒಳ್ಳೆಯ ಸಿನಿಮಾಗಳನ್ನು, ಭಿನ್ನಪಾತ್ರಗಳನ್ನು ಮಾಡಬೇಕು ಎನ್ನುವ ಹಂಬಲವಿದೆ. 'ಕೋಟಿ' ಸಿನಿಮಾದಿಂದ ಒಳ್ಳೆಯ ಅವಕಾಶಗಳು ತೆರೆದುಕೊಳ್ಳಬಹುದು ಎನ್ನುವ ವಿಶ್ವಾಸವಿದೆ. ಹೊಸ ಸಿನಿಮಾಗಳಿಗೆ ಆಡಿಷನ್‌ಗಳನ್ನೂ ನೀಡುತ್ತಿದ್ದೇನೆ. ಕೆಲವು ಕಥೆಗಳನ್ನು ಕೇಳುತ್ತಿದ್ದೇನೆ. ಆದರೆ ಆಸಕ್ತಿ ಹುಟ್ಟಿಸುವ ಕಥೆಗಳು ಸಿಕ್ಕಿಲ್ಲ. ಕಾಯುತ್ತಿದ್ದೇನೆ. ❖

ಮಂಡ್ಯ ಹುಡುಗಿಯ ಕ್ರಿಕೆಟ್ ಕನಸು 'ಸಹಾರಾ'

ಬಾಲಿವುಡ್‌ನಲ್ಲಿ ಕುಸ್ತಿ ಕುರಿತಾದ 'ದಂಗಲ್' ಸಿನಿಮಾ ಬಂದಿತ್ತು. ಇದೀಗ ಕನ್ನಡದಲ್ಲೂ ಇಂತಹ ಒಂದು ಪ್ರಯತ್ನ ನಡೆದಿದೆ. ಕ್ರಿಕೆಟ್ ಮೇಲೆ ಆಸಕ್ತಿ ಹೊತ್ತ ಮಂಡ್ಯದ ಹುಡುಗಿಯ ಕನಸನ್ನು ಸಿನಿಮಾ ಮೂಲಕ ಕಟ್ಟಿಕೊಟ್ಟಿದ್ದಾರೆ ನಿರ್ದೇಶಕ ಮಂಜೇಶ್ ಭಾಗವತ್.

ಇತ್ತೀಚೆಗೆ ಸಿನಿಮಾದ ಟ್ರೇಲರ್ ಅನ್ನು ಕ್ರಿಕೆಟ್ ಆಟಗಾರ ಕೃಷ್ಣಪ್ಪ ಗೌತಮ್ ಬಿಡುಗಡೆಗೊಳಿಸಿದರು. ಈ ಮಹಿಳಾ ಪ್ರಧಾನ ಚಿತ್ರದಲ್ಲಿ ಸಾರಿಕಾ ರಾವ್ ನಾಯಕಿಯಾಗಿ ನಟಿಸಿದ್ದಾರೆ. 'ಕನ್ನಡದಲ್ಲಿ ಮಹಿಳಾ ಕ್ರಿಕೆಟ್ ವಿಷಯವನ್ನಿಟ್ಟುಕೊಂಡು ಇದೇ ಮೊದಲ ಬಾರಿಗೆ ಸಿನಿಮಾವೊಂದು ನಿರ್ಮಾಣವಾಗಿದೆ' ಎಂದಿದೆ ಚಿತ್ರತಂಡ. 'ಮಂಡ್ಯ ಹುಡುಗಿ ಕ್ರಿಕೆಟರ್ ಆದ ಕಥೆಯನ್ನು ಸಿನಿಮಾದಲ್ಲಿ ಕಟ್ಟಿಕೊಡಲಾಗಿದೆ. ಪಾತ್ರಕ್ಕಾಗಿ ರಣಜಿ ಆಟಗಾರ ಕೆ.ಬಿ. ಪವನ್ ಬಳಿ ಸಾರಿಕಾ ಕ್ರಿಕೆಟ್ ತರಬೇತಿ ಪಡೆದುಕೊಂಡರು' ಎಂದರು ಮಂಜೇಶ್.

ಮಾ ಕ್ರಿಯೆಷನ್ಸ್ ನಿರ್ಮಾಣದ ಈ ಚಿತ್ರಕ್ಕೆ ನಿರ್ದೇಶಕರೇ ಕಥೆ, ಚಿತ್ರಕಥೆ, ಸಂಭಾಷಣೆ ರಚಿಸಿದ್ದಾರೆ. ತಾರಾಬಳಗದಲ್ಲಿ ಮಂಜುನಾಥ ಹೆಗಡೆ, ಸುಧಾರಾಣಿ, ಕುರಿ ಸುನಿಲ್, ಅಂಕುಶ್ ರಜತ್, ರಂಜನ್, ಮಂಜುಳಾ ರೆಡ್ಡಿ, ಪ್ರಕಾಶ್ ಶೆಟ್ಟಿ ಮುಂತಾದವರು ಇದ್ದಾರೆ. ಕ್ರಿಕೆಟ್ ಆಧರಿಸಿದ ಈ ಚಿತ್ರಕ್ಕೆ ಕಿಚ್ಚ ಸುದೀಪ್ ನಿರೂಪಣೆ ಮಾಡಿದ್ದಾರೆ. ಆಂಥೋನಿ ರುತ್ ವಿನ್ಸೆಂಟ್ ಛಾಯಾಚಿತ್ರಗ್ರಹಣ, ಸೂರಜ್ ಜೋಯಿಸ್ ಸಂಗೀತ, ಥ್ರಿಲ್ಲರ್ ಮಂಜು ಸಾಹಸ ನಿರ್ದೇಶನ ಚಿತ್ರಕ್ಕಿದೆ. ❖

'ನೋಡೋಕ..' ಬಂದ ರಶ್ಮಿಕಾ ಮಂದಣ್ಣ

ಪುಷ್ಪ–2
ಅಲ್ಲು ಅರ್ಜುನ್ ರಶ್ಮಿಕಾ ಮಂದಣ್ಣ

'ಪುಷ್ಪ-2' ಸಿನಿಮಾದ ಮತ್ತೊಂದು ಹಾಡು ಬಿಡುಗಡೆಯಾಗಿದ್ದು, 'ನೋಡೋಕ ಸಿಡಿ ಮದ್ದಿನಂಗೆ ಇರ್ತಾನೆ ನನ್ನ ಸಾಮಿ' ಎನ್ನುತ್ತಾ ನಟ ಅಲ್ಲು ಅರ್ಜುನ್ ಜೊತೆಗೆ ಹೆಜ್ಜೆ ಹಾಕಿದ್ದಾರೆ ನಟಿ ರಶ್ಮಿಕಾ ಮಂದಣ್ಣ.

ಗಣೇಶ್ ಆಚಾರ್ಯ ನೃತ್ಯ ಸಂಯೋಜನೆಯಲ್ಲಿ ಮೂಡಿಬಂದಿರುವ 'ದಿ ಕಪಲ್' ಹಾಡಿಗೆ ದೇವಿಶ್ರೀ ಪ್ರಸಾದ್ ಸಂಗೀತ ನೀಡಿದ್ದಾರೆ. ಕನ್ನಡ, ತೆಲುಗು, ತಮಿಳು, ಹಿಂದಿ, ಮಲಯಾಳ ಹಾಗೂ ಬೆಂಗಾಲಿ ಭಾಷೆಯಲ್ಲಿ ಈ ಹಾಡು ಬಿಡುಗಡೆಯಾಗಿದೆ. ಕನ್ನಡದ ಹಾಡಿಗೆ ವರದರಾಜು ಚಿಕ್ಕಬಳ್ಳಾಪುರ ಸಾಹಿತ್ಯ ಬರೆದಿದ್ದು, ಕನ್ನಡ ಸೇರಿದಂತೆ ಆರು ಭಾಷೆಗಳಲ್ಲಿ ಶ್ರೇಯಾ ಘೋಷಾಲ್ ಹಾಡಿಗೆ ಧ್ವನಿಯಾಗಿದ್ದಾರೆ. ಈ ವರ್ಷದ ಬಹುನಿರೀಕ್ಷಿತ ಸಿನಿಮಾ ಎಂದೇ ಗುರುತಿಸಿಕೊಂಡಿರುವ ಸುಕುಮಾರ್ ಆ್ಯಕ್ಷನ್ ಕಟ್ ಹೇಳಿರುವ 'ಪುಷ್ಪ-2' ಆಗಸ್ಟ್ 15ರಂದು ಬಿಡುಗಡೆಯಾಗಲಿದೆ. ಮೈತ್ರಿ ಮೂವೀ ಮೇಕರ್ಸ್ ಈ ಸಿನಿಮಾ ನಿರ್ಮಾಣ ಮಾಡಿದೆ. ಫಹದ್ ಫಾಸಿಲ್, 'ಡಾಲಿ' ಧನಂಜಯ ಚಿತ್ರದ ತಾರಾಬಳಗದಲ್ಲಿದ್ದಾರೆ. ❖

ಅಕ್ಷಿತ್ ಈಗ ಆದಿತ್ಯ ಶಶಿಕುಮಾರ್

ಆದಿತ್ಯ ಶಶಿಕುಮಾರ್

'ಓ ಮೈ ಲವ್' ಸಿನಿಮಾ ಖ್ಯಾತಿಯ, ನಟ ಶಶಿಕುಮಾರ್ ಪುತ್ರ ಅಕ್ಷಿತ್ ಶಶಿಕುಮಾರ್ ಇದೀಗ ಹೆಸರು ಬದಲಾಯಿಸಿಕೊಂಡು 'ಕಾದಾಡಿ' ಎನ್ನುವ ಪ್ರಾಜೆಕ್ಟ್ ಕೈಗೆತ್ತಿಕೊಂಡಿದ್ದಾರೆ.

ಅಕ್ಷಿತ್ ಶಶಿಕುಮಾರ್ ಬದಲಾಗಿ ಆದಿತ್ಯ ಶಶಿಕುಮಾರ್ ಎಂದು ಹೆಸರು ಬದಲಾಯಿಸಿಕೊಂಡಿದ್ದು, ಸತೀಶ್ ಮಾಲೆಂಪಾಟಿ ಆ್ಯಕ್ಷನ್ ಕಟ್ ಹೇಳುತ್ತಿರುವ ಸಿನಿಮಾದಲ್ಲಿ ನಟಿಸಿದ್ದಾರೆ. ಕನ್ನಡ, ತೆಲುಗು, ಹಿಂದಿ ಮತ್ತು ತಮಿಳು ಭಾಷೆಯಲ್ಲಿ ಸಿದ್ಧಗೊಂಡಿರುವ ಈ ಸಿನಿಮಾವನ್ನು ಅರುಣಂ ಫಿಲಿಂಸ್ ಮುಖಾಂತರ ನಿರ್ಮಾಣ ಮಾಡಲಾಗಿದೆ. ಪ್ರಚಾರ ಆರಂಭಿಸಿರುವ ಚಿತ್ರತಂಡ ಇತ್ತೀಚೆಗೆ ಎರಡನೇ ಲಿರಿಕಲ್ ವಿಡಿಯೊ ಹಾಡನ್ನು ಬಿಡುಗಡೆ ಮಾಡಿದೆ. ಎನ್.ಮಾರುತಿ ಸಾಹಿತ್ಯದ 'ಸೋತರೂ ಗೆಲ್ಲುವ ಛಲವು ಇರಬೇಕು' ಎಂಬ ಹಾಡಿಗೆ ಶಶಾಂಕ್ ಶೇಷಗಿರಿ ಧ್ವನಿಯಾಗಿದ್ದಾರೆ. 'ಕಾದಾಡುತ್ತಾ ನಮ್ಮ ಜೀವನವನ್ನು ತ್ಯಾಗ ಮಾಡುವ ಮೂಲಕ ಸಮಾಜಕ್ಕೆ ಏನನ್ನಾದರೂ ಕೊಡಬೇಕು. ನಾವು ದಿನದಿಂದ ದಿನಕ್ಕೆ ಹೋರಾಟ ನಡೆಸುತ್ತಿದ್ದೇವೆ. ಇಂತಹ ಅಂಶಗಳನ್ನು ಥ್ರಿಲ್ಲರ್ ಕಥೆಯ ಮೂಲಕ ತೋರಿಸುವ ಪ್ರಯತ್ನ ಮಾಡಲಾಗಿದೆ' ಎಂದಿದ್ದಾರೆ ಸತೀಶ್.

ಲಾವಣ್ಯ ಸಾಹುಕಾರ, ಚಾಂದಿನಿ ತಮಿಳರಸನ್ ಚಿತ್ರದ ನಾಯಕಿಯರು. ಪೋಸಾನಿ, ರವಿಕಾಳೆ, ಮಾರಿಮುತ್ತು, ಪ್ರೇಮ್ ಮನೋಹರ್, ಶ್ರವಣ್ ರಾಘವೇಂದ್ರ ಮುಂತಾದವರು ತಾರಾಬಳಗದಲ್ಲಿದ್ದಾರೆ. ಭೀಮ್ಸ್ ಸಿಸಿರಿಲಿಯೋ ಸಂಗೀತ ಸಂಯೋಜನೆ, ಡಿ.ಯೋಗಿಪ್ರಸಾದ್ ಛಾಯಾಚಿತ್ರಗ್ರಹಣ, ಪ್ರಕಾಶ್ ತೋಟ ಸಂಕಲನ ಚಿತ್ರಕ್ಕಿದೆ. ಸಿನಿಮಾ ಜೂನ್‌ನಲ್ಲಿ ಬಿಡುಗಡೆಯಾಗುವ ಸಾಧ್ಯತೆ ಇದೆ. ❖

ಈ ವರ್ಷವೇ 'ಮಾರ್ಟಿನ್', 'ಕೆಡಿ' ತೆರೆಗೆ

ಧ್ರುವ ಸರ್ಜಾ

ಪ್ರೇಮ್

ಎ.ಪಿ.ಅರ್ಜುನ್

ಧ್ರುವ ಸರ್ಜಾ ನಟನೆಯ ಎರಡು ಬಹು ನಿರೀಕ್ಷಿತ ಚಿತ್ರಗಳು ಈ ವರ್ಷವೇ ತೆರೆಗೆ ಬರುವುದು ಖಚಿತವಾಗಿದೆ. ಎ.ಪಿ. ಅರ್ಜುನ್ ನಿರ್ದೇಶಿಸಿರುವ 'ಮಾರ್ಟಿನ್' ಅಕ್ಟೋಬರ್ 11ಕ್ಕೆ ತೆರೆಗೆ ಬರಲಿದೆ. 'ಕೆಡಿ'ಯನ್ನು ಕ್ರಿಸ್‌ಮಸ್‌ಗೆ ಬಿಡುಗಡೆ ಮಾಡುವ ತಯಾರಿಯಲ್ಲಿದ್ದಾರೆ ನಿರ್ದೇಶಕ ಪ್ರೇಮ್.

ಉದಯ್ ಮೆಹ್ತಾ ನಿರ್ಮಿಸಿ, ಅರ್ಜುನ್ ಸರ್ಜಾ ಚಿತ್ರಕಥೆ ಬರೆದಿರುವ 'ಮಾರ್ಟಿನ್' ಸೆಟ್ಟೇರಿ ಎರಡು ವರ್ಷಗಳ ಮೇಲಾಗಿತ್ತು. 'ನನಗೆ ಮತ್ತು ಧ್ರುವ ಸರ್ಜಾ ಅವರಿಗೆ ಹೋದಲೆಲ್ಲ 'ಮಾರ್ಟಿನ್' ಏಕೆ ತಡ ಎಂದು ಕೇಳುತ್ತಿದ್ದರು. ಚಿತ್ರದ ವ್ಯಾಪ್ತಿ ದೊಡ್ಡದಿದೆ. ಸಿನಿಮಾದಲ್ಲಿ ಎರಡು ಗಂಟೆಗಳಷ್ಟು ಗ್ರಾಫಿಕ್ಸ್ ಇದೆ. ಹೀಗಾಗಿ ಚಿತ್ರ ತಡವಾಯ್ತು. ಅ.11ಕ್ಕೆ ಖಚಿತವಾಗಿ ತೆರೆಗೆ ಬರುತ್ತೇವೆ. ಇದರಲ್ಲಿ ಯಾವುದೇ ಬದಲಾವಣೆಯಿಲ್ಲ. ಐದು ಭಾಷೆಗಳಲ್ಲಿ ಸಿನಿಮಾ ತೆರೆಗೆ ಬರುತ್ತಿದೆ. ಹೀಗಾಗಿ ಪ್ರಚಾರಕ್ಕೆ ಸಮಯ ಬೇಕು. ಅಂತರರಾಷ್ಟ್ರೀಯ ಗುಣಮಟ್ಟದ ವಿಷ್ಯುವಲ್ಸ್ ಇದೆ. ಒಂದೇ ಒಂದು ದೃಶ್ಯವನ್ನು ಮರು ಚಿತ್ರೀಕರಣ ಮಾಡಿಲ್ಲ. ಕನ್ನಡದಲ್ಲಿ ಇಷ್ಟು ದೊಡ್ಡ ಬಜೆಟ್‌ನ ಸಿನಿಮಾ ಬಂದಿಲ್ಲ' ಎಂದರು ನಿರ್ದೇಶಕ ಎ.ಪಿ. ಅರ್ಜುನ್.

ಕೆವಿಎನ್ ಪ್ರೊಡಕ್ಷನ್ ನಿರ್ಮಾಣದಲ್ಲಿ, ಅರ್ಜುನ್ ಜನ್ಯ ಸಂಗೀತ ನೀಡಿರುವ 'ಕೆಡಿ' ಚಿತ್ರದ ಆಡಿಯೊ ಹಕ್ಕುಗಳು ದೊಡ್ಡ ಮೊತ್ತಕ್ಕೆ ಮಾರಾಟವಾಗಿದೆ ಎಂದು ನಿರ್ದೇಶಕ ಪ್ರೇಮ್ ಘೋಷಿಸಿದ್ದಾರೆ. 'ಈ ಚಿತ್ರದ ಕಥೆ ನಡೆಯುವುದು ಎಪ್ಪತ್ತು, ಎಂಬತ್ತರ ದಶಕದಲ್ಲಿ. ಚಿತ್ರದ ಹಾಡುಗಳಿಗೆ ಭಾರತೀಯ ಚಿತ್ರರಂಗದಲ್ಲಿ ಇದೇ ಮೊದಲ ಬಾರಿಗೆ 256 ಪೀಸ್ ಆರ್ಕೆಸ್ಟ್ರಾ ಬಳಸಲಾಗಿದೆ. ಈವರೆಗೆ 150 ದಿನಗಳ ಚಿತ್ರೀಕರಣ ನಡೆಸಿದ್ದೇವೆ. ಇನ್ನೊಂದು ಮಾತಿನ ಭಾಗ ಹಾಗೂ ಮೂರು ಹಾಡುಗಳ ಚಿತ್ರೀಕರಣ ಬಾಕಿಯಿದೆ. ಆಗಸ್ಟ್ 16ರ ವರಮಹಾಲಕ್ಷ್ಮಿ ಹಬ್ಬದಂದು ಮುಂಬೈನಲ್ಲಿ ಚಿತ್ರದ ಟೀಸರ್ ಹಾಗೂ 24ಕ್ಕೆ ಚಿತ್ರದ ಮೊದಲ ಹಾಡನ್ನು ಹೈದರಾಬಾದ್‌ನಲ್ಲಿ ಬಿಡುಗಡೆ ಮಾಡುವ ಯೋಜನೆಯಿದೆ' ಎನ್ನುತ್ತಾರೆ ಪ್ರೇಮ್.

'ಮಾರ್ಟಿನ್ ಚಿತ್ರವನ್ನು 250 ದಿನ ಚಿತ್ರೀಕರಣ ಮಾಡಿದ್ದೇವೆ. ಇದೊಂದು ತಂತ್ರಜ್ಞರ ಸಿನಿಮಾ. ಎಲ್ಲರೂ ಶ್ರದ್ಧೆಯಿಂದ ಕೆಲಸ ಮಾಡಿದ್ದೇವೆ. ಸಿನಿಮಾದಲ್ಲಿ ಆ ಶ್ರದ್ಧೆ ಕಾಣಿಸುತ್ತದೆ. ಸಿನಿಮಾಕ್ಕೆ ಜನ ಬರುತ್ತಿಲ್ಲ, ಸ್ಟಾರ್ ನಟರು ಸಿನಿಮಾ ಮಾಡುತ್ತಿಲ್ಲ ಎಂಬ ದೂರಿದೆ. ಇನ್ನು ಮುಂದೆ ಎಚ್ಚರ ವಹಿಸುತ್ತೇವೆ. ಇನ್ನು 'ಕೆಡಿ' ಚಿತ್ರಕ್ಕೆ ಕೆವಿಎನ್ ಜೊತೆ ಸಹಿ ಮಾಡಿದಾಗ ಯಾರ ಕೈಯಲ್ಲಿ ನಿರ್ದೇಶನ ಮಾಡಿಸುವುದು ಎಂಬ ಪ್ರಶ್ನೆ ಬಂದಾಗ ಮೊದಲು ನನ್ನ ಬಾಯಲ್ಲಿ ಬಂದದ್ದು ಪ್ರೇಮ್ ಹೆಸರು. ನಾವು ಸೆಟ್‌ಗೆ ಹೋದಾಗ ಅವರು ಟೀಚರ್ ರೀತಿ ಇರುತ್ತಾರೆ. ಇಡೀ ಬೆಂಗಳೂರನ್ನೇ ಅವರು, ಇನ್ನೊಂದು ಬೆಂಗಳೂರು ಮಾಡಿಬಿಟ್ಟಿದ್ದರು. ಚಿತ್ರದ ಬಗ್ಗೆ ಎಲ್ಲ ಕಡೆಯಿಂದಲೂ ಪಾಸಿಟಿವ್ ವೈಬ್ಸ್ ಬರುತ್ತಿದೆ' ಎಂದು ಎರಡು ಚಿತ್ರಗಳ ಅನುಭವ ಹೇಳುತ್ತಾರೆ ಧ್ರುವ ಸರ್ಜಾ.

'ಕೆಡಿ'ಯಲ್ಲಿ ಧ್ರುವ ಸರ್ಜಾ, ರೀಷ್ಮಾ ನಾಣಯ್ಯ, ರವಿಚಂದ್ರನ್, ರಮೇಶ್ ಅರವಿಂದ್, ಸಂಜಯ್ ದತ್, ಶಿಲ್ಪಾ ಶೆಟ್ಟಿಯಂಥ ಕಲಾವಿದರು ನಟಿಸಿದ್ದಾರೆ. ವಿಲಿಯಂ ಡೇವಿಡ್ ಅವರ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ.

ಭಾರತ–ಪಾಕಿಸ್ತಾನದ ನಡುವಿನ ದೇಶಭಕ್ತಿಯ ಕಥೆ ಹೊಂದಿರುವ 'ಮಾರ್ಟಿನ್'ನಲ್ಲಿ ವೈಭವಿ ಶಾಂಡಿಲ್ಯ ಧ್ರುವಗೆ ಜೋಡಿಯಾಗಿದ್ದಾರೆ. ರವಿ ಬಸ್ರೂರು ಸಂಗೀತ, ಸತ್ಯ ಹೆಗಡೆ ಛಾಯಾಚಿತ್ರಗ್ರಹಣ ಈ ಚಿತ್ರಕ್ಕಿದೆ. ❖

ಮಾರಿಗೆ ದಾರಿ ಬಿಡಿ ಎಂದ ಅಗಸ್ತ್ಯ!

ಅಗಸ್ತ್ಯ

'ಟೋಬಿ' ಸಿನಿಮಾದ ಟ್ಯಾಗ್‌ಲೈನ್ ಇದೀಗ ಸಿನಿಮಾ ಶೀರ್ಷಿಕೆಯಾಗಿದೆ. ಹೊಸಬರ ತಂಡವೊಂದು 'ಮಾರಿಗೆ ದಾರಿ' ಎನ್ನುವ ಸಿನಿಮಾ ನಿರ್ಮಾಣ ಮಾಡಿದ್ದು, ಚಿತ್ರದ ಫಸ್ಟ್‌ಲುಕ್ ಟೀಸರ್ ಬಿಡುಗಡೆಯಾಗಿದೆ.

ಅಗಸ್ತ್ಯ ನಿರ್ದೇಶನ ಮಾಡಿರುವ ಈ ಚಿತ್ರದಲ್ಲಿ ಅವರೇ ನಾಯಕನಾಗಿ ನಟಿಸಿದ್ದಾರೆ. ಚಿತ್ರದ ಚಿತ್ರೀಕರಣ ಪೂರ್ಣಗೊಂಡಿದ್ದು, ಮಾಸ್ ಕಂಟೆಂಟ್ ಸಿನಿಮಾ ಎಂದಿದೆ ಚಿತ್ರತಂಡ. ಕಥೆ, ಚಿತ್ರಕಥೆ, ಸಂಭಾಷಣೆಯನ್ನೂ ಅಗಸ್ತ್ಯ ಬರೆದಿದ್ದಾರೆ. ರಾಧಾ ಫಿಲಂಸ್ ಬ್ಯಾನರ್‌ನಡಿ ಚಿತ್ರ ನಿರ್ಮಾಣಗೊಂಡಿದೆ. ಭಿನ್ನವಾದ ಕಥೆಯೊಂದನ್ನು ಕನ್ನಡದ ಪ್ರೇಕ್ಷಕರ ಎದುರಿಗೆ ತರುತ್ತಿದ್ದೇನೆ ಎಂದಿದ್ದಾರೆ ನಿರ್ದೇಶಕ. ಮಹಾಲಕ್ಷ್ಮಿ, ಕಾಕ್ರೋಚ್ ಸುಧಿ, ವರ್ಧನ್, ಪ್ರದೀಪ್ ಪೂಜಾರಿ, ಬೆನಕ ನಂಜಪ್ಪ ಮುಂತಾದವರು ತಾರಾಬಳಗದಲ್ಲಿದ್ದಾರೆ. ಚಿತ್ರಕ್ಕೆ ಜಗದೀಶ್ ಗೌಡ ಛಾಯಾಚಿತ್ರಗ್ರಹಣ, ಸ್ವಾಮಿನಾಥನ್ ಆರ್.ಕೆ ಸಂಗೀತ ನಿರ್ದೇಶನ, ಜಗದೀಶ್ ಗೌಡ ಸಂಕಲನವಿದೆ. ❖

ಆ್ಯನಿಮೇಷನ್‌ನಲ್ಲಿ ಬಂದ 'ಭಾಗ್ಯಲಕ್ಷ್ಮೀ'

ಸಿನಿಮಾದ ತುಣುಕುಗಳನ್ನು ಇರಿಸಿಕೊಂಡೇ ಟೀಸರ್ ನಿರ್ಮಾಣ ಸಾಮಾನ್ಯ. ಆದರೆ 'ಬ್ಯಾಂಕ್ ಆಫ್ ಭಾಗ್ಯಲಕ್ಷ್ಮೀ' ಚಿತ್ರತಂಡವು ಆ್ಯನಿಮೇಷನ್‌ನಲ್ಲಿ ಟೀಸರ್ ಸಿದ್ಧಪಡಿಸಿ, ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾಗಿದೆ.

ಕನ್ನಡ ಹಾಗೂ ತೆಲುಗಿನಲ್ಲಿ ಬಿಡುಗಡೆಗೊಳ್ಳಲಿರುವ ಈ ಚಿತ್ರದ ಕಥೆಯ ಸಾರಾಂಶವನ್ನು ಆ್ಯನಿಮೇಷನ್ ರೂಪದಲ್ಲಿ ಚಿತ್ರತಂಡ ಕಟ್ಟಿಕೊಟ್ಟಿದೆ. 'ರಂಗಿ ತರಂಗ', 'ಅವನೇ ಶ್ರೀಮನ್ನಾರಾಯಣ' ಚಿತ್ರಗಳ ನಿರ್ಮಾಪಕ ಎಚ್.ಕೆ ಪ್ರಕಾಶ್ ನಿರ್ಮಾಣದ, 'ದಿಯಾ', 'ದಸರಾ', 'ಕೆಟಿಎಂ' ಮೂಲಕ ಗುರುತಿಸಿಕೊಂಡಿರುವ ದೀಕ್ಷಿತ್ ಶೆಟ್ಟಿ ನಾಯಕರಾಗಿ ನಟಿಸಿರುವ ಚಿತ್ರ ಇದಾಗಿದೆ. ಆ್ಯನಿಮೇಟೆಡ್ ಟೀಸರ್‌ಗೆ ದೀಕ್ಷಿತ್ ಧ್ವನಿ ನೀಡಿದ್ದಾರೆ. 'ಕನ್ನಡ ಚಿತ್ರರಂಗದ ಮಟ್ಟಿಗೆ ಇದೊಂದು ಹೊಸ ಪ್ರಯೋಗ. ಈ ವಿಡಿಯೊ ಸಿದ್ಧಪಡಿಸಲು ಏಳೆಂಟು ಜನ ನುರಿತ ತಂತ್ರಜ್ಞರು ತಿಂಗಳ ಕಾಲ ಶ್ರಮ ಪಟ್ಟಿದ್ದಾರೆ' ಎಂದಿದೆ ಚಿತ್ರತಂಡ. ರಕ್ಷಿತ್ ಶೆಟ್ಟಿ, ಸಚಿನ್ ಹಾಗೂ ಅಭಿಷೇಕ್ ಸಾರಥ್ಯದ 'ಪಿನಾಕ' ವಿಎಫ್‌ಎಕ್ಸ್ ಸ್ಟುಡಿಯೊದಲ್ಲೇ 'ಬ್ಯಾಂಕ್ ಆಫ್ ಭಾಗ್ಯಲಕ್ಷ್ಮೀ' ಚಿತ್ರದ ಟೀಸರ್‌ನ ಆ್ಯನಿಮೇಷನ್ ಕೆಲಸ ನಡೆದಿದೆ.

ದೀಕ್ಷಿತ್

ಚಿತ್ರಕ್ಕೆ ಅಭಿಷೇಕ್ ಎಂ. ಆ್ಯಕ್ಷನ್ ಕಟ್ ಹೇಳಿದ್ದಾರೆ. ಶೀರ್ಷಿಕೆಯಲ್ಲೇ ಕುತೂಹಲ ಮೂಡಿಸಿರುವ ಈ ಚಿತ್ರದ ಚಿತ್ರೀಕರಣ ಬಹುತೇಕ ಮುಕ್ತಾಯವಾಗಿದೆ. ಬೆಂಗಳೂರು, ತುಮಕೂರು ಹಾಗೂ ಚಿತ್ರದುರ್ಗದಲ್ಲಿ ಚಿತ್ರೀಕರಣ ನಡೆದಿದೆ. ಕೆಲವು ದಿನಗಳ ಚಿತ್ರೀಕರಣವಷ್ಟೇ ಬಾಕಿಯಿದೆ ಎಂದು ಚಿತ್ರತಂಡ ಮಾಹಿತಿ ನೀಡಿದೆ. ದೀಕ್ಷಿತ್ ಶೆಟ್ಟಿಗೆ ಜೋಡಿಯಾಗಿ 'ಪ್ರೇಮಂ ಪೂಜ್ಯಂ' ಹಾಗೂ 'ಕೌಸಲ್ಯಾ ಸುಪ್ರಜಾ ರಾಮ' ಚಿತ್ರಗಳಲ್ಲಿ ನಟಿಸಿರುವ ಬೃಂದಾ ಆಚಾರ್ಯ ಇದ್ದಾರೆ. ಸಾಧು ಕೋಕಿಲ, ಗೋಪಾಲಕೃಷ್ಣ ದೇಶಪಾಂಡೆ, ಉಷಾ ಭಂಡಾರಿ, ಭರತ್, ವಿಶ್ವನಾಥ್, ಹರೀಶ್ ಸಮಷ್ಟಿ ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ. ❖

ಬೃಂದಾ ಆಚಾರ್ಯ

ಶ್ರೀನಾಥ್ ಭಾಸಿಗೆ ಶಶಿಧರ್ ಆ್ಯಕ್ಷನ್ ಕಟ್

ಪೃಥ್ವಿ ಅಂಬಾರ್ ನಟನೆಯ 'ಶುಗರ್‌ಲೆಸ್' ಸಿನಿಮಾ ನಿರ್ದೇಶಿಸಿದ್ದ ಶಶಿಧರ್ ಕೆ.ಎಂ. ಇದೀಗ ಮಲಯಾಳ ಚಿತ್ರರಂಗಕ್ಕೆ ಹೆಜ್ಜೆ ಇಟ್ಟಿದ್ದಾರೆ.

ಶಶಿಧರ್ ಕೆ.ಎಂ.

ಮಲಯಾಳದಲ್ಲಿ ಇತ್ತೀಚೆಗೆ ತೆರೆಕಂಡು ಹಿಟ್ ಆಗಿದ್ದ 'ಮಂಜುಮ್ಮೆಲ್ ಬಾಯ್ಸ್' ಚಿತ್ರದ ನಟ ಶ್ರೀನಾಥ್ ಭಾಸಿಗೆ ಆ್ಯಕ್ಷನ್ ಕಟ್ ಹೇಳಲಿದ್ದಾರೆ ಶಶಿಧರ್. 'ಸಿಬಿಲ್ ಸ್ಕೋರ್' ಎಂಬ ಸಿನಿಮಾವನ್ನು ಶಶಿಧರ್ ನಿರ್ದೇಶಿಸುತ್ತಿದ್ದು, ಇದರಲ್ಲಿ ಶ್ರೀನಾಥ್ ಮುಖ್ಯಭೂಮಿಕೆಯಲ್ಲಿ ಇರಲಿದ್ದಾರೆ. ಶ್ರೀನಾಥ್ 'ವೈರಸ್', 'ಹೋಮ್', 'ಕುಂಬಳಂಗಿ ನೈಟ್ಸ್', 'ಭೀಷ್ಮ ಪರ್ವಂ' ಹೀಗೆ ಹಿಟ್ ಸಿನಿಮಾಗಳಲ್ಲಿ ನಟಿಸಿ ಸೈ ಎನಿಸಿಕೊಂಡಿದ್ದಾರೆ. ಸಿನಿಮಾದಲ್ಲಿ ಕರ್ನಾಟಕದ ಹಾಗೂ ಕೇರಳದ ತಂತ್ರಜ್ಞರು ಇರಲಿದ್ದಾರೆ ಎಂದು ನಿರ್ದೇಶಕರು ತಿಳಿಸಿದ್ದಾರೆ. ಸೋಹನ್ ಸೀನುಲಾಲ್, ದೀಪಕ್ ಪ್ರಿನ್ಸ್ ಸಿನಿಮಾದಲ್ಲಿ ಮುಖ್ಯ ಪಾತ್ರಗಳಲ್ಲಿ ಕಾಣಿಸಿಕೊಳ್ಳಲಿದ್ದಾರೆ. ದಿ ಎಮೋಷನ್ಸ್ ಫ್ಯಾಕ್ಟರಿ ಗ್ರೂಪ್(EFG) ಪ್ರೊಡಕ್ಷನ್ ಹೌಸ್ ಬ್ಯಾನರ್ ಅಡಿಯಲ್ಲಿ ಮೂಡಿಬರುತ್ತಿರುವ ಈ ಸಿನಿಮಾಗೆ ವಿವೇಕ್ ಶ್ರೀಕಂಠಯ್ಯ ಬಂಡವಾಳ ಹೂಡಿದ್ದಾರೆ. ಪ್ರದೀಪ್ ನಾಯರ್ ಛಾಯಾಚಿತ್ರಗ್ರಹಣ, ಅರ್ಜುನ್ ಟಿ. ಸತ್ಯನ್ ಸಂಭಾಷಣೆ, ಸೋಬಿನ್ ಕೆ. ಸೋಮನ್ ಸಂಕಲನ ಚಿತ್ರಕ್ಕಿದೆ. ❖

668 ಖೊಟ್ಟಿ ಬಿಲ್ ಸೃಷ್ಟಿ

ಸಿಐಜಿ ವರದಿ ಪರಿಶೀಲಿಸುತ್ತಿರುವ ಸಿಐಡಿ • ಕಾಮಗಾರಿ ಸ್ಥಳ ತಪಾಸಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಿ. ದೇವರಾಜ ಅರಸು ಟ್ರಕ್ ಟರ್ಮಿನಲ್‌ಗೆ (ಡಿಡಿಯುಟಿಟಿಎಲ್) ಸೇರಿದ್ದ ಸ್ಥಳಗಳಲ್ಲಿ ಯಾವುದೇ ಕೆಲಸ ಮಾಡದೇ 668 ಕಾಮಗಾರಿಗಳ ಹೆಸರಿನಲ್ಲಿ ಖೊಟ್ಟಿ ಬಿಲ್ ಸೃಷ್ಟಿಸಿ ₹ 39.42 ಕೋಟಿ ಮಂಜೂರು ಮಾಡಿದ್ದಕ್ಕೆ ದಾಖಲೆಗಳು ಲಭ್ಯವಾಗಿದ್ದು, ಈ ಬಗ್ಗೆ ಸಿಐಡಿ ಅಧಿಕಾರಿಗಳು ಹೆಚ್ಚಿನ ಮಾಹಿತಿ ಕಲೆಹಾಕುತ್ತಿದ್ದಾರೆ.

ಡಿ ಡಿ ಯು ಟಿ ಟಿ ಎ ಲ್ ನ ಲ್ಲಿ 2021ರಿಂದ 2023ರ ಅವಧಿಯಲ್ಲಿ ನಡೆದಿರುವ ಅಕ್ರಮದ ಬಗ್ಗೆ ತನಿಖೆ ಚುರುಕುಗೊಳಿಸಿರುವ ಸಿಐಡಿ ಅಧಿಕಾರಿಗಳು, ಮಾಜಿ ವ್ಯವಸ್ಥಾಪಕ ನಿರ್ದೇಶಕ (ಎಂ.ಡಿ) ಎಸ್. ಶಂಕರಪ್ಪ ಅವರನ್ನು ಬಂಧಿಸಿ ಕಸ್ಟಡಿಗೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.

ಅಕ್ರಮಕ್ಕೆ ಸಂಬಂಧಪಟ್ಟಂತೆ ಲೋಕಾಯುಕ್ತ ಪೊಲೀಸರು ಹಾಗೂ ಮಹಾ ಲೆಕ್ಕ ಪರಿಶೋಧಕರು (ಸಿಎಜಿ) ಪ್ರತ್ಯೇಕವಾಗಿ ಕಾಮಗಾರಿ ಸ್ಥಳಗಳ ಪರಿಶೀಲನೆ ನಡೆಸಿ ವರದಿ ಸಿದ್ಧಪಡಿಸಿದ್ದರು. ಪುರಾವೆಗಳ ಸಮೇತ ವರದಿಯ ಪ್ರತಿಗಳನ್ನು ಸಂಗ್ರಹಿಸಿರುವ ಸಿಐಡಿ ಅಧಿಕಾರಿಗಳು, ಮಾಹಿತಿ ಪರಿಶೀಲಿಸುತ್ತಿದ್ದಾರೆ.

'ಡಿ ಡಿ ಯು ಟಿ ಟಿ ಎ ಲ್ ನ ಲ್ಲಿ ನಡೆದಿರುವ ಅಕ್ರಮ ಸಂಬಂಧ ಲೋಕಾಯುಕ್ತ ಪೊಲೀಸರು ಈ ಹಿಂದೆ ತನಿಖೆ ಮಾಡಿದ್ದರು. ಜೊತೆಗೆ, ಸಿಎಜಿಯವರು ಪುರಾವೆ ಸಮೇತ ವರದಿ ಸಿದ್ಧಪಡಿಸಿದ್ದರು. ಅಕ್ರಮದ ಬಗ್ಗೆ ವಿಲ್ಸನ್ ಗಾರ್ಡನ್ ಠಾಣೆಯಲ್ಲಿ ದಾಖಲಾದ ಪ್ರಕರಣದ ತನಿಖೆ ಕೈಗೊಂಡು, ಮಾಜಿ ಎಂ.ಡಿ. ಶಂಕರಪ್ಪ ಅವರನ್ನು ಬಂಧಿಸಲಾಗಿದೆ' ಎಂದು ಸಿಐಡಿ ಮೂಲಗಳು ಹೇಳಿವೆ.

821 ಕೆಲಸ ಮಂಜೂರು: 'ಬೆಂಗಳೂರು ಶಾಂತಿನಗರದಲ್ಲಿರುವ ಡಿಡಿಯುಟಿಟಿಎಲ್ ಮುಖ್ಯಕಚೇರಿ, ಯಶವಂತಪುರ, ದಾಸನಪುರ, ಹೊಸಪೇಟೆಯ ಅಮರಾವತಿ, ದಾಂಡೇಲಿ, ಹುಬ್ಬಳ್ಳಿಯ ಅಂಚಟಗೇರಿ, ಧಾರವಾಡ ಹಾಗೂ ಮೈಸೂರು ಟ್ರಕ್ ಟರ್ಮಿನಲ್‌ನಲ್ಲಿ 821 ಕೆಲಸಗಳನ್ನು ಕೈಗೊಳ್ಳಲು ಮಂಜೂರಾತಿ ನೀಡಲಾಗಿತ್ತು' ಎಂಬ ಮಾಹಿತಿ ಸಿಎಜಿ ವರದಿಯಲ್ಲಿದೆ.

'821 ಕಾಮಗಾರಿಗಳು ಪೂರ್ಣಗೊಂಡಿರುವುದಾಗಿ ಹೇಳಿ ಒಟ್ಟು ₹ 48.60 ಕೋಟಿ ಹಣ ಬಿಡುಗಡೆ ಮಾಡಲಾಗಿದೆ. ಅಕ್ರಮದ ಬಗ್ಗೆ ದೂರುಗಳು ಕೇಳಿಬರುತ್ತಿದ್ದಂತೆ 2024ರ ಫೆಬ್ರುವರಿಯಲ್ಲಿ ಕಾಮಗಾರಿ ಸ್ಥಳಗಳಿಗೆ ಭೇಟಿ ನೀಡಿ ವರದಿ ಸಿದ್ಧಪಡಿಸಲಾಗಿದೆ. 821 ಕಾಮಗಾರಿಗಳ ಪೈಕಿ 153 ಕಾಮಗಾರಿಗಳು ಮಾತ್ರ ಆಗಿವೆ. ಉಳಿದಂತೆ, ₹ 39.42 ಕೋಟಿ ವೆಚ್ಚದ 668 ಕಾಮಗಾರಿಗಳು ನಡೆದಿಲ್ಲ ಎಂಬುದು ಪರಿಶೀಲನೆಯಿಂದ ಗೊತ್ತಾಗಿದೆ' ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

'ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಕೆ, ಶೌಚಾಲಯ ಕಟ್ಟಡದ ನವೀಕರಣ, ವಿದ್ಯುತ್ ಸರಬರಾಜು ವ್ಯವಸ್ಥೆ ದುರಸ್ತಿ, ಒಳಚರಂಡಿ ಪೈಪ್ ಅಳವಡಿಕೆ, ಕಾಲುವೆಗಳ ನಿರ್ಮಾಣ ಹಾಗೂ ಸ್ವಚ್ಛತೆ ಸೇರಿದಂತೆ ಹಲವು ಬಗೆಯ ಕೆಲಸಗಳನ್ನು ತುಂಡು ಗುತ್ತಿಗೆ ನೀಡಲಾಗಿತ್ತು' ಎಂಬ ಮಾಹಿತಿಯೂ ವರದಿಯಲ್ಲಿದೆ.

ಸ್ಥಳ ಪರಿಶೀಲನೆ: 'ಲೋಕಾಯುಕ್ತ ಪೊಲೀಸರು ಹಾಗೂ ಸಿಎಜಿ ವರದಿಯಲ್ಲಿ ಕಾಮಗಾರಿ ಸ್ಥಳಗಳನ್ನು ಉಲ್ಲೇಖಿಸಲಾಗಿದೆ. ಅಧಿಕಾರಿಗಳ ತಂಡ ಪುನಃ ಸ್ಥಳಗಳಿಗೆ ಭೇಟಿ ಮಾಡಿ ಫೋಟೊ ಹಾಗೂ ವಿಡಿಯೊ ಸಮೇತ ಮಾಹಿತಿ ದಾಖಲಿಸಿಕೊಳ್ಳಲಿದೆ. ಇದು ತನಿಖೆಗೆ ಸಹಕಾರಿಯಾಗಲಿದೆ' ಎಂದು ಸಿಐಡಿ ಮೂಲಗಳು ಹೇಳಿವೆ.

ಮತ್ತಷ್ಟು ಮಂದಿಗೆ ನೋಟಿಸ್

'ಅಕ್ರಮ ಪ್ರಕರಣದಲ್ಲಿ ಶಂಕರಪ್ಪ ಮಾತ್ರವಲ್ಲದೇ, ಆಡಳಿತ ಮಂಡಳಿಯ ಹಲವರು ಭಾಗಿಯಾಗಿರುವ ಮಾಹಿತಿ ಇದೆ. ಶಂಕರಪ್ಪ ಅವರನ್ನು ವಿಚಾರಣೆ ನಡೆಸಿ, ಪುರಾವೆಗಳನ್ನು ಸಂಗ್ರಹಿಸಲಾಗುತ್ತಿದೆ. ಜೊತೆಗೆ, ಸದ್ಯದಲ್ಲೇ ಮತ್ತಷ್ಟು ಮಂದಿಗೆ ನೋಟಿಸ್ ನೀಡಿ ಅವರ ವಿಚಾರಣೆಯನ್ನು ನಡೆಸಲಾಗುವುದು' ಎಂದು ಸಿಐಡಿ ಮೂಲಗಳು ಹೇಳಿವೆ.

'ಅಮಾನತು ಮಾಡಲು ಹಿಂದೇಟು'

'ಅಕ್ರಮ ಪ್ರಕರಣದಲ್ಲಿ ಬಂಧಿತರಾಗಿರುವ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಉಪ ನಿರ್ದೇಶಕ ಎಸ್. ಶಂಕರಪ್ಪ ಅವರು ಸಿಐಡಿ ಅಧಿಕಾರಿಗಳ ಕಸ್ಟಡಿಯಲ್ಲಿದ್ದಾರೆ. ಅವರನ್ನು ಸೇವೆಯಿಂದ ಅಮಾನತು ಮಾಡಿ' ಎಂದು ಇಲಾಖೆಯ ಕಾರ್ಯದರ್ಶಿಗೆ ಆಯುಕ್ತರು ಶಿಫಾರಸು ಮಾಡಿದ್ದಾರೆ.

ಆದರೆ, ಶಂಕರಪ್ಪ ಅವರನ್ನು ಅಮಾನತು ಮಾಡಲು ಕಾರ್ಯದರ್ಶಿಯವರು ಹಿಂದೇಟು ಹಾಕುತ್ತಿರುವ ಆರೋಪ ವ್ಯಕ್ತವಾಗಿದೆ.

ಸಿಐಡಿ ಅಧಿಕಾರಿಗಳನ್ನು ಬುಧವಾರ ಭೇಟಿ ಮಾಡಿದ್ದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಅಧಿಕಾರಿಗಳು, ಶಂಕರಪ್ಪ ಬಂಧನಕ್ಕೆ ಸಂಬಂಧಿಸಿದ ಮಾಹಿತಿ ಪಡೆದಿದ್ದರು. ತನಿಖಾ ತಂಡ ನೀಡಿದ ವರದಿ ಆಧರಿಸಿ, ಶಂಕರಪ್ಪ ಅಮಾನತಿಗೆ ಇಲಾಖೆಯ ಆಯುಕ್ತ ವಿಕಾಸ್ ಕಿಶೋರ್ ಸುರಳ್ಕರ್ ಬುಧವಾರವೇ ಶಿಫಾರಸು ಮಾಡಿದ್ದರು.

ಕರ್ನಾಟಕ ನಾಗರಿಕ ಸೇವಾ ನಿಯಮಗಳ ಪ್ರಕಾರ, ಯಾವುದೇ ಸರ್ಕಾರಿ ಅಧಿಕಾರಿ ಅಥವಾ ನೌಕರ 48 ಗಂಟೆಗಳ ಬಂಧನದಲ್ಲಿದ್ದರೆ ಆತನನ್ನು ಸೇವೆಯಿಂದ ಅಮಾನತು ಮಾಡಿ ಆದೇಶ ಹೊರಡಿಸಲು ಅವಕಾಶವಿದೆ.

ಕಾಮಗಾರಿಯಲ್ಲಿ ನಡೆದಿದೆ ಎನ್ನಲಾದ ಅಕ್ರಮದ ವಿವರ

ಟ್ರಕ್ ಟರ್ಮಿನಲ್ ಹೆಸರು	ಮಂಜೂರಾಗಿದ್ದ ಕಾಮಗಾರಿ	ಒಟ್ಟು ಮೊತ್ತ	ನಡೆಯದ ಕಾಮಗಾರಿ	ಅಕ್ರಮದ ಮೊತ್ತ
ಮುಖ್ಯಕಚೇರಿ	31	₹ 2.61 ಕೋಟಿ	1	₹ 4.95 ಲಕ್ಷ
ಹೊಸಪೇಟೆ ಅಮರಾವತಿ	7	₹ 39.97 ಲಕ್ಷ	3	₹ 17.69 ಲಕ್ಷ
ದಾಂಡೇಲಿ	16	₹ 91.96 ಲಕ್ಷ	13	₹ 77.02 ಲಕ್ಷ
ಹುಬ್ಬಳ್ಳಿ ಅಂಚಟಗೇರಿ	3	₹ 17.69 ಲಕ್ಷ	3	₹ 17.69 ಲಕ್ಷ
ಧಾರವಾಡ	91	₹ 5.36 ಕೋಟಿ	85	₹ 5.01 ಕೋಟಿ
ಯಶವಂತಪುರ	389	₹ 22.90 ಕೋಟಿ	379	₹ 22.37 ಕೋಟಿ
ದಾಸನಪುರ	161	₹ 9.33 ಕೋಟಿ	90	₹ 5.30 ಕೋಟಿ
ಮೈಸೂರು	123	₹ 6.88 ಕೋಟಿ	94	₹ 5.54 ಕೋಟಿ

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಆರೋಪ

'ನನ್ನ, ಸಿ.ಎಂ ವಿರುದ್ಧ ಶತ್ರು ಭೈರವಿ ಯಾಗ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೇರಳದಲ್ಲಿ ತಂತ್ರಿಗಳನ್ನು ಬಳಸಿಕೊಂಡು ನನ್ನ ಹಾಗೂ ಮುಖ್ಯಮಂತ್ರಿ ವಿರುದ್ಧ 'ಶತ್ರು ಭೈರವಿ ಯಾಗ' ಪ್ರಯೋಗ ನಡೆಸಲಾಗುತ್ತಿದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, 'ನಾವು ಈ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ. ನಂಬಿರುವ ಶಕ್ತಿ, ದೇವರು ಮತ್ತು ಜನರ ಆಶೀರ್ವಾದ ನಮ್ಮನ್ನು ಕಾಪಾಡಲಿದೆ' ಎಂದರು.

ಶಿವಕುಮಾರ್

'ಕೇರಳದ ರಾಜರಾಜೇಶ್ವರಿ ದೇವಾಲಯದ ಆಸುಪಾಸಿನ ನಿರ್ಜನ ಪ್ರದೇಶದಲ್ಲಿ ಶತ್ರು ಸಂಹಾರ ಉದ್ದೇಶದ 'ರಾಜಕಂಟಕ', 'ಮಾರಣ ಮೋಹನ ಸ್ತಂಭನ' ಯಾಗ ಪ್ರಯೋಗ ನಡೆಸಲಾಗುತ್ತಿದೆ. ಯಾರು ಈ ಯಾಗ ಮಾಡಿಸುತ್ತಿದ್ದಾರೆಂಬ ಮಾಹಿತಿಯನ್ನು ಈ ಯಾಗದಲ್ಲಿ ಪಾಲ್ಗೊಂಡವರು ತಿಳಿಸಿದ್ದಾರೆ' ಎಂದರು.

'ಅಘೋರಿಗಳ ಮೂಲಕ ಈ ಯಾಗ ನಡೆಯುತ್ತಿದೆ. ಕೆಂಪು ಬಣ್ಣದ 21 ಮೇಕೆ, ಮೂರು ಎಮ್ಮೆ, ಕಪ್ಪು ಬಣ್ಣದ 21 ಕುರಿ ಮತ್ತು ಐದು ಹಂದಿ ಹೀಗೆ ಪಂಚ ಬಲಿ ಮೂಲಕ ಈ ಮಾಂತ್ರಿಕ ಯಾಗ ನಡೆಯುತ್ತಿದೆ' ಎಂದರು.

'ಆದರೆ, ಈ ಯಾಗ ಪ್ರಯೋಗದ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ. ಅವರವರ ನಂಬಿಕೆ ಅವರದು. ಹೀಗಾಗಿ ಇಂತಹ ಪ್ರಯತ್ನ ಮಾಡುತ್ತಾರೆ. ಅವರು ನಮ್ಮ ಮೇಲೆ ಏನೇ ಪ್ರಯೋಗ ಮಾಡಿದರೂ ನಾನು ನಂಬಿರುವ ಶಕ್ತಿ ನಮ್ಮನ್ನು ಕಾಪಾಡಲಿದೆ. ನಾನು ನಿತ್ಯ ಮನೆಯಿಂದ ಹೊರಡುವ ಮೊದಲು ದೇವರಿಗೆ ಒಂದು ನಿಮಿಷ ಕೈಮುಗಿದು ಪ್ರಾರ್ಥಿಸುತ್ತೇನೆ' ಎಂದರು.

ಈ ಪ್ರಯೋಗ ಮಾಡಿಸುತ್ತಿರುವವರು ಬಿಜೆಪಿಯವರಾ ಅಥವಾ ಜೆಡಿಎಸ್‌ನವರಾ ಎಂದು ಕೇಳಿದಾಗ, 'ಯಾರು ಮಾಡಿಸುತ್ತಿದ್ದಾರೆ ಎಂಬುದು ನಮಗೆ ಗೊತ್ತಿದೆ. ನನ್ನ ಬಾಯಿಂದ ಹೇಳಿಸುವುದರ ಬದಲು, ಈ ಬಗ್ಗೆ ನೀವೇ ತನಿಖಾ ವರದಿ ಮಾಡಿ' ಎಂದರು.

'ನಿಮ್ಮನ್ನೇ ಏಕೆ ಗುರಿ ಮಾಡುತ್ತಾರೆ? ನೀವೂ ಪ್ರತಿಯಾಗಿ ಏನಾದರೂ ಮಾಡುತ್ತೀರಾ?' ಎಂದು ಕೇಳಿದಾಗ, 'ಯಾವಾಗಲೂ ರಾಜಕೀಯವಾಗಿ ಚಟುವಟಿಕೆಯಿಂದ ಇರುವವರು ವಿರೋಧಿಗಳ ಕೆಂಗಣ್ಣಿಗೆ ಗುರಿ ಆಗುತ್ತಾರೆ. ಅವರು ಮಾಡುವುದು ಮಾಡಲಿ, ನನ್ನ ಶಕ್ತಿ ನನ್ನ ರಕ್ಷಣೆಗಿದೆ. ನಾನು ಅಂತಹ ಯಾವುದೇ ಚಟುವಟಿಕೆ ಮಾಡುವುದಿಲ್ಲ' ಎಂದರು.

ವಿಟಿಯು: ಮೂರೇ ಗಂಟೆಯಲ್ಲಿ ಫಲಿತಾಂಶ

ವಿದ್ಯಾರ್ಥಿಗಳ ವಾಟ್ಸ್‌ಆ್ಯಪ್‌ಗೆ ಮಾಹಿತಿ: ಕುಲಪತಿ ಪ್ರೊ. ಎಸ್. ವಿದ್ಯಾಶಂಕರ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಇಲ್ಲಿನ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವು (ವಿಟಿಯು) ವಿವಿಧ ಕೋರ್ಸ್‌ಗಳ ಪರೀಕ್ಷೆ ಮುಗಿಸಿದ ಮೂರೇ ಗಂಟೆಯಲ್ಲಿ ಫಲಿತಾಂಶ ಪ್ರಕಟಿಸಿ, ವಿಶಿಷ್ಟ ದಾಖಲೆ ಮಾಡಿದೆ.

ಗುರುವಾರ (ಮೇ 30) ಅಂತಿಮ ವರ್ಷದ ಬಿಇ, ಬಿ.ಟೆಕ್., ಬಿ.ಆರ್ಕ್, ಬಿ.ಪ್ಲ್ಯಾನ್ ಅಂತಿಮ ಸೆಮಿಸ್ಟರ್ ಪರೀಕ್ಷೆ ನಡೆದವು. ಒಟ್ಟು 42,323 ವಿದ್ಯಾರ್ಥಿಗಳು ಹಾಜರಾಗಿ, ಸಂಜೆ 5.30ಕ್ಕೆ ಪರೀಕ್ಷೆ ಮುಗಿದವು. ರಾತ್ರಿ 8.30ಕ್ಕೆ ಎಲ್ಲ ಫಲಿತಾಂಶ ಪ್ರಕಟಿಸುವುದರ ಜೊತೆಗೆ ಎಲ್ಲ ವಿದ್ಯಾರ್ಥಿಗಳ ವಾಟ್ಸ್‌ಆ್ಯಪ್ ಸಂಖ್ಯೆಗೆ ಫಲಿತಾಂಶ ರವಾನಿಸಲಾಗಿದೆ.

'ವಿಶ್ವೇಶ್ವರಯ್ಯ ವಿಶ್ವವಿದ್ಯಾಲಯದ 25 ವರ್ಷಗಳ ಇತಿಹಾಸದಲ್ಲೇ ಇದು ದಾಖಲೆಯ ದಿನ. ಇಂಥ ಪ್ರಯೋಗ ಹಿಂದೆ ಎಲ್ಲಿಯೂ ಆಗಿಲ್ಲ. ಪರೀಕ್ಷೆ ಮುಗಿದ ದಿನವೇ ಎಲ್ಲ 42,323 ವಿದ್ಯಾರ್ಥಿಗಳ ಫಲಿತಾಂಶವನ್ನೂ ನೀಡಿದ್ದೇವೆ' ಎಂದು ವಿಟಿಯು ಕುಲಪತಿ ಪ್ರೊ. ಎಸ್.ವಿದ್ಯಾಶಂಕರ ತಿಳಿಸಿದ್ದಾರೆ.

ಪ್ರೊ.ಎಸ್. ವಿದ್ಯಾಶಂಕರ

'ಎಂಜಿನಿಯರಿಂಗ್ ಫಲಿತಾಂಶ ಬೇಗನೇ ಪ್ರಕಟಿಸುವುದರಿಂದ ವಿದ್ಯಾರ್ಥಿಗಳಿಗೆ ಮುಂದಿನ ಶಿಕ್ಷಣ, ಉದ್ಯೋಗ, ಭವಿಷ್ಯಕ್ಕೆ ಅನುಕೂಲವಾಗುತ್ತದೆ. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ವಿಟಿಯುನಲ್ಲಿ ಆಡಳಿತ, ಶೈಕ್ಷಣಿಕ, ಪರೀಕ್ಷೆ, ಸಂಶೋಧನೆ ವಿಭಾಗದಲ್ಲಿ ಕ್ರಾಂತಿಕಾರಕ ಸುಧಾರಣೆ ತರಲಾಗಿದೆ. ಆದ್ದರಿಂದ ಈ ಸಾಧನೆ ಸಾಧ್ಯವಾಗಿದೆ' ಎಂದು ಅವರು ತಿಳಿಸಿದ್ದಾರೆ.

'ವಿಟಿಯು ವ್ಯಾಪ್ತಿಗೆ ಒಳಪಟ್ಟ ಎಲ್ಲ ಎಂಜಿನಿಯರಿಂಗ್ ಕಾಲೇಜುಗಳಲ್ಲೂ ಈ ಅಂತಿಮ ಸೆಮಿಸ್ಟರ್ ಪರೀಕ್ಷೆಗಳು ಯಶಸ್ವಿಯಾಗಿ ನಡೆದವು. ಜತೆಗೆ, ಎಲ್ಲ ಸೆಮಿಸ್ಟರ್ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿ ಪದವಿಯನ್ನು ಯಶಸ್ವಿಯಾಗಿ ಮುಗಿಸಿದ ವಿದ್ಯಾರ್ಥಿಗಳು ಪ್ರೊವಿಜನಲ್ ಪದವಿ ಸರ್ಟಿಫಿಕೇಟ್‌ಗಳನ್ನು (ಪಿಡಿಸಿ) ಜೂನ್ 3ರಿಂದ ಆನ್‌ಲೈನ್ ಮೂಲಕ ನೀಡಲಾಗುವುದು' ಎಂದು ಅವರು ಹೇಳಿದ್ದಾರೆ.

'ಈ ಹಿಂದೆ ಪರೀಕ್ಷೆ ಮುಗಿಸಿದ ಬಳಿಕ ಫಲಿತಾಂಶಕ್ಕೆ ಎರಡು ತಿಂಗಳಿಗೂ ಹೆಚ್ಚು ಸಮಯ ಕಾಯಬೇಕಿತ್ತು. ತಾಂತ್ರಿಕ ಶಕ್ತಿಯನ್ನು ಸಮರ್ಥವಾಗಿ ಬಳಸಿಕೊಳ್ಳುವ ಮೂಲಕ ಏಳು ದಿನಗಳಲ್ಲಿ ಫಲಿತಾಂಶ ನೀಡುವಂತೆ ಮಾಡಿದ್ದೆ. ಆದರೆ, ಈಗ ಒಂದು ದಿನವೂ ಕಾಯಬೇಕಿಲ್ಲ. ಪರೀಕ್ಷೆ ಮುಗಿದ ಮೂರೇ ಗಂಟೆಯಲ್ಲಿ ಅವರ ಕೈಗೆ ಫಲಿತಾಂಶ ಕೊಟ್ಟಿದ್ದೇವೆ. ವಿಶ್ವವಿದ್ಯಾಲಯ ವ್ಯಾಪ್ತಿಯಲ್ಲಿ ಸ್ಕ್ಯಾನಿಂಗ್ ಕೇಂದ್ರ, ಮೌಲ್ಯಮಾಪನ ಕೇಂದ್ರಗಳ ಸಂಖ್ಯೆ ಹೆಚ್ಚಿಸಲಾಗಿದೆ. ಎಲ್ಲ ಪ್ರಾಧ್ಯಾಪಕರಿಗೂ ಮೌಲ್ಯಮಾಪನ ಕಡ್ಡಾಯ ಮಾಡಲಾಗಿದೆ. ಇದರಿಂದ ಒಂದೇ ದಿನದಲ್ಲಿ ಫಲಿತಾಂಶ ನೀಡಲು ಸಾಧ್ಯವಾಗಿದೆ' ಎಂದು ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ವಿದ್ಯಾರ್ಥಿಗಳಲ್ಲಿ ಪುಸ್ತಕ ಓದುವ ಹವ್ಯಾಸ ಬೆಳೆಸಲು ವಿನೂತನ ಪ್ರಯೋಗ

ತರಗತಿಗಳಲ್ಲೇ ತೆರೆದ ಪುಸ್ತಕ ಪರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಫಲಿತಾಂಶ ಕುಸಿತದ ನಂತರ ಶಿಕ್ಷಣ ಗುಣಮಟ್ಟದ ಸುಧಾರಣೆಗೆ ಹಲವು ಕ್ರಮಗಳನ್ನು ಕೈಗೊಂಡಿರುವ ಶಾಲಾ ಶಿಕ್ಷಣ ಇಲಾಖೆ, ತರಗತಿಯಲ್ಲೇ ತೆರೆದ ಪುಸ್ತಕ ಪರೀಕ್ಷೆ ನಡೆಸುವ ಮೂಲಕ ಮಕ್ಕಳಲ್ಲಿ ಪಠ್ಯ ಪುಸ್ತಕ ಓದುವ ಹವ್ಯಾಸ ಬೆಳೆಸುವಂತೆ ಸೂಚಿಸಿದೆ.

ಶಿಕ್ಷಕರು ಪ್ರತಿ ವಿಷಯದಲ್ಲೂ 25 ಅಂಕಗಳಿಗೆ ಪ್ರಶ್ನೆಪತ್ರಿಕೆ ಸಿದ್ಧಪಡಿಸಿಕೊಂಡು, ನಿರ್ದಿಷ್ಟ ಸಮಯ ಮಿತಿಯ ಒಳಗೆ ಕಿರು ಪರೀಕ್ಷೆಗಳನ್ನು ನಡೆಸಬೇಕು. ಉತ್ತರ ಬರೆಯಲು ಪುಸ್ತಕಗಳನ್ನು ನೀಡಬೇಕು. ಮಕ್ಕಳು ಉತ್ತರಕ್ಕಾಗಿ ಪುಸ್ತಕದ ಪುಟಗಳನ್ನು ತಿರುವಿಹಾಕುವುದರಿಂದ ಓದುವ ಹವ್ಯಾಸ ರೂಢಿಯಾಗುತ್ತದೆ. ಪಠ್ಯಪುಸ್ತಕದ ಆವಶ್ಯಕತೆಯ ಅರಿವು ಮೂಡುತ್ತದೆ ಎಂದು 2024–25ನೇ ಸಾಲಿನ ಶೈಕ್ಷಣಿಕ ಮಾರ್ಗದರ್ಶಿಯಲ್ಲಿ ಉಲ್ಲೇಖಿಸಲಾಗಿದೆ.

ಪಾಠ ಮಾಡುವಾಗಲೇ ಶಿಕ್ಷಕರು ಬೋಧನಾ ಅವಧಿಯ ಕೊನೆಯಲ್ಲಿ ಪ್ರಶ್ನೆಗಳನ್ನು ನೀಡಬೇಕು. ಅವುಗಳಿಗೆ ಸ್ಥಳದಲ್ಲೇ ಉತ್ತರ ಬರೆಯಿಸಬೇಕು. ಉತ್ತರದ ಹಾಳೆಗಳನ್ನು ವಿದ್ಯಾರ್ಥಿಗಳೇ ಪರಸ್ಪರ ವಿನಿಮಯ ಮಾಡಿಕೊಂಡು ಮೌಲ್ಯಮಾಪನ ಮಾಡಬೇಕು. ಇದರಿಂದ ವಿದ್ಯಾರ್ಥಿಗಳಿಗೆ ತಾವು ಮಾಡಿದ ತಪ್ಪುಗಳ ಅರಿವು ಮೂಡುವುದರ ಜತೆಗೆ, ಮೌಲ್ಯಾಂಕನದ ಅನುಭವವೂ ಆಗುತ್ತದೆ ಎಂದು ವಿವರಿಸಲಾಗಿದೆ.

> **ತೆರೆದ ಪುಸ್ತಕ ಪರೀಕ್ಷೆ ತರಗತಿಗಳ ಒಳಗಿನ ಕಿರು ಪರೀಕ್ಷೆಗಳಿಗೆ ಸೀಮಿತ. ಎಸ್‌ಎಸ್‌ಎಲ್‌ಸಿ ಸೇರಿ ಯಾವ ಮುಖ್ಯ ಪರೀಕ್ಷೆಗೂ ಅನ್ವಯವಾಗುವುದಿಲ್ಲ**
>
> **ರಿತೇಶ್‌ಕುಮಾರ್ ಸಿಂಗ್**
> ಪ್ರಧಾನ ಕಾರ್ಯದರ್ಶಿ, ಶಾಲಾ ಶಿಕ್ಷಣ ಇಲಾಖೆ

ಇದುವರೆಗೂ ಇಂತಹ ಪ್ರಯೋಗಗಳನ್ನು ವಿಜ್ಞಾನದ ವಿದ್ಯಾರ್ಥಿಗಳಿಗೆ ಹಾಗೂ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಮಾತ್ರ ಮಾಡಲಾಗುತ್ತಿತ್ತು. ಈ ವರ್ಷದಿಂದ ಎಂಟು, ಒಂಬತ್ತನೇ ತರಗತಿ ಹಾಗೂ ಎಲ್ಲ ವಿಷಯಗಳಲ್ಲೂ ಅನುಸರಿಸಬೇಕು. ವಿದ್ಯಾರ್ಥಿಗಳ ಕಲಿಕಾ ಸಾಮರ್ಥ್ಯದ ಆಧಾರದಲ್ಲಿ ಆರು ಗುಂಪುಗಳಾಗಿ ವಿಂಗಡಿಸಿ, ಕಡಿಮೆ ಕಲಿಕಾ ಸಮರ್ಥ್ಯದ ಮಕ್ಕಳಿಗೆ ಹೆಚ್ಚುವರಿ ಅವಧಿಯ ಬೋಧನೆ, ಪ್ರತ್ಯೇಕ ಕಲಿಕಾ ಕೌಶಲಗಳ ಮೂಲಕ ಅವರನ್ನು ಇತರೆ ವಿದ್ಯಾರ್ಥಿಗಳಿಗೆ ಸರಿಸಮನಾಗಿ ಸಿದ್ಧಗೊಳಿಸಲು ಶಿಕ್ಷಕರು ಶ್ರಮವಹಿಸಬೇಕು ಎಂದು ಹೇಳಲಾಗಿದೆ.

ತಾಯಂದಿರ ಜತೆ ಚರ್ಚೆ: ಮಕ್ಕಳ ಕಲಿಕಾ ಸಾಮರ್ಥ್ಯ, ಓದಿನ ಪ್ರಗತಿ ಕುರಿತು ವರ್ಷಕ್ಕೆ ನಾಲ್ಕು ಬಾರಿ ವಿದ್ಯಾರ್ಥಿಗಳ ತಾಯಂದಿರು ಅಥವಾ ಪೋಷಕರ ಜತೆ ಚರ್ಚಿಸಬೇಕು. ಮನೆಯಲ್ಲಿ ಓದಿಗೆ ಪೂರಕವಾದ ವ್ಯವಸ್ಥೆ ಮಾಡಿಕೊಡಬೇಕು. ಮಕ್ಕಳ ಕಲಿಕೆಯ ಮೇಲೆ ನಿತ್ಯವೂ ನಿಗಾ ವಹಿಸಲು ಸಲಹೆ ನೀಡಬೇಕು. ಸಮೀಪದ ಶಾಲೆಯ ಶಿಕ್ಷಕರಿಂದ ಇತರೆ ಶಾಲೆಗಳ ಮಕ್ಕಳಿಗೆ ನಿಯಮಿತವಾಗಿ ವಿಶೇಷ ತರಗತಿಗಳನ್ನು ಆಯೋಜಿಸಬೇಕು. ಮೇಲಧಿಕಾರಿಗಳು ಶಾಲೆಗಳಿಗೆ ಭೇಟಿ ನೀಡಿ ಶಿಕ್ಷಣದ ಪ್ರಗತಿ ವೀಕ್ಷಿಸಬೇಕು ಎಂದೂ ಸೂಚಿಸಲಾಗಿದೆ.

ಶಾಲಾ ಪ್ರಾರಂಭೋತ್ಸವ ಇಂದು

ಬೆಂಗಳೂರು: ರಾಜ್ಯದ ಶಾಲೆಗಳಲ್ಲಿ ಶುಕ್ರವಾರ ಪ್ರಾರಂಭೋತ್ಸವ ಹಮ್ಮಿಕೊಳ್ಳಲಾಗಿದ್ದು, ಮಧ್ಯಾಹ್ನದ ಬಿಸಿಯೂಟಕ್ಕೆ ಸಿಹಿ ನೀಡಲಾಗುತ್ತಿದೆ.

ಶಾಲೆಗಳನ್ನು ಬಾಳೆಕಂದು, ತಳಿರು ತೋರಣಗಳಿಂದ ಶೃಂಗರಿಸಲಾಗಿದೆ. ಅಂಗಳದಲ್ಲಿ ರಂಗೋಲಿ ಬಿಡಿಸಿ ಹಬ್ಬದ ವಾತಾವರಣ ನಿರ್ಮಿಸಲಾಗಿದೆ. ಶಾಲೆಗೆ ಬರುವ ಮಕ್ಕಳಿಗೆ ಪಠ್ಯಪುಸ್ತಕ, ಎರಡು ಜೊತೆ ಸಮವಸ್ತ್ರ ವಿತರಿಸಲಾಗುತ್ತಿದೆ. ಬಾರದ ಮಕ್ಕಳನ್ನು ಅವರ ಮನೆಗಳಿಗೆ ತೆರಳಿ ಕರೆತರಲು ಶಿಕ್ಷಕರ ತಂಡಗಳು ಸಜ್ಜಾಗಿವೆ.

ಶೂ ಖರೀದಿಗೆ ₹121 ಕೋಟಿ ಬಿಡುಗಡೆ: ಶೂ ಖರೀದಿಸಲು ₹121 ಕೋಟಿ ಬಿಡುಗಡೆ ಮಾಡಲಾಗಿದೆ. ಪ್ರತಿ ವಿದ್ಯಾರ್ಥಿಗಳಿಗೆ ಒಂದು ಜೊತೆ ಕಪ್ಪು ಬಣ್ಣದ ಶೂ, ಎರಡು ಜೊತೆ ಸಾಕ್ಸ್ ನೀಡಲಾಗುತ್ತದೆ. ಆಯಾ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಅಧ್ಯಕ್ಷ, ಮುಖ್ಯ ಶಿಕ್ಷಕರನ್ನು ಒಳಗೊಂಡ ಐವರ ಸಮಿತಿಗೆ ಶೂ ಖರೀದಿಯ ಹೊಣೆಯನ್ನು ನೀಡಲಾಗಿದೆ.

ಒಂದರಿಂದ ಐದನೇ ತರಗತಿ ಮಕ್ಕಳಿಗೆ ತಲಾ ₹265, ಆರರಿಂದ ಎಂಟನೇ ತರಗತಿ ₹295 ಹಾಗೂ ಒಂಬತ್ತರಿಂದ ಹತ್ತನೇ ತರಗತಿ ವಿದ್ಯಾರ್ಥಿಗಳಿಗೆ ₹325 ನಿಗದಿ ಮಾಡಲಾಗಿದೆ.

ಸಿಬಿಐಗೆ ವಹಿಸಲ್ಲ: ಗೃಹ ಸಚಿವ

ಚಂದ್ರಶೇಖರನ್ ಆತ್ಮಹತ್ಯೆ ಪ್ರಕರಣದ ತನಿಖೆ: 'ಪೊಲೀಸರ ಮೇಲೆ ನಂಬಿಕೆ ಇದೆ'

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: 'ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧೀಕ್ಷಕ ಪಿ.ಚಂದ್ರಶೇಖರನ್ ಅವರ ಆತ್ಮಹತ್ಯೆ ಪ್ರಕರಣದ ತನಿಖೆಗೆ ರಾಜ್ಯದ ಪೊಲೀಸರೇ ಸಮರ್ಥರಿದ್ದಾರೆ. ಸಿಬಿಐಗೆ ವಹಿಸುವುದಿಲ್ಲ' ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ ಸ್ಪಷ್ಟಪಡಿಸಿದರು.

ನಗರದಲ್ಲಿ ಶುಕ್ರವಾರ ಪಿ. ಚಂದ್ರಶೇಖರನ್ ನಿವಾಸಕ್ಕೆ ಭೇಟಿ ನೀಡಿ ಕುಟುಂಬ ಸದಸ್ಯರಿಗೆ ಸಾಂತ್ವನ ಹೇಳಿದ ನಂತರ ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

'ಸಿಐಡಿಯು ಗೃಹ ಇಲಾಖೆಯ ಅಂಗ ಸಂಸ್ಥೆ. ಅದರ ಮೇಲೆ ಸರ್ಕಾರ ಪ್ರಭಾವ ಬೀರುತ್ತದೆ ಎಂದು ಬಿಜೆಪಿಯವರು ಆರೋಪ ಮಾಡುತ್ತಿದ್ದಾರೆ. ಹಾಗಾದರೆ ಸಿಬಿಐ ಯಾರ ಅಡಿ ಬರುತ್ತದೆ. ಅದು ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರುವುದಿಲ್ಲವೇ? ಬಿಜೆಪಿಯವರು ಸಿಬಿಐ ಮೇಲೆ ಪ್ರಭಾವ ಬೀರಲು ಹೀಗೆ ಮಾತಾಡುತ್ತಿದ್ದಾರೆ. ಕೇಂದ್ರ ಆ ಸಂಸ್ಥೆಯನ್ನು ಸಂಪೂರ್ಣ ದುರ್ಬಳಕೆ ಮಾಡಿಕೊಂಡಿದೆ' ಎಂದು ಆರೋಪಿಸಿದರು.

'ಸರ್ಕಾರಕ್ಕೆ ನಮ್ಮ ಪೊಲೀಸರ ಮೇಲೆ ನಂಬಿಕೆ ಇದೆ. ನಾವೇ ಅವರನ್ನು ನಂಬದಿದ್ದರೆ ಹೇಗೆ? ಆತ್ಮಹತ್ಯೆ ಪ್ರಕರಣವನ್ನು ಸಿಬಿಐಗೆ ವಹಿಸಲು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಒಂದು ವಾರ ಗಡುವು ನೀಡಿದ್ದಾರೆ ಎಂಬುದು ಮಾಧ್ಯಮಗಳ ಮೂಲಕ ಗೊತ್ತಾಗಿದೆ. ಅವರು ವಿರೋಧ ಪಕ್ಷದಲ್ಲಿ ಇದ್ದಾರೆ. ಹೋರಾಟ ಮಾಡಲು ನಮ್ಮ ಅಭ್ಯಂತರವಿಲ್ಲ' ಎಂದರು.

'ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ₹187 ಕೋಟಿ ಬೇರೆಬೇರೆ ಖಾತೆಗೆ ವರ್ಗಾವಣೆ ಆಗಿದೆ. ಇದರಲ್ಲಿ ₹ 80 ಕೋಟಿಯಿಂದ ₹ 85 ಕೋಟಿ ಅವ್ಯವಹಾರ ಆಗಿದೆ ಎಂದು ಅಧಿಕಾರಿ ಡೆತ್‌ನೋಟ್‌ನಲ್ಲಿ ಬರೆದಿದ್ದಾರೆ. ಈ ಹಗರಣದಲ್ಲಿ ಭಾಗಿಯಾದ ಎಲ್ಲರ ಮೇಲೆ ತನಿಖೆ ನಡೆಸಿ ಶಿಕ್ಷೆ ಕೊಡಿಸಲಾಗುವುದು. ಸರ್ಕಾರ ಖಂಡಿತವಾಗಿಯೂ ಅಧಿಕಾರಿಯ ಸಾವಿಗೆ ನ್ಯಾಯ ಕೊಡಿಸಲಿದೆ' ಎಂದರು.

'ಬಿಜೆಪಿ ಆಡಳಿತವಿದ್ದಾಗ ಆತ್ಮಹತ್ಯೆ ಮಾಡಿಕೊಂಡ ಗುತ್ತಿಗೆದಾರ, ಸಚಿವರಾಗಿದ್ದ ಕೆ.ಎಸ್. ಈಶ್ವರಪ್ಪ ಅವರ ಹೆಸರು ಬರೆದಿದ್ದರು. ಚಂದ್ರಶೇಖರನ್ ಡೆತ್‌ನೋಟ್‌ನಲ್ಲಿ ಸಚಿವರ ಮೌಖಿಕ ಆದೇಶ ಎಂದು ಬರೆದಿದ್ದಾರೆ. ಆದರೆ, ಯಾರ ಹೆಸರೂ ಬರೆದಿಲ್ಲ. ಹೀಗಾಗಿ ಪ್ರಕರಣದಲ್ಲಿ ನಿರ್ದಿಷ್ಟವಾಗಿ ಸಚಿವರ ಮೇಲೆ ಹೊಣೆ ಹೊರಿಸಲು ಬರುವುದಿಲ್ಲ' ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದ ಡಾ.ಪರಮೇಶ್ವರ, 'ಒಂದು ವೇಳೆ ಸಚಿವ ಬಿ. ನಾಗೇಂದ್ರ ಒತ್ತಡ ಹಾಕಿರುವುದು ಕಂಡು ಬಂದರೆ ಅವರ ವಿರುದ್ಧವೂ ಕಾನೂನು ಕ್ರಮ ಕೈಗೊಳ್ಳಲಾಗುವುದು. ಯಾರನ್ನೂ ರಕ್ಷಿಸುವ ಪ್ರಶ್ನೆಯೇ 'ಇಲ್ಲ' ಎಂದು ಹೇಳಿದರು.

ಈ ವೇಳೆ ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಸನಗೌಡ ದದ್ದಲ್, ಕಾಂಗ್ರೆಸ್ ಜಿಲ್ಲಾ ಸಮಿತಿ ಅಧ್ಯಕ್ಷ ಆರ್.ಪ್ರಸನ್ನಕುಮಾರ್, ಮುಖಂಡ ಎಚ್.ಸಿ.ಯೋಗೀಶ್ ಇದ್ದರು.

ಶಿವಮೊಗ್ಗದ ವಿನೋಬನಗರದ ಕೆಂಚಪ್ಪ ಬಡಾವಣೆಯಲ್ಲಿರುವ ದಿ. ಚಂದ್ರಶೇಖರನ್ ಅವರ ಮನೆಗೆ ಗೃಹ ಸಚಿವ ಜಿ. ಪರಮೇಶ್ವರ ಭೇಟಿ ನೀಡಿ ಮೃತರ ಕುಟುಂಬದವರಿಗೆ ಸಾಂತ್ವನ ಹೇಳಿದರು. ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಸನಗೌಡ ದದ್ದಲ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಆರ್.ಪ್ರಸನ್ನಕುಮಾರ್ ಚಿತ್ರದಲ್ಲಿದ್ದಾರೆ

ಸಿಬಿಐಗೆ ವಹಿಸಿ: ಬಸವರಾಜ ಬೊಮ್ಮಾಯಿ

ಬಳ್ಳಾರಿ/ವಿಜಯನಗರ: 'ವಾಲ್ಮೀಕಿ ಅಭಿವೃದ್ಧಿ ನಿಗಮದಿಂದ ನೂರಾರು ಕೋಟಿ ಹಣ ಹೈದರಾಬಾದ್‌ನ ಸಹಕಾರಿ ಬ್ಯಾಂಕ್‌ಗೆ ವರ್ಗಾವಣೆಯಾಗಿದ್ದು, ಇದರ ಒಟ್ಟಾರೆ ಪ್ರಕರಣವು ಸಿಬಿಐನಿಂದ ತನಿಖೆ ಆಗಬೇಕು' ಎಂದು ಶಾಸಕ ಬಸವರಾಜ ಬೊಮ್ಮಾಯಿ ಆಗ್ರಹಿಸಿದರು. 'ಸಚಿವ ಬಿ.ನಾಗೇಂದ್ರ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಲೇಬೇಕು' ಎಂದು ಅವರು ಆಗ್ರಹಿಸಿದರು.

'ಯಾರನ್ನೂ ರಕ್ಷಿಸುವ ಪ್ರಶ್ನೆಯೇ ಇಲ್ಲ'

ಬಿಜೆಪಿ ಆರೋಪಕ್ಕೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರತಿಕ್ರಿಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ತಪ್ಪು ಯಾರೇ ಮಾಡಿದ್ದರೂ ಕಠಿಣ ಕ್ರಮ ಜರುಗಿಸಲಾಗುವುದು. ಯಾವುದೇ ಕಾರಣಕ್ಕೂ ತಪ್ಪಿತಸ್ಥರನ್ನು ರಕ್ಷಿಸುವ ಪ್ರಶ್ನೆಯೇ ಇಲ್ಲ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು. ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಲ್ಲಿ ನಡೆದ ಅಕ್ರಮ ಹಣ ವರ್ಗಾವಣೆ ಕುರಿತಂತೆ ನಾಗೇಂದ್ರ ಅವರ ರಾಜೀನಾಮೆಗೆ ಬಿಜೆಪಿ ಪಟ್ಟು ಹಿಡಿದಿರುವ ಬಗ್ಗೆ ಸುದ್ದಿಗಾರರು ಕೇಳಿದ ಪ್ರಶ್ನೆಗೆ ಅವರು ಹೀಗೆ ಪ್ರತಿಕ್ರಿಯಿಸಿದರು.

'ಸಚಿವ ನಾಗೇಂದ್ರ ಅವರ ರಾಜೀನಾಮೆ ಕೇಳುವುದು ವಿರೋಧ ಪಕ್ಷಗಳ ಧರ್ಮ. ನಾವು ಈ ಪ್ರಕರಣದ ಬಗ್ಗೆ ಪರಿಶೀಲಿಸುತ್ತಿದ್ದೇವೆ. ಈ ಪ್ರಕರಣವನ್ನು ಮುಖ್ಯಮಂತ್ರಿ ಗಂಭೀರವಾಗಿ ಪರಿಗಣಿಸಿದ್ದಾರೆ' ಎಂದರು.

'ಆಧಾರ ಇಲ್ಲದೇ ಆರೋಪ ಮಾಡಿದ ಮಾತ್ರಕ್ಕೆ ನಾವು ಪ್ರತಿಕ್ರಿಯೆ ನೀಡಲು ಆಗುವುದಿಲ್ಲ. ತಕ್ಷಣವೇ ಎಫ್‌ಐಆರ್ ದಾಖಲಿಸಿ, ವ್ಯವಸ್ಥಾಪಕ ನಿರ್ದೇಶಕರನ್ನು ಅಮಾನತು ಮಾಡಲಾಗಿದೆ. ತಪ್ಪು ಮಾಡಿರುವುದು ಸಾಬೀತಾದರೆ ಮುಲಾಜಿಲ್ಲದೆ ಕ್ರಮ ಕೈಗೊಳ್ಳಲಾಗುವುದು' ಎಂದರು.

'ಗುತ್ತಿಗೆದಾರ ಸಂತೋಷ್ ಪಾಟೀಲ ಆತ್ಮಹತ್ಯೆ ಪ್ರಕರಣದಲ್ಲಿ ಈಶ್ವರಪ್ಪ ರಾಜೀನಾಮೆ ಕೇಳಿದ್ದೀರಿ, ಈಗ ಈ ವಿಚಾರದಲ್ಲಿ ಬಿಜೆಪಿಯು ಸಚಿವರ ರಾಜೀನಾಮೆ ಕೇಳುತ್ತಿದೆ' ಎಂದಾಗ, 'ಆತ್ಮಹತ್ಯೆ ಮಾಡಿಕೊಂಡ ನಿಗಮದ ಅಧಿಕಾರಿ ಚಂದ್ರಶೇಖರನ್ ಮರಣ ಪತ್ರದಲ್ಲಿ ಸಚಿವರ ಮೌಖಿಕ ಆದೇಶವಿದೆ ಎಂದು ಅಧಿಕಾರಿಗಳು ಹೇಳಿದ್ದರು ಎಂದು ಇದೆ. ನಾಗೇಂದ್ರ ವಿರುದ್ಧ ನೇರ ಆರೋಪವಿಲ್ಲ. ಈ ವಿಚಾರದಲ್ಲಿ ಸರ್ಕಾರ ತನಿಖೆ ಮಾಡಲಿದೆ. ಇದು ಸಣ್ಣ ವಿಚಾರವಲ್ಲ' ಎಂದರು.

'ಸತ್ಯ ಬಯಲಾಗದೆ ತೀರ್ಮಾನ ಹೇಗೆ': 'ಮರಣ ಪತ್ರದಲ್ಲಿ ಚಂದ್ರಶೇಖರನ್ ಕೆಲವು ಆರೋಪಗಳನ್ನು ಮಾಡಿದ್ದಾರೆ. ಎಲ್ಲ ಆಯಾಮಗಳಲ್ಲಿ ತನಿಖೆ ನಡೆಯುತ್ತಿದೆ. ತನಿಖೆಯ ಬಳಿಕ ಸತ್ಯಾಸತ್ಯತೆ ಹೊರ ಬರಲಿದೆ' ಎಂದು ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಇಲ್ಲಿ ದಲಿತರು, ದಲಿತೇತರರ ಹಣ ಎಂದಲ್ಲ. ಅದು ಸರ್ಕಾರದ ಹಣ. ಅಂತೆಕಂತೆಗಳ ಮೇಲೆ ಮಾತನಾಡುವುದು ಸರಿಯಲ್ಲ. ಕೆ.ಎಸ್. ಈಶ್ವರಪ್ಪ ಪ್ರಕರಣವೇ ಬೇರೆ, ನಿಗಮದ ಹಣ ವರ್ಗಾವಣೆ ಪ್ರಕರಣವೇ ಬೇರೆ' ಎಂದು ಅಭಿಪ್ರಾಯಪಟ್ಟರು.

'ಬಿಜೆಪಿ ವಿರೋಧ ಪಕ್ಷ ಆಗಿರುವರಿಂದ, ಆ ಪಕ್ಷದವರು ಸಚಿವ ನಾಗೇಂದ್ರ ಅವರ ರಾಜೀನಾಮೆಗೆ ಆಗ್ರಹಿಸುತ್ತಿದ್ದಾರೆ. ಸತ್ಯಾಸತ್ಯತೆ ಹೊರಗಡೆ ಬಾರದೆ ತೀರ್ಮಾನ ತೆಗೆದುಕೊಳ್ಳುವುದು ಹೇಗೆ' ಎಂದು ಪ್ರಶ್ನಿಸಿದರು.

'ಮರಣಪತ್ರದ ಸತ್ಯಾಸತ್ಯತೆ ಪರಿಶೀಲನೆ'

ಬೆಂಗಳೂರು: 'ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದ ಅವ್ಯವಹಾರ ಪ್ರಕರಣದ ಕುರಿತು ಸಿಐಡಿ ತನಿಖೆಯ ಬಳಿಕ ಸತ್ಯ ಗೊತ್ತಾಗಲಿದೆ. ಅಲ್ಲಿಯವರೆಗೂ ಏನೂ ಹೇಳಲು ಆಗುವುದಿಲ್ಲ' ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಸಚಿವರ ತಲೆದಂಡಕ್ಕೆ ಬಿಜೆಪಿ ಪಟ್ಟುಹಿಡಿದಿರುವ ಬಗ್ಗೆ ಕೇಳಿದಾಗ, 'ಅದಕ್ಕೆ ಪುರಾವೆ ಬೇಕು. ಮರಣಪತ್ರದಲ್ಲಿ ಸಚಿವರು ಮೌಖಿಕ ಆದೇಶ ಕೊಟ್ಟಿದ್ದಾರೆ ಎಂದಿದೆ. ನಾನು ಮರಣಪತ್ರ ನೋಡಿಲ್ಲ. ಮರಣ ಪತ್ರದ ಪರಿಶೀಲನೆ ಆಗುವವರೆಗೆ ಸ್ಪಷ್ಟವಾಗಿ ಹೇಳಲು ಬರುವುದಿಲ್ಲ' ಎಂದರು.

'ಗುತ್ತಿಗೆದಾರ ಸಂತೋಷ ಪಾಟೀಲ ಆತ್ಮಹತ್ಯೆ ವಿಚಾರದಲ್ಲಿ ಸಚಿವ ಕೆ.ಎಸ್. ಈಶ್ವರಪ್ಪ ರಾಜೀನಾಮೆ ನೀಡಿರುವುದನ್ನು ಈ ಪ್ರಕರಣಕ್ಕೆ ಹೋಲಿಸುವುದು ಸರಿಯಲ್ಲ. ಅದರಲ್ಲಿ ಈಶ್ವರಪ್ಪ ಅವರ ಹೆಸರಿತ್ತು' ಎಂದರು.

'ಕನ್ನಡಿಗರ ತೆರಿಗೆ; ಕೇರಳದವರಿಗೆ ಉದ್ಯೋಗ'

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಮುಖ್ಯಮಂತ್ರಿ ಸಿದ್ದರಾಮಯ್ಯ ಕನ್ನಡಿಗರ ತೆರಿಗೆಯಲ್ಲಿ ಕೇರಳದವರನ್ನು ಸಾಕಲು ಮುಂದಾಗಿದ್ದಾರೆ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ವ್ಯಂಗ್ಯವಾಡಿದ್ದಾರೆ.

'ಬಿಎಂಟಿಸಿ ಎಲೆಕ್ಟ್ರಿಕ್ ಬಸ್‌ಗಳಲ್ಲಿ ಕನ್ನಡಿಗರ ಬದಲು ಕೇರಳದ ಯುವಕರಿಗೆ ಉದ್ಯೋಗ ಕಲ್ಪಿಸಲಾಗಿದೆ. ಕೇರಳದ ಯುವಕರನ್ನು ಚಾಲಕ ಹುದ್ದೆಗೆ ನೇಮಿಸುವ ಮೂಲಕ ಕನ್ನಡಿಗರಿಗೆ ಪಂಗನಾಮ ಹಾಕಲಾಗುತ್ತಿದೆ. ಈ ಹುದ್ದೆಗೆ ಕನ್ನಡಿಗರು ಸಿದ್ಧರಿರಲಿಲ್ಲವೇ' ಎಂದು ಅವರು 'ಎಕ್ಸ್' ಖಾತೆಯಲ್ಲಿ ಪೋಸ್ಟ್ ಹಾಕಿ, ಪ್ರಶ್ನಿಸಿದ್ದಾರೆ.

'ಚಾಲಕರು ಖಾಸಗಿ ಏಜೆನ್ಸಿ ಮೂಲಕ ನೇಮಕವಾಗಿದ್ದಾರೆ ಎಂಬುದು ಬರೀ ಸಬೂಬು. ಇದು ಕಾಂಗ್ರೆಸ್‌ನ 'ಯುವನಿಧಿ ಗ್ಯಾರಂಟಿ'ಯ ಹಕೀಕತ್ತು'. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನಿಷ್ಠೆ ಕರ್ನಾಟಕ ಅಥವಾ ಕನ್ನಡಿಗರ ಪರ ಇಲ್ಲ ಎಂಬುದು ಇದರಿಂದ ಸ್ಪಷ್ಟವಾಗಿದೆ. ಮತ ಹಾಕಲು ಕನ್ನಡಿಗರು ಬೇಕು. ಆದರೆ, ನಿಯತ್ತು ಮಾತ್ರ ಇನ್ನೊಬ್ಬರ ಪರ' ಎಂದು ಅವರು ದೂರಿದ್ದಾರೆ.

'ಅಸಂಬದ್ಧ ಟ್ವೀಟ್‌ಗಳಿಂದ ಅಜ್ಞಾನ ಪ್ರದರ್ಶಿಸಬೇಡಿ'

ಬೆಂಗಳೂರು: 'ನಿಮ್ಮ ಟ್ವೀಟ್ ನಿಮ್ಮ ಪರಮ ಅಜ್ಞಾನದ ಫಲವೊ? ವಿರೋಧ ಪಕ್ಷದ ನಾಯಕ ಅಸ್ತಿತ್ವದಲ್ಲಿದ್ದಾರೆ ಎಂದು ತಿಳಿಸಲೊ? ಇದು ನಮ್ಮನ್ನೂ ಸೇರಿಸಿಕೊಂಡಂತೆ ರಾಜ್ಯದ ಜನ ಸಾಮಾನ್ಯರಿಗೂ ಅರ್ಥವಾಗದಿರುವ ಯಕ್ಷ ಪ್ರಶ್ನೆ' ಎಂದು ಆರ್. ಅಶೋಕ ಅವರನ್ನು ಉದ್ದೇಶಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಕಟಕಿಯಾಡಿದ್ದಾರೆ.

ಅಶೋಕ ಅವರ ಟ್ವೀಟ್‌ಗೆ ಪ್ರತಿಕ್ರಿಯಿಸಿರುವ ಸಿದ್ದರಾಮಯ್ಯ, 'ಸಾರಿಗೆ ಸಂಸ್ಥೆಗಳಲ್ಲಿ ಎಲೆಕ್ಟ್ರಿಕ್ ಬಸ್‌ಗಳ ಸೇರ್ಪಡೆಯು ಕೇಂದ್ರ ಸರ್ಕಾರದ ನೀತಿ ಯೋಜನೆಯಂತೆ ಜಾರಿಯಾಗಿದೆ. ಎಲೆಕ್ಟ್ರಿಕ್ ಬಸ್‌ಗಳನ್ನು ಸಾರಿಗೆ ಸಂಸ್ಥೆಗಳು ನೇರವಾಗಿ ಖರೀದಿಸುವಂತಿಲ್ಲ, ಖಾಸಗಿ ಕಂಪನಿಯವರು ಮಾಲೀಕತ್ವ ಹೊಂದಿರುತ್ತಾರೆ. ಅವರಿಗೆ ಕೇಂದ್ರ ಸರ್ಕಾರವು ನೇರವಾಗಿ ಸಬ್ಸಿಡಿ ನೀಡುತ್ತದೆ ಹಾಗೂ ಚಾಲಕರನ್ನು ನಿಯೋಜಿಸುವ ಕಾರ್ಯವು ಖಾಸಗಿ ಅವರಿಗೆ ನೀಡಲಾಗಿದೆ' ಎಂದಿದ್ದಾರೆ.

'ಚಾಲಕರ ವೇತನ, ಆಯ್ಕೆ ಯಾವುದರಲ್ಲಿಯೂ ಸಾರಿಗೆ ಸಂಸ್ಥೆಗಳಿಗೆ ತೀರ್ಮಾನ ತೆಗೆದುಕೊಳ್ಳುವ ಅಧಿಕಾರವಿಲ್ಲ. ಬಸ್‌ಗಳ ಕಾರ್ಯಾಚರಣೆ ಹೊಣೆ ಮಾತ್ರ ಸಾರಿಗೆ ಸಂಸ್ಥೆಗಳದ್ದು. ಇದನ್ನು ನಮ್ಮ ಸಾರಿಗೆ ಸಚಿವರು ಹಲವು ಬಾರಿ ಸ್ಪಷ್ಟಪಡಿಸಿದ್ದಾರೆ. ತಮಗೆ ಅದು ಅರ್ಥವಾಗದಿರುವುದು ನಿಜಕ್ಕೂ ಶೋಚನೀಯ' ಎಂದು ಟೀಕಿಸಿದ್ದಾರೆ.

'ಯುವಕರಿಗೆ ನಿರುದ್ಯೋಗ ಭಾಗ್ಯ ಕಲ್ಪಿಸಲು ಕಾರಣವಾದ ಕೇಂದ್ರ ಬಿಜೆಪಿ ಸರ್ಕಾರದ ಈ ಯೋಜನೆಯ ಬಗೆಗಿನ ತಮ್ಮ ನೋವು, ದುಃಖ ಮತ್ತು ಸಂಕಟಗಳಿಗೆ ಉತ್ತರ ಕಂಡುಕೊಳ್ಳುವ ತವಕ ನಿಮ್ಮಲ್ಲಿದ್ದರೆ ದಯವಿಟ್ಟು ನಿಮ್ಮ ಪ್ರಧಾನಿ ನರೇಂದ್ರ ಮೋದಿ ಅವರನ್ನು ಕೇಳಿ ಉತ್ತರ ಪಡೆಯಿರಿ. ಅಸಂಬದ್ಧ ಟ್ವೀಟ್‌ಗಳ ಮೂಲಕ ಅಜ್ಞಾನ ಪ್ರದರ್ಶಿಸಬೇಡಿ' ಎಂದು ಕುಟುಕಿದ್ದಾರೆ.

ವಾಲ್ಮೀಕಿ ಅಭಿವೃದ್ಧಿ ನಿಗಮ ಲ್ಯಾಂಪ್ಸ್ ಫೆಡರೇಷನ್ ಸಂಸ್ಥೆಗಳ ವೈಫಲ್ಯ

ವೇತನಕ್ಕಾಗಿ 'ಟ್ರೈ ಮಳಿಗೆ' ಸಿಬ್ಬಂದಿ ಅಲೆದಾಟ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ 'ಕಿರು ಅರಣ್ಯ ಉತ್ಪನ್ನಗಳು ಮತ್ತು ಕರಕುಶಲ ವಸ್ತುಗಳ ಮಾರಾಟ ಮಳಿಗೆ'ಗಳಲ್ಲಿ (ಟ್ರೈ ಮಳಿಗೆ) ಕೆಲಸ ಮಾಡುವ ಸಿಬ್ಬಂದಿಗೆ ಎಂಟು ತಿಂಗಳಿನಿಂದ ವೇತನವನ್ನೇ ನೀಡಿಲ್ಲ.

ಅರಣ್ಯವಾಸಿಗಳು, ಬುಡಕಟ್ಟು ಜನರು ಜೀವನೋಪಾಯಕ್ಕಾಗಿ ಸಂಗ್ರಹಿಸುತ್ತಿದ್ದ ಕಿರು ಅರಣ್ಯ ಉತ್ಪನ್ನಗಳು ಹಾಗೂ ಕರಕುಶಲ ವಸ್ತುಗಳಿಗೆ ಸ್ಪರ್ಧಾತ್ಮಕ ಬೆಲೆ ದೊರಕಿಸಲು ಮುಂದಾಗಿದ್ದ ನಿಗಮ, ಅದಕ್ಕಾಗಿ ನಗರ ಪ್ರದೇಶಗಳಲ್ಲಿ ತನ್ನದೇ ಆದ ಮಾರಾಟ ಮಳಿಗೆಗಳನ್ನು ತೆರೆಯುವ ನಿರ್ಧಾರ ಮಾಡಿತ್ತು. 2022–2023ನೇ ಸಾಲಿನಲ್ಲಿ ₹ 2 ಕೋಟಿ, 2023–24ರಲ್ಲಿ ₹5 ಕೋಟಿ ಮೀಸಲಿಟ್ಟಿತ್ತು.

ಮೊದಲ ಹಂತದಲ್ಲಿ ಬೆಂಗಳೂರು ನಗರ, ಚಿತ್ರದುರ್ಗ, ದಾವಣಗೆರೆ, ಚಿಕ್ಕಬಳ್ಳಾಪುರ, ಕೋಲಾರ, ತುಮಕೂರು, ಮೈಸೂರು, ಚಿಕ್ಕಮಗಳೂರು, ಬೆಳಗಾವಿ, ಬಳ್ಳಾರಿ, ರಾಯಚೂರಿನಲ್ಲಿ 'ಟ್ರೈ ಮಳಿಗೆ'ಗಳನ್ನು ತೆರೆಯಲಾಗಿದೆ. ಉತ್ಪನ್ನಗಳ ಖರೀದಿ, ಮಾರಾಟ, ಸಿಬ್ಬಂದಿ ನಿರ್ವಹಣೆಯ ಹೊಣೆಗಾರಿಕೆಯನ್ನು ಮೈಸೂರಿನ ಲ್ಯಾಂಪ್ಸ್ ಫೆಡರೇಷನ್ ಸಂಸ್ಥೆಗೆ ನೀಡಲಾಗಿದ್ದು, ಮುಂಗಡವಾಗಿ ₹45 ಲಕ್ಷ ಬಿಡುಗಡೆ ಮಾಡಲಾಗಿತ್ತು.

'ಸದರಿ ಮಳಿಗೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸಿಬ್ಬಂದಿಗೆ ಆರಂಭದ ದಿನಗಳಲ್ಲಿ ಪ್ರತಿ ತಿಂಗಳೂ ವೇತನ ನೀಡಲಾಗುತ್ತಿತ್ತು. ಕಳೆದ ಸೆಪ್ಟೆಂಬರ್‌ನಿಂದ ಇದುವರೆಗೂ ವೇತನ ಪಾವತಿಯಾಗಿಲ್ಲ. ಮಳಿಗೆಗಳಲ್ಲಿ ಕೆಲಸ ಮಾಡುವುದನ್ನು ಬಿಟ್ಟು ನಿಗಮದ ಕಚೇರಿಗೆ ಹಾಗೂ ಮೈಸೂರಿನ ಲ್ಯಾಂಪ್ಸ್ ಫೆಡರೇಷನ್ ಸಂಸ್ಥೆಗೆ ಅಲೆಯುವುದನ್ನೇ ಕಾಯಂ ಕೆಲಸ ಮಾಡಿದ್ದೇವೆ' ಎಂದು ಸಿಬ್ಬಂದಿಯೊಬ್ಬರು ಹೇಳಿದರು.

'ತಾಂತ್ರಿಕ ಸಮಸ್ಯೆ ಇರಬಹುದು ಎಂದು ಮೊದಲ ಮೂರು ತಿಂಗಳು ಸುಧಾರಿಸಿಕೊಂಡೆವು. ಮನೆ ಬಾಡಿಗೆ, ಮಕ್ಕಳ ಶಾಲಾ ಶುಲ್ಕ, ನಿತ್ಯದ ಖರ್ಚಿಗೂ ಹಣವಿಲ್ಲದೆ ಪರದಾಡಿದೆವು. ಮತ್ತೆ ಅದೇ ಸ್ಥಿತಿ ಮುಂದುವರಿದ ಕಾರಣ ನಿಗಮದ ವ್ಯವಸ್ಥಾಪಕ ನಿರ್ದೇಶಕರ ಬಳಿಗೆ ಹೋದೆವು. ಅವರು ಲ್ಯಾಂಪ್ಸ್ ಫೆಡರೇಷನ್ ಸಂಸ್ಥೆಗೆ ಹೋಗಲು ಸೂಚಿಸಿದರು. ನಿಗಮದಿಂದ ಹಣ ಬಿಡುಗಡೆಯಾಗಿಲ್ಲ. ಉತ್ಪನ್ನಗಳನ್ನು ನೀಡಿದ್ದ ಅರಣ್ಯವಾಸಿಗಳಿಗೂ ಹಣ ಸಂದಾಯ ಮಾಡಲು ಸಾಧ್ಯವಾಗಿಲ್ಲ ಎಂದು ಸಂಸ್ಥೆಯ ಮುಖ್ಯಸ್ಥರು ಹೇಳುತ್ತಾರೆ. ನಿತ್ಯ ಅಲೆದರೂ ವೇತನ ಮಾತ್ರ ದೊರೆಯಲಿಲ್ಲ' ಎಂದು ಟ್ರೈ ಮಳಿಗೆ ಸಿಬ್ಬಂದಿ ಕವಿತಾ 'ಪ್ರಜಾವಾಣಿ'ಗೆ ವಿವರ ನೀಡಿದರು.

ಅಂಕಿ ಅಂಶಗಳು

25 ಮೊದಲ ಹಂತದ ಟ್ರೈ ಮಳಿಗೆಗಳ ಸಂಖ್ಯೆ

₹20 ಸಾವಿರ ಪ್ರತಿ ಸಿಬ್ಬಂದಿಗೆ ನಿಗದಿ ಮಾಡಿದ ತಿಂಗಳ ವೇತನ

ಶೇ **2** ತಿಂಗಳಿಗೆ ₹70 ಸಾವಿರ ವಹಿವಾಟು ನಡೆಸಿದರಿಗೆ ಪ್ರೋತ್ಸಾಹ ಧನ

ಹಣ ಬಳಕೆಯ ವರದಿಯನ್ನೇ ನೀಡದ ಸಂಸ್ಥೆ!

ಅರಣ್ಯ ಕಿರು ಉತ್ಪನ್ನ ಖರೀದಿ, ಮಾರಾಟ, ಸಿಬ್ಬಂದಿ ನಿರ್ವಹಣೆಯ ಗುತ್ತಿಗೆ ಪಡೆದ ಲ್ಯಾಂಪ್ಸ್ ಫೆಡರೇಷನ್ ಸಂಸ್ಥೆ ಎರಡು ವರ್ಷಗಳಿಂದ ನಿಗಮಕ್ಕೆ ಹಣ ಬಳಕೆಯ ವರದಿಯನ್ನೇ ಸಲ್ಲಿಸಿಲ್ಲ.

'ಖರ್ಚು–ವೆಚ್ಚದ ವಿವರ ಸಲ್ಲಿಸುವಂತೆ ನಿಗಮದ ಅಧಿಕಾರಿಗಳು ಹಲವು ಬಾರಿ ಸಂಸ್ಥೆಗೆ ನೆನಪಿನ ಸುತ್ತೋಲೆ ಹೊರಡಿಸಿದರೂ ಲೆಕ್ಕ ಪತ್ರ ಸಲ್ಲಿಸಿಲ್ಲ. ಸಿಬ್ಬಂದಿಗೆ ಪ್ರತಿ ತಿಂಗಳು ನೀಡಬೇಕಾದ ವೇತನದ ವಿವರಗಳನ್ನೂ ನೀಡಿಲ್ಲ. ಹಾಗಾಗಿ, ಬಾಕಿ ಅನುದಾನವನ್ನು ತಡೆಹಿಡಿಯಲಾಗಿದೆ' ಎಂದು ನಿಗಮದ ವ್ಯವಸ್ಥಾಪಕ ನಿರ್ದೇಶಕ ಜೆ.ಜೆ. ಪದ್ಮನಾಭ ಎರಡು ತಿಂಗಳ ಹಿಂದೆ ಸಂಸ್ಥೆಗೆ ಬರೆದ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

'ವೇತನ ಕೇಳಿದ್ದಕ್ಕೆ ಕೆಲಸದಿಂದಲೇ ತೆಗೆದರು'

'ಜೀವನ ನಿರ್ವಹಣೆಗಾಗಿ ಟ್ರೈ ಮಳಿಗೆಯ ಕೆಲಸವನ್ನೇ ನಂಬಿಕೊಂಡಿದ್ದೆವು. ಸಂಸ್ಥೆ ಮತ್ತು ನಿಗಮದ ನಡುವಿನ ಕಿತ್ತಾಟದಲ್ಲಿ ನಮ್ಮನ್ನು ಬಲಿಪಶು ಮಾಡಿದ್ದಾರೆ. ಯಾರು ವೇತನಕ್ಕಾಗಿ ಒತ್ತಡ ಮಾಡಿದರೋ ಅವರನ್ನೆಲ್ಲ ಕೆಲಸದಿಂದಲೇ ತೆಗೆದುಹಾಕಿದ್ದಾರೆ. ಅವರ ಜಾಗಕ್ಕೆ ನಿಗಮದ ಕಚೇರಿಯಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿದ್ದ ಸಿಬ್ಬಂದಿಯನ್ನು ತಾತ್ಕಾಲಿಕವಾಗಿ ನೇಮಕ ಮಾಡಿಕೊಂಡಿದ್ದಾರೆ' ಎಂದು ಸಿಬ್ಬಂದಿ ರವಿ ಮತ್ತು ಶಿವು ದೂರಿದರು.

'ನಿಗಮದ ನಿಯಮಗಳ ಪ್ರಕಾರ ಪರಿಶಿಷ್ಟ ಸಮುದಾಯಕ್ಕೆ ಸೇರಿದ ನಿರುದ್ಯೋಗಿಗಳನ್ನೇ ನೇಮಕ ಮಾಡಿಕೊಳ್ಳಬೇಕು. ಆದರೆ, ವ್ಯವಸ್ಥಾಪಕ ನಿರ್ದೇಶಕ ಪದ್ಮನಾಭ ಅವರು ಇತರೆ ಸಮುದಾಯಗಳ ಸಿಬ್ಬಂದಿಯನ್ನೂ ನೇಮಕ ಮಾಡಿದ್ದಾರೆ' ಎಂದು ಆರೋಪಿಸಿದರು.

ಅಖಿಲ ಕರ್ನಾಟಕ ಜೈನ ಮಹಿಳಾ ಒಕ್ಕೂಟದ ರಜತ ಮಹೋತ್ಸವ

‘ಜಾಗೃತರಾಗಿರುವ ಮಹಿಳೆಯರು’

ಪ್ರಜಾವಾಣಿ ವಾರ್ತೆ

ಉಜಿರೆ (ದಕ್ಷಿಣ ಕನ್ನಡ): ‘ಮಹಿಳೆಯರು ಬುದ್ಧಿವಂತರಾಗಿದ್ದು, ಸದಾ ಜಾಗೃತರಾಗಿರುತ್ತಾರೆ. ಅವರಲ್ಲಿ ಅದ್ಭುತ ಶಕ್ತಿ ಇದ್ದು, ಅವರು ತಮಗೆ ಸಿಗುವ ಎಲ್ಲ ಅವಕಾಶ, ಸೌಲಭ್ಯಗಳ ಸದುಪಯೋಗ ಪಡೆದು ಸ್ವಾವಲಂಬಿಗಳಾಗಿ ಅದ್ಭುತ ಸಾಧನೆ ಮಾಡುತ್ತಿದ್ದಾರೆ’ ಎಂದು ಧರ್ಮಸ್ಥಳದ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ಹೇಳಿದರು.

ಧರ್ಮಸ್ಥಳದಲ್ಲಿ ಗುರುವಾರ ನಡೆದ ಅಖಿಲ ಕರ್ನಾಟಕ ಜೈನ ಮಹಿಳಾ ಒಕ್ಕೂಟದ ರಜತ ಮಹೋತ್ಸವ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ‘ಮಹಿಳೆಯರಿಗೆ ಪುರುಷರಿಂದ ಆಶ್ರಯ ಬೇಕಾಗಿಲ್ಲ. ಸಕಾಲಿಕ ಪ್ರೋತ್ಸಾಹ, ಪ್ರೇರಣೆ ಬೇಕಾಗಿದೆ. ಕುಟುಂಬ ಮತ್ತು ಸಮಾಜದ ಸುಗಮ ನಿರ್ವಹಣೆಯಲ್ಲಿ ಮಹಿಳೆಯರು ಪ್ರಮುಖ ಪಾತ್ರ ವಹಿಸುತ್ತಾರೆ’ ಎಂದರು.

ಹೇಮಾವತಿ ವಿ.ಹೆಗ್ಗಡೆ ಅವರ ‘ಗೆಳತಿ’ ಕೃತಿಯನ್ನು ಬಿಡುಗಡೆ ಮಾಡಲಾಯಿತು.

ಧರ್ಮಸ್ಥಳದಲ್ಲಿ ಗುರುವಾರ ನಡೆದ ಅಖಿಲ ಕರ್ನಾಟಕ ಜೈನ ಮಹಿಳಾ ಒಕ್ಕೂಟದ ರಜತಮಹೋತ್ಸವವನ್ನು ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ಉದ್ಘಾಟಿಸಿದರು

ಅಖಿಲ ಕರ್ನಾಟಕ ಜೈನ ಮಹಿಳಾ ಒಕ್ಕೂಟದ ರಜತ ಸಂಚಿಕೆ ಬಿಡುಗಡೆ ಮಾಡಿದ ಮಕ್ಕಳ ಹೃದ್ರೋಗ ತಜ್ಞೆ ಡಾ. ವಿಜಯಲಕ್ಷ್ಮಿ ಬಾಳೇಕುಂದ್ರಿ, ಮಹಿಳೆಯರು ಚಿಂತೆಯನ್ನು ಬಿಟ್ಟು ಸದಾ ಚಿಂತನೆಯನ್ನು ಮಾಡುವ ಚಿಂತಾಮಣಿಗಳಾಗಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಅಖಿಲ ಕರ್ನಾಟಕ ಜೈನ ಮಹಿಳಾ ಒಕ್ಕೂಟದ ಗೌರವಾಧ್ಯಕ್ಷೆ ಹೇಮಾವತಿ ಹೆಗ್ಗಡೆ ಮಾತನಾಡಿ, ಮಹಿಳೆಯರಿಗೆ ಮಂದಿರಗಳು ಪಾಠಶಾಲೆಯಾದರೆ, ಸಮಾಜ ಪ್ರಯೋಗ ಶಾಲೆಯಾಗಬೇಕು ಎಂದು ಹೇಳಿದರು.

ಚಿತ್ರ ನಟಿ ಪದ್ಮಜಾ ರಾವ್ ಮಾತನಾಡಿ, ಎಲ್ಲ ಕ್ಷೇತ್ರದಲ್ಲೂ ಮಹಿಳೆಯರು ಸ್ವಾವಲಂಬಿಗಳಾದರೆ ಧೈರ್ಯ ಮತ್ತು ಆತ್ಮವಿಶ್ವಾಸ ಮೂಡಿಬರುತ್ತದೆ. ಮಹಿಳಾ ಸಬಲೀಕರಣವೂ ಆಗುತ್ತದೆ ಎಂದರು.

ಸಾಧಕರಿಗೆ ಸನ್ಮಾನ: ವಿವಿಧ ಕ್ಷೇತ್ರಗಳಲ್ಲಿ ಉನ್ನತ ಸಾಧನೆ ಮಾಡಿದ ಬೆಳಗಾವಿಯ ಸುಮನ್ ಪತ್ರಾವಳಿ, ಮೂಡುಬಿದಿರೆಯ ವೀಣಾ ಶೆಟ್ಟಿ, ಬೆಂಗಳೂರಿನ ಸುಶೀಮಾ ಯಶವಂತ್, ಛಾಯಾಗ್ರಾಹಕಿ ಹುಣಸೂರಿನ ಛಾಯಾ ಸುನಿಲ್, ಮೈಸೂರಿನ ಅನನ್ಯಾ ಜೈನ್ ಅವರನ್ನು ಗೌರವಿಸಲಾಯಿತು.

ಡಿ.ಸುರೇಂದ್ರ ಕುಮಾರ್, ಅನಿತಾ ಸುರೇಂದ್ರ ಕುಮಾರ್, ಡಿ.ಹರ್ಷೇಂದ್ರ ಕುಮಾರ್, ಸುಪ್ರಿಯಾ ಹರ್ಷೇಂದ್ರ ಕುಮಾರ್, ಶ್ರದ್ಧಾ ಅಮಿತ್ ಭಾಗವಹಿಸಿದ್ದರು. ಅಖಿಲ ಕರ್ನಾಟಕ ಜೈನ ಮಹಿಳಾ ಒಕ್ಕೂಟದ ಅಧ್ಯಕ್ಷೆ ಪದ್ಮಿನಿ ಪದ್ಮರಾಜ್ ಸ್ವಾಗತಿಸಿದರು. ಜಯಶ್ರೀ ವಂದಿಸಿದರು. ಕುಮುದಾ ನಾಗಭೂಷಣ್ ಕಾರ್ಯಕ್ರಮ ನಿರ್ವಹಿಸಿದರು.

‘ಅಧಿಕಾರಿಗಳ ತಪ್ಪಿಲ್ಲದಿದ್ದರೆ ಅಮಾನತು ವಾಪಸ್’

ಚನ್ನಗಿರಿ: ‘ಮಟ್ಕಾ ಆಡಿಸಿದ ಆರೋಪದಲ್ಲಿ ಕರೆತಂದ ವ್ಯಕ್ತಿಯ ಸಾವಿನ ಘಟನೆ ನಂತರ ಪೊಲೀಸ್ ಠಾಣೆ ಮೇಲೆ ನಡೆದ ದಾಳಿಯನ್ನು ನಿಯಂತ್ರಿಸುವಲ್ಲಿ ವಿಫಲವಾದ ಕಾರಣ ಗಡಿವೈಎಸ್‌ಪಿ ಸೇರಿ ಮೂವರನ್ನು ಅಮಾನತು ಮಾಡಲಾಗಿದೆ ಎಂದು ಗೃಹ ಸಚಿವ ಡಾ.ಜಿ. ಪರಮೇಶ್ವರ ಹೇಳಿದರು.

ಇಲ್ಲಿನ ಪೊಲೀಸ್ ಠಾಣೆಗೆ ಗುರುವಾರ ಭೇಟಿ ನೀಡಿ, ಅಧಿಕಾರಿಗಳೊಂದಿಗೆ ಚರ್ಚಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಆದಿಲ್ ಸಾವಿನ ಕುರಿತಂತೆ ವಿಧಿ ವಿಜ್ಞಾನ ಪ್ರಯೋಗಾಲಯದ (ಎಫ್‌ಎಸ್‌ಎಲ್) ವರದಿ ಇನ್ನೂ ಬಂದಿಲ್ಲ. ವರದಿ ಬಂದ ನಂತರ ಸತ್ಯಾಂಶ ಹೊರಬೀಳಲಿದೆ’ ಎಂದರು.

ಎಫ್‌ಎಸ್‌ಎಲ್ ವರದಿಯಲ್ಲಿ ಅಧಿಕಾರಿಗಳ ತಪ್ಪಿಲ್ಲ ಎಂದು ಗೊತ್ತಾದಲ್ಲಿ ಅಮಾನತು ಆದೇಶ ಹಿಂಪಡೆಯಲಾಗುವುದು ಎಂದ ಅವರು, ಸಿಐಡಿ ನಡೆಸುತ್ತಿರುವ ತನಿಖೆ ಪ್ರಗತಿಯಲ್ಲಿದೆ ಎಂದು ತಿಳಿಸಿದರು.

ಅಂಜಲಿ ಕೊಲೆ ಪ್ರಕರಣ: ಮೈಸೂರಿನಲ್ಲಿ ಸ್ಥಳ ಮಹಜರು

ಪ್ರಜಾವಾಣಿ ವಾರ್ತೆ

ಮೈಸೂರು: ಹುಬ್ಬಳ್ಳಿಯ ಅಂಜಲಿ ಅಂಬಿಗೇರ ಕೊಲೆ ಪ್ರಕರಣ ಕುರಿತ ಹೆಚ್ಚಿನ ಮಾಹಿತಿ ಸಂಗ್ರಹಣೆಗಾಗಿ ಸಿಐಡಿ ಅಧಿಕಾರಿಗಳು ಗುರುವಾರ ಆರೋಪಿ ಗಿರೀಶ ಸಾವಂತನನ್ನು ಮೈಸೂರಿಗೆ ಕರೆ ತಂದರು.

ಆರೋಪಿಯನ್ನು ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ಮಹಾರಾಜ ಹೋಟೆಲ್‌ಗೆ ಕರೆತಂದು ಮಹಜರು ನಡೆಸಿದರು. ಆತನ ಜೊತೆಗೆ ಕೆಲಸ ಮಾಡುತ್ತಿದ್ದವರೊಂದಿಗೆ ಹಲವು ಪ್ರಶ್ನೆಗಳನ್ನು ಕೇಳಿದರು. ಹೋಟೆಲ್‌ನಲ್ಲಿ ಆರೋಪಿಯ ವರ್ತನೆ ಹೇಗಿತ್ತು ಎಂಬ ಬಗ್ಗೆ ಮಾಹಿತಿ ಪಡೆದಿದ್ದಾರೆ ಎನ್ನಲಾಗಿದೆ.

‘ಆತ ನಾಲ್ಕು ತಿಂಗಳು ಸಪ್ಲಯರ್ ಆಗಿ ಕೆಲಸ ಮಾಡಿದ್ದ. ಕೊಲೆಯಾದ ಹಿಂದಿನ ದಿನ ₹5 ಸಾವಿರ ಮುಂಗಡ ಹಣ ಪಡೆದು ಸಂಜೆ ಸಮಾರು 4.30ಕ್ಕೆ ಯಾರಿಗೂ ಹೇಳದೆ ಹುಬ್ಬಳ್ಳಿಗೆ ಹೊರಟು ಹೋಗಿದ್ದ. ಪೊಲೀಸರ ವಿಚಾರಣೆ ಸಮಯದಲ್ಲಿ ಅಗತ್ಯ ಮಾಹಿತಿ ನೀಡಿದ್ದೇವೆ’ ಎಂದು ಹೋಟೆಲ್ ಮಾಲೀಕ ಗೋವರ್ಧನ್ ‘ಪ್ರಜಾವಾಣಿ’ಗೆ ತಿಳಿಸಿದರು.

ವಿಭಾ ಸಾಹಿತ್ಯ ಪ್ರಶಸ್ತಿಗೆ ಕಾವ್ಯ ಹಸ್ತಪ್ರತಿ ಆಹ್ವಾನ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಕವಯಿತ್ರಿ ವಿಭಾ ಅವರ ನೆನಪಿನಲ್ಲಿ ನೀಡಲಾಗುವ 2024ರ ವಿಭಾ ಸಾಹಿತ್ಯ ಪ್ರಶಸ್ತಿಗೆ ಕನ್ನಡದ ಕವಿ ಮತ್ತು ಕವಯತ್ರಿಯರಿಂದ 30ಕ್ಕೂ ಹೆಚ್ಚು ಮತ್ತು 50ರ ಒಳಗಿರುವ ಸ್ವರಚಿತ ಕವಿತೆಗಳ ಹಸ್ತಪ್ರತಿಗಳನ್ನು ಆಹ್ವಾನಿಸಲಾಗಿದೆ. ಅನುವಾದಿತ ಕವನಗಳು, ಚುಟುಕು ಮತ್ತು ಹನಿಗವನಗಳು ಬೇಡ.

ವಿಭಾ

ಪ್ರಶಸ್ತಿಯು ₹10 ಸಾವಿರ ನಗದು ಮತ್ತು ಪ್ರಶಸ್ತಿ ಫಲಕ ಒಳಗೊಂಡಿದೆ. ಯಾವುದೇ ಕಾರಣಕ್ಕೂ ಹಸ್ತಪ್ರತಿಯನ್ನು ಹಿಂದಿರುಗಿಸುವುದಿಲ್ಲ. ಇ-ಮೇಲ್ ಬದಲು ಡಿಟಿಪಿ ಮಾಡಿದ ಅಥವಾ ಕೈಯಲ್ಲಿ ಬರೆದ ಹಸ್ತಪ್ರತಿ ಕಳುಹಿಸಬೇಕು. ಹಸ್ತಪ್ರತಿ ಸಲ್ಲಿಕೆಗೆ ಜೂನ್ 30 ಕೊನೆಯ ದಿನ ಎಂದು ಪ್ರಕಟಣೆ ತಿಳಿಸಿದೆ.

ಹಸ್ತಪ್ರತಿ ಕಳುಹಿಸಬೇಕಾದ ವಿಳಾಸ: ಸುನಂದಾ, ಪ್ರಕಾಶ ಕಡಮೆ, ಸಂಚಾಲಕರು, ವಿಭಾ ಸಾಹಿತ್ಯ ಪ್ರಶಸ್ತಿ-2024, ನಂ. 90, ‘ನಾಗಸುಧೆ ಜಗಲಿ’, 6/ಬಿ ಕ್ರಾಸ್, ಕಾಳಿದಾಸನಗರ, ವಿದ್ಯಾನಗರ ವಿಸ್ತೀರ್ಣ, ಹುಬ್ಬಳ್ಳಿ–580031. ದೂರವಾಣಿ ಸಂಖ್ಯೆ: ದೂರವಾಣಿ; 9380613683 ಅಥವಾ 9845779387.

ಪಾವಗಡ ಕೆಪಿಟಿಸಿಎಲ್ ಸಿಬ್ಬಂದಿ ವಿಚಾರಣೆ

ಪ್ರಜಾವಾಣಿ ವಾರ್ತೆ

ಪಾವಗಡ: ಕೆಪಿಟಿಸಿಎಲ್ ಸಿಬ್ಬಂದಿ ಬಿಯರ್ ಬಾಟಲಿಯಿಂದ ಹೊಡೆದಾಡಿಕೊಂಡ ಪ್ರಕರಣಕ್ಕೆ ಸಂಬಂಧಿಸಿದಂತೆ ಮಧುಗಿರಿಯ ಕಾರ್ಯ ನಿರ್ವಾಹಕ ಎಂಜಿನಿಯರ್ ಕಚೇರಿಯಲ್ಲಿ ಗುರುವಾರ ಸಂಜೆ ನಾಲ್ವರು ಸಿಬ್ಬಂದಿಯ ವಿಚಾರಣೆ ನಡೆಸಲಾಯಿತು.

ಮೇ 23ರಂದು ಪಟ್ಟಣದ ಹೊರವಲಯದಲ್ಲಿ ನಡೆದ ಪಾರ್ಟಿಯಲ್ಲಿ ಜೂನಿಯರ್ ಎಂಜಿನಿಯರ್ ವರದರಾಜು ಮತ್ತು ಮೆಕ್ಯಾನಿಕ್ ಗ್ರೇಡ್ ಸಿಬ್ಬಂದಿ ನರಸಿಂಹಮೂರ್ತಿ ಬಿಯರ್ ಬಾಟಲಿಯಿಂದ ಹೊಡೆದಾಡಿಕೊಂಡಿದ್ದರು. ವಾರದ ಹಿಂದೆ ನಡೆದ ಘಟನೆಯ ವಿಡಿಯೊ ಬುಧವಾರ ಜಾಲತಾಣಗಳಲ್ಲಿ ಹರಿದಾಡಿತ್ತು.

ಘಟನೆಗೆ ಸಂಬಂಧಿಸಿದಂತೆ ಪಾರ್ಟಿಯಲ್ಲಿ ಭಾಗವಹಿಸಿದ್ದ ಎಲ್ಲ ನಾಲ್ವರು ಸಿಬ್ಬಂದಿಗೂ ಕಾರ್ಯನಿರ್ವಾಹಕ ಎಂಜಿನಿಯರ್ ಜಯದೇವಪ್ಪ ಕಾರಣ ಕೇಳಿ ನೋಟಿಸ್ ನೀಡಿದ್ದರು. ಹಿರಿಯ ಅಧಿಕಾರಿಗಳ ತುರ್ತು ನಿರ್ದೇಶನ ಹಿನ್ನೆಲೆಯಲ್ಲಿ ಗುರುವಾರವೇ ಮಧುಗಿರಿ ಕಚೇರಿಗೆ ಬಂದು ವಿಚಾರಣೆಗೆ ಹಾಜರಾಗುವಂತೆಯೂ ಸೂಚನೆ ನೀಡಿದ್ದರು.

ಎಲ್ಲ ನಾಲ್ವರು ಸಿಬ್ಬಂದಿ ಗುರುವಾರ ಸಂಜೆ ಮಧುಗಿರಿಯ ಕಚೇರಿಯಲ್ಲಿ ನಡೆದ ವಿಚಾರಣೆಗೆ ಹಾಜರಾಗಿ, ನೋಟಿಸ್‌ಗೆ ಉತ್ತರ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

‘ಘಟನೆಗೆ ಸಂಬಂಧಿಸಿದಂತೆ ಸಮಗ್ರ ವರದಿ ನೀಡುವಂತೆ ಹಿರಿಯ ಅಧಿಕಾರಿಗಳು ನಿರ್ದೇಶನ ನೀಡಿದ್ದಾರೆ. ಘಟನೆ ಕುರಿತು ಈಗಾಗಲೇ ಉನ್ನತ ಅಧಿಕಾರಿಗಳಿಗೆ ವರದಿ ನೀಡಲಾಗಿದೆ. ನಾಲ್ವರೂ ಕಚೇರಿಗೆ ಬಂದು ವಿಚಾರಣೆಗೆ ಹಾಜರಾಗಿ ನೋಟಿಸ್‌ಗೆ ಉತ್ತರ ಕೊಟ್ಟಿದ್ದಾರೆ. ಈ ಮಾಹಿತಿಯನ್ನು ಸೂಪರಿಂಟೆಂಡಿಂಗ್ ಎಂಜಿನಿಯರ್‌ಗೆ ನೀಡಲಾಗುವುದು. ಅವರು ಮುಂದಿನ ಕ್ರಮ ಜರುಗಿಸಲಿದ್ದಾರೆ’ ಎಂದು ಮಧುಗಿರಿಯ ಕೆಪಿಟಿಸಿಎಲ್ ಕಾರ್ಯನಿರ್ವಾಹಕ ಎಂಜಿನಿಯರ್ ಜಯದೇವಪ್ಪ ‘ಪ್ರಜಾವಾಣಿ’ಗೆ ತಿಳಿಸಿದರು.

Infosys®
Navigate your next

ಇನ್‌ಫೋಸಿಸ್ ಲಿಮಿಟೆಡ್

ಕಾರ್ಪೊರೇಟ್ ಗುರುತು ಸಂಖ್ಯೆ (ಸಿಐಎನ್): L85110KA1981PLC013115
ನೋಂದಾಯಿತ ಕಛೇರಿ: ಎಲೆಕ್ಟ್ರಾನಿಕ್ಸ್ ಸಿಟಿ, ಹೊಸೂರು ರಸ್ತೆ, ಬೆಂಗಳೂರು – 560 100
ದೂರವಾಣಿ: 91 80 2852 0261, ಫ್ಯಾಕ್ಸ್: 91 80 2852 0362
investors@infosys.com, www.infosys.com

43ನೇ ವಾರ್ಷಿಕ ಸರ್ವಸದಸ್ಯರ ಸಭೆ ವಿಡಿಯೋ ಕಾನ್ಫರೆನ್ಸ್ ಮೂಲಕ ನಡೆಸುವ ಬಗ್ಗೆ, ದಾಖಲಾತಿಯ ದಿನಾಂಕ, ಅಂತಿಮ ಮತ್ತು ವಿಶೇಷ ಲಾಭಾಂಶದ ಮಾಹಿತಿ ಸೂಚನೆ

1. ಕಂಪನಿಯ 43ನೇ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ವಿಡಿಯೋ ಕಾನ್ಫರೆನ್ಸ್ ಹಾಗೂ ಇತರೆ ದೃಶ್ಯಶ್ರಾವ್ಯ ಮಾಧ್ಯಮಗಳ ಮೂಲಕ ಬುಧವಾರ, ದಿನಾಂಕ ಜೂನ್ 26, 2024 ರಂದು ಸಂಜೆ ಭಾರತೀಯ ಕಾಲಮಾನ 4:00 ಗಂಟೆಗೆ ಸಾಮಾನ್ಯ ಸುತ್ತೋಲೆ ಸಂಖ್ಯೆ 09/2023, ದಿನಾಂಕ ಸೆಪ್ಟೆಂಬರ್ 25, 2023, ಇತರ ಅನ್ವಯವಾಗುವ ಎಲ್ಲ ಕಾನೂನುಗಳು ಹಾಗೂ ಭಾರತ ಸರ್ಕಾರದ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ಮತ್ತು SEBI ಹೊರಡಿಸಿರುವ ಸುತ್ತೋಲೆ ಸಂಖ್ಯೆ SEBI/HO/CFD/PoD-2/P/CIR/2023/167 ದಿನಾಂಕ ಅಕ್ಟೋಬರ್ 7, 2023 (ಇನ್ನು ಮುಂದೆ "ಸುತ್ತೋಲೆಗಳು" ಎಂದು ಉಲ್ಲೇಖಿಸಲಾಗುತ್ತದೆ) ಅನ್ವಯ ಸಭೆಯ ಸೂಚನೆಯಲ್ಲಿ ಹೇಳಲಾಗುವ ವ್ಯಾಪಾರ ವಹಿವಾಟುಗಳನ್ನು ನಿರ್ವಹಿಸಲಾಗುವುದು.
2. ಮೇಲಿನ ಸುತ್ತೋಲೆಗಳಿಗೆ ಅನುಸಾರವಾಗಿ ವಾರ್ಷಿಕ ಸರ್ವಸದಸ್ಯರ ಸಭೆಯ ಸೂಚನೆಗಳ ವಿದ್ಯುನ್ಮಾನ ಪ್ರತಿಗಳನ್ನು ಮತ್ತು 2023-24ರ ಹಣಕಾಸು ವರ್ಷದ ಸಂಯೋಜಿತ ವಾರ್ಷಿಕ ವರದಿಯನ್ನು ಕಂಪನಿ ಅಥವಾ ಡೆಪಾಸಿಟರಿ ಪಾರ್ಟಿಸಿಪೆಂಟ್‌ನಲ್ಲಿ ತಮ್ಮ ವಿದ್ಯುನ್ಮಾನ ಅಂಚೆಯನ್ನು (ಇ–ಮೇಲ್) ಯಾರು ನೋಂದಾಯಿಸಿದ್ದಾರೋ ಅಂತಹ ಷೇರುದಾರರ ವಿದ್ಯುನ್ಮಾನ ಅಂಚೆಗೆ ಕಳಿಸಲಾಗುವುದು. ಕಂಪನಿಯ ಷೇರುಗಳನ್ನು ಡೀಮೆಟೀರಲೈಸ್ಡ್ ರೂಪದಲ್ಲಿ ಹೊಂದಿರುವ ಷೇರುದಾರರು ಅವರ ವಿದ್ಯುನ್ಮಾನ ಅಂಚೆ ಹಾಗೂ ದೂರವಾಣಿ ಸಂಖ್ಯೆಯನ್ನು ತಮ್ಮ ಡೆಪಾಸಿಟರಿ ಪಾರ್ಟಿಸಿಪೆಂಟ್‌ಗಳ ಮೂಲಕ ನೋಂದಾಯಿಸಲು ಹಾಗೂ ಭೌತಿಕರೂಪದಲ್ಲಿ ಷೇರುಗಳನ್ನು ಹೊಂದಿರುವ ಷೇರುದಾರರು ಆ ವಿವರಗಳನ್ನು ಕಂಪನಿಯ ರಿಜಿಸ್ಟ್ರಾರ್ ಹಾಗೂ ಷೇರು ವರ್ಗಾವಣೆ ಏಜೆಂಟರಾದ ("ಆರ್‌ಟಿಎ") ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್ ಇವರಿಗೆ ವಿದ್ಯುನ್ಮಾನ ಅಂಚೆ einward.ris@kfintech.com ಮೂಲಕ ತಿಳಿಸಲು ಕೋರಲಾಗಿದೆ. ಕಂಪನಿಯ 43ನೇ ವಾರ್ಷಿಕ ಸರ್ವಸದಸ್ಯರ ಸಭೆಯ ಸೂಚನೆ ಮತ್ತು 2023-24ನೇ ಸಾಲಿನ ಸಂಯೋಜಿತ ಹಣಕಾಸು ವರದಿಯನ್ನು ಕಂಪನಿಯ ಜಾಲತಾಣ www.infosys.com, ಸ್ಟಾಕ್ ಎಕ್ಸ್‌ಚೇಂಜ್ ಜಾಲತಾಣ ಮತ್ತು ಎನ್‌ಎಸ್‌ಡಿಎಲ್‌ನ ಜಾಲತಾಣವಾದ https://www.evoting.nsdl.com ಇಲ್ಲಿಯೂ ಒದಗಿಸಲಾಗುವುದು.
3. ತಮ್ಮ ವಿದ್ಯುನ್ಮಾನ ಅಂಚೆಯನ್ನು ನೋಂದಾಯಿಸದ ಷೇರುದಾರರಿಗೆ ಸರ್ವಸದಸ್ಯರ ಸಭೆಯ ನೋಟಿಸಿನಲ್ಲಿ ತಿಳಿಸಿರುವಂತೆ ಹೇಳಲಾಗುವ ವ್ಯಾಪಾರ ವಹಿವಾಟುಗಳನ್ನು ನಿರ್ವಹಿಸುವ ಕುರಿತಾಗಿ ವಿದ್ಯುನ್ಮಾನ ಮತದಾನ ವ್ಯವಸ್ಥೆಯ ಮೂಲಕ ಸದರಿ ಇ–ವೋಟಿಂಗ್ ಮಾಡಲು ಅವಕಾಶವಿರುತ್ತದೆ. ಕಂಪನಿಯ ಷೇರುಗಳನ್ನು ಡಿಮೆಟೀರಿಲೈಸ್ಡ್ ಮತ್ತು ಭೌತಿಕ ರೂಪದಲ್ಲಿ ಹೊಂದಿರುವ ಷೇರುದಾರರಿಗೆ ಮತ ಚಲಾಯಿಸುವ ವಿಧಾನವನ್ನೂ ಸಹ ಸರ್ವಸದಸ್ಯರ ಸಭೆಯ ಸೂಚನೆಗಳಲ್ಲಿ ಒದಗಿಸಲಾಗಿರುವುದು.
4. ದಿನಾಂಕ ಏಪ್ರಿಲ್ 18, 2024ರಂದು ನಡೆದ ನಿರ್ದೇಶಕರ ಮಂಡಳಿಯ ಸಭೆಯಲ್ಲಿ ಮಾರ್ಚ್ 31, 2024ಕ್ಕೆ ಕೊನೆಗೊಂಡ ಹಣಕಾಸು ವರ್ಷದಲ್ಲಿ ಅಂತಿಮ ಲಾಭಾಂಶವನ್ನು ಪ್ರತಿ ಷೇರಿಗೆ ₹20/– ಮತ್ತು ಹೆಚ್ಚುವರಿಯಾಗಿ ₹8/– ವಿಶೇಷ ಲಾಭಾಂಶವನ್ನು ಶಿಫಾರಸು ಮಾಡಿದ್ದನ್ನು ಷೇರುದಾರರು ಗಮನಿಸಬಹುದಾಗಿದೆ. ಅಂತಿಮ ಮತ್ತು ವಿಶೇಷ ಲಾಭಾಂಶವನ್ನು ದಾಖಲಾತಿ ದಿನವು **ಮೇ 31, 2024** ಆಗಿರುತ್ತದೆ. ಬರಲಿರುವ ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿ ಈ ಅಂತಿಮ ಲಾಭಾಂಶವು ಮತ್ತು ವಿಶೇಷ ಲಾಭಾಂಶವನ್ನು ಒಪ್ಪಿಗೆಯಾದ ನಂತರ **ಜುಲೈ 1, 2024**ರಂದು ವಿವಿಧ ಮಾರ್ಗಗಳಲ್ಲಿ ವರ್ಗಾಯಿಸಲಾಗುವುದು. ಲಾಭಾಂಶ ಸ್ವೀಕರಿಸುವುದು ತಡವಾಗುವುದನ್ನು ತಪ್ಪಿಸಲು ಷೇರುದಾರರು, ಲಾಭಾಂಶವನ್ನು ನೇರವಾಗಿ ತಮ್ಮ ಬ್ಯಾಂಕ್ ಖಾತೆಯಲ್ಲಿ ಪಡೆದುಕೊಳ್ಳಲು ತಮ್ಮ ಕೆವೈಸಿಯನ್ನು ತಮ್ಮ ಡಿಪಾಸಿಟರಿಗಳಲ್ಲಿ (ಎಲ್ಲಿ ಷೇರುಗಳನ್ನು ಡಿಮೆಟೀರಿಲೈಸ್ಡ್ ರೂಪದಲ್ಲಿ ಹೊಂದಿದ್ದಾರೋ ಅಲ್ಲಿ) ಮತ್ತು ಕಂಪನಿಯ ರಿಜಿಸ್ಟ್ರಾರ್ ಹಾಗೂ ವರ್ಗಾವಣೆ ಏಜೆಂಟ್ (ಆರ್‌ಟಿಎ) ಬಳಿ (ಷೇರುಗಳನ್ನು ಭೌತಿಕ ರೂಪದಲ್ಲಿ ಹೊಂದಿರುವವರು) ನೋಂದಾಯಿಸಲು ಕೋರಲಾಗಿದೆ.
5. ಯಾವ ಷೇರುದಾರರು ತಮ್ಮ ಷೇರುಗಳನ್ನು ವಿದ್ಯುನ್ಮಾನ ಮಾಧ್ಯಮದಲ್ಲಿ ಹೊಂದಿದ್ದಾರೆಯೊ ಅವರು ತಮ್ಮ ವಿಳಾಸ ಹಾಗೂ ಬ್ಯಾಂಕ್ ಖಾತೆಯ ವಿವರಗಳ ಬದಲಾವಣೆಯಾದ ಸೂಚನೆಗಳನ್ನು ಆಯಾ ಡಿಪಾಸಿಟರಿ ಪಾರ್ಟಿಸಿಪೆಂಟ್‌ಗಳಿಗೆ ತಲುಪಿಸಲು ಕೋರಲಾಗಿದೆ. ಷೇರುಗಳನ್ನು ಭೌತಿಕ ರೂಪದಲ್ಲಿ ಹೊಂದಿರುವ ಷೇರುದಾರರು, ಲಾಭಾಂಶವನ್ನು ಸಕಾಲದಲ್ಲಿ ಪಡೆದುಕೊಳ್ಳಲು ಹಾಗೂ ಸುತ್ತೋಲೆಗಳಿಗೆ ಅನುಗುಣವಾಗಿ ವಿದ್ಯುನ್ಮಾನ ಠೇವಣಿ ವ್ಯವಸ್ಥೆಯನ್ನು ಆಯ್ಕೆ ಮಾಡಿಕೊಳ್ಳುವಂತೆ ಕೊರಲಾಗಿದೆ. ನಾವು ಷೇರುದಾರರನ್ನು ವಿದ್ಯುನ್ಮಾನ ಠೇವಣಿ ವ್ಯವಸ್ಥೆಯನ್ನು ಉಪಯೋಗಿಸಿಕೊಳ್ಳಲು ಉತ್ತೇಜಿಸುತ್ತೇವೆ.
6. ತಮ್ಮ ಇಮೇಲ್ ವಿಳಾಸ/ಬ್ಯಾಂಕ್ ಖಾತೆಯ ಆದೇಶವನ್ನು ನೋಂದಾಯಿಸಲು ಬಯಸುವ ಷೇರುದಾರರು ಕೆಳಗಿನ ಸೂಚನೆಗಳನ್ನು ಅನುಸರಿಸಬಹುದು–

ಡಿಮೆಟಿರಿಯಲೈಸ್ಡ್ ಹೋಲ್ಡಿಂಗ್	ನಿಮ್ಮ ಡಿಪಾಸಿಟರಿ ಪಾರ್ಟಿಸಿಪೆಂಟ್ ಸಲಹೆ ನೀಡಿದ ಪ್ರಕ್ರಿಯೆಯ ಪ್ರಕಾರ, ನಿಮ್ಮ ಡಿಮ್ಯಾಟ್ ಖಾತೆಯಲ್ಲಿ ವಿವರಗಳನ್ನು ನೋಂದಾಯಿಸಿ/ನವೀಕರಿಸಿ.
ಭೌತಿಕ ಹಿಡುವಳಿ	einward.ris@kfintech.com ನಲ್ಲಿ ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್, ಕಂಪನಿಯ ರಿಜಿಸ್ಟ್ರಾರ್ ಹಾಗೂ ವರ್ಗಾವಣೆ ಏಜೆಂಟ್ (ಆರ್‌ಟಿಎ) ಗಳೊಂದಿಗೆ ನಿಗದಿತ ನಮೂನೆ ISR-1 ಮತ್ತು ಇತರ ಸಂಬಂಧಿತ ನಮೂನೆಗಳಲ್ಲಿ ವಿವರಗಳನ್ನು ನೋಂದಾಯಿಸಿ/ನವೀಕರಿಸಿ. ಷೇರುದಾರರು ನಿಗದಿತ ನಮೂನೆಗಳನ್ನು ಕಂಪನಿಯ ಜಾಲತಾಣದಿಂದ https://www.infosys.com/investors/shareholder-services/investors-service.html ನಲ್ಲಿ ಡೌನ್‌ಲೋಡ್ ಮಾಡಬಹುದು. ಷೇರುದಾರರು ಕಂಪನಿಯ ಜಾಲತಾಣದಿಂದ https://www.infosys.com/investors/shareholder-services/faqs.html ನಲ್ಲಿ ಸಾಮಾನ್ಯವಾಗಿ ಕೇಳಲಾಗುವ ಪ್ರಶ್ನೆಗಳನ್ನು (FAQ) ಉಲ್ಲೇಖಿಸಬಹುದು.

7. ಹಣಕಾಸು ಕಾಯಿದೆ 2020ರಂತೆ ತಿದ್ದುಪಡಿಯಾದ ಆದಾಯ ತೆರಿಗೆ ಕಾಯಿದೆ, 1961ರ (ಐಟಿ ಕಾಯಿದೆ) ಅನ್ವಯ ಎಪ್ರಿಲ್ 1, 2020ರ ನಂತರ ಕಂಪನಿ ನೀಡಿದ ಅಥವಾ ವಿತರಿಸಲಾದ ಲಾಭಾಂಶಕ್ಕೆ ಷೇರುದಾರರು ತೆರಿಗೆ ಪಾವತಿಸಬೇಕಾಗುತ್ತದೆ. ಆದ್ದರಿಂದ ಕಂಪನಿಯು ಅಂತಿಮ ಮತ್ತು ವಿಶೇಷ ಲಾಭಾಂಶವನ್ನು ಪಾವತಿಸುವಾಗ ಮೂಲದಲ್ಲಿ ತೆರಿಗೆಯನ್ನು ಕಡಿತಗೊಳಿಸಲಾಗುತ್ತದೆ. ಹೀಗೆ ಮೂಲದಲ್ಲಿ ತೆರಿಗೆಯನ್ನು ಹಿಡಿಯುವ ದರವನ್ನು ನಿಷ್ಕರ್ಷಿಸಲು ಅನುವಾಗುವಂತೆ ಕೆಳಗೆ ಸೂಚಿಸಲಾಗಿರುವ ಮೂಲದಾಖಲೆಗಳನ್ನು ಐಟಿ ಕಾಯಿದೆ ಅನುಸಾರ ಸಲ್ಲಿಸಲು ಕೋರಲಾಗಿದೆ.

ನಿವಾಸಿ ಷೇರುದಾರರಿಗೆ, ಆದಾಯ ತೆರಿಗೆ ಕಾಯಿದೆಯ 1961ರ ಪರಿಚ್ಛೇದ 194ರ ಅನ್ವಯ ಈ ಕೆಳಕಂಡಂತೆ ಕಡಿತಗೊಳಿಸಲಾಗುವುದು.

ಅಧಿಕೃತವಾದ ಪ್ಯಾನ್ ಸಂಖ್ಯೆ ಹೊಂದಿರುವ ಷೇರುದಾರರಿಗೆ	10%* ಅಥವಾ ಭಾರತ ಸರ್ಕಾರದ ಅಧಿಸೂಚನೆಯಂತೆ
ಅಧಿಕೃತವಾದ ಪ್ಯಾನ್/ಪ್ಯಾನ್ ಸಂಖ್ಯೆ ಹೊಂದಿರದ ಷೇರುದಾರರಿಗೆ	20% ಅಥವಾ ಭಾರತ ಸರ್ಕಾರದ ಅಧಿಸೂಚನೆಯಂತೆ

* ಹಣಕಾಸು ಕಾಯಿದೆ, 2021ರ ಪ್ರಕಾರ, ಸೆಕ್ಷನ್206AB ಅನ್ನು ಜುಲೈ 1, 2021 ರಿಂದ ಜಾರಿಗೆ ತರಲಾಗಿದೆ. ಮೇಲಿನ ವಿಭಾಗದ ನಿಬಂಧನೆಗಳ ಅಡಿಯಲ್ಲಿ ವ್ಯಾಖ್ಯಾನಿಸಿದಂತೆ 'ನಿರ್ದಿಷ್ಟ ವ್ಯಕ್ತಿ' ಎಂದು ವರ್ಗೀಕರಿಸಲಾದ ಷೇರುದಾರರಿಗೆ ಮಾಡಿದ ಪಾವತಿಗೆ ಹೆಚ್ಚಿನ ತೆರಿಗೆ ದರ (ನಿರ್ದಿಷ್ಟಪಡಿಸಿದ ದರಕ್ಕಿಂತ ಎರಡು ಪಟ್ಟು) ಅನ್ವಯಿಸುತ್ತದೆ.

* ಆದಾಯ ತೆರಿಗೆ ಕಾಯಿದೆ ಪರಿಚ್ಛೇದ 139ಎಎ ಅನ್ವಯ ಪ್ಯಾನ್ ಸಂಖ್ಯೆ ಹೊಂದಿರುವ ಹಾಗೂ ಆಧಾರ್ ಹೊಂದಲು ಅರ್ಹನಾಗಿರುವ ವ್ಯಕ್ತಿಯು ತನ್ನ ಪ್ಯಾನ್ ಅನ್ನು ಆಧಾರ್‌ನೊಂದಿಗೆ ಜೋಡಿಸಬೇಕಾಗಿರುತ್ತದೆ. ಹಾಗೆ ಮಾಡದ ಸಂದರ್ಭಗಳಲ್ಲಿ ನೀಡಲಾದ ಪ್ಯಾನ್ ಅನರ್ಹ ಇಲ್ಲವೇ ನಿಷ್ಕ್ರಿಯ ಎಂದಾಗುತ್ತದೆ ಹಾಗೂ ಅದಕ್ಕೆ ಸಂಬಂಧಿಸಿದಂತೆ ಆದಾಯ ತೆರಿಗೆ ಕಾಯಿದೆಯಲ್ಲಿ ಹೇಳಲಾದ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ ಮತ್ತು ಆದಾಯ ತೆರಿಗೆ ಕಾಯಿದೆಯಲ್ಲಿ ಹೇಳಿರುವಂತೆ ತೆರಿಗೆಯನ್ನು ಹೆಚ್ಚುವರಿ ದರದಲ್ಲಿ ಕಡಿತಗೊಳಿಸಲಾಗುತ್ತದೆ.

ಆದಾಗ್ಯೂ, ಲಾಭಾಂಶ ಪಾವತಿಸಬೇಕಾದ ವ್ಯಕ್ತಿಗೆ ಆರ್ಥಿಕ ವರ್ಷ 2023-24ರಲ್ಲಿ ಲಾಭಾಂಶವು ₹5,000 ಮೀರದಿದ್ದಲ್ಲಿ ಹಾಗೂ ಷೇರುದಾರರು ನಮೂನೆ 15ಜಿ/ನಮೂನೆ 15ಎಚ್ (60ವರ್ಷ ವಯಸ್ಸನ್ನು ಮೀರಿದ ವ್ಯಕ್ತಿಗೆ ಅನ್ವಯಿಸುವಂತೆ) ಒದಗಿಸಿದವರಿಗೆ ಕಾಯಿದೆಯ ನಿಬಂಧನೆಗಳಿಗೆ ಒಳಪಟ್ಟಂತೆ ಯಾವುದೇ ತೆರಿಗೆಯನ್ನು ಕಡಿತಗೊಳಿಸಲಾಗುವುದಿಲ್ಲ. ನಿವಾಸಿ ಷೇರುದಾರರು ಐಟಿ ಕಾಯಿದೆಯಲ್ಲಿ ಹೇಳಲಾದ ಇತರೆ ಯಾವುದೇ ದಸ್ತಾವೇಜನ್ನು ಒದಗಿಸಿ ಕಡಿಮೆ ದರದ ತೆರಿಗೆ ಕಡಿತ ಅಥವಾ ಪೂರ್ಣ ತೆರಿಗೆ ಕಡಿತವನ್ನು ಪಡೆಯಬಹುದಾಗಿರುತ್ತದೆ. ನಮೂನೆ 15ಜಿ/ನಮೂನೆ 15ಎಚ್ ಅಥವಾ ಮೇಲೆ ಹೇಳಿದ ಇತರೆ ದಸ್ತಾವೇಜನ್ನು ಒದಗಿಸುವ ಷೇರುದಾರಿಗೆ ಪ್ಯಾನ್ ಸಂಖ್ಯೆ ಒದಗಿಸುವುದು ಕಡ್ಡಾಯವಾಗಿರುತ್ತದೆ.

ಅನಿವಾಸಿ ಷೇರುದಾರರಿಗೆ, ಪರಿಚ್ಛೇದ 195 ಹಾಗೂ ಐಟಿ ಕಾಯಿದೆಯ ಅನ್ವಯವಾಗುವ ಇತರೆ ಪರಿಚ್ಛೇದಗಳ ಅನುಸಾರ ತೆರಿಗೆಗಳನ್ನು, ಚಾಲ್ತಿಯಲ್ಲಿರುವ ದರದಲ್ಲಿ ತಡೆಹಿಡಿಯಬೇಕಾಗಿರುತ್ತದೆ. ಈ ತೆರಿಗೆಯನ್ನು ತಡೆಹಿಡಿಯುವ ದರವು ಶೇ 20** (ಜೊತೆಗೆ ಅನ್ವಯವಾಗುವ ಸರ್‌ಚಾರ್ಜ್ ಮತ್ತು ಸೆಸ್) ಅಥವಾ ಲಾಭಾಂಶದ ಮೊತ್ತದ ಮೇಲೆ ಭಾರತ ಸರ್ಕಾರ ಸೂಚಿಸಿರುವಂತೆ ಆಗಿರುತ್ತದೆ. ಆದರೂ, ಐಟಿ ಕಾಯಿದೆಯ ಪರಿಚ್ಛೇದ 90ರ ಪ್ರಕಾರ, ಅನಿವಾಸಿ ಷೇರುದಾರರು, ಬಹುಪಕ್ಷೀಯ ಒಪ್ಪಂದದಿಂದ (ಎಂಎಲ್‌ಐ) ಪರಿಗಣಿಸಲಾದ ದ್ವಿತೆರಿಗೆ ಪ್ರತಿಬಂಧಕ ಒಪ್ಪಂದವನ್ನು (ಡಿಟಿಎಎ) ಆಯ್ಕೆ ಮಾಡಿಕೊಂಡು ಭಾರತದ ಮತ್ತು ಷೇರುದಾರರು ವಾಸವಾಗಿರುವ ದೇಶದ ತೆರಿಗೆ ಇವುಗಳಲ್ಲಿ ಅವರಿಗೆ ಯಾವುದು ಹೆಚ್ಚು ಲಾಭಕರವೋ ಅದನ್ನು ಅನುಸರಿಸಲು ಅವಕಾಶವಿದೆ. ಇದಕ್ಕಾಗಿ, ಅಂದರೆ, ಡಿಟಿಎಎ ಸೌಲಭ್ಯವನ್ನು ಬಳಸಿಕೊಳ್ಳಲು, ಅನಿವಾಸಿ ಷೇರುದಾರರು ಈ ಕೆಳಕಂಡ ವಿವರಗಳನ್ನು ನೀಡಬೇಕಾಗುತ್ತದೆ:

- ಭಾರತದ ಆದಾಯ ತೆರಿಗೆ ಇಲಾಖೆಯು ನೀಡಿದ, ಷೇರುದಾರರಿಂದ ಅನುಪ್ರಮಾಣಿತ ಪ್ಯಾನ್ ಕಾರ್ಡಿನ ಪ್ರತಿ ಅಥವಾ ಆದಾಯ ತೆರಿಗೆ ನಿಯಮಾವಳಿ 1962ರ ನಿಯಮ 37ಬಿಸಿರ ಅನ್ವಯ ವಿವರಗಳು.
- ಆರ್ಥಿಕ ವರ್ಷ 2023-24ಕ್ಕೆ ಅನುಸಾರವಾದ ವಾಸವಿರುವ ದೇಶದ ಕಂದಾಯ/ತೆರಿಗೆ ಅಧಿಕಾರಿಗಳು ನೀಡಿರುವ, ಷೇರುದಾರರಿಂದ ಅನುಪ್ರಮಾಣಿತ ಟ್ಯಾಕ್ಸ್ ರೆಸಿಡೆನ್ಸಿ ಪ್ರಮಾಣಪತ್ರದ ಪ್ರತಿ.
- ಸೆಂಟ್ರಲ್ ಬೋರ್ಡ್ ಆಫ್ ಡೈರೆಕ್ಟ್ ಟ್ಯಾಕ್ಸ್ ದಿನಾಂಕ ಜುಲೈ 16, 2022 ರಂದು ಹೊರಡಿಸಿದ ಅಧಿಸೂಚನೆ ಸಂಖ್ಯೆ 03/2022 ಅನ್ವಯ ನೀಡಲಾದ ವಿದ್ಯುನ್ಮಾನ ನಮೂನೆ 10ಎಫ್ [ಅಧಿಸೂಚನೆಯನ್ನು notification-no-3-2022-systems.pdf (incometaxindia.gov.in)ಯಲ್ಲಿ ನೋಡಬಹುದು. ಅನ್ನು ವಿದ್ಯುನ್ಮಾನ ರೂಪದಲ್ಲಿ ಇ–ಫೈಲಿಂಗ್ ಜಾಲತಾಣವಾದ https://www.incometax.gov.in/iec/foportal ಇಂದ ಪಡೆದುಕೊಳ್ಳಬಹುದಾಗಿರುತ್ತದೆ.
- ಅನಿವಾಸಿಯು ತನಗೆ ಅನ್ವಯವಾಗುವ ತೆರಿಗೆ ಒಪ್ಪಂದದ ಅನುಸಾರವಿರುವ ಭಾರತದಲ್ಲಿ ಶಾಶ್ವತವಾಗಿ ನೆಲೆಯೂರಿರದ ಸ್ವಘೋಷಣಾ ಹೇಳಿಕೆ.
- ಅನಿವಾಸಿ ಷೇರುದಾರನಿಂದ ಲಾಭದಾಯಕ ಮಾಲಿಕತ್ವದ ಸ್ವಘೋಷಣೆ.
- ಐಟಿ ಕಾಯಿದೆಯಲ್ಲಿ ಕಡಿಮೆ ತೆರಿಗೆ ತಡೆಹಿಡಿಯುವಂತೆ ಇರುವ ಕಾನೂನಿನಲ್ಲಿ ಹೇಳಲಾದ ಯಾವುದೇ ಇತರ ದಸ್ತಾವೇಜು, ಅನ್ವಯವಾಗುವುದಾದಲ್ಲಿ, ಸ್ವಅನುಪ್ರಮಾಣಿತ ಪ್ರತಿಯನ್ನು ಒದಗಿಸತಕ್ಕದ್ದು.

ವಿದೇಶಿ ಸಾಂಸ್ಥಿಕ ಅಥವಾ ಪೋರ್ಟ್‌ಫೋಲಿಯೋ ವಿನಿಯೋಜಕರಾಗಿದ್ದಲ್ಲಿ ತೆರಿಗೆಯು ಆದಾಯ ತೆರಿಗೆ ಕಾಯಿದೆಯ ಪರಿಚ್ಛೇದ 196ಡಿ ಅನ್ವಯ ಶೇ 20**ರಂತೆ (ಅನ್ವಯವಾಗುವ ಸೆಸ್ ಹಾಗೂ ಸರ್‌ಚಾರ್ಜುಗಳೊಂದಿಗೆ) ಅಥವಾ ಎಂಎಲ್‌ಐ ಪರಿಷ್ಕೃತವಾದ ಡಿಟಿಎಎನಲ್ಲಿ ಒದಗಿಸಲಾದಂತೆ ಯಾವುದು ಹೆಚ್ಚು ಪ್ರಯೋಜನಕಾರಿಯೊ ಅದನ್ನು ಮೇಲ್ಕಾಣಿಸಿದ ದಸ್ತಾವೇಜುಗಳನ್ನು ಸಲ್ಲಿಸಿದ್ದಲ್ಲಿ ಕಡಿತಗೊಳಿಸಲಾಗುವುದು.

** ಹಣಕಾಸು ಕಾಯಿದೆ, 2021 ರ ಪ್ರಕಾರ, ಸೆಕ್ಷನ್ 206AB ಅನ್ನು ಜುಲೈ 1, 2021 ರಿಂದ ಜಾರಿಗೆ ತರಲಾಗಿದೆ, ಇದರಲ್ಲಿ 'ನಿರ್ದಿಷ್ಟ ವ್ಯಕ್ತಿ' ಎಂದು ವರ್ಗೀಕರಿಸಲಾದ ಷೇರುದಾರರಿಗೆ ಮಾಡಿದ ಪಾವತಿಗೆ ಹೆಚ್ಚಿನ ತೆರಿಗೆ (ನಿರ್ದಿಷ್ಟಪಡಿಸಿದ ದರಕ್ಕಿಂತ ಎರಡು ಪಟ್ಟು) ಅನ್ವಯಿಸುತ್ತದೆ. ಇದನ್ನು ಮೇಲಿನ ವಿಭಾಗದ ನಿಬಂಧನೆಗಳ ಅಡಿಯಲ್ಲಿ ವ್ಯಾಖ್ಯಾನಿಸಲಾಗಿದೆ. ಆದಾಗ್ಯೂ, ಅನಿವಾಸಿ ಷೇರುದಾರರು ಅಥವಾ ಅನಿವಾಸಿ ವಿದೇಶಿ ಬಂಡವಾಳ ಹೂಡಿಕೆದಾರ (ಎಫ್‌ಪಿಐ) / ವಿದೇಶಿ ಸಾಂಸ್ಥಿಕ ಹೂಡಿಕೆದಾರ (ಎಫ್‌ಐಐ), ಅಂತಹ ಅನಿವಾಸಿಗಳು ಭಾರತದಲ್ಲಿ ಖಾಯಂ ಸ್ಥಾಪನೆ ಆಗಿರದಿದ್ದರೆ, ಸೆಕ್ಷನ್ 206ಎಬಿ ಯಲ್ಲಿ ಉಲ್ಲೇಖಿಸಿರುವ ಹೆಚ್ಚಿನ ತೆರಿಗೆ ದರ ಅನ್ವಯಿಸುವುದಿಲ್ಲ.

ಮೇಲ್ಕಾಣಿಸಿದ ದಸ್ತಾವೇಜುಗಳನ್ನು ಷೇರುದಾರರ ಪೋರ್ಟಲ್ https://www.infosys.com/investors/shareholder-services/dividend-tax.html ಗೆ ಜೂನ್ 07, 2024 ದಿನಾಂಕದ ಒಳಗೆ ಸಲ್ಲಿಸಬೇಕಾಗಿರುತ್ತದೆ. ಈ ನಿಟ್ಟಿನಲ್ಲಿ ಹೆಚ್ಚಿನ ಸೂಚನೆಗಳು ಮತ್ತು ಮಾಹಿತಿಗಾಗಿ https://www.infosys.com/investors/shareholder-services/dividend-tax.html ಈ ಜಾಲತಾಣವನ್ನು ಸಂದರ್ಶಿಸಲು ಕೋರಲಾಗಿದೆ. ದಿನಾಂಕ ಜೂನ್ 07, 2024ರ ನಂತರ ತೆರಿಗೆ ತಡೆಹಿಡಿಯುವ ವಿಷಯವಾಗಿ ಯಾವುದೇ ಸಂವಹನ/ಸಂದೇಶಗಳನ್ನು ಸ್ವೀಕರಿಸಲಾಗುವುದಿಲ್ಲ.

ಈ ವಿಷಯದ ಕುರಿತು ಯಾವುದೇ ಸ್ಪಷ್ಟೀಕರಣಕ್ಕಾಗಿ ಷೇರುದಾರರು dividend.tax@infosys.com ಗೆ ಬರೆಯಬಹುದು.

ತೆರಿಗೆ ಕಡಿತಗೊಳಿಸಲಾದ ಪ್ರಮಾಣಪತ್ರಗಳು, ಯಾವುದಾದರೂ ಇದ್ದರೆ, ಷೇರುದಾರರ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಬಹುದು. ಷೇರುದಾರರು ತಮ್ಮ ತೆರಿಗೆ ಕ್ರೆಡಿಟ್ ಅನ್ನು https://www.incometax.gov.in/iec/foportal ನಲ್ಲಿ ಇ–ಫೈಲಿಂಗ್ ಖಾತೆಯಿಂದ ಫಾರ್ಮ್ 26AS ನಲ್ಲಿ ಅಥವಾ https://www.tdscpc.gov ನಲ್ಲಿ "View Your Tax Credit" ಪರಿಶೀಲಿಸಬಹುದು.

8. 43ನೇ ವಾರ್ಷಿಕ ಸರ್ವಸದಸ್ಯರ ಸಭೆಯ ಸೂಚನೆಯನ್ನು ಷೇರುದಾರರಿಗೆ ಅವರ ನೋಂದಾಯಿತ ವಿದ್ಯುನ್ಮಾನ ಅಂಚೆಗೆ ಅನ್ವಯವಾಗುವ ಕಾನೂನುಗಳ ಅನುಸಾರವಾಗಿ ಕಳಿಸಲಾಗುವುದು.

ಇನ್‌ಫೋಸಿಸ್ ಲಿಮಿಟೆಡ್ ಪರವಾಗಿ
ಸಹಿ/–
ಎ.ಜಿ.ಎಸ್. ಮಣಿಕಂಠ
ಕಂಪನಿ ಕಾರ್ಯದರ್ಶಿ

ಬೆಂಗಳೂರು, ಭಾರತ
ಮೇ 30, 2024

ಬಿಬಿಎಂಪಿ: ವಿಹಾರ, ಕಾರಂಜಿಗಳ ತಾಣವಾಗಬೇಕಿದ್ದ 25 ಸ್ಥಳಗಳು ಭಣಭಣ

ಬಿಲ್ ವಿಳಂಬ: ಜಂಕ್ಷನ್ ಅಭಿವೃದ್ಧಿ ಕುಂಠಿತ

• ಆರ್. ಮಂಜುನಾಥ್

ಬೆಂಗಳೂರು: ಕಳಾಹೀನಗೊಂಡಿದ್ದ ಸ್ಥಳಗಳ ಸ್ವರೂಪ ಬದಲಿಸಿ, ನಾಗರಿಕರಿಗೆ ವಿರಮಿಸಲು ತಂಪನೆಯ ತಾಣವಾಗಬೇಕಿದ್ದ ನಗರದ 25 ಜಂಕ್ಷನ್‌ಗಳು ಭಣಭಣಗುಡುತ್ತಿವೆ. ಕಾಮಗಾರಿಗಳಿಗೆ ಬಿಬಿಎಂಪಿ ಬಿಲ್ ಪಾವತಿಸದ್ದರಿಂದ ಅಭಿವೃದ್ಧಿ ಕಾಣುತ್ತಿರುವ ಜಂಕ್ಷನ್‌ಗಳು ಮುಸುಕುಹೊದ್ದು ದೂಳು ಹಿಡಿಯುತ್ತಿವೆ.

ದೂಳು, ಕಸ, ಮುರಿದುಬಿದ್ದ ಕಲ್ಲು, ಬೇಲಿಯಿಂದ ತುಂಬಿದ್ದ 25 ಜಂಕ್ಷನ್‌ಗಳನ್ನು ₹23.80 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ಮಾಡಲು ಬಿಬಿಎಂಪಿ ನಿರ್ಧರಿಸಿ, 2023ರ ಜನವರಿಯಲ್ಲಿ ಕಾಮಗಾರಿ ಆರಂಭಿಸಿತ್ತು. 10 ತಿಂಗಳಲ್ಲಿ ಈ ಎಲ್ಲ ಜಂಕ್ಷನ್‌ಗಳು ಅಭಿವೃದ್ಧಿ ಯಾಗಬೇಕಿತ್ತು. 2023ರ ಡಿಸೆಂಬರ್‌ನಲ್ಲೇ ಸಿದ್ಧವಾಗಬೇಕಿದ್ದ ಜಂಕ್ಷನ್‌ಗಳ ಅಭಿವೃದ್ಧಿಗೆ 2024ರ ಮಾರ್ಚ್ ಎಂಬ ಮತ್ತೊಂದು ಗಡುವು ನೀಡಲಾಗಿತ್ತು. ಆದರೆ, ಸರ್ಕಾರ ಬದಲಾದ್ದರಿಂದ ಸಕಾಲದಲ್ಲಿ ಗುತ್ತಿಗೆದಾರರಿಗೆ ಬಿಲ್ ಪಾವತಿಯಾಗಿಲ್ಲ. ಹೀಗಾಗಿ, ಇನ್ನೂ ಮೂರ್ನಾಲ್ಕು ತಿಂಗಳು ಈ ಜಂಕ್ಷನ್‌ಗಳ ಅಭಿವೃದ್ಧಿ ಕಾರ್ಯ ಮುಗಿಯುವುದಿಲ್ಲ. ಬಿಲ್ ಪಾವತಿ ಮತ್ತಷ್ಟು ವಿಳಂಬವಾದರೆ ಕಾಮಗಾರಿ ಮುಂದುವರಿಯುವ ಲಕ್ಷಣಗಳೂ ಇಲ್ಲ.

ಜಂಕ್ಷನ್‌ಗಳು ಸೌಂದರ್ಯೀಕರಣಗೊಳ್ಳುವ ಜೊತೆಗೆ ನಾಗರಿಕರು ವಿರಮಿಸಲು ಅವಕಾಶವನ್ನೂ ಕಲ್ಪಿಸಲಾಗುತ್ತಿದೆ. ಅಲ್ಲಲ್ಲಿ ಕಲ್ಲಿನ ಕುರ್ಚಿಗಳನ್ನೂ ಅಳವಡಿಸಲಾಗುತ್ತದೆ. ಗಿಡ–ಮರಗಳನ್ನು ಉಳಿಸಿಕೊಂಡು ಅಂದಗೊಳಿಸಲಾಗುತ್ತಿದೆ. 25ರಲ್ಲಿ 23 ಜಂಕ್ಷನ್‌ಗಳಲ್ಲಿ ಕಾರಂಜಿಗಳನ್ನು ಸೃಷ್ಟಿಸಲಾಗುತ್ತಿದೆ. ಇದು ಆಹ್ಲಾದಕರ ವಾತಾವರಣ ನೀಡುವ ಜೊತೆಗೆ ವಾಯು ಮಾಲಿನ್ಯವನ್ನು ಅಲ್ಪಮಟ್ಟಿಗೆ ತಡೆಯುತ್ತದೆ ಎಂಬ ಉದ್ದೇಶವಿದೆ.

ಗುಬ್ಬಿ ತೋಟದಪ್ಪ ಛತ್ರ ರಸ್ತೆ ಜಂಕ್ಷನ್‌ನಲ್ಲಿ ನಿರ್ಮಾಣವಾಗುತ್ತಿರುವ ಕಾಮಗಾರಿಯ ದುಃಸ್ಥಿತಿ

ಆದರೆ ಈ ಕಾಮಗಾರಿಗಳಿಗೆ ಹಣ ಬಿಡುಗಡೆ ಆಗುತ್ತಿಲ್ಲ. ಕಾಮಗಾರಿ ಹಲವು ಜಂಕ್ಷನ್ ಗಳಲ್ಲಿ ಬಹುತೇಕ ಸ್ಥಗಿತಗೊಂಡಿದ್ದು, ಮುಂದಿನ ದಿನಗಳಲ್ಲಿ ಅವುಗಳ ವೆಚ್ಚವೂ ಹೆಚ್ಚಾಗಲಿವೆ.

ಹಡ್ಸನ್ ವೃತ್ತದಲ್ಲಿ ಬಿಬಿಎಂಪಿ ಕೆಂಪೇಗೌಡ ಗೋಪುರವನ್ನು ನಿರ್ಮಿಸಿದ್ದು, ಇದರ ಸುತ್ತಲಿನ ಜಂಕ್ಷನ್ ಅನ್ನು ವಿಶಿಷ್ಟ ರೀತಿಯಲ್ಲಿ ಅಭಿವೃದ್ಧಿಗೊಳಿಸಲು ₹2 ಕೋಟಿಗೂ ಹೆಚ್ಚು ಹಣ ವೆಚ್ಚ ಮಾಡುತ್ತಿದೆ. ಒಂದೂವರೆ ವರ್ಷದಿಂದಲೂ ಇಲ್ಲಿ ಕಾಮಗಾರಿ ನಡೆಯುತ್ತಲೇ ಇದೆ. ಆಗಾಗ್ಗೆ ಒಂದಷ್ಟು ದಿನ ಕಾಮಗಾರಿ ಸ್ಥಗಿತಗೊಂಡು, ಒಂದಷ್ಟು ದಿನ ನಡೆಯುತ್ತಿದೆ. ಬಿಬಿಎಂಪಿ ಕೇಂದ್ರ ಕಚೇರಿಯ ಮುಂದಿನ ಜಂಕ್ಷನ್‌ನಲ್ಲೂ ಕಾಮಗಾರಿ ಸ್ಥಿತಿ ಇದೇ ರೀತಿ ಇದೆ. ಇನ್ನು ಕೆ.ಆರ್. ವೃತ್ತ–ನೃಪತುಂಗ ರಸ್ತೆ ಜಂಕ್ಷನ್‌ನಲ್ಲಿ ಅಭಿವೃದ್ಧಿ ಕಾಮಗಾರಿ ಅಂತಿಮಘಟ್ಟದಲ್ಲಿದ್ದರೂ ಅದನ್ನು ಪೂರ್ಣಗೊಳಿಸಿಲ್ಲ. ಕಾರಂಜಿಗೆ ಪ್ಲಾಸ್ಟಿಕ್ ಹೊದಿಕೆ ಮುಚ್ಚಲಾಗಿದೆ.

ಕೆ.ಆರ್. ರಸ್ತೆ– ನೃಪತುಂಗ ರಸ್ತೆಯ ಜಂಕ್ಷನ್ ಅಭಿವೃದ್ಧಿ ತಾಣದಲ್ಲಿ ಕಾರಂಜಿಗೆ ಪ್ಲಾಸ್ಟಿಕ್ ಹೊದಿಕೆ ಮುಚ್ಚಿರುವುದು

ಹಡ್ಸನ್ ವೃತ್ತದ ಬಳಿ ಅಭಿವೃದ್ಧಿ ಕಾಮಗಾರಿ ಸ್ಥಗಿತಗೊಂಡಿರುವುದು

– ಪ್ರಜಾವಾಣಿ ಚಿತ್ರಗಳು

ದೂಳು ಕಡಿಮೆ ಮಾಡುವ ಅಭಿವೃದ್ಧಿಗೇ ಇಲ್ಲಿ ದೂಳು ಹಿಡಿದಿದೆ. ಹೊಸದಾಗಿ ನೆಟ್ಟಿದ್ದ ಸಸಿಗಳು ಒಣಗಿವೆ.

ಸಂಕಷ್ಟ: ಕಾಮಗಾರಿ ವೇಗ ಕಡಿತಕ್ಕೆ ಕಾರಣವೇನು ಎಂದು ಗುತ್ತಿಗೆದಾರರನ್ನು ಪ್ರಶ್ನಿಸಿದಾಗ, 'ಬಿಬಿಎಂಪಿಯಿಂದ ಬಿಲ್ ಪಾವತಿಯಲ್ಲಿ ವಿಳಂಬವಾಗುತ್ತಿದೆ. ಹಣವಿಲ್ಲದಿದ್ದರೆ ಕೆಲಸ ಹೇಗೆ ಮಾಡುವುದು' ಎಂದು ಮರುಪ್ರಶ್ನಿಸಿದರು. ಅಲ್ಲದೆ, 'ಬಿಲ್ ಸಂದಾಯ ಮಾಡಿದಾಗ ಶೇ 75ರಷ್ಟನ್ನು ಮಾತ್ರ ಪಾವತಿ ಮಾಡುತ್ತಿರುವುದರಿಂದ ಆರ್ಥಿಕ ಸಂಕಷ್ಟ ಉಂಟಾಗುತ್ತಿದೆ' ಎಂದೂ ಹೇಳಿದರು.

ಎರಡು ತಿಂಗಳಲ್ಲಿ: 'ಟೌನ್‌ಹಾಲ್', ಶೇಷಾದ್ರಿ ರಸ್ತೆಯ ಮೌರ್ಯ ವೃತ್ತ, ಹಡ್ಸನ್ ವೃತ್ತ, ಎನ್.ಆರ್.ಸ್ಕ್ವೇರ್, ಬ್ರಿಗೇಡ್ ರಸ್ತೆ, ಮೆಯೊ ಹಾಲ್, ಕೆ.ಎಚ್.ವೃತ್ತ, ಅಶೋಕ ಪಿಲ್ಲರ್ ಸೇರಿದಂತೆ ಹಲವು ಜಂಕ್ಷನ್‌ಗಳ ಕಾಮಗಾರಿ ಅಂತಿಮ ಹಂತದಲ್ಲಿವೆ. ಚುನಾವಣೆ ನೀತಿಸಂಹಿತೆ ಸೇರಿದಂತೆ, ಗುತ್ತಿಗೆದಾರರಿಗೆ ಬಿಲ್‌ಪಾವತಿ ಸ್ವಲ್ಪ ವಿಳಂಬವಾಗಿದ್ದರಿಂದ ಒಂದಷ್ಟು ಕಡೆ ಕಾಮಗಾರಿ ವಿಳಂಬವಾಗಿದೆ.

'ಇನ್ನೆರಡು ತಿಂಗಳಲ್ಲಿ ಎಲ್ಲ ಜಂಕ್ಷನ್ ಅಭಿವೃದ್ಧಿ ಕಾಮಗಾರಿ ಮುಗಿಯಲಿದೆ' ಎಂದು ಬಿಬಿಎಂಪಿ ಎಂಜಿನಿಯರ್‌ಗಳು ಮಾಹಿತಿ ನೀಡಿದರು.

75 ಜಂಕ್ಷನ್‌ಗಳಿಗೆ ಅನುಮೋದನೆ ಸಿಕ್ಕಿಲ್ಲ!

ಪಾದಚಾರಿಗಳ ಸುರಕ್ಷಿತೆ,, ವಾಯುಮಾಲಿನ್ಯ ನಿಯಂತ್ರಿಸಲು 75 ಜಂಕ್ಷನ್‌ಗಳನ್ನು ಕಾರಂಜಿ ಸಹಿತ ಅಭಿವೃದ್ಧಿಪಡಿಸುವ 'ಸುರಕ್ಷ 75 –ಮಿಷನ್ 2023' ಯೋಜನೆಗೆ 2023ರ ಜನವರಿಯಲ್ಲಿಯೇ ಅಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಚಾಲನೆ ನೀಡಿದ್ದರು. ಆದರೆ, ಈ ಕಾಮಗಾರಿಗಳನ್ನು ಆರಂಭಿಸಲು ಇಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸರ್ಕಾರದಿಂದ ಇನ್ನೂ ಅನುಮತಿಯೇ ಸಿಕ್ಕಿಲ್ಲ.

₹150 ಕೋಟಿ ವೆಚ್ಚದಲ್ಲಿ 75 ಜಂಕ್ಷನ್‌ಗಳನ್ನು ಅಭಿವೃದ್ಧಿ ಪಡಿಸುವುದಾಗಿ 2023–24ರ ಬಿಬಿಎಂಪಿ ಬಜೆಟ್‌ನಲ್ಲೇ ವಿವರ ನೀಡಲಾಗಿತ್ತು. ಪೂರ್ವ ವಲಯದಲ್ಲಿ ಹೆಚ್ಚು ಅಂದರೆ 13, ಮಹದೇವಪುರ– ದಕ್ಷಿಣ ವಲಯದಲ್ಲಿ ತಲಾ 12, ಪೂರ್ವ ವಲಯದಲ್ಲಿ 11 ಜಂಕ್ಷನ್ ಅಭಿವೃದ್ಧಿಪಡಿಸಲಾಗುತ್ತದೆ ಎಂದು ಹೇಳಲಾಗಿತ್ತು. ಆದರೆ, ಸರ್ಕಾರದಿಂದ ಮುಂದುವರಿಯುವ ಅನುಮತಿ ದೊರೆಯದ ಕಾರಣ ಈವರೆಗೂ 'ಯೋಜನೆ ಸಿದ್ಧಪಡಿಸುವ ಕಡತದ ಮಟ್ಟದಲ್ಲೇ' ಇದೆ.

ಜಂಕ್ಷನ್‌ಗಳು	ಎಷ್ಟು ವೆಚ್ಚ?		
ಹಡ್ಸನ್ ವೃತ್ತ	₹2.44 ಕೋಟಿ	ಸರ್ಕಲ್ ಮಾರಮ್ಮ	₹58.93 ಲಕ್ಷ
ಎನ್.ಆರ್.ಸ್ಕ್ವೇರ್	₹2.69 ಕೋಟಿ	ವಿಧಾನಸೌಧ	₹87.95 ಲಕ್ಷ
ಟೌನ್‌ಹಾಲ್	₹96.46 ಲಕ್ಷ	ಗಾಲ್ಫ್ ಕೋರ್ಸ್	₹1.08 ಕೋಟಿ
ಬ್ರಿಗೇಡ್ ರಸ್ತೆ	₹73.13 ಲಕ್ಷ	ಉಪ್ಪಾರಪೇಟೆ	₹68.77 ಲಕ್ಷ
ಮೆಯೊ ಹಾಲ್	₹1.76 ಕೋಟಿ	ಸುಮನಹಳ್ಳಿ	₹40.63 ಲಕ್ಷ
ಕೆ.ಎಚ್.ವೃತ್ತ	₹1.74 ಕೋಟಿ	ಮಾಧವನ್ ಪಾರ್ಕ್	₹31.01 ಲಕ್ಷ
ಅಶೋಕ ಪಿಲ್ಲರ್	₹1.36 ಕೋಟಿ	ಬಿಇಎಲ್	₹30.93 ಲಕ್ಷ
ಡೇರಿ ವೃತ್ತ	₹55.50 ಲಕ್ಷ	ಹೆಬ್ಬಾಳ	₹41.85 ಲಕ್ಷ
ಹಡ್ಸನ್ ಪೊಲೀಸ್ ಪಾರ್ಕ್	₹77.50 ಲಕ್ಷ	ಕಂಟೋನ್ಮೆಂಟ್	₹97.12 ಲಕ್ಷ
ಕಾರ್ಲೆ	₹52.97 ಲಕ್ಷ	ಜ್ಞಾನಭಾರತಿ	₹47.85 ಲಕ್ಷ
ಗುಬ್ಬಿ ತೋಟದಪ್ಪ ಛತ್ರ ರಸ್ತೆ	₹59.41 ಲಕ್ಷ	ಗುಟ್ಟಹಳ್ಳಿ	₹1.71 ಕೋಟಿ
ಎಂಟಿಆರ್ ಗೇಟ್	₹61.57 ಲಕ್ಷ	ದೊಮ್ಮಲೂರು	₹84.94 ಲಕ್ಷ
		ಸುರಂಜನ್ ದಾಸ್	₹32.18 ಲಕ್ಷ

ಸುದ್ದಿ 2 ನಿಮಿಷ

ನಗರದಲ್ಲಿ ಹೆಚ್ಚಿದ ತಾಪಮಾನ

ಬೆಂಗಳೂರು: ನಗರದಲ್ಲಿ ತಿಂಗಳ ಕೆಲವು ದಿನಗಳು ಸುರಿದ ಮಳೆ, ಮೋಡ ಕವಿದ ವಾತಾವರಣದಿಂದಾಗಿ ದಿನದ ಕೆಲವು ಅವಧಿ ತಾಪಮಾನ ಮತ್ತೆ ಹೆಚ್ಚಳವಾಗುತ್ತಿದೆ.

ಮಾರ್ಚ್ ಮತ್ತು ಏಪ್ರಿಲ್ ತಿಂಗಳಲ್ಲಿ ಮಳೆಯ ಅಭಾವದಿಂದಾಗಿ ನಗರದಲ್ಲಿ ತಾಪಮಾನ ಗಣನೀಯವಾಗಿ ಏರಿಕೆಯಾಗಿತ್ತು. ಗರಿಷ್ಠ ತಾಪಮಾನ 40 ಡಿಗ್ರಿ ಸೆಲ್ಸಿಯಸ್ ತಲುಪಿದರೆ, ಕನಿಷ್ಠ ತಾಪಮಾನ 24 ಡಿಗ್ರಿ ಸೆಲ್ಸಿಯಸ್ ಆಸುಪಾಸಿನಲ್ಲಿತ್ತು. ಇದರಿಂದಾಗಿ ನಗರದ ಜನರು ಹೈರಾಣಗೊಂಡಿದ್ದರು. ಈ ತಿಂಗಳ ಎರಡನೇ ವಾರದಲ್ಲಿ ಎಡಬಿಡದೆ ಸುರಿದ ಮಳೆಯಿಂದಾಗಿ ನಗರದಲ್ಲಿ ತಂಪನೆಯ ವಾತಾವರಣ ನಿರ್ಮಾಣ ವಾಗಿತ್ತು. ಸಂಜೆಯ ಅವಧಿಯಲ್ಲಿ ಚಳಿ ಕಾಣಿಸಿಕೊಂಡಿತ್ತು. ಕಳೆದೊಂದು ವಾರದಿಂದ ಮೋಡ–ಬಿಸಿಲಿನ ವಾತಾವರಣದಿಂದಾಗಿ ಗರಿಷ್ಠ ತಾಪಮಾನ 33 ಡಿಗ್ರಿ ಸೆಲ್ಸಿಯಸ್ ಹಾಗೂ ಕನಿಷ್ಠ ತಾಪಮಾನ 22 ಡಿಗ್ರಿ ಸೆಲ್ಸಿಯಸ್ ವರದಿಯಾಗುತ್ತಿದೆ. ಹವಾಮಾನ ಇಲಾಖೆ ಪ್ರಕಾರ ನಗರದಲ್ಲಿ ಮುಂದಿನ ನಾಲ್ಕು ದಿನಗಳು ಮೋಡ ಕವಿದ ವಾತಾವರಣ ಇರಲಿದ್ದು, ಸಾಧಾರಣಕ್ಕಿಂತ ಕಡಿಮೆ ಮಳೆಯಾಗುವ ಸಾಧ್ಯತೆಯಿದೆ. ಗರಿಷ್ಠ ಉಷ್ಣಾಂಶ 32ರಿಂದ 33 ಡಿಗ್ರಿ ಸೆಲ್ಸಿಯಸ್ ಹಾಗೂ ಕನಿಷ್ಠ ಉಷ್ಣಾಂಶ 22ರಿಂದ 23 ಡಿಗ್ರಿ ಸೆಲ್ಸಿಯಸ್ ಇರುವ ಸಂಭವವಿದೆ.

ಕೆ.ಆರ್.ಪುರ: ರಸ್ತೆ ಗುಂಡಿ ಮುಚ್ಚುವಂತೆ ಕರವೇ ಒತ್ತಾಯ

ಕೆ.ಆರ್.ಪುರ: ಕ್ಷೇತ್ರ ವ್ಯಾಪ್ತಿಯಲ್ಲಿರುವ ರಸ್ತೆ ಗುಂಡಿಗಳನ್ನು ಮುಚ್ಚುವಂತೆ ಆಗ್ರಹಿಸಿ ಕರ್ನಾಟಕ ರಕ್ಷಣಾ ವೇದಿಕೆ ಪ್ರವೀಣ್ ಕುಮಾರ್ ಶೆಟ್ಟಿ ಬಣದ ಕಾರ್ಯಕರ್ತರು ಕೆ.ಆರ್ ಪುರದ ಬಿಬಿಎಂಪಿ ಕಚೇರಿ ಮುಂದೆ ಪ್ರತಿಭಟನೆ ನಡೆಸಿದರು.

ಬಸವನಪುರ, ದೇವಸಂದ್ರ, ರಾಮಮೂರ್ತಿನಗರ, ಭಟ್ಟರಹಳ್ಳಿ ಸೇರಿದಂತೆ ಪ್ರಮುಖ ಮುಖ್ಯರಸ್ತೆಯಲ್ಲಿ ಗುಂಡಿಗಳು ಬಿದ್ದು ರಸ್ತೆಗಳು ಸಂಪೂರ್ಣವಾಗಿ ಹದಗೆಟ್ಟಿದೆ. ಸಾವಿರಾರು ವಾಹನ ಸಂಚರಿಸುವ ಮುಖ್ಯರಸ್ತೆಗಳಲ್ಲಿ ನೂರಾರು ಗುಂಡಿಗಳಾಗಿವೆ. ವಾಹನ ಸವಾರರು ಗುಂಡಿ ತಪ್ಪಿಸುವ ಭರದಲ್ಲಿ ಅಪಘಾತಗಳು ಸಂಭವಿಸುತ್ತಿವೆ ಪ್ರತಿಭಟನಾಕಾರರು ದೂರಿದರು.

ರಸ್ತೆ ಗುಂಡಿಗಳಿಂದಾಗಿ ಅನೇಕರು ಆಸ್ಪತ್ರೆ ಸೇರುತ್ತಿದ್ದಾರೆ. ಅಲ್ಲದೆ ವಿಪರೀತ ಸಂಚಾರ ದಟ್ಟಣೆ ಉಂಟಾಗುತ್ತಿದೆ. ನಗರದಲ್ಲಿ ಗುಂಡಿ ಮುಚ್ಚಲು ಸರ್ಕಾರ ಅನುದಾನ ಒದಗಿಸಿದೆ. ಆದರೆ ಬಿಬಿಎಂಪಿ ಅಧಿಕಾರಿಗಳು ಗುಂಡಿ ಮುಚ್ಚುವ ಕೆಲಸ ಮಾಡದೇ ನಿರ್ಲಕ್ಷ್ಯ ತೋರುತ್ತಿದ್ದಾರೆ ಎಂದು ದೂರಿದರು.

'ಪ್ರಮುಖ ರಸ್ತೆಗಳಲ್ಲಾಗಿರುವ ಗುಂಡಿಗಳಿಂದ ಜನಸಾಮಾನ್ಯರಿಗೆ ತುಂಬಾ ತೊಂದರೆ ಆಗುತ್ತಿದೆ. ಕೂಡಲೇ ಬಿಬಿಎಂಪಿ ಅಧಿಕಾರಿಗಳು ಹದಗೆಟ್ಟಿರುವ ರಸ್ತೆಗಳನ್ನು ದುರಸ್ತಿಗೊಳಿಸಬೇಕು' ಎಂದು ಕೆ.ಆರ್. ಪುರ ಕ್ಷೇತ್ರ ಕರವೇ ಅಧ್ಯಕ್ಷ ಕೃಷ್ಣಮೂರ್ತಿ ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಚಂದ್ರು, ಪುಷ್ಪ, ವಿನಯ್, ಗುರುವ್ ರೆಡ್ಡಿ, ಅಶೋಕ್,ಇರ್ಫಾನ್, ಮಲ್ಲಪ್ಪ, ಲಕ್ಷ್ಮೀನಾರಾಯಣ, ಪುರುಷೋತ್ತಮ, ರವಿಚಂದ್ರ ಇದ್ದರು.

ಗುಂಡಿ ಸ್ಟ್ರೀಟ್...!

ನಗರದಲ್ಲಿ ಅತಿಹೆಚ್ಚು ವೆಚ್ಚದಲ್ಲಿ ನಿರ್ಮಿಸಲಾಗಿರುವ ಪ್ರತಿಷ್ಠಿತ ಚರ್ಚ್ ಸ್ಟ್ರೀಟ್‌ನಲ್ಲಿ ಕಲ್ಲುಗಳು ಕಿತ್ತುಬಂದು ದೊಡ್ಡ ಗುಂಡಿ ಸೃಷ್ಟಿಯಾಗಿದೆ. ಈ ರಸ್ತೆಯಲ್ಲಿ ಹಲವು ಕಡೆ ಕಲ್ಲುಗಳು ಕಿತ್ತುಬಂದಿದ್ದರೂ ಬಿಬಿಎಂಪಿ ಎಂಜಿನಿಯರ್‌ಗಳು ಕ್ರಮ ಕೈಗೊಂಡಿಲ್ಲ. ಹಿಂದೆ ಇದೇ ರೀತಿ ಗುಂಡಿಗಳಾಗಿದ್ದಾಗ ಮಣ್ಣು ತುಂಬಲಾಗಿತ್ತು

- ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್.ಜಿ.

ಬಾಕ್ಸ್ ಪುಶಿಂಗ್ ತಂತ್ರಜ್ಞಾನದಲ್ಲಿ ಮೆಟ್ರೊ ಸುರಂಗ ನಿರ್ಮಾಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊರ ವರ್ತುಲ ರಸ್ತೆಯಲ್ಲಿರುವ (ಒಆರ್‌ಆರ್) ಮೇಲ್ಸೇತುವೆಗೆ ತೊಂದರೆಯಾಗದಂತೆ ಸುರಂಗ ನಿರ್ಮಿಸಲು ಬಿಎಂಆರ್‌ಸಿಎಲ್ ಬಾಕ್ಸ್ ಪುಶಿಂಗ್ ತಂತ್ರಜ್ಞಾನವನ್ನು ಬಳಸಿದೆ.

ಅತಿ ಉದ್ದದ ಸುರಂಗ ಮಾರ್ಗಗಳನ್ನು ಹೊಂದಿರುವ 'ನಮ್ಮ ಮೆಟ್ರೊ' ಗುಲಾಬಿ ಮಾರ್ಗದಲ್ಲಿ ಒಆರ್‌ಆರ್‌ನಲ್ಲಿ ಮಾತ್ರ ಈ ತಂತ್ರಜ್ಞಾನ ಬಳಕೆ ಮಾಡಲಾಗಿದೆ ಎಂದು ಬಿಎಂಆರ್‌ಸಿಎಲ್ ಸಾರ್ವಜನಿಕ ಸಂಪರ್ಕ ಅಧಿಕಾರಿ ತಿಳಿಸಿದ್ದಾರೆ.

ರಸ್ತೆಯಲ್ಲಿ ಮೇಲ್ಸೇತುವೆ ಇರುವುದರಿಂದ ವಿದ್ಯುತ್, ಕೇಬಲ್ ಸಹಿತ ಅತಿ ಹೆಚ್ಚು ಯುಟಿಲಿಟಿಗಳು ಇಲ್ಲಿರುವುದರಿಂದ ವೃತ್ತಾಕಾರದ ಸುರಂಗ ನಿರ್ಮಾಣ ಮಾಡುತ್ತಿಲ್ಲ. ಕಾಳೇನ ಅಗ್ರಹಾರದಿಂದ ನಾಗವಾರವರೆಗೆ ಈ ಮಾರ್ಗದಲ್ಲಿ ಒಟ್ಟು 13.76 ಕಿ.ಮೀ. ಉದ್ದದ ಸುರಂಗ ಮಾರ್ಗ ನಿರ್ಮಾಣವಾಗುತ್ತಿದ್ದು, ಇಲ್ಲಿ 77 ಮೀಟರ್ ಮಾತ್ರ ಆಯತಾಕಾರದಲ್ಲಿ ಸುರಂಗ ಮಾಡಲಾಗುತ್ತಿದೆ. ಬೇರೆಲ್ಲ ಕಡೆಗಳಲ್ಲಿ ವೃತ್ತಾಕಾರದ ಸುರಂಗಗಳು ಇದ್ದು, ಒಂದು ಸುರಂಗದಲ್ಲಿ ಒಂದು ಪಥ ಹಳಿ ಇರುವುದರಿಂದ ಪ್ರತಿ ಮಾರ್ಗದಲ್ಲಿ ಎರಡು ಸುರಂಗಗಳಿರುತ್ತವೆ.

ಆಯತಾಕಾರದಲ್ಲಿ ನಿರ್ಮಾಣಗೊಳ್ಳುತ್ತಿರುವ ಈ ಸುರಂಗದಲ್ಲಿ ಮಾತ್ರ ಎರಡೂ ಪಥಗಳು ಇರುತ್ತವೆ ಎಂದು ವಿವರಿಸಿದರು.

ನಾಗವಾರ ಭೂಗತ ಮೆಟ್ರೊ ನಿಲ್ದಾಣದ ದಕ್ಷಿಣ ಭಾಗದಲ್ಲಿ ಸರ್ವಿಸ್ ರಸ್ತೆ ಮತ್ತು ಒಆರ್‌ಆರ್ ಮೇಲ್ಸೇತುವೆ ಕೆಳಗೆ ಈ ಕಾಮಗಾರಿ ನಡೆಯುತ್ತಿದ್ದು, ಎಂಟು ಬಾಕ್ಸ್‌ಗಳನ್ನು ಬಳಸಿ ಸುರಂಗ ಮಾರ್ಗ ನಿರ್ಮಿಸುವ ಕಾರ್ಯ ಯಶಸ್ವಿಯಾಗಿದೆ ಎಂದು ಮಾಹಿತಿ ನೀಡಿದ್ದಾರೆ.

'ನಮ್ಮ ಮೆಟ್ರೊ' ಗುಲಾಬಿ ಮಾರ್ಗದಲ್ಲಿ ನಾಗವಾರ ಬಳಿ ಒಆರ್‌ಆರ್‌ನಲ್ಲಿ ಬಾಕ್ಸ್ ಪುಶಿಂಗ್ ತಂತ್ರಜ್ಞಾನ ಬಳಸಿ ಸುರಂಗ ನಿರ್ಮಿಸಲಾಗಿದೆ

ದೇಗುಲದಲ್ಲಿ ದಲಿತ ನೌಕರರ ಕೆಲಸ ಕಾಯಂಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಜರಾಯಿ ಇಲಾಖೆಯ ದೇವಸ್ಥಾನಗಳಲ್ಲಿ ಕೆಲಸ ಮಾಡುತ್ತಿರುವ ದಲಿತ ನೌಕರರನ್ನು ಕಾಯಂಗೊಳಿಸುವಂತೆ ಅಖಿಲ ಭಾರತ ದಲಿತ ಮಹಾಸಂಘ ಆಗ್ರಹಿಸಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಭೀಮರಾಜ್, 'ರಾಜ್ಯದ ಮುಜರಾಯಿ ಇಲಾಖೆಯ ದೇವಸ್ಥಾನಗಳಲ್ಲಿ 5 ವರ್ಷದವರೆಗೆ ಕಾರ್ಯನಿರ್ವಹಿಸುವ ನೌಕರರಿಗೆ ವೇತನ ಶ್ರೇಣಿ ನೀಡಿ ಕಾಯಂಗೊಳಿಸಬೇಕು ಎಂಬುದು ಸರ್ಕಾರದ ಆದೇಶವಿದೆ. ಆದರೆ ಅದನ್ನು ಉಲ್ಲಂಘಿಸಲಾಗುತ್ತಿದೆ. ವೀರಾಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಕಳೆದ 20 ವರ್ಷಗಳಿಂದ ಕೆಲಸ ಮಾಡುತ್ತಿರುವ ಗೀತಾ ಪ್ರಸನ್ನ ಅವರನ್ನು ದಲಿತರು ಎಂಬ ಕಾರಣಕ್ಕೆ ಕಾಯಂಗೊಳಿಸಿಲ್ಲ' ಎಂದು ದೂರಿದರು.

'ಮುಜರಾಯಿ ಇಲಾಖೆಯಲ್ಲಿ ರೇವತಿ, ಮಹಾಲಕ್ಷ್ಮಿ, ಗಂಗಾಧರ್ ಅವರು ಸ್ಕ್ಯಾವೆಂಜರ್ ಆಗಿ 12 ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ. ಕೋವಿಡ್–19 ಸಂದರ್ಭದಲ್ಲಿ ಕೆಲಸ ಮಾಡಿದ ಇಂತಹ ಸಿಬ್ಬಂದಿಯನ್ನು ನೋಟಿಸ್ ನೀಡದೇ ಕೆಲಸದಿಂದ ತೆಗೆದು ಹಾಕಲಾಗಿದೆ. ಇವರೆಲ್ಲರನ್ನೂ ಕೆಲಸದಿಂದ ತೆಗೆದು ಹಾಕಿದ ದಿನದಿಂದ ಎಲ್ಲ ಸವಲತ್ತುಗಳು ಹಾಗೂ ಬಾಕಿ ಸಂಬಳವನ್ನು ನೀಡಿ, ವೇತನ ನಿಗಿದಿ ಮಾಡಿ ಕಾಯಂಗೊಳಿಸಬೇಕೆಂದು ನ್ಯಾಯಾಲಯ ಆದೇಶಿಸಿದೆ. ಆದರೂ ಈವರೆಗೂ ಯಾವುದೇ ಕ್ರಮ ಕೈಗೊಂಡಿಲ್ಲ' ಎಂದು ದೂರಿದರು.

ಮಾಲಿನ್ಯ ನಿಯಂತ್ರಣ ಮಂಡಳಿ ಸಭೆಯಲ್ಲಿ ತಜ್ಞರ ಹೇಳಿಕೆ

'ಸಂಸ್ಕರಿತ ನೀರಿನ ಬಳಕೆ ಹೆಚ್ಚಬೇಕು'

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: 'ಸಂಸ್ಕರಿಸಿದ ನೀರಿನ ಬಳಕೆ ಹೆಚ್ಚಳದಿಂದ ನಗರದಲ್ಲಿ ಎದುರಾಗುತ್ತಿರುವ ನೀರಿನ ಸಮಸ್ಯೆಗೆ ತಕ್ಕಮಟ್ಟಿಗೆ ಪರಿಹಾರ ಕಂಡುಕೊಳ್ಳಬಹುದು' ಎಂದು ಜಲ ಹಾಗೂ ಪರಿಸರ ತಜ್ಞರು ಅಭಿಮತ ವ್ಯಕ್ತಪಡಿಸಿದರು.

ಅಪಾರ್ಟ್‌ಮೆಂಟ್ ಸಮುಚ್ಚಯ ಮತ್ತು ಐಟಿ ಬಿಟಿ ಕಂಪನಿಗಳಲ್ಲಿ ಉತ್ಪತ್ತಿಯಾಗುವ ದ್ರವರೂಪದ ರಾಸಾಯನಿಕ ತ್ಯಾಜ್ಯ ನಿರ್ವಹಣೆಯ ಕುರಿತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆಎಸ್‌ಪಿಸಿಬಿ) ಇಲ್ಲಿ ಬುಧವಾರ ಸಭೆ ನಡೆಸಿತು. ದ್ರವರೂಪದ ರಾಸಾಯನಿಕ ತ್ಯಾಜ್ಯ ನಿರ್ವಹಣೆ ಮತ್ತು ತ್ಯಾಜ್ಯ ನೀರಿನಿಂದಾಗುವ ಸಮಸ್ಯೆಗಳ ಕುರಿತು ವಿಸ್ತ್ರತವಾದ ಚರ್ಚೆ ನಡೆಯಿತು.

ವೈಟ್‌ಫೀಲ್ಡ್ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವ್ಯಾಪಕವಾಗಿ ಐಟಿಬಿಟಿ ಕಂಪನಿಗಳು ಮತ್ತು ಅಪಾರ್ಟ್‌ಮೆಂಟ್ ಸಮುಚ್ಚಯಗಳು ತಲೆ ಎತ್ತುತ್ತಿವೆ. ಇದರಿಂದ ಪ್ರತಿ ದಿನಕ್ಕೆ ಸುಮಾರು 50 ಸಾವಿರ ಲೀಟರ್‌ಗೂ ಹೆಚ್ಚು ತ್ಯಾಜ್ಯ ನೀರು ಉತ್ಪತ್ತಿಯಾಗುತ್ತಿದೆ. ಈ ನೀರನ್ನು ಸಂಸ್ಕರಿಸಿ, ಮರುಬಳಕೆ ಮಾಡಬೇಕಿದೆ ಎಂಬ ಆಗ್ರಹ ಸಭೆಯಲ್ಲಿ ವ್ಯಕ್ತವಾಯಿತು.

'ನಗರವು ಈ ಬೇಸಿಗೆಯಲ್ಲಿ ತೀವ್ರತರವಾದ ನೀರಿನ ಬಿಕ್ಕಟ್ಟನ್ನು ಎದುರಿಸಿದೆ. ಅತಿಯಾದ ನೀರಿನ ಬಳಕೆಯಿಂದಾಗಿ ಅಂತರ್ಜಲ ಮಟ್ಟವು ಕುಸಿತ ಕಂಡಿದೆ. ಬೆಂಗಳೂರು ನಗರ ಮಾತ್ರವಲ್ಲದೆ, ಇತರ ಪ್ರಮುಖ ನಗರಗಳಲ್ಲೂ ಇದೇ ಪರಿಸ್ಥಿತಿಯಿದೆ. ಆದ್ದರಿಂದ ನೀರನ್ನು ಮಿತವಾಗಿ ಬಳಸಿ, ನೀರು ಉಳಿಸುವ ಯೋಜನೆಗಳನ್ನು ಹಾಕಿಕೊಳ್ಳಬೇಕು' ಎಂದು ಕೆಎಸ್‌ಪಿಸಿಬಿ ವಲಯ ಅಧಿಕಾರಿ ಸೈಯದ್ ಖಾಜಾ ಹೇಳಿದರು.

'ಐಟಿ ವಲಯದವರು ಶೇ 50ರಷ್ಟು ಸಂಸ್ಕರಿಸಿದ ನೀರನ್ನು ಬಳಕೆ ಮಾಡಿದರೆ, ಅಗತ್ಯವಿರುವ ನೀರಿನ ಪ್ರಮಾಣವನ್ನು ಕಡಿಮೆ ಮಾಡಬಹುದು. ಸರ್ಕಾರವು ಸಂಸ್ಕರಣ ಹಾಗೂ ಶುದ್ಧೀಕರಣ ಘಟಕಗಳನ್ನು ಹೆಚ್ಚು ನಿರ್ಮಿಸಿ, ಪ್ರೋತ್ಸಾಹಿಸಬೇಕು' ಎಂದರು.

ಭಾರತೀಯ ವಿಜ್ಞಾನ ಸಂಸ್ಥೆಯ ಪ್ರೊ.ಎಲ್.ಎನ್.ರಾವ್, ಜಲ ವಿಜ್ಞಾನಿ ಮೋಹನ್ ಕುಮಾರ್, ಕ್ರೆಡೈ ಅಧ್ಯಕ್ಷ ಭಾಸ್ಕರ್, ಅಪಾರ್ಟ್‌ಮೆಂಟ್ ಫೆಡರೇಶನ್‌ನ ವಿಕ್ರಮ್ ರಾಯ್, ಸತೀಶ್ ಮಲ್ಯ, ಮಾನಸ ದಾಸ್ ಮತ್ತಿತರರು ಪಾಲ್ಗೊಂಡಿದ್ದರು. ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

ಎಚ್‌ಎಸ್‌ಆರ್‌ಪಿಗೆ ಜೂ. 12ರವರೆಗೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಳೇ ವಾಹನಗಳಿಗೆ ಅತಿ ಸುರಕ್ಷಿತ ನೋಂದಣಿ ಫಲಕ (ಎಚ್‌ಎಸ್‌ಆರ್‌ಪಿ) ಅಳವಡಿಸಲು ಸಾರಿಗೆ ಇಲಾಖೆ ನೀಡಿದ ಗಡುವು ಹೈಕೋರ್ಟ್ ಆದೇಶದ ಅನ್ವಯ ಜೂನ್ 12ರವರೆಗೆ ಇರಲಿದೆ. ಅದರ ಒಳಗೆ ಎಲ್ಲ ವಾಹನಗಳು ಹೊಸ ಫಲಕ ಅಳವಡಿಸಿಕೊಳ್ಳುವಂತೆ ಸಾರಿಗೆ ಇಲಾಖೆ ಸೂಚಿಸಿದೆ.

ಎಚ್‌ಎಸ್‌ಆರ್‌ಪಿ ಅಳವಡಿಕೆಗೆ ಮೇ 31ರವರೆಗೆ ವಿಧಿಸಲಾಗಿರುವ ಗಡುವನ್ನು ವಿಸ್ತರಿಸಲು ಸರ್ಕಾರಕ್ಕೆ ನಿರ್ದೇಶಿಸಬೇಕು ಎಂದು ಬಿಎನ್‌ಡಿ ಎನರ್ಜಿ ಲಿಮಿಟೆಡ್ ಕಂಪನಿಯು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿತ್ತು. ಪ್ರಕರಣದ ವಿಚಾರಣೆಯು ಜೂನ್ 11ಕ್ಕೆ ನಿಗದಿಯಾಗಿದೆ ಎಂದು ಹೆಚ್ಚುವರಿ ಅಡ್ವೊಕೇಟ್ ಜನರಲ್ ಹೈಕೋರ್ಟ್‌ಗೆ ತಿಳಿಸಿದ್ದರು. ಹಾಗಾಗಿ ಎಚ್‌ಎಸ್‌ಆರ್‌ಪಿ ಅಳವಡಿಸಿಕೊಳ್ಳದ ವಾಹನಗಳ ಮೇಲೆ ಜೂನ್ 12ರವರೆಗೆ ಯಾವುದೇ ಕ್ರಮ ಕೈಗೊಳ್ಳಬಾರದು ಎಂದು ಹೈಕೋರ್ಟ್ ಸೂಚಿಸಿತ್ತು.

ಇದರಿಂದ ಎಚ್‌ಎಸ್‌ಆರ್‌ಪಿ ಅಳವಡಿಸಿಕೊಳ್ಳುವವರಿಗೆ ಹೆಚ್ಚುವರಿಯಾಗಿ 12 ದಿನಗಳ ಅವಕಾಶ ಸಿಕ್ಕಿದೆ. ಈ ಸಮಯವನ್ನು ಬಳಸಿಕೊಳ್ಳಬೇಕು. ಜೂನ್ 12ರ ನಂತರ ಅವಧಿ ವಿಸ್ತರಣೆ ಅಥವಾ ಇನ್ಯಾವುದೇ ಕ್ರಮಗಳ ಬಗ್ಗೆ ಹೈಕೋರ್ಟ್ ಆದೇಶ ಮತ್ತು ಸರ್ಕಾರದ ನಿರ್ಧಾರಗಳನ್ನು ಅವಲಂಬಿಸಿದೆ ಎಂದು ಸಾರಿಗೆ ಹೆಚ್ಚುವರಿ ಆಯುಕ್ತ ಸಿ. ಮಲ್ಲಿಕಾರ್ಜುನ ತಿಳಿಸಿದ್ದಾರೆ.

2019ರ ಏಪ್ರಿಲ್ 1ಕ್ಕಿಂತ ಹಿಂದಿನ ವಾಹನಗಳು ಎಚ್‌ಎಸ್‌ಆರ್‌ಪಿ ಅಳವಡಿಸಿಕೊಳ್ಳಬೇಕು. ರಾಜ್ಯದಲ್ಲಿ ಇಲ್ಲಿಯವರೆಗೆ ಸುಮಾರು 45 ಲಕ್ಷ ವಾಹನಗಳು ಎಚ್‌ಎಸ್‌ಆರ್‌ಪಿ ಅಳವಡಿಸಿಕೊಂಡಿದ್ದು, 1.55 ಕೋಟಿ ವಾಹನಗಳು ಇನ್ನೂ ಅಳವಡಿಸಿಕೊಂಡಿಲ್ಲ ಎಂದು ಮಾಹಿತಿ ನೀಡಿದ್ದಾರೆ.

ಮೀನುಕುಂಟೆ: ವಸಂತಕುಮಾರ್ ಆಯ್ಕೆ

ಯಲಹಂಕ: ಜಾಲಾ ಹೋಬಳಿ ಮೀನುಕುಂಟೆ ಗ್ರಾಮ ಪಂಚಾಯಿತಿಯ ನೂತನ ಅಧ್ಯಕ್ಷರಾಗಿ ಎಚ್.ಎನ್. ವಸಂತಕುಮಾರ್ ಆಯ್ಕೆಯಾಗಿದ್ದಾರೆ.

ಇತ್ತೀಚೆಗೆ ತೆರವಾಗಿದ್ದ ಅಧ್ಯಕ್ಷ ಸ್ಥಾನಕ್ಕಾಗಿ (ಸಾಮಾನ್ಯ ವರ್ಗ) ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಯಾಗಿ ವಸಂತಕುಮಾರ್ ಹಾಗೂ ಬಿಜೆಪಿ ಬೆಂಬಲಿತ ಅಭ್ಯರ್ಥಿಯಾಗಿ ಶಿವಶಂಕರ್ ನಾಮಪತ್ರ ಸಲ್ಲಿಸಿದ್ದರು. 21 ಸದಸ್ಯಬಲ ಹೊಂದಿರುವ ಪಂಚಾಯಿತಿಯಲ್ಲಿ ವಸಂತಕುಮಾರ್ 12 ಮತ್ತು ಶಿವಶಂಕರ್ 9 ಮತಗಳನ್ನು ಪಡೆದರು.

ಗ್ರಾಮ ಪಂಚಾಯಿತಿ ಸದಸ್ಯರಾದ ಬೈನಹಳ್ಳಿ ನರಸಿಂಹಮೂರ್ತಿ, ಟಿ.ಪಿ. ಸತೀಶ್, ವಿ. ಸೌಮ್ಯ, ಶುಭ, ಪುಷ್ಪಾ ಚಂದ್ರು, ಲಕ್ಷ್ಮಿ, ಶಿಲ್ಪಾ, ಶೈಲಜಾ, ರಂಜಿತಾ, ಹೇಮಾವತಿ ಉಪಸ್ಥಿತರಿದ್ದರು.

ಕಬ್ಬನ್ ಪಾರ್ಕ್‌ನಲ್ಲಿರುವ ಜಲಮಂಡಳಿಯ ತ್ಯಾಜ್ಯ ನೀರು ಸಂಸ್ಕರಣಾ ಘಟಕಕ್ಕೆ ಫ್ರಾನ್ಸ್ ರಾಯಭಾರಿ ಕಚೇರಿಯ ನಿಯೋಗ ಗುರುವಾರ ಭೇಟಿ ನೀಡಿತ್ತು

ತ್ಯಾಜ್ಯ ನೀರು ಸದ್ಬಳಕೆಗೆ ಪ್ರಶಂಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ನೀರಿನ ಅಭಾವ ತಲೆದೂರಿದ ಸಂದರ್ಭದಲ್ಲಿ ಜಲಮಂಡಳಿ ವತಿಯಿಂದ ಪರಿಸ್ಥಿತಿ ನಿಭಾಯಿಸಿದ ರೀತಿ ಹಾಗೂ ತ್ಯಾಜ್ಯ ನೀರಿನ ಸದ್ಬಳಕೆಗೆ ಕೈಗೊಂಡ ಕ್ರಮಗಳ ಬಗ್ಗೆ ರಾಯಭಾರಿ ಕಚೇರಿಯ ನಿಯೋಗ ಶ್ಲಾಘನೆ ವ್ಯಕ್ತಪಡಿಸಿತು.

ಇಂಡೊ -ಫ್ರಾನ್ಸ್ ಸಹಯೋಗದ ಬಗ್ಗೆ ಹೆಚ್ಚಿನ ಮಾಹಿತಿ ಪಡೆಯಲು ಕಬ್ಬನ್ ಪಾರ್ಕ್‌ನಲ್ಲಿರುವ ಜಲಮಂಡಳಿಯ ತ್ಯಾಜ್ಯ ನೀರು ಸಂಸ್ಕರಣಾ ಘಟಕಕ್ಕೆ ಫ್ರಾನ್ಸ್ ರಾಯಭಾರಿ ಕಚೇರಿಯ ನಿಯೋಗ ಗುರುವಾರ ಭೇಟಿ ನೀಡಿತ್ತು. ಜಲಮಂಡಳಿ ಅಧ್ಯಕ್ಷ ಡಾ.ವಿ.ರಾಮ್‌ಪ್ರಸಾತ್ ಮನೋಹರ್ ಅವರು ನಿಯೋಗಕ್ಕೆ ಜಲಮಂಡಳಿಯ ಕಾರ್ಯ ವೈಖರಿ, ಸುಸ್ಥಿರ ಭವಿಷ್ಯಕ್ಕೆ ಅಳವಡಿಸಿಕೊಂಡಿರುವ ಕ್ರಮಗಳ ಬಗ್ಗೆ ಮಾಹಿತಿಯ ಪ್ರಾತ್ಯಕ್ಷಿಕೆ ನೀಡಿದರು.

ಭಾರತ ದೇಶದ ಆರ್ಥಿಕ, ಸಾಮಾಜಿಕ, ಪರಿಸರದಲ್ಲಿ ಅಳವಡಿಸಿಕೊಳ್ಳಲಾಗಿರುವ ಕ್ರಮಗಳ ಬಗ್ಗೆ ಅಧ್ಯಯನ ಮಾಡಲು ಬಂದಿರುವ ಫ್ರಾನ್ಸ್ ರಾಯಭಾರಿ ಕಚೇರಿಯ ನಿಯೋಗದ ಸದಸ್ಯರು, ಜಲಮಂಡಳಿಯ ಹೊಸ ತಂತ್ರಜ್ಞಾನಗಳು, ತ್ಯಾಜ್ಯ ನೀರನ್ನು ಸಮರ್ಪಕವಾಗಿ ಬಳಕೆ, ವ್ಯವಸ್ಥಿತವಾಗಿ ಸರಬರಾಜು ಮಾಡಿದ ಬಗ್ಗೆ ಶ್ಲಾಘನೆ ವ್ಯಕ್ತಪಡಿಸಿದರು.

ಇತ್ತೀಚೆಗೆ ಸುರಿದ ಮಳೆಯಿಂದಾಗಿ ತರಕಾರಿ, ಸೊಪ್ಪಿನ ಬೆಳೆಗೆ ಹಾನಿ; ದರ ಏರಿಕೆ

ಬೀನ್ಸ್ ಕೆ.ಜಿ.ಗೆ ₹160, ಕೊತ್ತಂಬರಿ ಕಂತೆಗೆ ₹70!

• ಖಲೀಲಅಹ್ಮದ ಶೇಖ

ಬೆಂಗಳೂರು: ಇತ್ತೀಚಿಗೆ ಸುರಿದ ಮಳೆಗೆ ಸೊಪ್ಪು ಮತ್ತು ತರಕಾರಿ ಬೆಳೆಗಳಿಗೆ ಹಾನಿಯಾಗಿದೆ. ಇದರ ಪರಿಣಾಮ ಮೊದಲೇ ಏರು ಹಾದಿಯಲ್ಲಿದ್ದ ಬೀನ್ಸ್ ದರ ಮತ್ತಷ್ಟು ಹೆಚ್ಚಾಗಿದ್ದು, ಕೆ.ಜಿಗೆ ₹160ರಂತೆ ಮಾರಾಟವಾಗುತ್ತಿದೆ. ಕೊತ್ತಂಬರಿ ಒಂದು ಕಂತೆ ₹70ರಂತೆ ಬಿಕರಿಯಾಗುತ್ತಿದೆ.

ಮಳೆಯ ಕಾರಣಕ್ಕೆ ಸೊಪ್ಪಿನ ಬೆಲೆ ಏರಿಕೆಯಾಗಿದೆ. ಅದರಲ್ಲೂ ನಾಟಿ ಕೊತ್ತಂಬರಿ ಆವಕ ಕಡಿಮೆಯಾಗಿದೆ. ದಪ್ಪನೆಯ ಒಂದು ಕಂತೆಗೆ ₹60–70ರಂತೆ ಮಾರಾಟವಾಗುತ್ತಿದೆ. ಸಬ್ಬಸ್ಸಿಗೆ ಮತ್ತು ಮೆಂತೆ ಪ್ರತಿ ಕಂತೆಗೆ ₹ 50ರಂತೆ ಮಾರಾಟವಾಗುತ್ತಿದೆ. ಪಾಲಾಕ್ ದರದಲ್ಲೂ ಏರಿಕೆ ಕಂಡಿದೆ. 'ಇನ್ನೂ ಕೆಲವು ದಿನ ಈ ಪರಿಸ್ಥಿತಿ ಮುಂದುವರಿಯಲಿದೆ' ಎನ್ನುತ್ತಾರೆ ಕೆ.ಆರ್. ಮಾರುಕಟ್ಟೆಯ ವ್ಯಾಪಾರಿಗಳು.

ಬಿಸಿಲ ಬೇಗೆಯಿಂದಾಗಿ ಗಗನಮುಖಿಯಾಗಿದ್ದ ತರಕಾರಿ ದರ, ಕೆಲ ದಿನಗಳಿಂದ ಸುರಿದ ಮಳೆಯಿಂದ ಮತ್ತಷ್ಟು ತುಟ್ಟಿಯಾಗಿದೆ. ಬೀನ್ಸ್, ಬಟಾಣಿ, ಹಾಗಲಕಾಯಿ ದರದಲ್ಲಿ ಹೆಚ್ಚಳವಾಗಿದೆ. ಇನ್ನು ಶುಂಠಿ, ಬೆಳ್ಳುಳ್ಳಿ ದರ ದ್ವಿಶತಕ ದಾಟಿದೆ.

ಮಳೆ ಕೊರತೆಯಿಂದಾಗಿ ತರಕಾರಿ ಬೆಳೆಯುವ ರೈತರ ಸಂಖ್ಯೆ ಕಡಿಮೆಯಾಗಿದೆ. ಆದ್ದರಿಂದ, ಮಾರುಕಟ್ಟೆಯ ಬೇಡಿಕೆಗೆ ತಕ್ಕಂತೆ ತರಕಾರಿ ಪೂರೈಕೆ ಆಗುತ್ತಿಲ್ಲ. ತರಕಾರಿ ಮತ್ತು ಸೊಪ್ಪಿನ ಬೆಲೆ ಏರಿಕೆಗೆ ಇದೂ ಒಂದು ಕಾರಣ. ಗ್ರಾಹಕರು ತರಕಾರಿ ದರ ಕೇಳಿ ಖರೀದಿಸಲು ಹಿಂದೇಟು ಹಾಕುವ ಪರಿಸ್ಥಿತಿ ಬಂದಿದೆ.

'ಮಳೆಗಾಲದಲ್ಲಿ ಸೊಪ್ಪುಗಳು ಕೊಳೆಯುತ್ತವೆ. ಹಾಗಾಗಿ, ಪ್ರತಿ ಮಳೆಗಾಲದಲ್ಲೂ ಅವುಗಳ ದರ ಹೆಚ್ಚಾಗುತ್ತದೆ' ಎಂದು ಸೊಪ್ಪು ಮಾರಾಟ ಮಾಡುವ ಸಂತೋಷ್ 'ಪ್ರಜಾವಾಣಿ'ಗೆ ತಿಳಿಸಿದರು.

ಬದನೆಕಾಯಿ, ಬೆಂಡೆಕಾಯಿ, ಗೆಡ್ಡೆ ಕೋಸು, ಕ್ಯಾರೆಟ್, ಕ್ಯಾಬೇಜ್, ತೊಂಡೆಕಾಯಿ ಪ್ರತಿ ಕೆ.ಜಿಗೆ ಅರ್ಧ ಶತಕದ ಗಡಿ ದಾಟಿವೆ. ಮೆಣಸಿನಕಾಯಿ ಪ್ರತಿ ಕೆ.ಜಿಗೆ ₹120 ರಂತೆ ಮಾರಾಟವಾಗುತ್ತಿದೆ. ಟೊಮೊಟೊ, ಆಲೂಗಡ್ಡೆ, ಈರುಳ್ಳಿ ದರಗಳು ಸ್ಥಿರವಾಗಿವೆ. ಟೊಮೆಟೊ ಕೆ.ಜಿ.ಗೆ ₹30ರಂತೆ ಮಾರಾಟವಾಗುತ್ತಿದೆ' ಎನ್ನುತ್ತಾರೆ ಕೆ.ಆರ್. ಮಾರುಕಟ್ಟೆಯ ತರಕಾರಿ ವ್ಯಾಪಾರಿಗಳಾದ ಅಜೀಮ್ ಮತ್ತು ಮಂಜುನಾಥ್.

'ಮೊದಲಿನಂತೆ ಅಗತ್ಯ ಪ್ರಮಾಣದ ತರಕಾರಿಗಳು ಮಾರುಕಟ್ಟೆಗೆ ಪೂರೈಕೆಯಾಗಲು ಎರಡು ಮೂರು ವಾರದ ಸಮಯ ಬೇಕು. ಅಲ್ಲಿಯವರೆಗೆ ದರ ಏರಿಕೆ ತಪ್ಪಿದ್ದಲ್ಲ' ಎಂದು ಅವರು ಮಾಹಿತಿ ನೀಡಿದರು.

ಕೆ.ಆರ್. ಮಾರುಕಟ್ಟೆ ದರ ಪ್ರತಿ ಕೆ.ಜಿಗೆ ₹ಗಳಲ್ಲಿ

ತರಕಾರಿ	ಕಳೆದ ವಾರ	ಈ ವಾರ
ಬೀನ್ಸ್	140	160
ಕ್ಯಾಪ್ಸಿಕಮ್	60	60
ಕ್ಯಾರೆಟ್	50	60
ಹೀರೆಕಾಯಿ	60	70
ಬೆಂಡೇಕಾಯಿ	40	60
ಚವಳಿಕಾಯಿ	60	60
ಮೆಣಸಿನಕಾಯಿ	80	120
ಬಟಾಣಿ	180	160
ಆಲೂಗಡ್ಡೆ	20	30
ಟೊಮೆಟೊ	20	30
ಈರುಳ್ಳಿ	20	30
ಹೂಕೋಸು	50	60
ಬದನೆಕಾಯಿ	60	50
ಕ್ಯಾಬೇಜ್	40	40
ತೊಂಡೆಕಾಯಿ	60	60
ಸೌತೆಕಾಯಿ	60	40
ಬಿಟ್‌ರೂಟ್	40	40
ಮೂಲಂಗಿ	40	50
ಹಾಗಲಕಾಯಿ	60	100
ಬೆಳ್ಳುಳ್ಳಿ	160	220
ಶುಂಠಿ	180	200

ಸೊಪ್ಪು	ಚಿಲ್ಲರೆ ದರ (ಪ್ರತಿ ಕಂತೆಗೆ ₹ಗಳಲ್ಲಿ)	
ಕೊತ್ತಂಬರಿ	30	70
ಮೆಂತ್ಯ	20	50
ಸಬ್ಬಸ್ಸಿಗೆ	20	50
ಪಾಲಕ್	10	20
ಪುದೀನ	10	20

'ಬಲಾತ್ಕಾರಿ ಬಚಾವೋ ಪಾರ್ಟಿ' ಕೆಳಗಿಳಿಸುವ ಸಂಕಲ್ಪ: ಸುಭಾಷಿಣಿ ಅಲಿ

'ದೌರ್ಜನ್ಯವಲ್ಲ, ವಿಕೃತ ಲೈಂಗಿಕ ಹತ್ಯಾಕಾಂಡ'

ಪ್ರಜಾವಾಣಿ ವಾರ್ತೆ

ಹಾಸನ: 'ಲೈಂಗಿಕ ದೌರ್ಜನ್ಯ ಪ್ರಕರಣದ ಆರೋಪಿ ಪ್ರಜ್ವಲ್ ರೇವಣ್ಣ ಅವರನ್ನು ಬಂಧಿಸಬೇಕು ಹಾಗೂ ಸಂತ್ರಸ್ತ ಮಹಿಳೆಯರಿಗೆ ರಕ್ಷಣೆ ನೀಡಬೇಕು' ಎಂದು ಆಗ್ರಹಿಸಿ, ಕರ್ನಾಟಕ ಜನಪರ ಚಳವಳಿಗಳ ಒಕ್ಕೂಟದಿಂದ ನಗರದಲ್ಲಿ ಗುರುವಾರ ಹಮ್ಮಿಕೊಂಡಿದ್ದ 'ಹಾಸನ ಚಲೋ' ಪ್ರತಿಭಟನೆಯಲ್ಲಿ ರಾಜ್ಯದ ವಿವಿಧೆಡೆಗಳಿಂದ ಬಂದಿದ್ದ ಸಹಸ್ರಾರು ಮಂದಿ ಆಕ್ರೋಶ ದಾಖಲಿಸಿದರು.

ನಗರದ ಮಹಾರಾಜಾ ಪಾರ್ಕ್‌ನಿಂದ ಮೆರವಣಿಗೆ ಆರಂಭಿಸಿದ ಸದಸ್ಯರು, 'ಪ್ರಜ್ವಲ್ ರೇವಣ್ಣ ಅವರನ್ನು ಬಂಧಿಸಬೇಕು. ಮಹಿಳೆಯರಿಗೆ ರಕ್ಷಣೆ ನೀಡಬೇಕು. ಅವರ ನೆರವಿಗೆ ಸರ್ಕಾರ ನಿಲ್ಲಬೇಕು. ಪೆನ್‌ಡ್ರೈವ್ ಹಂಚಿದವರ ವಿರುದ್ಧವೂ ಕ್ರಮ ಕೈಗೊಳ್ಳಬೇಕು' ಎಂದು ಒಕ್ಕೊರಲಿನಿಂದ ಆಗ್ರಹಿಸಿದರು.

ದಾರಿಯುದ್ದಕ್ಕೂ ಪ್ರಜ್ವಲ್ ವಿರುದ್ಧ ಘೋಷಣೆಗಳನ್ನು ಕೂಗಿದ ಸದಸ್ಯರು, ನಗರದ ಜಿಲ್ಲಾಧಿಕಾರಿ ಕಚೇರಿ ಬಳಿ ಬೃಹತ್ ಬಹಿರಂಗ ಸಭೆ ನಡೆಸಿದರು.

ಅಧ್ಯಕ್ಷತೆ ವಹಿಸಿದ್ದ ಲೇಖಕಿ ರೂಪ ಹಾಸನ ಮಾತನಾಡಿ, 'ಇದು ಲೈಂಗಿಕ ಹಗರಣವಲ್ಲ, ವಿಕೃತ ಲೈಂಗಿಕ ಹತ್ಯಾಕಾಂಡ. ಹೆಣ್ಣುಮಕ್ಕಳ ಮಾನ-ಪ್ರಾಣ, ಕುಟುಂಬವನ್ನು ಪಣಕ್ಕಿಟ್ಟು ಸಂಸದನೊಬ್ಬ ನಡೆಸಿರುವ ಕಾಮಕೃತ್ಯ. ಅದನ್ನು ವಿಡಿಯೊ ಮಾಡಿದ್ದಲ್ಲದೇ, ತನ್ನ ನಿರ್ಲಕ್ಷ್ಯದಿಂದ ಮತ್ತೊಬ್ಬರಿಗೆ ಸಿಗುವಂತೆ ಮಾಡಿದ್ದಾನೆ. ಚುನಾವಣಾ ದಾಳವಾಗಿ ಅದನ್ನು ಬಳಸಿಕೊಂಡು ಹಂಚಿದವರು, ಆ ವಿಡಿಯೊಗಳನ್ನು ಇಟ್ಟುಕೊಂಡು ಬೇಕಾದಂತೆ ಬಳಸಿಕೊಂಡವರು, ಹೀಗೆ ಎಲ್ಲರನ್ನೂ ಖಂಡಿಸಬೇಕು' ಎಂದು ಹೇಳಿದರು.

'ಅತ್ಯಂತ ತಳಸಮುದಾಯದ ಹೆಣ್ಣು-ಮಕ್ಕಳನ್ನು ಪ್ರಜ್ವಲ್ ತನ್ನ ಕಾಮಕೃತ್ಯಕ್ಕೆ ಬಳಸಿಕೊಂಡಿದ್ದಾನೆ. ನಿಮ್ಮೊಂದಿಗೆ ನಾವಿದ್ದೇವೆ. ನೊಂದ ಹೆಣ್ಣುಮಕ್ಕಳು ಧೈರ್ಯವಾಗಿ ಮನೆಯಿಂದ ಹೊರಬಂದು ಎಸ್‌ಐಟಿ ಮುಂದೆ ದೂರು ದಾಖಲಿಸಿ' ಎಂದು ಮನವಿ ಮಾಡಿದರು.

ರಾಜ್ಯಸಭೆ ಮಾಜಿ ಸದಸ್ಯೆ ಸುಭಾಷಿಣಿ ಅಲಿ ಮಾತನಾಡಿ, 'ಸ್ವಾತಂತ್ರ್ಯ ಬಂದು 75 ವರ್ಷ ಕಳೆದರೂ ದೇಶದ ಹಲವೆಡೆ ಮಹಿಳೆಯರ ಮೇಲೆ ದೌರ್ಜನ್ಯ ನಡೆಯುತ್ತಲೇ ಇದೆ. ಪುರುಷ ಪ್ರಧಾನ, ಬಂಡವಾಳಶಾಹಿ ವ್ಯವಸ್ಥೆ, ರಾಜಕೀಯ ಪ್ರಭುತ್ವದಂ-ತಹ ಮೈತ್ರಿಕೂಟ ರಚಿಸಿಕೊಂಡಿರುವ 'ಬಲಾತ್ಕಾರಿ ಬಚಾವೋ ಪಾರ್ಟಿ'ಯನ್ನು ಅಧಿಕಾರದಿಂದ ಕೆಳಗೆ ಇಳಿಸುವ ಸಂಕಲ್ಪ ಮಾಡುತ್ತಿದ್ದೇವೆ' ಎಂದು ಹೇಳಿದರು.

'ಇದುವರೆಗೆ ನಾವು ಟ್ರೇಲರ್ ತೋರಿಸಿದ್ದೇವೆ. ಇನ್ನೂ ಸಿನಿಮಾ ಬಾಕಿ ಇದೆ ಎಂದು ನಮ್ಮನ್ನು ಆಳುವ ದೊಡ್ಡವರು ಹೇಳುತ್ತಿದ್ದಾರೆ. ಆದರೆ, ಅವರು ತೋರಿಸಿರುವ ಟ್ರೇಲರ್ ಎಂಥದ್ದು? ಬ್ರಿಜ್‌ಭೂಷಣ್ ಪರವಾಗಿ ನಿಂತರು. ಬಿಲ್ಕಿಸ್ ಬಾನು ಅತ್ಯಾಚಾರಿಗಳಿಗೆ ಜಾಮೀನು ಕೊಡಿಸಿದರು. ರಾಮ್‌ರಹೀಮರಿಗೆ ಪೆರೋಲ್ ಕೊಡಿಸಿದರು. ಪ್ರಜ್ವಲ್ ರೇವಣ್ಣ ಅವರ ಕೈಎತ್ತಿ ಹಿಡಿದು ಮತ ಕೇಳಿದರು. ಇದೇನಾ ನಿಮ್ಮ ಟ್ರೇಲರ್' ಎಂದು ಪ್ರಶ್ನಿಸಿದರು.

'ಇಂತಹ ನಿಮ್ಮ ಸಿನಿಮಾ, ಟ್ರೇಲರ್ ನಡೆಯಲ್ಲ. ಜೂನ್ 4ರ ನಂತರ ಟ್ರೇಲರ್ ಬಂದ್ ಆಗಲಿದೆ. ಯಾವುದೇ ಸರ್ಕಾರವಿರಲಿ, ನ್ಯಾಯಕ್ಕಾಗಿ ನಮ್ಮ ಹೋರಾಟ ಮುಂದುವರಿಯಲಿದೆ' ಎಂದು ಹೇಳಿದರು.

'ಈ ಲೈಂಗಿಕ ದೌರ್ಜನ್ಯದಲ್ಲಿ ಭಾಗಿಯಾಗಿರುವ ಪ್ರಜ್ವಲ್ ರೇವಣ್ಣ, ಅವರ ತಂದೆ ಹಾಗೂ ಅವರ ಕುಟುಂಬದವರನ್ನು ಜೈಲಿಗೆ ಹಾಕಬೇಕು. ಅವರಿಗೆ ಜಾಮೀನು ಕೊಡಬಾರದು. ತನಿಖೆಯಲ್ಲಿ ಅವರು ತಮ್ಮ ಪ್ರಭಾವ ಬಳಸಬಹುದು. ಆದರೆ, ರಾಜ್ಯ ಸರ್ಕಾರ ಅದಕ್ಕೆ ಸೊಪ್ಪು ಹಾಕದೇ, ಅವರನ್ನು ಜೈಲಿಗೆ ಕಳುಹಿಸಬೇಕು' ಎಂದು ಆಗ್ರಹಿಸಿದರು.

ಹಾಸನದಲ್ಲಿ ಗುರುವಾರ ನಡೆದ ನಮ್ಮ ನಡಿಗೆ ಹಾಸನದ ಕಡೆಗೆ ಪ್ರತಿಭಟನಾ ಮೆರವಣಿಗೆಯಲ್ಲಿ ಸುಭಾಷಿಣಿ ಅಲಿ, ಮೀನಾಕ್ಷಿ ಬಾಳಿ, ಕೆ.ನೀಲಾ ಸೇರಿದಂತೆ ಹಲವು ಸಾಮಾಜಿಕ ಹೋರಾಟಗಾರರು ಭಾಗವಹಿಸಿದ್ದರು

ಮುಖ್ಯಾಂಶಗಳು

- ರಾಜ್ಯದ ವಿವಿಧೆಡೆಯಿಂದ ಬಂದ ಸಾವಿರಾರು ಜನ
- ಪ್ರತಿಭಟನಾ ಮೆರವಣಿಗೆ, ಬಹಿರಂಗ ಸಭೆ
- ದೇವೇಗೌಡರ ಕುಟುಂಬದ ವಿರುದ್ಧ ಆಕ್ರೋಶ

ಭಾರತದಲ್ಲಿ 53 ಮಂದಿಯನ್ನು ಭಯೋತ್ಪಾದಕರು ಎಂದು ಸರ್ಕಾರ ಪಟ್ಟಿ ಮಾಡಿದೆ. ಪ್ರಜ್ವಲ್ ರೇವಣ್ಣನನ್ನು 54ನೇ ಭಯೋತ್ಪಾದಕನಾಗಿ ಹೆಸರಿಸಬೇಕು. 400 ಎಫ್‌ಐಆರ್ ದಾಖಲಿಸಬೇಕು
ಎಸ್.ಬಾಲನ್, ವಕೀಲ

ಹಾಸನವನ್ನು ತಮ್ಮ ರಿಪಬ್ಲಿಕ್ ಮಾಡಿಕೊಂಡು, ಪಾಳೇಗಾರಿಕೆ ನಡೆಸುತ್ತಿರುವ ರೇವಣ್ಣ ಕುಟುಂಬದ ಅವನತಿಯಾಗಬೇಕು. ಬಳ್ಳಾರಿಯ ಪಾಳೇಗಾರಿಕೆ ಮುರಿದಂತೆ, ಹಾಸನದಲ್ಲೂ ಮುಗಿಸಬೇಕು
ಎಸ್.ಆರ್. ಹಿರೇಮಠ, ಹೋರಾಟಗಾರ

ಮೀಸಲಾತಿ ಪರಿಚಯಿಸಿದಾಗ ಮಹಿಳೆಯರ ಬಗ್ಗೆ ಕಾಳಜಿ ಇದೆ ಎಂದು ದೇವೇಗೌಡರು ಹೇಳಿದ್ದರು. ಹಾಸನದ ಹೆಣ್ಣುಮಕ್ಕಳ ಬಗ್ಗೆ ಮಾಜಿ, ಹಾಲಿ ಪ್ರಧಾನಿಯಲ್ಲಿ ಏಕೆ ಆ ಕಾಳಜಿ ಕಾಣುತ್ತಿಲ್ಲ
ಎಸ್.ವರಲಕ್ಷ್ಮಿ
ಸಿಐಟಿಯು ರಾಜ್ಯ ಘಟಕದ ಅಧ್ಯಕ್ಷೆ

ಈಗಲಾದರೂ ಎಚ್.ಡಿ.ದೇವೇಗೌಡರು ರಾಜಕೀಯ ನಿವೃತ್ತಿ ಘೋಷಿಸಬೇಕು. ಅಪರಾಧ ಮಾಡಿದರೆ, ರಾಜಕೀಯ ನಿವೃತ್ತಿ ಘೋಷಿಸಬೇಕಾಗುತ್ತದೆ ಎಂಬ ಸಂದೇಶ ರವಾನಿಸಬೇಕು
ಸಿದ್ಧನಗೌಡ ಪಾಟೀಲ
ಸಿಪಿಐ ಮುಖಂಡ

ಹುಚ್ಚಾಸ್ಪತ್ರೆಯಲ್ಲಿ ಇರಬೇಕಾದವನನ್ನು ಎಂ.ಪಿ ಮಾಡಿಬಿಟ್ಟಿರಿ. ಅದರ ಪರಿಣಾಮ ಹಾಸನದ ಹೆಣ್ಣುಮಕ್ಕಳನ್ನು ಶೋಷಿಸಲಾಗಿದೆ. ಪ್ರಜ್ವಲ್ ಗೆದ್ದರೂ-ಸೋತರೂ ಆತನನ್ನು ಒಪ್ಪಿಕೊಳ್ಳಬೇಡಿ
ಕೆ.ನೀಲಾ, ಜನವಾದಿ ಮಹಿಳಾ ಸಂಘಟನೆ

'10 ದಿನ ಗಡುವಿನ ನಂತರ ಕ್ರಮ'

ನವದೆಹಲಿ(ಪಿಟಿಐ): ಲೈಂಗಿಕ ದೌರ್ಜನ್ಯ ಎಸಗಿದ ಆರೋಪ ಎದುರಿಸುತ್ತಿರುವ ಸಂಸದ ಪ್ರಜ್ವಲ್ ರೇವಣ್ಣ ಅವರಿಗೆ ರಾಜತಾಂತ್ರಿಕ ಪಾಸ್‌ಪೋರ್ಟ್ ರದ್ದತಿಗೆ ಸಂಬಂಧಿಸಿ ಜೂನ್ 2ರೊಳಗೆ ಪ್ರತಿಕ್ರಿಯೆ ನೀಡುವಂತೆ ಶೋಕಾಸ್ ನೋಟಿಸ್ ಜಾರಿ ಮಾಡಲಾಗಿದೆ. ಈ ಗಡುವು ಮುಗಿದ ನಂತರ ಸೂಕ್ತ ಕ್ರಮ ಕೈಗೊಳ್ಳಲಾಗುವು-ದು' ಎಂದು ವಿದೇಶಾಂಗ ಸಚಿವಾಲಯ ಗುರುವಾರ ಹೇಳಿದೆ.

ಸಚಿವಾಲಯವು ಮೇ 23ರಂದು ಪ್ರಜ್ವಲ್ ರೇವಣ್ಣ ಅವರಿಗೆ ಶೋಕಾಸ್ ನೋಟಿಸ್ ನೀಡಿದೆ.

'ನಿಮ್ಮ ವಿರುದ್ಧ ಲೈಂಗಿಕ ದೌರ್ಜನ್ಯದ ಆರೋಪಗಳಿದ್ದು, ಕರ್ನಾಟಕ ಸರ್ಕಾರದ ಮನವಿಯಂತೆ ನಿಮ್ಮ ರಾಜತಾಂತ್ರಿಕ ಪಾಸ್‌ಪೋರ್ಟ್ ಅನ್ನು ರದ್ದುಗೊಳಿಸಬಾರದೇಕೆ' ಎಂದು ಸಚಿವಾಲಯ ನೋಟಿಸ್‌ನಲ್ಲಿ ಕೇಳಿದೆ.

ಈ ಕುರಿತು ಸುದ್ದಿಗೋಷ್ಠಿಯ-ಲ್ಲಿ ಪ್ರತಿಕ್ರಿಯಿಸಿರುವ ಸಚಿವಾಲಯದ ವಕ್ತಾರ ರಣಧೀರ ಜೈಸ್ವಾಲ್,'ಈ ವಿಚಾರವಾಗಿ ಮೇ 21ರಂದು ಕರ್ನಾಟಕ ಸರ್ಕಾರ ಮನವಿ ಸಲ್ಲಿಸಿತ್ತು. ಭಾರತೀಯ ಪಾಸ್‌ಪೋರ್ಟ್ ಕಾಯ್ದೆ ಪ್ರಕಾರ, ಸಂಸದ ಪ್ರಜ್ವಲ್ ರೇವಣ್ಣ ಅವರ ಪಾಸ್‌ಪೋರ್ಟ್ ರದ್ದತಿಗೆ ಸಂಬಂಧಿಸಿದ ಪ್ರಕ್ರಿಯೆಗೆ ಮೇ 23ರಂದು ಚಾಲನೆ ನೀಡಲಾಗಿದೆ' ಎಂದು ಹೇಳಿದ್ದಾರೆ.

'10 ದಿನಗಳ ಒಳಗಾಗಿ ನೋಟಿಸ್‌ಗೆ ಪ್ರತಿಕ್ರಿಯಿಸುವಂತೆ ಸೂಚಿಸಲಾಗಿದೆ. ಪ್ರಜ್ವಲ್ ರೇವಣ್ಣ ಅವರ ಪ್ರತಿಕ್ರಿಯೆಗಾಗಿ ಕಾಯುತ್ತಿದ್ದೇವೆ. ಅವರ ಪ್ರತಿಕ್ರಿಯೆ ಸ್ವೀಕರಿಸಿದ ನಂತರ ಇಲ್ಲವೇ 10 ದಿನಗಳ ಗಡುವು ಮುಗಿದ ನಂತರ ಮುಂದಿನ ಕ್ರಮ ತೆಗೆದುಕೊ-ಳ್ಳುತ್ತೇವೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.



ಮರಿಗಳ ಜೊತೆ ಹುಲಿ ನಿದ್ರೆ ಬಂಡೀಪುರ ಹುಲಿ ಸಂರಕ್ಷಿತದ ಪ್ರದೇಶದ ಸಫಾರಿ ವಲಯದಲ್ಲಿ ಹುಲಿಯೊಂದು ತನ್ನ ಮರಿಗಳ ಜೊತೆಗೆ ನಿದ್ರೆಗೆ ಜಾರಿದ ಅಪರೂಪದ ದೃಶ್ಯವನ್ನು ಪ್ರವಾಸಿಗರು ಕ್ಯಾಮರಾದಲ್ಲಿ ಸೆರೆ ಹಿಡಿದಿದ್ದಾರೆ

ಪ್ರಜ್ವಲ್ ರೇವಣ್ಣ ಬಂಧನ

ಒಂದನೇ ಪುಟದಿಂದ..

ಪ್ರಜ್ವಲ್ ಜರ್ಮನಿಯಿಂದ ಬರುತ್ತಿದ್ದ ಮಾಹಿತಿ ಕಲೆಹಾಕಿದ್ದ ಎಸ್‌ಐಟಿ ಅಧಿಕಾರಿಗಳು, ಗುರುವಾರ ಸಂಜೆಯಿಂದಲೇ ನಿಲ್ದಾಣದಲ್ಲಿ ಮೊಕ್ಕಾಂ ಹೂಡಿದ್ದರು.

ಟರ್ಮಿನಲ್ 2ಕ್ಕೆ ಬಂದಿಳಿದ ವಿಮಾನ: 'ಜರ್ಮನಿಯಲ್ಲಿ ಇದ್ದರು' ಎನ್ನಲಾದ ಪ್ರಜ್ವಲ್ ರೇವಣ್ಣ, ಅಲ್ಲಿಯ ಮ್ಯೂನಿಕ್ ನಗರದ ನಿಲ್ದಾಣದಿಂದ ವಿಮಾನದಲ್ಲಿ (ಲುಫ್ತಾನ್ಸಾ ಏರ್‌ಲೈನ್ಸ್‌ನ ಎಲ್‌ಎಚ್‌-764) ಗುರುವಾರ ಮಧ್ಯಾಹ್ನ ಬೆಂಗಳೂರಿನತ್ತ ಹೊರಟಿದ್ದರು. ತಡರಾತ್ರಿ 12.50 ಗಂಟೆ ಸುಮಾರಿಗೆ ಬೆಂಗಳೂರಿನ ನಿಲ್ದಾಣದ ಟರ್ಮಿನಲ್-2ಕ್ಕೆ ವಿಮಾನ ಬಂದಿಳಿಯಿತು.

ವಿಮಾನದ ಬಳಿ ಹೋಗಿದ್ದ ಸಿಐಎಸ್‌ಎಫ್ ಸಿಬ್ಬಂದಿ, ಪ್ರಜ್ವಲ್ ರೇವಣ್ಣ ಅವರನ್ನು ವಶಕ್ಕೆ ಪಡೆದು ನಿಲ್ದಾಣದೊಳಗೆ ಕರೆತಂದರು. ನಂತರ, ಅವರನ್ನು ವಲಸೆ ಅಧಿಕಾರಿಗಳ ಸುಪರ್ದಿಗೆ ಒಪ್ಪಿಸಿದರು. ವಲಸೆ ಅಧಿಕಾರಿಗಳು, ಪ್ರಜ್ವಲ್ ಅವರನ್ನು ವಿಶೇಷ ಕೊಠಡಿಗೆ ಕರೆದೊಯ್ದು ಪರಿಶೀಲನೆ ನಡೆಸಿದರು. ರಾಜತಾಂತ್ರಿಕ ಪಾಸ್‌ಪೋರ್ಟ್ ಇದ್ದಿದ್ದರಿಂದ, ಪ್ರಜ್ವಲ್ ಅವರನ್ನು ಎಸ್‌ಐಟಿ ಅಧಿಕಾರಿಗಳು ಬಂಧಿಸುತ್ತಿರುವ ಮಾಹಿತಿಯನ್ನು ಸಂಬಂಧಪಟ್ಟವರಿಗೆ ರವಾನಿಸಿದರು.

ನಿಲ್ದಾಣದ ಹೊರಗೆ ಹಾಜರಿದ್ದ ಎಸ್‌ಐಟಿ ಅಧಿಕಾರಿಗಳ ತಂಡವನ್ನು ವಲಸೆ ಅಧಿಕಾರಿಗಳು ನಿಲ್ದಾಣದೊಳಗೆ ಕರೆಸಿಕೊಂಡರು. ಕಾನೂನು ಪ್ರಕ್ರಿಯೆ ಪೂರ್ಣಗೊಳಿಸಿ ಪ್ರಜ್ವಲ್ ಅವರನ್ನು ವಶಕ್ಕೆ ನೀಡಿದರು. ಪ್ರಜ್ವಲ್ ಅವರನ್ನು ಬಂಧಿಸಿದ ಎಸ್‌ಐಟಿ ಅಧಿಕಾರಿಗಳು, ನಿಲ್ದಾಣದಿಂದ ಹೊರಗೆ ಕರೆತಂದರು.

'ಆಸ್ಪತ್ರೆಯಲ್ಲಿ ತಪಾಸಣೆ'

ಎಸ್‌ಐಟಿ ಕಚೇರಿಗೆ ಕರೆದೊ-ಯ್ಯುವುದಕ್ಕೂ ಮುನ್ನ ಪ್ರಜ್ವಲ್ ಅವರನ್ನು ವಿಮಾನ ನಿಲ್ದಾಣ ಬಳಿಯ ಖಾಸಗಿ ಆಸ್ಪತ್ರೆಗೆ 1.25 ಗಂಟೆ ಸುಮಾರಿಗೆ ಕರೆದೊಯ್ಯ-ಲಾಯಿತು. ಅಲ್ಲಿಯೇ ಪ್ರಜ್ವಲ್ ಅವರನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಯಿತು. ವೈದ್ಯರ ತಪಾಸಣೆ ಮುಕ್ತಾಯಗೊಂಡ ಬಳಿಕ ಪ್ರಜ್ವಲ್ ಅವರನ್ನು ವಿಶೇಷ ವಾಹನದಲ್ಲಿ ಎಸ್‌ಐಟಿ ಕಚೇರಿಯತ್ತ ಕರೆದೊಯ್ಯ ಲಾಯಿತು.

ವಿಮಾನ ನಿಲ್ದಾಣ, ಬಳ್ಳಾರಿ ರಸ್ತೆಯುದ್ದಕ್ಕೂ ಹಾಗೂ ಎಸ್‌ಐಟಿ ಕಚೇರಿ ಸುತ್ತಮುತ್ತ ಪೊಲೀಸರು ಮುಂಜಾಗ್ರತಾ ಕ್ರಮವಾಗಿ ಬಿಗಿ ಭದ್ರತೆ ಕೈಗೊಂಡಿದ್ದರು.

ಸಾಕಾನೆಗಳಿಂದ ಕಾಡಾನೆ ಓಡಿಸುವ ಕಾರ್ಯಾಚರಣೆಗೆ ಚಾಲನೆ

ಪ್ರಜಾವಾಣಿ ವಾರ್ತೆ

ಕನಕಪುರ: ಸಾಕಿದ ಆನೆಗಳ ಮೂಲಕ ಕಾಡಾನೆಗಳನ್ನು ಮರಳಿ ಅರಣ್ಯಕ್ಕೆ ಅಟ್ಟುವ ಕಾರ್ಯಾಚರಣೆಗೆ ತಾಲ್ಲೂಕಿನ ಕಬ್ಬಾಳು ಅರಣ್ಯ ಪ್ರದೇಶದಲ್ಲಿ ಗುರುವಾರ ಅರಣ್ಯ ಇಲಾಖೆ ಚಾಲನೆ ನೀಡಿದೆ.

ಕಬ್ಬಾಳು ಅರಣ್ಯ ಪ್ರದೇಶ ಸೇರಿದಂತೆ ತೆಂಗಿನಕಲ್ಲು ಬೆಟ್ಟ, ಚನ್ನಪಟ್ಟಣದಲ್ಲಿ ಸುಮಾರು 25 ಕಾಡಾನೆ ಸೇರಿಕೊಂಡಿವೆ. ರೈತರ ಜಮೀನುಗಳಿಗೆ ನುಗ್ಗಿ ಫಸಲು ನಾಶ ಮಾಡುತ್ತಿವೆ. ಇದು ರೈತರು ಮತ್ತು ಅರಣ್ಯ ಇಲಾಖೆ ಅಧಿಕಾರಿಗಳಿಗೆ ತಲೆ ನೋವಾಗಿತ್ತು.

ರೈತರಿಗೆ ತೊಂದರೆ ಕೊಡುತ್ತಿರುವ ಕಾಡಾನೆಗಳನ್ನು ಕಾಡಿಗೆ ಓಡಿಸಬೇಕೆಂದು ಒತ್ತಾಯಿಸಿ ರೈತರು ಹಲವು ಭಾರಿ ಪ್ರತಿಭಟನೆ ನಡೆಸಿದ್ದರು.

ಇದಕ್ಕೆ ಮಣಿದ ಅರಣ್ಯ ಇಲಾಖೆಯ ಸಾತನೂರು, ಚನ್ನಪಟ್ಟಣ ಮತ್ತು ರಾಮನಗರ ವಲಯದ ಅಧಿಕಾರಿಗಳು ಗುರುವಾರ ಏಳು ಸಾಕಿದ ಆನೆಗಳನ್ನು ಕರೆತಂದು ಕಾಡಾನೆ ಓಡಿಸುವ ಕಾರ್ಯಾಚರಣೆಗೆ ಚಾಲನೆ ನೀಡಿದರು.

ವಿವಿಧ ಯೋಜನೆಯ ಫಲಾನುಭವಿಗಳ ಜೊತೆಗೆ ಬಿಎಂಟಿಸಿ ಚಾಲಕರಿಗೂ ತರಬೇತಿ

ಅಪಘಾತ ತಪ್ಪಿಸಲು 'ಸಿಮ್ಯುಲೇಟರ್' ತರಬೇತಿ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ವಾಹನ ಚಾಲನೆಯಲ್ಲಿ ನೈಪುಣ್ಯ ಪಡೆಯುವುದಕ್ಕಾಗಿ ಬಿಎಂಟಿಸಿ 'ಸಿಮ್ಯುಲೇಟರ್' ಮೂಲಕ ಚಾಲಕರಿಗೆ ವಿಶೇಷ ತರಬೇತಿಯನ್ನು ನೀಡುತ್ತಿದೆ. ವಿವಿಧ ಯೋಜನೆಯಡಿ ಚಾಲನಾ ತರಬೇತಿಗೆ ಆಯ್ಕೆಯಾದವರು ಮತ್ತು ಬಸ್ ಚಾಲಕರಾಗಿ ಆಯ್ಕೆಯಾದವರ ಜೊತೆಗೆ ಬಿಎಂಟಿಸಿಯ ಚಾಲಕರಿಗೂ ಈ ತರಬೇತಿ ನೀಡಲಾಗುತ್ತಿದೆ.

ಬಸ್ ಚಲಾಯಿಸಿದ ಅನುಭವವನ್ನೇ ನೀಡುವ ಡಿಜಿಟಲ್ ವ್ಯವಸ್ಥೆಯ ಸುಸಜ್ಜಿತ ಹವಾನಿಯಂತ್ರಿತ ಕೊಠಡಿ ಹೊಂದಿರುವ ಯಂತ್ರವೇ 'ಸಿಮ್ಯುಲೇಟರ್'. ಬಿಎಂಟಿಸಿಯ ವಡ್ಡರಹಳ್ಳಿ ಚಾಲಕರ ತರಬೇತಿ ಕೇಂದ್ರದಲ್ಲಿ ಈ ಯಂತ್ರ ಇದೆ. ಬಸ್ ಮಾದರಿಯಲ್ಲಿಯೇ ಚಕ್ರ, ಸೀಟು, ಸೀಟ್ ಬೆಲ್ಟ್, ಆ್ಯಕ್ಸಿಲೇಟರ್, ಬ್ರೇಕ್, ಕ್ಲಚ್ ಹೊಂದಿದ್ದು ಎದುರಿಗೆ ಎಲ್.ಇ.ಡಿ ಸ್ಕ್ರೀನ್ ಇರುತ್ತದೆ. 'ಸಿಮ್ಯುಲೇಟರ್'ನಲ್ಲಿ ಬಸ್ ಚಾಲನೆ ಮಾಡಿದಾಗ, ಕಲಿಯುವವರಿಗೆ ರಸ್ತೆಯಲ್ಲಿ ಚಲಾಯಿಸಿದ ಅನುಭವವೇ ಸಿಗುತ್ತದೆ.

'ದಿಣ್ಣೆಗಳನ್ನು ಏರುವಾಗ, ಇಳಿಯುವಾಗ, ತಿರುವುಗಳಲ್ಲಿ ಹೇಗೆ ವಾಹನ ಚಲಾಯಿಸಬೇಕು? ಅತಿ ವಾಹನ ದಟ್ಟಣೆ ಇರುವ ಬೆಂಗಳೂರಿನಂಥ ನಗರದಲ್ಲಿ ಹಿಂದೆ ಮುಂದೆ ವಾಹನಗಳು ಇರುವಾಗ ಹೇಗೆ ಚಾಲನೆ ಮಾಡಬೇಕು? ಎಂಬುದನ್ನೆಲ್ಲ ಈ ಯಂತ್ರದಲ್ಲಿ ಚಾಲನೆ ಕಲಿಸುವಾಗ ಹೇಳಿ ಕೊಡಲಾಗುತ್ತದೆ. ಚಾಲನಾ ಸೂಚನೆಗಳನ್ನು ಕಡ್ಡಾಯವಾಗಿ ಪಾಲನೆ ಮಾಡಿಸಲಾಗುತ್ತದೆ' ಎಂದು ಬಿಎಂಟಿಸಿ ಅಧಿಕಾರಿಗಳು ತಿಳಿಸಿದರು.

ಬೇರೆ ಬೇರೆ ಯೋಜನೆಗಳಲ್ಲಿ ಸುಮಾರು ಒಂಬತ್ತು ಸಾವಿರ ಮಂದಿ ಇಲ್ಲಿವರೆಗೆ ಚಾಲನಾ ತರಬೇತಿ ಪಡೆದಿದ್ದಾರೆ. ಜೊತೆಗೆ ಬಿಎಂಟಿಸಿಯ ಹೊಸ ಮತ್ತು ಹಳೇ ಚಾಲಕರು ಸೇರಿ 5700 ಮಂದಿ 'ಸಿಮ್ಯುಲೇಟರ್' ಮೂಲಕ ತರಬೇತಿ ಪಡೆದಿದ್ದಾರೆ. 'ಎಲ್ಲರೂ ನುರಿತ ಚಾಲಕರಾಗಬೇಕು ಎನ್ನುವ ಕಾರಣಕ್ಕೆ ನಿರ್ವಾಹಕರು, ಅಧಿಕಾರಿಗಳು, ಮೆಕ್ಯಾನಿಕ್‌ಗಳು ಕೂಡ ಇಲ್ಲಿಯೇ ತರಬೇತಿ ಪಡೆಯುತ್ತಿದ್ದಾರೆ. ತರಬೇತಿಯ ಅವಧಿ ಒಂದು ತಿಂಗಳು ಇರುತ್ತದೆ' ಎಂದರು.

ಯೋಜನೆಯ ಫಲಾನುಭವಿಗಳು: ಸಿಎಂಕೆಕೆವೈ, ನಿರ್ಭಯಾ, ಎಸ್‌ಸಿಎಸ್‌ಪಿ, ಟಿಎಸ್‌ಪಿ, ಎಸ್‌ಟಿ ವೆಲ್‌ಫೇರ್ ಸೇರಿದಂತೆ ವಿವಿಧ ಯೋಜನೆಯ ಫಲಾನುಭವಿಗಳಿ-ಗೆ ಒಂದು ತಿಂಗಳ ತರಬೇತಿಯನ್ನು ಇಲ್ಲಿ ನೀಡಲಾಗುತ್ತಿದೆ. ಕೇಂದ್ರ ಸರ್ಕಾರದ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯದ ವೆಬ್‌ಸೈಟ್‌ನಲ್ಲಿ ಫಲಾನುಭವಿಗಳ ಹೆಸರು ನೋಂದಾಯಿಸಿ ಕಲಿಕಾ ಪರವಾನಗಿ (ಎಲ್‌ಎಲ್‌ಆರ್) ಪಡೆಯಲಾಗುವುದು. ಬಳಿಕ ಉಪನ್ಯಾಸ ಕೊಠಡಿಯಲ್ಲಿ ಫಲಾ-ನುಭವಿಗಳಿಗೆ ಚಾಲನೆಯಲ್ಲಿರುವಾಗ ಕೈ ಮೂಲಕ ನೀಡಬೇಕಾದ ಸೂಚನೆಗಳ ಬಗ್ಗೆ, ಸಂಚಾರ ಮಾರ್ಗದಲ್ಲಿ ಅಲ್ಲಲ್ಲಿ ಅಳವಡಿಸಿರುವ ಚಿಹ್ನೆಗಳ ಮಾಹಿತಿ, ಕ್ಲಚ್, ಗೇರ್, ಬ್ರೇಕ್, ಆ್ಯಕ್ಸಿಲೇಟ-ರ್‌ಗಳ ಬಗ್ಗೆ ನುರಿತ ಚಾಲಕರು ಮಾಹಿತಿ ನೀಡುತ್ತಾರೆ. ಆನಂತರ 'ಸಿಮ್ಯುಲೇಟರ್' ಕೊಠಡಿಯಲ್ಲಿ ಚಾಲನೆ ಕಲಿಸುತ್ತಾರೆ. ಬಸ್ ಮಾತ್ರವಲ್ಲ ನಾಲ್ಕು ಚಕ್ರದ ವಾಹನಗಳ ತರಬೇತಿಯನ್ನೂ ನೀಡುತ್ತಾರೆ.

ಇಂಧನ ಉಳಿತಾಯ ಮಾಡಬೇಕಿದ್ದರೆ ಆ್ಯಕ್ಸಿಲೇಟರ್ ಹೇಗೆ ಬಳಸಬೇಕು, ಕ್ಲಚ್, ಗೇರ್‌ಗಳನ್ನು ಹೇಗೆ ಬಳಸಿದರೆ ಇಂಧನ ಉಳಿಸಬಹುದು ಎಂಬುದನ್ನು ಕೂಡ ಪರಿಣತರು ಹೇಳಿಕೊಡುತ್ತಾರೆ. ಆನಂತರ ರಸ್ತೆಯಲ್ಲಿ ಪ್ರಾಯೋಗಿಕ ಚಾಲನೆ ಮಾಡಿಸಿ ಚಾಲನಾ ಪರವಾನಗಿ (ಡಿಎಲ್) ನೀಡಲಾಗುತ್ತದೆ ಎಂದು ಅಧಿಕಾರಿಗಳು ತಿಳಿಸಿದರು.

'ಸೀಟ್‌ಬೆಲ್ಟ್‌ನಿಂದ ಹಿಡಿದು ಎಲ್ಲ ನಿಯಮಗಳನ್ನು ಪಾಲಿಸದಿದ್ದರೆ ಈ ಯಂತ್ರ ಚಾಲನೆಯಾಗುವುದಿಲ್ಲ. ಆನಂತರವೂ ಸಣ್ಣ ತಪ್ಪಾದರೂ ಗುರುತು ಆಗುವುದರಿಂದ ತಿದ್ದಿಕೊಳ್ಳಲು ಸುಲಭವಾಗುತ್ತದೆ' ಎಂದು ತರಬೇತಿ ಪಡೆದ ಚಾಲಕರು ತಿಳಿಸಿದರು.

ಬಸ್ ಅಲ್ಲದೇ, ಜೀಪು, ಕಾರು ಕಲಿಯಲು ಬರುವ ವಿವಿಧ ಜಿಲ್ಲೆಗಳ ಸಿಬ್ಬಂದಿಗೆ ವಸತಿ ನಿಲಯದ ವ್ಯವಸ್ಥೆಗಳಿ-ರುತ್ತವೆ. ಬೆಳಿಗ್ಗೆ ಯೋಗಾಭ್ಯಾಸ, ಚಾಲನಾ ತರಬೇತಿ, ಊಟ-ಉಪಾಹಾರ ಒದಗಿಸ-ಲಾಗುತ್ತದೆ.

ಬಿಎಂಟಿಸಿಯ ವಡ್ಡರಹಳ್ಳಿ ಚಾಲಕರ ತರಬೇತಿ ಕೇಂದ್ರದಲ್ಲಿ 'ಸಿಮ್ಯುಲೇಟರ್' ಮೂಲಕ ಚಾಲನಾ ತರಬೇತಿ ನೀಡುತ್ತಿರುವುದು

ವಿವಿಧ ಯೋಜನೆಯಡಿ ಒಂದು ವರ್ಷದಲ್ಲಿ ತರಬೇತಿ ಪಡೆದವರು

ಯೋಜನೆ	ಲಘು ವಾಹನ	ಭಾರಿ ವಾಹನ
ಸಿಎಂಕೆಕೆವೈ	1,550	1,325
ನಿರ್ಭಯಾ	1,051	17
ಎಸ್‌ಸಿಎಸ್‌ಪಿ	1,988	782
ಟಿಎಸ್‌ಪಿ	778	167
ಎಸ್‌ಟಿ ವೆಲ್‌ಫೇರ್	951	281
ಒಟ್ಟು	6,318	2,572

'ನುರಿತ ಚಾಲಕರನ್ನಾಗಿ ಮಾಡುವ ಗುರಿ'

ಹೊಸಬರಿಗೆ ಮಾತ್ರವಲ್ಲ, ಚಾಲನೆಯಲ್ಲಿ ಪದೇ ಪದೇ ತಪ್ಪು ಮಾಡುವವರಿಗೂ 'ಸಿಮ್ಯುಲೇಟರ್' ಡಿಜಿಟಲ್ ಯಂತ್ರದಲ್ಲಿ ತರಬೇತಿ ನೀಡಲಾಗುತ್ತದೆ. ಆನಂತರ ರಸ್ತೆಯಲ್ಲಿಯೂ ಚಾಲನಾ ತರಬೇತಿ ನೀಡುವ ಮೂಲಕ ನುರಿತ ಚಾಲಕರನ್ನಾಗಿ ಮಾಡಲಾಗುತ್ತಿದೆ ಎಂದು ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ ಆರ್. ರಾಮಚಂದ್ರನ್ ಮಾಹಿತಿ ನೀಡಿದರು.

ವಿವಿಧ ಯೋಜನೆಯಡಿ ಯುವಜನರಿಗೆ ಜೀಪು, ಕಾರು ಚಾಲನೆಯನ್ನು ಕಲಿಸುವ ಮೂಲಕ ಬಿಎಂಟಿಸಿ ಅವರನ್ನು ಸ್ವಾವಲಂಬಿಗಳನ್ನಾಗಿ ಮಾಡುತ್ತಿದೆ ಎಂದು ತಿಳಿಸಿದರು.

ತರಬೇತಿ ಪಡೆದ ಬಿಎಂಟಿಸಿಯ ನೌಕರರು, ಅಧಿಕಾರಿಗಳು

ಚಾಲಕರು	ನಿರ್ವಾಹಕರು	ಮೆಕ್ಯಾನಿಕ್ಸ್	ಸೂಪರ್‌ವೈಸರ್ಸ್	ಅಧಿಕಾರಿಗಳು	ಇತರರು	ಒಟ್ಟು
5,740	692	914	175	35	421	7,977

ಬಿಎಂಟಿಸಿಯಿಂದ ಅತ್ಯುತ್ತಮ ಚಾಲನಾ ತರಬೇತಿ ಸಿಗುತ್ತದೆ ಎಂದು ಗೆಳೆಯನಿಂದ ತಿಳಿಯಿತು. ಅರ್ಜಿ ಹಾಕಿದೆ. 'ಸಿಮ್ಯುಲೇಟರ್' ಮೂಲಕ ತರಬೇತಿ ನೀಡಿದ್ದಾರೆ. ನಾನು ಪದವೀಧರನಾಗಿದ್ದು, ಬೇರೆ ಕೆಲಸ ಸಿಗದೇ ಇದ್ದರೂ ಚಾಲಕನಾಗಿ ಬದುಕು ಕಟ್ಟಿಕೊಳ್ಳಲು ತರಬೇತಿ ಉಪಯೋಗವಾಗಿದೆ
ನಾಗರಾಜ್, ರಾಯಚೂರು

ನಮ್ಮಂಥ ಹಳ್ಳಿ ಹುಡುಗರು ಬೆಂಗಳೂರಿಗೆ ಬಂದು ಚಾಲನಾ ತರಬೇತಿ ಪಡೆಯುವುದೇ ದೊಡ್ಡ ವಿಷಯ. ಶಾಂತಿನಗರದಲ್ಲಿ ವಿಶಾಲ ಪ್ರದೇಶದಲ್ಲಿ ತರಬೇತಿ ನೀಡಿದ್ದಾರೆ
ಮಹಾರಾಜ್, ರಾಯಚೂರು

ಕೆಂಪೇಗೌಡ ಅವಿರೋಧ ಆಯ್ಕೆ

ರಾಜರಾಜೇಶ್ವರಿನಗರ: ಮಾಗಡಿ ರಸ್ತೆಯ ತಾವರೆಕೆರೆ ಪ್ರಾಥಮಿಕ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಎರಡನೇ ಬಾರಿಗೆ ಕಾಂಗ್ರೆಸ್‌ನ ಟಿ.ಎಲ್.ಕೆಂಪೇಗೌಡ ಅವರು ಅವಿರೋಧವಾಗಿ ಆಯ್ಕೆಯಾದರು.

ಅಧ್ಯಕ್ಷರಾಗಿದ್ದ ಮಂಜನಾಥ್ ಅವರ ನಿಧನದಿಂದ ತೆರವಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಯಿತು. ಕೆಂಪೇಗೌಡ ಒಬ್ಬರೇ ನಾಮಪತ್ರ ಸಲ್ಲಿ-ಸಿದ್ದರಿಂದ ಅವರು ಅವಿರೋಧವಾಗಿ ಆಯ್ಕೆಯಾದರು ಎಂದು ಬೆಂಗಳೂರು ನಗರ ಜಿಲ್ಲೆಯ ಸಹಕಾರ ಸಂಘಗಳ ಕಚೇರಿಯ ಅಧೀಕ್ಷಕ ಮುರಳಿಧರ್ ಘೋಷಿಸಿದರು. ಶಾಸಕ ಎಸ್.ಟಿ. ಸೋಮಶೇಖರ್, ಬೆಂಗಳೂರು ದಕ್ಷಿಣ ತಾಲ್ಲೂಕು ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿ ಅಧ್ಯಕ್ಷ ಡಿ. ಹನುಮಂತಯ್ಯ, ನೂತನ ಅಧ್ಯಕ್ಷರನ್ನು ಅಭಿನಂದಿಸಿದರು.

ಸಾಲದ ಸುಳಿ: ಉಪನ್ಯಾಸಕ ಆತ್ಮಹತ್ಯೆ

ಕೆ.ನಾಗೇಶ್

ಕನಕಪುರ: ನಗರದಲ್ಲಿ ಬುಧವಾರ ರಾತ್ರಿ ರೂರಲ್ ಕಾಲೇಜಿನ ಉಪನ್ಯಾಸಕರೊಬ್ಬರು ಸಾಲದ ಒತ್ತಡದಿಂದ ಕಂಗೆಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಬಾಣಂತ ಮಾರಮ್ಮ ಬಡಾವಣೆ ನಿವಾಸಿ, ರೂರಲ್ ಕಾಲೇಜಿನ ಉಪನ್ಯಾಸಕ ನಾಗೇಶ್ (62) ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅವರಿಗೆ ಪತ್ನಿ, ಮಗ ಮತ್ತು ಮಗಳು ಇದ್ದಾರೆ.

ಬುಧವಾರ ಮಧ್ಯಾಹ್ನ ಕುಟುಂಬದ ಸದಸ್ಯರ ಜತೆ ಸ್ನೇಹಿತರ ಮನೆಗೆ ಹೋಗಿ ಹಬ್ಬದ ಊಟ ಮುಗಿಸಿಕೊಂಡು ಬಂದಿದ್ದರು. ಸ್ನೇಹಿತರ ಪಾರ್ಟಿ ಇದೆ ಎಂದು ಹೇಳಿ ಸಂಜೆ ಮನೆಯಿಂದ ಹೋದವರು ತಮ್ಮ ಜಮೀನಿನಲ್ಲಿ ಮರಕ್ಕೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಮೃತರ ಜೇಬಿನಲ್ಲಿ ಡೆತ್ ನೋಟ್ ಪತ್ತೆಯಾಗಿದ್ದು, ಪೊಲೀಸರು ವಶಕ್ಕೆ ತೆಗೆದುಕೊಂಡಿದ್ದಾರೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಡೆತ್‌ನೋಟ್ ಏನಿದೆ: 'ನಾನು ಹಣಕಾಸಿನ ವ್ಯವಹಾರ ನಡೆಸುತ್ತಿದ್ದೆ. ಆರಂಭದಲ್ಲಿ ಎಲ್ಲವೂ ಚೆನ್ನಾಗಿತ್ತು. ನಂತರ ನನ್ನಿಂದ ಸಾಲ ಪಡೆದವರು ಸರಿಯಾಗಿ ಬಡ್ಡಿ ನೀಡಲಿಲ್ಲ. ಅಸಲು ಮರಳಿಸಲಿಲ್ಲ. ನಾನು ಮಾತ್ರ ಸಾಲ ಪಡೆದವರಿಗೆ ತಿಂಗಳಿಗೆ ಸರಿಯಾಗಿ ಬಡ್ಡಿ ಕಟ್ಟುತ್ತಿದ್ದೆ. ₹7ಕೋಟಿ ಬಡ್ಡಿ ಕಟ್ಟಿದ್ದೇನೆ. ಸಾಲ ತೀರಿಸಲು ₹4 ಕೋಟಿ ಮೌಲ್ಯದ ಆಸ್ತಿ, ಮನೆ ಮಾರಿದ್ದೇನೆ. ಸಾಲಗಾರರ ಒತ್ತಡದಿಂದ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇನೆ' ಎಂದು ಡೆತ್ ನೋಟ್ ಕೊನೆ ಮಾಡಿದ್ದಾರೆ.



ಪಾರಿವಾಳಕ್ಕೆ ಆಹಾರ ನಗರದ ಚಿಕ್ಕ ಲಾಲ್‌ಬಾಗ್ ಸುತ್ತಮುತ್ತ ಪಾರಿವಾಳಗಳ ಹಿಂಡು. ಮಕ್ಕಳು, ವ್ಯಾಪಾರಿಗಳು, ಸ್ಥಳೀಯರು ಅವುಗಳಿಗೆ ಆಹಾರ ನೀಡಿ ಖುಷಿ ಪಡುತ್ತಾರೆ
–ಪ್ರಜಾವಾಣಿ ಚಿತ್ರ/ ಕಿಶೋರ್ ಕುಮಾರ್ ಬೋಳಾರ್

ಸೈಬರ್ ಅಪರಾಧ ಪ್ರಕರಣದಲ್ಲಿ ಹೈಕೋರ್ಟ್‌ಗೆ ಅರುಹಿದ ಎಜಿ

'ಜಾತ್ಯತೀತ ಸಂರಚನೆ ಗಟ್ಟಿಯಾಗಿದೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಜಾತ್ಯತೀತ ಸಂರಚನೆಗೆ ಎಳ್ಳಷ್ಟೂ ಮುಕ್ಕಾಗದಂತೆ ಸರ್ಕಾರ ತನ್ನ ಜವಾಬ್ದಾರಿಯನ್ನು ನಿಭಾಯಿಸುತ್ತಿದೆ' ಎಂದು ಅಡ್ವೊಕೇಟ್ ಜನರಲ್ ಹೈಕೋರ್ಟ್‌ಗೆ ಅರುಹಿದರು.

ತಮ್ಮ ವಿರುದ್ಧ ದಾಖಲಾಗಿರುವ ಸೈಬರ್ ಅಪರಾಧ ಪ್ರಕರಣ ರದ್ದುಗೊ-ಳಿಸುವಂತೆ ಕೋರಿ ಮುಂಬೈನ ಥಾಣೆಯ ನಿವಾಸಿ ಪ್ರಾಧ್ಯಾಪಕ ವಿನಿತ್ ನಾರಾಯಣ ನಾಯಕ್ ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ನಡೆಯನ್ನು ಬಲವಾಗಿ ಆಕ್ಷೇಪಿಸಿದ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, 'ಅರ್ಜಿದಾರ ವಿನಿತ್ ನಾರಾಯಣ ನಾಯಕ್ ಅವರು, ಹಿಂದೂ-ಮುಸ್ಲಿಂ ಸಮುದಾಯಗಳ ನಡುವೆ ದ್ವೇಷ ಬಿತ್ತುವ ರೀತಿಯಲ್ಲಿ ತಮ್ಮ ಎಕ್ಸ್ ಖಾತೆಯಲ್ಲಿ ಟ್ವೀಟ್ ಮಾಡಿದ್ದಾರೆ' ಎಂದು ಬಲವಾಗಿ ಆಕ್ಷೇಪಿಸಿದರು.

ಇದಕ್ಕೆ ಪ್ರತಿಯಾಗಿ ಅರ್ಜಿದಾರರ ಪರ ವಾದ ಮಂಡಿಸಿದ ಹೈಕೋರ್ಟ್‌ನ ಹಿರಿಯ ವಕೀಲ ಎಂ.ಅರುಣ್ ಶ್ಯಾಮ್, 'ಅರ್ಜಿದಾರರು ಯಾವುದೇ ಸ್ವಯಂ ಹೇಳಿಕೆ ನೀಡಿಲ್ಲ. ಕೇವಲ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದ ಹೇಳಿಕೆಗೆ ಪ್ರತಿಯಾಗಿ ಟ್ವೀಟ್ ಮಾಡಿದ್ದಾರೆ ಅಷ್ಟೇ. ಇದೆಲ್ಲವೂ ಟಿ.ವಿ.ಚಾನೆಲ್‌ಗಳಲ್ಲಿ ವಿಸ್ತೃತವಾಗಿ ಬಿತ್ತರಗೊಂಡಿದೆ' ಎಂದರು.

'ಅರ್ಜಿದಾರರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿ ಬಂಧಿಸಲಾಗಿತ್ತು. ಈಗ ಜಾಮೀನಿನ ಮೇಲೆ ಹೊರಗಿದ್ದಾರೆ. ಪ್ರಕರಣದಲ್ಲಿ ಯಾವುದೇ ಹುರುಳಿಲ್ಲ. ಆದ್ದರಿಂದ, ಎಫ್‌ಐಆರ್ ರದ್ದು-ಗೊಳಿಸಬೇಕು' ಎಂದು ಕೋರಿದರು.

ಇದನ್ನು ಅಲ್ಲಗಳೆದ ಶಶಿಕಿರಣ ಶೆಟ್ಟಿ, 'ಅರ್ಜಿದಾರರು ಟ್ವೀಟ್ ಎರಡು ಸಮುದಾಯಗಳ ನಡುವೆ ದ್ವೇಷ ಮೂಡಿಸುವಂತಿದೆ' ಎಂದು ಬಾರಿ ಬಾರಿಗೂ ಪುನರುಚ್ಚರಿಸಿದರು.

ಆದರೆ, ಇದನ್ನು ಒಪ್ಪದ ನ್ಯಾಯಪೀಠ, 'ಹಿಂದೂ ಮುಸ್ಲಿಂ ಸಮುದಾಯಗಳ ನಡುವೆ ದ್ವೇಷ ಬಿತ್ತಿರುವ ಘಟನೆ ಎಲ್ಲಿದೆ ತೋರಿಸಿ' ಎಂದು ಪ್ರಶ್ನಿಸಿತಲ್ಲದೆ, 'ರಾಜ್ಯದ ಇಡೀ ಆಡಳಿತ ಒಬ್ಬ ವ್ಯಕ್ತಿಯ ಮೇಲೆ ಈ ರೀತಿ ಮುಗಿಬೀಳಬಾರದು. ಇಂತಹ ಸಂದರ್ಭದಲ್ಲಿ ಅವರಿಗೆ ರಕ್ಷಣೆ ನೀಡಬೇಕಾಗುತ್ತದೆ' ಎಂದು ಅಡ್ವೊಕೇಟ್ ಜನರಲ್ ಅವರನ್ನು ಉದ್ದೇಶಿಸಿ ಹೇಳಿತು. 'ಅರ್ಜಿದಾರರ ವಿರುದ್ಧ ಯಾವುದೇ ಬಲವಂತದ ಕ್ರಮ ಕೈಗೊಳ್ಳಬಾರದು' ಎಂದು ಆದೇಶಿಸಿ ಅರ್ಜಿಗೆ ಆಕ್ಷೇಪಣೆ ಸಲ್ಲಿಸಿ ಎಂದು ಸೂಚಿಸಿತು. ವಿಚಾರಣೆಯನ್ನು ಜೂನ್ 12ಕ್ಕೆ ಮುಂದೂಡಲಾಗಿದೆ.

ನೋಂದಣಿ ನಿರಾಕರಣೆ ಸಲ್ಲ: ಹೈಕೋರ್ಟ್

ಬೆಂಗಳೂರು: 'ಸಾಲಗಾರರ ಆದಾಯ ತೆರಿಗೆ ಪಾವತಿ ಬಾಕಿಯಿದೆ ಎಂಬ ಕಾರಣ ನೀಡಿ ಅವರ ಆಸ್ತಿಯನ್ನು ಹರಾಜು ಮೂಲಕ ಖರೀದಿ ಮಾಡಿದವರಿಗೆ ನೋಂದಣಿ ಮಾಡುವುದನ್ನು ನಿರಾಕರಿಸುವಂತಿಲ್ಲ' ಎಂದು ಹೈಕೋರ್ಟ್ ಪ್ರಕರಣವೊಂದರಲ್ಲಿ ಸ್ಪಷ್ಟಪಡಿಸಿದೆ.

'ಬ್ಯಾಂಕ್‌ನ ಹರಾಜಿನ ಮೂಲಕ ಜಮೀನು ಖರೀದಿಸಿದ್ದನ್ನು ನನ್ನ ಹೆಸರಿಗೆ ನೋಂದಣಿ ಮಾಡಿಕೊಟ್ಟಿಲ್ಲ' ಎಂದು ಜೆ.ಪಿ.ನಗರದ ಉಪ ನೋಂದಣಾಧಿಕಾರಿ ಕ್ರಮವನ್ನು ಆಕ್ಷೇಪಿಸಿ ಬಸವನಗುಡಿಯ ಟಿ.ಭರತ್ ಗೌಡ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದ್ದು ಈ ಕುರಿತಂತೆ ಆದೇಶಿಸಿದೆ.

'ಉಪ ನೋಂದಣಿ ನಿಯಮ 171ರ ಅಡಿಯಲ್ಲಿ ಯಾವುದೇ ಉಲ್ಲಂಘನೆ ಆಗಿದ್ದಲ್ಲಿ ಮಾತ್ರವೇ ನೋಂದಣಿಗೆ ತಡೆ ಹಿಡಿಯಬೇಕು. ಇಲ್ಲವಾದಲ್ಲಿ ಸಬ್ ರಿಜಿಸ್ಟ್ರಾರ್ ಅವರಿಗೆ ನೋಂದಣಿ ನಿರಾಕರಿಸುವ ಅಧಿಕಾರ ಇಲ್ಲ. ಆದ್ದರಿಂದ, ಬಿಡ್‌ದಾರರ ಹೆಸರಿಗೆ ತಕ್ಷಣವೇ ಪ್ರಸ್ತಾವಿತ ಜಮೀನನ್ನು ನೋಂದಣಿ ಮಾಡಿಸಬೇಕು' ಎಂದು ನ್ಯಾಯಪೀಠ ಆದೇಶಿಸಿದೆ.

'ನೋಂದಣಿ ಕಾಯ್ದೆ ಮತ್ತು ರಾಜ್ಯ ಸರ್ಕಾರ ರೂಪಿಸಿರುವ ನೋಂದಣಿ ನಿಯಮಗಳ ಅನ್ವಯದಡಿ ಮಾತ್ರವೇ ಉಪ ನೋಂದಣಾಧಿಕಾರಿಗಳು ಕಾರ್ಯ ನಿರ್ವಹಿಸಬೇಕು. ಈ ಕುರಿತಂತೆ ಸಂಬಂಧಿಸಿದ ನೋಂದಣಿ ನಿಯಮಗಳ ಸುತ್ತೋಲೆ ಹೊರಡಿಸಬೇಕು' ಎಂದು ಪೀಠ ರಾಜ್ಯ ಸರ್ಕಾರಕ್ಕೆ ಸಲಹೆ ನೀಡಿದೆ.

ಆಂಧ್ರ ರಾಜ್ಯಪಾಲ ಎಸ್‌.ಅಬ್ದುಲ್ ನಜೀರ್ ಅಭಿಪ್ರಾಯ

'ಸಮಾಜದಲ್ಲಿ ಶಿಕ್ಷಕರ ಪಾತ್ರ ಅನನ್ಯ'

ಪ್ರಜಾವಾಣಿ ವಾರ್ತೆ

ಯಲಹಂಕ: ತಂತ್ರಜ್ಞಾನ ಸಾಧನವೇ ಹೊರತು ಶಿಕ್ಷಕರಂತೆ ಮಾರ್ಗದರ್ಶನ ಮಾಡಲು ಸಾಧ್ಯವಿಲ್ಲ, ಸಮಾಜದಲ್ಲಿ ಶಿಕ್ಷಕರ ಪಾತ್ರ ಅನನ್ಯವಾದುದು ಎಂದು ಆಂಧ್ರಪ್ರದೇಶ ರಾಜ್ಯಪಾಲ ಎಸ್. ಅಬ್ದುಲ್ ನಜೀರ್ ಅಭಿಪ್ರಾಯಪಟ್ಟರು.

ಗೋವಿಂದಪುರದಲ್ಲಿರುವ ವಿದ್ಯಾ ಶಿಲ್ಪ್ ಅಕಾಡೆಮಿಯಲ್ಲಿ ನೂತನವಾಗಿ ನಿರ್ಮಿಸಿರುವ ಡಾ.ಪಿ.ದಯಾನಂದ ಪೈ ಸಭಾಂಗಣವನ್ನು ಉದ್ಘಾಟಿಸಿ ಮಾತನಾಡಿದ ಅವರು, ತಂತ್ರಜ್ಞಾನ ಅಭಿವೃದ್ಧಿಪಡಿಸಿದ ಬಿಲ್ ಗೇಟ್ಸ್ ಸೇರಿ ಮಹಾನ್ ದಿಗ್ಗಜರೆಲ್ಲರೂ ತಂತ್ರಜ್ಞಾನ-ಕ್ಕಿಂತ ಶಿಕ್ಷಕರ ಪಾತ್ರದ ಬಗ್ಗೆಯೇ ಹೆಚ್ಚು ಒತ್ತು ನೀಡಿದ್ದು, ಜಗತ್ತಿನಲ್ಲಿ ಶಿಕ್ಷಕರಿಗಿಂತ ಪರ್ಯಾಯ ಮತ್ತೊಂದಿಲ್ಲ ಎಂದು ಪ್ರತಿಪಾದಿಸಿದ್ದಾರೆ' ಎಂದರು.

ಗ್ರಾಮೀಣಭಾಗದ ಸರ್ಕಾರಿ ಶಾಲೆಗಳನ್ನು ದತ್ತು ಪಡೆದು, ಮಕ್ಕಳ ಶಿಕ್ಷಣದ ಗುಣಮಟ್ಟ ಮತ್ತು ಆರೋಗ್ಯ ಸುಧಾರಣೆಗಾಗಿ ದಯಾನಂದ ಪೈ ಅವರು, ತಮ್ಮದೇ ಆದ ರೀತಿಯಲ್ಲಿ ಶಾಲೆಗಳ ಸಮಗ್ರ ಅಭಿವೃದ್ಧಿಗೆ ಕೊಡುಗೆ ನೀಡಿರುವುದು ಶ್ಲಾಘನೀಯ ಕಾರ್ಯ. ಮಕ್ಕಳ ಸೃಜನಶೀಲತೆ ಮತ್ತು ಸಾಂಸ್ಕೃತಿಕ ಪ್ರತಿಭೆ ಹೊರತರಲು ಈ ಸಭಾಂಗಣವು ಸೂಕ್ತ ವೇದಿಕೆಯಾಗಿ ಮಾರ್ಪಾಡಾಗಲಿ ಎಂದು ಅವರು ಆಶಿಸಿದರು.

ವಿದ್ಯಾಶಿಲ್ಪ್ ಶಿಕ್ಷಣ ಸಮೂಹದ ವ್ಯವಸ್ಥಾಪಕ ಟ್ರಸ್ಟಿ ಡಾ.ಪಿ.ದಯಾನಂದ ಪೈ ಮಾತನಾಡಿ, ಇಷ್ಟೊಂದು ಬೆಳವಣಿಗೆಗೆ ದಕ್ಷಿಣ ಕನ್ನಡದ ಮಣ್ಣಿನ ಗುಣವೇ ಕಾರಣ; ಸಮಾಜದಿಂದ ಪಡೆದುದನ್ನು ಕಿಂಚಿತ್ತಾದರೂ ಸಮಾಜದ ಒಳಿತಿಗಾಗಿ ಮರಳಿ ನೀಡುವುದರಲ್ಲಿ ಅತ್ಯಂತ ತೃಪ್ತಿ ಸಿಗುತ್ತದೆ ಎಂದು ತಿಳಿಸಿದರು.

ಯಲಹಂಕ ಸಮೀಪದ ಗೋವಿಂದಪುರದಲ್ಲಿರುವ ವಿದ್ಯಾಶಿಲ್ಪ್ ಅಕಾಡೆಮಿಯಲ್ಲಿ ನೂತನವಾಗಿ ನಿರ್ಮಿಸಿರುವ ಪಿ.ದಯಾನಂದ ಪೈ ಸಭಾಂಗಣವನ್ನು ಆಂಧ್ರಪ್ರದೇಶ ರಾಜ್ಯಪಾಲ ಎಸ್‌.ಅಬ್ದುಲ್ ನಜೀರ್ ಉದ್ಘಾಟಿಸಿದರು. ವಿದ್ಯಾಶಿಲ್ಪ್ ಶಿಕ್ಷಣ ಸಮೂಹದ ವ್ಯವಸ್ಥಾಪಕ ಟ್ರಸ್ಟಿ ಡಾ.ಪಿ.ದಯಾನಂದ ಪೈ ಭಾಗವಹಿಸಿದ್ದರು

ಅಭಿಮತ

ಸುಭಾಷಿತ

ಮಾತನಾಡುವಷ್ಟೇ ಕೆಲವೊಮ್ಮೆ ಮಾತನಾಡದೆ ಇರುವುದೂ ಅಗತ್ಯ.

-ಕೆ.ಪಿ.ಪೂರ್ಣಚಂದ್ರ ತೇಜಸ್ವಿ

ವಾಲ್ಮೀಕಿ ನಿಗಮದಲ್ಲಿ ನಡೆದ ಅವ್ಯವಹಾರ ತಪ್ಪಿತಸ್ಥರ ಪತ್ತೆ ಹಚ್ಚಿ, ಹಣ ವಾಪಸ್ ತನ್ನಿ

ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧೀಕ್ಷಕರೊಬ್ಬರ ದುರಂತ ಅಂತ್ಯದ ಮೂಲಕ, ನಿಗಮದಲ್ಲಿ ನಡೆದಿದೆ ಎನ್ನಲಾದ ₹ 94.73 ಕೋಟಿ ಮೊತ್ತದ ಅವ್ಯವಹಾರವೊಂದು ಬಯಲಾಗಿದೆ. ನಿಗಮದ ಅಧೀಕ್ಷಕರಾಗಿದ್ದ ಪಿ.ಚಂದ್ರಶೇಖರನ್ ಅವರು ಆತ್ಮಹತ್ಯೆ ಮಾಡಿಕೊಳ್ಳುವ ಮುನ್ನ ಬರೆದಿಟ್ಟಿರುವ ಪತ್ರದಲ್ಲಿ ಹಗರಣದ ಕುರಿತು ಹಲವು ವಿವರಗಳನ್ನು ದಾಖಲಿಸಿದ ಮಾಹಿತಿ ಇದೆ. ಈ ಅಧಿಕಾರಿ ಮಾಡಿರುವುದೇನೂ ಮಾಮೂಲಿ ಆರೋಪವಲ್ಲ, ನಿಗಮದಲ್ಲಿ ಹಗರಣ ನಡೆದಿರುವುದು ನಿಜ ಎಂಬುದನ್ನು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವ ಬಿ. ನಾಗೇಂದ್ರ ಕೂಡ ಒಪ್ಪಿಕೊಂಡಿದ್ದಾರೆ. ಒಂದುವೇಳೆ, ಚಂದ್ರಶೇಖರನ್ ಅವರು ತಮ್ಮ ಸಾವಿಗೂ ಮುನ್ನ ಪತ್ರದಲ್ಲಿ ಬರೆದಿಡದೇ ಹೋಗಿದ್ದರೆ ಈ ಅವ್ಯವಹಾರ ಹೊರಬರುತ್ತಿರಲಿಲ್ಲವೇನೋ. ನಿಗಮದಿಂದ ನಡೆದಿರುವ ಬ್ಯಾಂಕ್ ವ್ಯವಹಾರಗಳು ಗೊಂದಲಕಾರಿಯಾಗಿವೆ ಎನ್ನುವುದು ಮೇಲ್ನೋಟಕ್ಕೇ ಸ್ಪಷ್ಟ. ನಿಗಮವು ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ಬೆಂಗಳೂರಿನ ವಸಂತನಗರ ಶಾಖೆಯಲ್ಲಿ ಅಧಿಕೃತ ಖಾತೆಯನ್ನು ಹೊಂದಿತ್ತು. ಇದೇ ಬ್ಯಾಂಕ್‌ನ ಎಂ.ಜಿ. ರಸ್ತೆಯ ಶಾಖೆಗೆ ಆ ಖಾತೆಯನ್ನು ವರ್ಗಾಯಿಸಿಕೊಂಡಿತು ಮತ್ತು ವಸಂತನಗರ ಶಾಖೆಯ ಖಾತೆಯಲ್ಲಿದ್ದ ₹ 187 ಕೋಟಿ ಮೊತ್ತವನ್ನು ಹಂತ, ಹಂತವಾಗಿ ಎಂ.ಜಿ. ರಸ್ತೆ ಶಾಖೆಯ ಹೊಸ ಖಾತೆಗೆ ವರ್ಗಾಯಿಸಲಾಯಿತು ಎಂದು ಹೇಳಲಾಗಿದೆ. ಒಂದೇ ಬ್ಯಾಂಕ್‌ನ ಒಂದು ಶಾಖೆಯಿಂದ ಮತ್ತೊಂದು ಶಾಖೆಗೆ ಹೀಗೆ ಖಾತೆ ಮತ್ತು ಹಣ ವರ್ಗಾಯಿಸಿದ್ದೇಕೆ ಎಂಬ ಅನುಮಾನವೂ ಇಲ್ಲಿ ಮೂಡುತ್ತದೆ. ಎಂ.ಜಿ. ರಸ್ತೆಯ ಶಾಖೆಯಲ್ಲಿದ್ದ ನಿಗಮದ ಖಾತೆಯ ಹಣದಲ್ಲಿ ₹ 94.73 ಕೋಟಿ ಮೊತ್ತವನ್ನು 14 ಅನ್ಯ ಖಾತೆಗಳಿಗೆ ವರ್ಗಾಯಿಸಲಾಗಿದೆ. ಕೆಲವು ಸಾಫ್ಟ್‌ವೇರ್ ಕಂಪನಿಗಳ ಖಾತೆಗಳಿಗೂ ಈ ಹಣ ಹೋಗಿದೆ ಎಂದು ದೂರಲಾಗಿದೆ. ಈ ಅವ್ಯವಹಾರಗಳಿಗೆ ನಿಗಮದ ವ್ಯವಸ್ಥಾಪಕ ನಿರ್ದೇಶಕ ಜೆ.ಜಿ. ಪದ್ಮನಾಭ, ಲೆಕ್ಕಾಧಿಕಾರಿ ಪರಶುರಾಮ ದುರ್ಗಣ್ಣನವರ, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ಮುಖ್ಯ ವ್ಯವಸ್ಥಾಪಕಿ ಶುಚಿಸ್ಮಿತಾ ರಾವಲ್ ಕಾರಣ ಎಂದು ಸಾವಿಗೀಡಾದ ಅಧಿಕಾರಿ ಪತ್ರದಲ್ಲಿ ಉಲ್ಲೇಖಿಸಿದ ಮಾಹಿತಿ ಇದೆ. ಸಚಿವರ ಮೌಖಿಕ ಸೂಚನೆ ಇದೆ ಎಂದು ಲೆಕ್ಕಾಧಿಕಾರಿ ಹೇಳಿದ್ದರಿಂದ ಹಣವನ್ನು ವಿವಿಧ ಖಾತೆಗಳಿಗೆ ವರ್ಗಾಯಿಸಲಾಗಿದೆ ಎಂಬ ವಾಕ್ಯ ಕೂಡ ಮೃತ ಚಂದ್ರಶೇಖರನ್ ಅವರು ಬರೆದಿಟ್ಟ ಪತ್ರದಲ್ಲಿ ಇರುವುದಾಗಿ ಹೇಳಲಾಗಿದೆ. ಆದರೆ, ತಮ್ಮ ಮೇಲಿನ ಆರೋಪವನ್ನು ಸಚಿವರು ಅಲ್ಲಗಳೆದಿದ್ದಾರೆ. ತಮ್ಮ ಸಹಿಯನ್ನು ಫೋರ್ಜರಿ ಮಾಡಲಾಗಿದೆ ಎಂದು ಪದ್ಮನಾಭ ಅವರು ದೂರಿದ್ದಾರೆ. ಈ ಮಧ್ಯೆ, ನಿಗಮದ ಪ್ರಧಾನ ವ್ಯವಸ್ಥಾಪಕರು, 'ನಿಗಮದ ಅನುಮತಿ ಇಲ್ಲದೆ ಬೇರೆ ಖಾತೆಗಳಿಗೆ ಹಣ ವರ್ಗಾವಣೆ ಮಾಡಿದ್ದಾರೆ' ಎಂದು ಯೂನಿಯನ್ ಬ್ಯಾಂಕ್ ಅಧಿಕಾರಿಗಳ ವಿರುದ್ಧ ಹೈಗ್ರೌಂಡ್ಸ್ ಠಾಣೆ ಪೊಲೀಸರಿಗೆ ದೂರು ನೀಡಿದ್ದಾರೆ. ನಿಗಮದ ಖಾತೆಗಳ ವ್ಯವಹಾರದ ಕುರಿತು ಇ-ಮೇಲ್, ಎಸ್‌ಎಂಎಸ್ ಸಹ ಹೋಗದಂತೆ ನೋಡಿಕೊಳ್ಳಲಾಗಿತ್ತು ಎಂದೂ ದೂರಲಾಗಿದೆ.



ಭ್ರಷ್ಟಾಚಾರದಂತಹ ಪ್ರಕರಣಗಳಲ್ಲಿ ಶಿಕ್ಷೆಯಾಗುವ ಪ್ರಮಾಣ ತುಂಬಾ ಕಡಿಮೆ ಇರುವುದರಿಂದ, ಅಧಿಕಾರಿಗಳು ಜನರ ದುಡ್ಡಿಗೆ ನಿರ್ಲಜ್ಜೆಯಿಂದ ಕೈಹಾಕುವ ಧೈರ್ಯ ಪ್ರದರ್ಶಿಸುತ್ತಿದ್ದಾರೆ

ಕರ್ತವ್ಯಲೋಪ ಎಸಗಿದ ಹಾಗೂ ಆರ್ಥಿಕ ನಿಯಮ ಉಲ್ಲಂಘಿಸಿದ ಆರೋಪದ ಮೇಲೆ ಪದ್ಮನಾಭ ಹಾಗೂ ದುರ್ಗಣ್ಣನವರ ಅವರನ್ನು ಸೇವೆಯಿಂದ ಅಮಾನತು ಮಾಡಲಾಗಿದೆ. ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಮಣಿಮೇಖಲೈ, ಬ್ಯಾಂಕ್‌ನ ಮುಖ್ಯ ವ್ಯವಸ್ಥಾಪಕಿ ಶುಚಿಸ್ಮಿತಾ ಸೇರಿದಂತೆ ಆರು ಅಧಿಕಾರಿಗಳ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಅಧಿಕಾರಿಯೊಬ್ಬರ ಆತ್ಮಹತ್ಯೆ ಕಾರಣದಿಂದ ಈ ಹಗರಣ ಬಯಲಾಗಿರುವುದು ವ್ಯವಸ್ಥೆಯ ವೈಫಲ್ಯವನ್ನೂ ಸರ್ಕಾರ ಹಾಗೂ ನಿಗಮದ ಆಂತರಿಕ ಪರಿಶೋಧನಾ ವ್ಯವಸ್ಥೆ ಸಂಪೂರ್ಣವಾಗಿ ಮುಗ್ಗರಿಸಿರುವುದನ್ನೂ ಎತ್ತಿ ತೋರುತ್ತದೆ. ನಿಗಮದ ವ್ಯವಸ್ಥಾಪಕ ನಿರ್ದೇಶಕರು ಹಗರಣದ ಕುರಿತು ತಮಗೆ ಮಾಹಿತಿ ನೀಡಿರಲಿಲ್ಲ ಎಂದು ಸಚಿವರು ಹೇಳಿರುವುದು ಹಲವು ಪ್ರಶ್ನೆಗಳನ್ನು ಹುಟ್ಟುಹಾಕುತ್ತದೆ. ಭ್ರಷ್ಟಾಚಾರದ ಗಂಭೀರ ಪ್ರಕರಣ ಇದಾಗಿರುವುದರಿಂದ ಸಚಿವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿ, ನ್ಯಾಯಯುತ ತನಿಖೆಗೆ ಅನುವು ಮಾಡಿಕೊಡಬೇಕು. ಬಿಜೆಪಿ ನೇತೃತ್ವದ ಸರ್ಕಾರದ ಅವಧಿಯಲ್ಲಿ ಆತ್ಮಹತ್ಯೆ ಪ್ರಕರಣವೊಂದರಲ್ಲಿ ಗುತ್ತಿಗೆದಾರರೊಬ್ಬರು ಸಾವಿಗೆ ಮುನ್ನ ಬರೆದಿಟ್ಟ ಪತ್ರದಲ್ಲಿ ಅಂದಿನ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾಗಿದ್ದ ಕೆ.ಎಸ್. ಈಶ್ವರಪ್ಪ ಅವರನ್ನು ಹೆಸರಿಸಿದ್ದರು. ಈಶ್ವರಪ್ಪ ಆಗ ರಾಜೀನಾಮೆ ಸಲ್ಲಿಸಿದ್ದರು. ನಿಗಮ ಹಾಗೂ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ಅಧಿಕಾರಿಗಳು ಒಟ್ಟಾಗಿಯೇ ಈ ಅವ್ಯವಹಾರದಲ್ಲಿ ಪಾಲ್ಗೊಂಡ ಅನುಮಾನವೂ ಬಲವಾಗಿದೆ. ಒಂದೆಡೆ, ವಾಲ್ಮೀಕಿ ಸಮುದಾಯದವರು ಸೌಲಭ್ಯಗಳಿಗಾಗಿ ಕಾತರಿಸಿ ಕುಳಿತಿದ್ದರೂ ಅವರಿಗಾಗಿ ಖರ್ಚು ಮಾಡದೆ ನಿಗಮದ ಬಳಿಯಿದ್ದ ಹಣ ಹೀಗೆ ಅನ್ಯ ಖಾತೆಗಳ ಪಾಲಾಗಿರುವುದು ಸರ್ಕಾರದ ಹಣವನ್ನು ಹೇಗೆ ಸೂರೆ ಹೊಡೆಯಲಾಗುತ್ತದೆ ಎಂಬುದಕ್ಕೆ ನಿದರ್ಶನ. ಭ್ರಷ್ಟಾಚಾರದಂತಹ ಪ್ರಕರಣಗಳಲ್ಲಿ ಶಿಕ್ಷೆಯಾಗುವ ಪ್ರಮಾಣ ತುಂಬಾ ಕಡಿಮೆ. ಹೀಗಾಗಿ ಅಧಿಕಾರಿಗಳು ಹೀಗೆ ಜನರ ದುಡ್ಡಿಗೆ ನಿರ್ಲಜ್ಜೆಯಿಂದ ಕೈಹಾಕುವ ಧೈರ್ಯ ಪ್ರದರ್ಶಿಸುತ್ತಿದ್ದಾರೆ. ನಿಜವಾದ ತಪ್ಪಿತಸ್ಥರು ಯಾರು ಹಾಗೂ ಹಣ ವರ್ಗಾವಣೆಯಿಂದ ಲಾಭ ಪಡೆದವರು ಯಾರು ಎನ್ನುವುದನ್ನು ಸಿಐಡಿ ನಿಷ್ಪಕ್ಷಪಾತವಾಗಿ ತನಿಖೆ ನಡೆಸಿ ಪತ್ತೆ ಹಚ್ಚಬೇಕು. ನಿಗಮದ ಖಾತೆಯಿಂದ ಅಕ್ರಮವಾಗಿ ವರ್ಗವಾದ ಪ್ರತಿ ಪೈಸೆಯೂ ನಿಗಮಕ್ಕೆ ವಾಪಸ್ ಆಗುವಂತೆ ಸರ್ಕಾರ ನೋಡಿಕೊಳ್ಳಬೇಕು.

ದಿನದ ಟ್ವೀಟ್

ಕುಶಲ ಕಾರ್ಮಿಕರ ಸಂಖ್ಯೆ ಹೆಚ್ಚಲಿ

ಉತ್ತಮ ಗುಣಮಟ್ಟ ಕಾಯ್ದುಕೊಳ್ಳುವುದಕ್ಕಲ್ಲದೆ, ಕುಶಲಿಗರಾದ ನಿರ್ಮಾಣ ಕೆಲಸಗಾರರ ಕೊರತೆಯ ಕಾರಣದಿಂದ ಯಂತ್ರಗಳ ಮೇಲೆ ಹೂಡಿಕೆ ಮಾಡುವುದು ನನಗೆ ನೋವುಂಟು ಮಾಡುತ್ತದೆ. ನಿರುದ್ಯೋಗವು ಗಂಭೀರವಾದ ಸಮಸ್ಯೆಯಾಗಿರುವಾಗ, ಉದ್ಯೋಗ ಅವಕಾಶಗಳನ್ನು ನಾವು ಒತ್ತಾಯಪೂರ್ವಕವಾಗಿ ಕಡಿಮೆ ಮಾಡಬೇಕಾಗಿದೆ. ಯಾವುದು ಸರಿ ಎಂಬುದು ತಿಳಿಯದು!

ಹರ್ಷ್ ಗೋಯಂಕಾ, ಉದ್ಯಮಿ

ಕಿಡಿನುಡಿ

ಸಚಿವರು ರಾಜೀನಾಮೆ ಕೊಡಬೇಕು. ಆಜ್ಞಾನುವರ್ತಿಯಾಗಿರಲಿ ಅಥವಾ ಅಸಮರ್ಥರಾಗಿರಲಿ, ಹೇಗೇ ಇದ್ದರೂ ಅವರು ಅಧಿಕಾರದಿಂದ ಕೆಳಗಿಳಿಯಬೇಕು. ಇಲ್ಲಿ ಹಣದ ಮೊತ್ತವು ಗಮನ ಸೆಳೆಯದೆ ಇರುವಷ್ಟು ಸಣ್ಣದೇನೂ ಅಲ್ಲ. ಇಡೀ ಇಲಾಖೆಯಲ್ಲಿ ಸುಧಾರಣೆ ತರಬೇಕಾದ ಅಗತ್ಯವಿದೆ. ಇದರಿಂದ ಆಡಳಿತ ಸುಧಾರಿಸುವುದು ಮಾತ್ರವಲ್ಲ ಜನರ ವಿಶ್ವಾಸವೂ ಹೆಚ್ಚುತ್ತದೆ.

(ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಕ್ಕೆ ಪ್ರತಿಕ್ರಿಯೆ)

ಆನಂದ ಗುಂಡೂರಾವ್, ಬಿ–ಪ್ಯಾಕ್ ಸದಸ್ಯ

25 ವರ್ಷಗಳ ಹಿಂದೆ

ಸೋಮವಾರ, 31-5-1999

● **ಅತಿಕ್ರಮಣಕ್ಕೆ ತಡೆ, ಪ್ರಮುಖ ನೆಲೆ ವಶ**

ನವದೆಹಲಿ, ಮೇ 30 (ಪಿಟಿಐ, ಯುಎನ್‌ಐ)– ಜಮ್ಮು ಮತ್ತು ಕಾಶ್ಮೀರ ವಲಯದ ಬಟಾಲಿಕ್‌ನಲ್ಲಿ ಕಳೆದ ರಾತ್ರಿ ಪಾಕ್ ಅತಿಕ್ರಮಣಕಾರರು ಮತ್ತು ಸೇನೆಯ ಮಧ್ಯೆ ನಡೆದ ನೇರ ಹೋರಾಟದಲ್ಲಿ ಭಾರತೀಯ ಮೇಜರ್ ಒಬ್ಬರು ಮೃತಪಟ್ಟು, ಕನಿಷ್ಠ ಆರು ಮಂದಿ ಪಾಕಿಸ್ತಾನ ಬೆಂಬಲಿತ ಉಗ್ರಗಾಮಿಗಳು ಸತ್ತಿದ್ದಾರೆ.

ಈ ನಡುವೆ, ಕಾರ್ಗಿಲ್ ಪ್ರದೇಶದಲ್ಲಿನ ಉದ್ವಿಗ್ನತೆಯನ್ನು ಉಪಶಮನಗೊಳಿಸಲು ಭಾರತ ಮತ್ತು ಪಾಕಿಸ್ತಾನಕ್ಕೆ ಪ್ರತಿನಿಧಿಯನ್ನು ಕಳುಹಿಸಿಕೊಡುವ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಕೋಫಿ ಅನ್ನಾನ್ ಅವರ ಸೂಚನೆಯನ್ನು ಭಾರತ ತಿರಸ್ಕರಿಸಿದೆ.

● **ಇಂಟರ್‌ನೆಟ್ ಪ್ರಕಟಣೆ: ಗೊಂದಲ**

ಬೆಂಗಳೂರು, ಮೇ 30– ಎಸ್‌ಎಸ್‌ಎಲ್‌ಸಿ ಫಲಿತಾಂಶ ಅಧಿಕೃತವಾಗಿ ಶಾಲೆಗಳಲ್ಲಿ ಪ್ರಕಟ ಆಗುವುದಕ್ಕೆ ಒಂದು ದಿನ ಮುಂಚಿತವಾಗಿ ಇಂದು ಇಂಟರ್‌ನೆಟ್‌ನಲ್ಲಿ ಪ್ರಕಟವಾದ್ದರಿಂದ ವಿದ್ಯಾರ್ಥಿ ಮತ್ತು ಪೋಷಕ ವೃಂದದವರಲ್ಲಿ ಗೊಂದಲ ಮೂಡಿತು.

ಇಂಟರ್‌ನೆಟ್ ಫಲಿತಾಂಶವನ್ನು ಎಟುಕಿಸಿಕೊಳ್ಳಲಾಗದವರು ಪರದಾಡಿದರು. ಇಂಟರ್‌ನೆಟ್ ಸೌಲಭ್ಯ ಪಡೆಯಲಾಗದವರು ನಾಳೆಯವರೆಗೆ ಕಾಯಲಾಗದೆ ಪರಿತಪಿಸಿದರು.

50 ವರ್ಷಗಳ ಹಿಂದೆ

ಶುಕ್ರವಾರ, 31-5-1974

● **'ಅನೇಕರಿಗೆ ರಾಜಕೀಯ ಒಂದು ಕಸುಬು'**

ಬೆಂಗಳೂರು, ಮೇ 30– ರಾಜಕೀಯದಲ್ಲಿ ಜನಪ್ರತಿನಿಧಿಗಳಾಗಿರುವವರು, 'ತಾವು ಎಲ್ಲಿವರೆಗೆ ಸಂಪಾದನೆಗೆ ಬಂದಿದ್ದೇವೆ ಎಂದು ತಿಳಿದುಕೊಂಡಿರುತ್ತಾರೋ ಅದುವರೆಗೆ ಸಮಾಜವಾದವೂ ಬಾರದು, ಸಾಮಾಜಿಕ ನ್ಯಾಯವೂ ಸಿಗದು' ಎಂದು ಮುಖ್ಯಮಂತ್ರಿ ದೇವರಾಜ ಅರಸು ಅವರು ಇಂದು ಇಲ್ಲಿ ಹೇಳಿದರು.

ಬಹುತೇಕ ಮಂದಿ ಶಾಸಕರಿಗೆ, ಜನಜೀವನದ ಕಷ್ಟಕಾರ್ಪಣ್ಯಗಳ ಅರಿವಿಲ್ಲ, ಅರಿಯುವ ಪ್ರಯತ್ನವೂ ಇಲ್ಲ ಎಂದು ಅರಸು ಹೇಳಿದರು.

'ಬಹುಮಂದಿಗೆ ರಾಜಕೀಯ ಎಂಬುದೊಂದು ಉದ್ಯೋಗ. ಚುನಾವಣೆ ಬಂತು, ಟಿಕೆಟ್ ಸಿಕ್ಕಿತು, ಮೆಂಬರ್ ಆದರು. ಅದನ್ನು ಕಸುಬಾಗಿ ಹಿಡಿದು ಮುಂದುವರಿಯುತ್ತಿದ್ದಾರೆ' ಎಂದು ಟೀಕಿಸಿದರು.

ಚುನಾವಣೆ ಸಂದರ್ಭದಲ್ಲಿ ಸಂವಿಧಾನ, ಇತಿಹಾಸ, ಮಹಾತ್ಮರ ಮೇಲೆ ಪ್ರಹಾರ

ಸಿಗದ ಮುಲಾಮು, ಆರದ ಗಾಯ!

ಅನುಸಂಧಾನ

ರವೀಂದ್ರ ಭಟ್ಟ

ಲೋಕಸಭಾ ಚುನಾವಣೆ ಇನ್ನೇನು ಮುಗಿಯಲಿದೆ. ಇನ್ನೊಂದೇ ಸುತ್ತಿನ ಮತದಾನ ಬಾಕಿ ಇದೆ. ಜೂನ್ 4ಕ್ಕೆ ಫಲಿತಾಂಶ. ಆಮೇಲೆ ಹೊಸ ಸರ್ಕಾರ. ಯಾವ ಪಕ್ಷದ ನೇತೃತ್ವದ ಸರ್ಕಾರ ಬರುತ್ತದೆ? ಯಾವುದಾದರೂ ಬರಲಿ. ಈಗ ಅದಲ್ಲ ಮುಖ್ಯ. ಸುದೀರ್ಘ 82 ದಿನಗಳವರೆಗೆ ನಡೆದ ಚುನಾವಣೆ ಪ್ರಕ್ರಿಯೆ ಸಂದರ್ಭದಲ್ಲಿ ನಮ್ಮ ಮನಸ್ಸಿನ ಮೇಲೆ, ಸಮಾಜದ ಮೇಲೆ ಹಾಗೂ ದೇಶದ ಮೇಲೆ ಆದ ಗಾಯಕ್ಕೆ ಮುಲಾಮನ್ನು ಎಲ್ಲಿಂದ ತರುವುದು? ಹೊಸ ಸರ್ಕಾರ ಬಂದ ಸಂಭ್ರಮದಲ್ಲಿ ಈ ಗಾಯಗಳು ಮರೆಯಾಗುವುದಿಲ್ಲ. ನಾವು ಬಯಸಿದ ಪಕ್ಷ ಅಥವಾ ನಾಯಕನ ನೇತೃತ್ವದ ಸರ್ಕಾರ ಬಂದರೂ ಇದಕ್ಕೆ ಔಷಧಿ ದೊರೆಯುವುದಿಲ್ಲ. ಬರೀ ಔಷಧಿಗೆ ಗುಣವಾಗುವ ಗಾಯವೂ ಇದಲ್ಲ. ಸದ್ಯಕ್ಕೆ ಇದು ಆರದ ಗಾಯ. ಗುಣವಾಗಲು ಬಹಳಷ್ಟು ಸಮಯ ಬೇಕು. ಗಾಯ ಮಾಡಿದ ನಾಯಕ ಚೆನ್ನಾಗಿರುತ್ತಾನೆ. ಪಕ್ಷವೂ ಆರಾಂ ಆಗಿ ಇರುತ್ತದೆ. ಆದರೆ ಪ್ರಜೆ, ದೇಶ, ಸಮಾಜ?

ಗಾಯ ಮಾಡಿದ್ದು ಆ ಪಕ್ಷದವರು, ಈ ಪಕ್ಷದವರು ಅಂತ ಭೇದವೇನಿಲ್ಲ. ಎಲ್ಲ ಪಕ್ಷಗಳ ಮುಖಂಡರೂ ಪರಚಿ ಪರಚಿ ಗಾಯ ಮಾಡಿದ್ದಾರೆ. ಪ್ರಜೆಗಳ ಮೈ ಈಗ ಗಾಯಗಳಿಂದಲೇ ತುಂಬಿಹೋಗಿದೆ. ಹಾಲಿ ಪ್ರಧಾನಿ, ಭಾವಿ ಪ್ರಧಾನಿಗಳು, ಎಂದೋ ಪ್ರಧಾನಿಯಾಗುತ್ತೇನೆ ಎಂದು ಭ್ರಮಿಸಿದವರು ಎಲ್ಲರೂ ಗಾಯದ ಮೇಲೆ ಗಾಯ ಮಾಡುತ್ತಲೇ ಹೋಗಿದ್ದಾರೆ. ಇಡೀ ಚುನಾವಣಾ ಪ್ರಕ್ರಿಯೆಯಲ್ಲಿ ಕಂಡುಬಂದಿದ್ದು ಬರೀ ಒಡಕಿನ ಮಾತು. ದೇಶ ಕಟ್ಟುವ ಮಾತಿಗಿಂತ ಮನಸ್ಸು ವಿಭಜಿಸುವ ಮಾತುಗಳೇ ವಿಜೃಂಭಿಸಿದವು.

ಈ ಚುನಾವಣೆ ಸಂದರ್ಭದಲ್ಲಿ ಅತ್ಯಂತ ಚರ್ಚೆಗೆ ಬಂದ ವಿಷಯ ಎಂದರೆ, ಸಂವಿಧಾನದ ಮೂಲ ಸ್ವರೂಪವನ್ನೇ ಬದಲಾಯಿಸಲಾಗುತ್ತದೆ ಎಂಬ ಅಂಶ. ಪ್ರಧಾನಿ ನರೇಂದ್ರ ಮೋದಿ ಅವರು ಮೂರನೇ ಬಾರಿಗೂ ಅಧಿಕಾರಕ್ಕೆ ಬಂದರೆ ಭಾರತವನ್ನು ಹಿಂದೂ ದೇಶ ಮಾಡುತ್ತಾರೆ, ಅದಕ್ಕೆ ಬೇಕಾದಂತೆ ಸಂವಿಧಾನವನ್ನು ಬದಲಾಯಿಸುತ್ತಾರೆ ಎಂದು ಕಾಂಗ್ರೆಸ್ ನಾಯಕರು ಹುಯಿಲೆಬ್ಬಿಸಿದರು. ಸಂವಿಧಾನ ಬದಲಾವಣೆ ಮಾಡುವ ಕುರಿತಂತೆ ಬಿಜೆಪಿ ನಾಯಕರು ನೀಡಿದ ಹೇಳಿಕೆಗಳನ್ನು ಅವರು ಇದಕ್ಕೆ ಪುರಾವೆಯಾಗಿ ನೀಡಿದರು.

'ಮೋದಿ ಮತ್ತೆ ಪ್ರಧಾನಿಯಾದರೆ ಈ ದೇಶದಲ್ಲಿ ಚುನಾವಣೆಯೇ ಇರುವುದಿಲ್ಲ. ಇದೇ ಕೊನೆಯ ಚುನಾವಣೆ ಆಗುತ್ತದೆ' ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದರು. ಈ ವಿಷಯದಲ್ಲಿ ಮೋದಿಯವರೇನೂ ಹಿಂದೆ ಬೀಳಲಿಲ್ಲ. 'ದಲಿತರು ಮತ್ತು ಹಿಂದುಳಿದ ವರ್ಗಗಳ ಮೀಸಲಾತಿಯನ್ನು ಮುಸ್ಲಿಮರಿಗೆ ನೀಡುವುದಕ್ಕೆ ಕಾಂಗ್ರೆಸ್ ಪಕ್ಷ ಸಂವಿಧಾನವನ್ನು ಬದಲಾಯಿಸುತ್ತದೆ' ಎಂದು ಹೇಳಿಕೆ ನೀಡಿದರು. ಸಮಾಜವಾದಿ ಪಕ್ಷದ ಮುಖಂಡ ಅಖಿಲೇಶ್ ಯಾದವ್ ಅವರು 'ರೈತರ ಭೂಮಿಯನ್ನು ಕಸಿದುಕೊಳ್ಳುವುದಕ್ಕೆ ಬಿಜೆಪಿಯು ಸಂವಿಧಾನಕ್ಕೆ ತಿದ್ದುಪಡಿ ತರುತ್ತದೆ' ಎಂದು ಆರೋಪಿಸಿದರು. ಅಂದರೆ ಯಾವ ಪಕ್ಷದ ನೇತೃತ್ವದ ಸರ್ಕಾರ ಬಂದರೂ ನಮ್ಮ ಸಂವಿಧಾನಕ್ಕೆ ಉಳಿಗಾಲವಿಲ್ಲ ಎಂದು ಪ್ರಜೆಗಳು ಕಂಗಾಲಾಗುವಂತಾಗಿದೆ.

ಸಂವಿಧಾನದ ಮೇಲೆ ನಂಬಿಕೆ ಹೊರಟುಹೋದರೆ ಅದು ಪ್ರಜಾಪ್ರಭುತ್ವದ ನಾಶಕ್ಕೆ ಕಾರಣವಾಗುತ್ತದೆ. ಚುನಾವಣೆ ಫಲಿತಾಂಶ ಏನಾಗುತ್ತದೆ ಎನ್ನುವುದಕ್ಕಿಂತ ಫಲಿತಾಂಶ ಹೊರಬಂದ ಮೇಲೆ ಅಂಬೇಡ್ಕರ್ ಅವರು ಕೊಟ್ಟ ಸಂವಿಧಾನ ಉಳಿಯುವುದೇ ಅಥವಾ ಹೊಸ ಸಂವಿಧಾನ ಜಾರಿಗೆ ಬರುವುದೇ ಎಂದು ಪ್ರಜೆಗಳು ಚಿಂತಿಸುವಂತಾಗಿದೆ.

ಸಂವಿಧಾನದಂತೆಯೇ ಪ್ರಬಲ ದಾಳಿಗೆ ಒಳಗಾಗಿದ್ದು ನಮ್ಮ ಇತಿಹಾಸ. ಸ್ವಾತಂತ್ರ್ಯ ಹೋರಾಟಗಾರರು, ಗಾಂಧೀಜಿ, ನೆಹರೂ ಅವರ ಮೇಲೂ ಒಂದರ ಹಿಂದೆ ಒಂದು ಪ್ರಹಾರ ನಡೆಯಿತು. 'ಗಾಂಧಿ' ಸಿನಿಮಾ ಬರುವವರೆಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಗಾಂಧಿ ಯಾರೆಂದೇ ಗೊತ್ತಿರಲಿಲ್ಲ ಎಂಬ ಮಾತನ್ನೂ ನಾವು ಕೇಳಬೇಕಾಯಿತು. ಇತಿಹಾಸವನ್ನು ಮತ್ತೆ ಬರೆಯುವುದಾಗಿ ಘೋಷಣೆಗಳು ಕೇಳಿಬಂದವು. ನಮ್ಮ ಮಕ್ಕಳು ಈಗ ಯಾರನ್ನು ನಂಬಬೇಕು ಎಂದು ತಿಳಿಯದೆ ಒದ್ದಾಡುವಂತಾಗಿದೆ. ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆಯೇ ಅಪನಂಬಿಕೆ ಮೂಡಿದರೆ ಗತಿ ಏನು?

ಮುಸ್ಲಿಮರ ವಿರುದ್ಧ ದ್ವೇಷ ಹುಟ್ಟುಹಾಕುವ ಕೆಲಸವನ್ನು ಕೆಲವು ಗುಂಪುಗಳು ನಮ್ಮ ದೇಶದಲ್ಲಿ ಬಹಳ ಕಾಲದಿಂದಲೂ ಮಾಡುತ್ತಾ ಬಂದಿವೆ. ಆದರೆ ಪ್ರಸಕ್ತ ಚುನಾವಣೆ ಈ ದ್ವೇಷಕ್ಕೆ ಗೊಬ್ಬರ, ನೀರು ಎಲ್ಲವನ್ನೂ ಹಾಕಿ ಬೃಹತ್ತಾಗಿ ಬೆಳೆಯುವಂತೆ ಮಾಡಿದೆ. ದ್ವೇಷದ ಮಾತುಗಳು ಮನಸ್ಸನ್ನು ಎಷ್ಟು ಕೆಡಿಸಿವೆ ಎಂದರೆ, ಯಾವುದೇ ಮುಸ್ಲಿಂ ವ್ಯಕ್ತಿಯನ್ನು ಯಾವ ಹಿಂದೂವೂ ಯಾವುದೇ ಹಿಂದೂ ವ್ಯಕ್ತಿಯನ್ನು ಯಾವ ಮುಸ್ಲಿಮನೂ ನಂಬಲು ಆಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಹಾದಿ ಬೀದಿಯಲ್ಲಿ, ಸಾಮಾಜಿಕ ಜಾಲತಾಣಗಳಲ್ಲಿ ದ್ವೇಷದ ಮಾತು–ಬರಹಗಳು ರಾರಾಜಿಸುತ್ತಿವೆ.

'ಕಾಂಗ್ರೆಸ್ ನೇತೃತ್ವದ ಇಂಡಿಯಾ ಮೈತ್ರಿಕೂಟ ಅಧಿಕಾರಕ್ಕೆ ಬಂದರೆ ನಿಮ್ಮ ಆಸ್ತಿಪಾಸ್ತಿಯನ್ನು ಕಸಿದು ಮುಸ್ಲಿಮರಿಗೆ ಹಂಚಲಾಗುತ್ತದೆ. ಹಿಂದುಳಿದವರು ಮತ್ತು ದಲಿತರ ಮೀಸಲಾತಿಯನ್ನು ಕಸಿದುಕೊಳ್ಳಲಾಗುತ್ತದೆ. ಅದರ ಲಾಭ ಮುಸ್ಲಿಮರಿಗೆ ಸಿಗುತ್ತದೆ. ಮಂಗಳಸೂತ್ರವನ್ನೂ ಬಿಡುವುದಿಲ್ಲ' ಎಂದು ಸ್ವತಃ ಪ್ರಧಾನ ಮಂತ್ರಿಯವರೇ ಹೇಳಿದರು. ಪ್ರಧಾನಿ ಬಾಯಿಯಿಂದಲೇ ಇಂತಹ ಮಾತು ಬಂದ ಮೇಲೆ ಅವರ ಭಕ್ತರು ದ್ವೇಷ ಹಂಚುವುದಕ್ಕೆ ತಡಮಾಡಲೇ ಇಲ್ಲ. ಜಾತಿ ವಿಭಜನೆಯ ಮಾತುಗಳಂತೂ ಸುನಾಮಿಯಂತಿದ್ದವು.

ಹತ್ತು ವರ್ಷಗಳಿಂದ ಅಧಿಕಾರದಲ್ಲಿರುವ ನರೇಂದ್ರ ಮೋದಿ ಅವರು ತಮ್ಮ ಅವಧಿಯಲ್ಲಿ ಮಾಡಿದ ಕೆಲಸಗಳು ಮತ್ತು ಮುಂದೆ ಮಾಡಲು ಉದ್ದೇಶಿಸಿರುವ ಕೆಲಸಗಳ ಬಗ್ಗೆ ಮಾತನಾಡಬೇಕಿತ್ತು. ಅದೇ ಆದ್ಯತೆ ಆಗಬೇಕಿತ್ತು. ವಿರೋಧ ಪಕ್ಷಗಳೂ ತಾವು ಅಧಿಕಾರಕ್ಕೆ ಬಂದರೆ ಮಾಡಲು ಉದ್ದೇಶಿಸಿರುವ ಕೆಲಸಗಳ ಬಗ್ಗೆ ಹೇಳಬೇಕಿತ್ತು. ಆದರೆ ಎಲ್ಲಾ ಮುಖಂಡರ ಭಾಷಣಗಳಲ್ಲಿ ಕಿಚ್ಚಿಗೆ ಸಿಕ್ಕ ಪ್ರಾಧಾನ್ಯವು ಬೆಂಕಿ ಆರಿಸುವ ಸಾಮಗ್ರಿಗೆ ಸಿಗಲೇ ಇಲ್ಲ. ಪ್ರಜಾಪ್ರಭುತ್ವದ ಸಂಕೇತವಾದ ಭವ್ಯ ಸಂಸತ್ ಭವನವು ಮೋದಿ ಆಡಳಿತದ ಅವಧಿಯಲ್ಲಿ ನಿರ್ಮಾಣವಾಗಿದೆ. ಆದರೆ ಅದರ ಬಗ್ಗೆ ಅವರು ಹೆಚ್ಚು ಮಾತನಾಡಲಿಲ್ಲ. ರಾಮಮಂದಿರ ಕಟ್ಟಿದ್ದರ ಬಗ್ಗೆ ಹೆಚ್ಚು ಹೆಚ್ಚು ಮಾತನಾಡಿದರು. ಅದು ಉಪಯೋಗಕ್ಕೆ ಬಾರದು ಎಂಬ ಕಾರಣಕ್ಕೋ ಏನೋ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ರಾಮಮಂದಿರಕ್ಕೆ ಬುಲ್ಡೋಜರ್ ಹತ್ತಿಸಿ ನಾಶ ಮಾಡಲಾಗುತ್ತದೆ ಎಂದು ಹೇಳಿದರು. ನಾವು ಒಪ್ಪುತ್ತೇವೋ ಬಿಡುತ್ತೇವೋ ಆದರೆ ಈ ದೇಶದಲ್ಲಿ ರಾಮನ ಭಕ್ತರು ಅಪಾರ ಸಂಖ್ಯೆಯಲ್ಲಿ ಇದ್ದಾರೆ. ಅಷ್ಟೊಂದು ರಾಮ ಭಕ್ತರನ್ನು ಎದುರು ಹಾಕಿಕೊಂಡು ಮಂದಿರಕ್ಕೆ ಬುಲ್ಡೋಜರ್ ಹಚ್ಚುವ ಧೈರ್ಯ ಯಾರಿಗಿದೆ? ಯಾವ ಸರ್ಕಾರ ಇಂತಹ ಹುಚ್ಚು ಸಾಹಸ ಮಾಡಬಹುದು? ಇದು ಹೇಳಿದ ಅವರಿಗೂ ಗೊತ್ತು, ಕೇಳಿದ ನಮಗೂ ಗೊತ್ತು. ಆದರೂ ಪ್ರಧಾನಿ ಬಾಯಲ್ಲಿ ಬಂತು ಒಡಕಿನ ಮಾತು.

ಮೀಸಲಾತಿಯ ವಿಷಯದಲ್ಲಿಯೂ ಇಂತಹ ವಿಭಜನೆಯ ಮಾತುಗಳು ಕೇಳಿಬಂದವು. ಅವಕಾಶ ವಂಚಿತರಿಗೆ ಘನತೆಯನ್ನು ತಂದುಕೊಡುವುದಕ್ಕಾಗಿಯೇ ಬಿ.ಆರ್.ಅಂಬೇಡ್ಕರ್ ಅವರು ರೂಪಿಸಿದ ಮೀಸಲಾತಿ ವ್ಯವಸ್ಥೆಯ ಬಗ್ಗೆಯೇ ತಿರಸ್ಕಾರದ ಭಾವನೆಯನ್ನು ಉಂಟು ಮಾಡುವಂತಹ ಹೇಳಿಕೆಗಳು ಈ ಬಾರಿ ಕೇಳಿಬಂದವು. ಮೀಸಲಾತಿ ವ್ಯವಸ್ಥೆಯನ್ನು ವಿರೋಧಿಸುವ ಮನೋಭಾವವನ್ನು ಹಲವಾರು ವರ್ಷಗಳಿಂದ ನಿಧಾನವಾಗಿ ಸೃಷ್ಟಿಸಲಾಗುತ್ತಿತ್ತು. ಈ ಚುನಾವಣೆ ಸಂದರ್ಭದಲ್ಲಿ ಅದು ವೇಗವನ್ನು ಕಂಡಿತು. 'ಮೀಸಲಾತಿ ಪಡೆಯುವವರೆಲ್ಲಾ ನಮ್ಮ ಅವಕಾಶವನ್ನು ಕಸಿದುಕೊಳ್ಳುವ ದುರುಳರು' ಎಂಬ ಭಾವನೆಯನ್ನು ಯುವಜನರಲ್ಲಿ ಬಿತ್ತುವ ಕಾರ್ಯ ಅತ್ಯಂತ ವ್ಯವಸ್ಥಿತವಾಗಿಯೇ ನಡೆದಿದೆ.

ಕರ್ನಾಟಕದ ಮತದಾರರ ಪರಿಸ್ಥಿತಿಯಂತೂ ಇನ್ನೂ ವಿಚಿತ್ರವಾಗಿದೆ. 'ಮಧ್ಯರಾತ್ರಿಯಲ್ಲಿ ಮಹಿಳೆಯೊಬ್ಬಳು ಯಾವುದೇ ಭಯವಿಲ್ಲದೆ ನಡೆದಾಡುವಂತಹ ಪರಿಸ್ಥಿತಿ ನಿರ್ಮಾಣವಾದರೆ ಅದು ನಿಜವಾದ ಸ್ವಾತಂತ್ರ್ಯ' ಎಂದು ಗಾಂಧೀಜಿ ಹೇಳಿದ್ದರು. ರಾಜ್ಯದಲ್ಲಿ ಈಗ ಅದನ್ನು 'ಮಹಿಳೆಯೊಬ್ಬಳು ಸಂಸದರ ಅಥವಾ ಶಾಸಕರ ಕಚೇರಿಗೆ ಧೈರ್ಯವಾಗಿ ಹೋಗಿಬಂದರೆ ಅದು ನಿಜವಾದ ಸ್ವಾತಂತ್ರ್ಯ' ಎಂದು ಬದಲಾಯಿಸಬೇಕಾಗಿದೆ. ಹೇ ರಾಮ್.

ಚುರುಮುರಿ



ಅವಮಾನ ವರದಿ!

• ಬಿ.ಎನ್.ಮಲ್ಲೇಶ್

'ಏನೋ ತೆಪರ, ಕೇರಳಕ್ಕೆ ಮುಂಗಾರು ಪ್ರವೇಶ ಆತಂತೆ, ಈ ಸಲನಾದ್ರು ಒಳ್ಳೆ ಮಳೆ ಬರ್ತತೋ ಇಲ್ಲೋ?' ದುಬ್ಬೀರ ಕೇಳಿದ.

'ಬರ್ತತಂತಪ, ಹವಾಮಾನ ತಜ್ಞರು ಹೇಳಿದಾರೆ...'

'ಈ ಹವಾಮಾನ ವರದಿ ನಂಬಿಕೆಂದ್ರೆ ಅಷ್ಟೆ, ಇಂದು ಸಾಧಾರಣದಿಂದ ಭಾರೀ ಮಳೆ ಸಾಧ್ಯತೆ ಅಂತಾರೆ. ಆದರಾತು, ಇಲ್ಲದಿದ್ರೆ ಇಲ್ಲ' ಗುಡ್ಡೆ ನಕ್ಕ.

'ಇನ್ನೊಂದ್ ಗೊತ್ತಾ? 'ಭಾರೀ ಮಳೆ, ತಗ್ಗು ಪ್ರದೇಶಗಳಿಗೆ ನೀರು' ಅಂತ ಪೇಪರಲ್ಲಿ ಹಾಕ್ತಾರೆ. ತಗ್ಗಿಗಲ್ಲದೆ ಮತ್ತೇನು ಗುಡ್ಡ ಏರುತ್ತಾ ನೀರು?' ತೆಪರೇಸಿಗೂ ನಗು.

'ಅಲ್ಲ, ಮೊನ್ನೆ ಅದೆಂಥದೋ ರೀಮಲ್ ಚಂಡಮಾರುತ ಬರ್ತತಿ, ಅಲ್ಲೋಲ ಕಲ್ಲೋಲ ಆಗ್ತತಿ ಅಂತಿದ್ರು. ಎಲ್ಲದು ಬರ್ಲೇ ಇಲ್ಲ?' ಮಂಜಮ್ಮ ಕೇಳಿದಳು.

'ಅದು ಬರದಿದ್ರೇನಂತೆ, ನಿನ್ನೆ ರಾತ್ರಿ ಬೆಂಗಳೂರು ಏರ್‌ಪೋರ್ಟ್‌ನಾಗೆ ಒಂದು ಚಂಡಮಾರುತ ಎದ್ದಿರಬೇಕು...' ಗುಡ್ಡೆ ಒಗಟಿನ ಮಾತಾಡಿದ.

'ಗೊತ್ತಾತು ಬಿಡೋ ಗುಡ್ಡೆ, ಅದೂ ಹವಾಮಾನ ವರದಿ ತರ ಠುಸ್ಸಾಗುತ್ತಾ ಅಂತ'.

'ಇಲ್ಲ, ಠುಸ್ಸಾಗಲ್ಲ, ಇನ್ನೊಂದ್ ವಾರ ಟಿ.ವಿ. ತುಂಬ ಅದರದ್ದೇ ಹವಾ'.

'ಆತು ಬಿಡಪ, ಆಮೇಲೆ ಪಾರ್ಲಿಮೆಂಟಲ್ಲಿ ಈ ಸಲ ಯಾರಿಗೆ ಮೆಜಾರಿಟಿ ಬರಬೋದು?' ಕೊಟ್ರೇಶಿ ಕೇಳಿದ.

'ಬಿಜೆಪಿಗೆ ಬರಬಹುದು, ಇಲ್ಲಾಂದ್ರೆ ಕಾಂಗ್ರೆಸ್ಸು' ತೆಪರೇಸಿ ನಕ್ಕ.

'ಇದು ಹೇಳಾಕೆ ನೀನೇ ಆಗ್ಬೇಕಾ? ಹೋಗ್ಲಿ, ಮಂಜಮ್ಮನ ಸಾಲನ ನಮ್ ಗುಡ್ಡೆ ಯಾವಾಗ ತೀರಿಸ್ತೋದು?' ದುಬ್ಬೀರ ಕೇಳಿದ.

'ಅದಾ... ಹವಾಮಾನ ವರದಿ ಪ್ರಕಾರ ಅಂಥ ಯಾವ ಲಕ್ಷಣಾನು ಕಾಣ್ತಾ ಇಲ್ಲ'.

'ಲೇಯ್, ಇದು ಹವಾಮಾನ ವರದಿ ಅಲ್ಲ, ಅವಮಾನ ವರದಿ' ಎಂದ ಗುಡ್ಡೆ. ಎಲ್ಲರೂ ಗೊಳ್ಳಂತ ನಕ್ಕರು.

ಸಂಗತ

ಶ್... ರೇವ್‌ಪಾರ್ಟಿ ನಡೆಯುತ್ತಿದೆ!

ಯುವಜನರಿಗೆ ರೇವ್‌ಪಾರ್ಟಿಗಳು ಆಕರ್ಷಕ ಎನಿಸುತ್ತಿವೆಯಾದರೂ ಅವುಗಳಲ್ಲಿ ಪಾಲ್ಗೊಳ್ಳುವುದರಿಂದ ಆಗುವ ಅಪಾಯಗಳ ಪಟ್ಟಿ ದೊಡ್ಡದು

• ಡಾ. ಕೆ.ಎಸ್.ಚೈತ್ರಾ

ಸಿಲಿಕಾನ್ ಸಿಟಿ ಎಂದೇ ಪ್ರಸಿದ್ಧಿಯಾಗಿದ್ದ ಬೆಂಗಳೂರಿಗೆ ಇದೀಗ ಹೊಸದೊಂದು ಬಿರುದು ರೇವ್‌ಪಾರ್ಟಿ ಸಿಟಿ! ದೇಶವಿದೇಶಗಳಿಂದ ಶಿಕ್ಷಣ, ವೃತ್ತಿ, ಉದ್ಯಮಕ್ಕಾಗಿ ಬಂದ ಎಷ್ಟೋ ಜನ ಇಲ್ಲಿನ ಅನುಕೂಲಕರ ವಾತಾವರಣ, ಆಧುನಿಕ ಸೌಲಭ್ಯಗಳನ್ನು ಮನಗಂಡು ಇಲ್ಲೇ ನೆಲಸಿರುವುದು ಬೆಂಗಳೂರಿನ ಹಿರಿಮೆಗೆ ಸಾಕ್ಷಿಯಾಗಿದೆ. ಆದರೆ ಅದರೊಂದಿಗೆ ಬದಲಾದ ಜೀವನಶೈಲಿಯ ಕಾರಣದಿಂದಾಗಿ ಉಂಟಾಗುತ್ತಿರುವ ಸಮಸ್ಯೆಗಳೂ ಹಲವಾರು. ಅವುಗಳಲ್ಲೊಂದು ಈ ರೇವ್‌ಪಾರ್ಟಿ.

ರೇವ್ ಎಂದರೆ ಅತ್ಯುತ್ಸಾಹದಲ್ಲಿ ಇರುವುದು ಎಂದರ್ಥ. ಅಬ್ಬರದ ಸಂಗೀತ, ತೀವ್ರಗತಿಯ ನೃತ್ಯದಲ್ಲಿ ಒಟ್ಟಾಗಿ ಅತ್ಯುತ್ಸಾಹದಿಂದ ಪಾಲ್ಗೊಳ್ಳುವ ಸಂತೋಷಕೂಟಗಳಿವು. 90ರ ದಶಕದ ಆರಂಭದಲ್ಲಿ ಇಂಗ್ಲೆಂಡಿನಲ್ಲಿ ರೇವ್‌ಪಾರ್ಟಿಗಳು ಆರಂಭವಾದವು. ಸಾಂಪ್ರದಾಯಿಕ ಕ್ಲಬ್‌ಗಳಲ್ಲಿ ದುಬಾರಿ ಶುಲ್ಕ ತೆತ್ತು, ನಿರ್ದಿಷ್ಟ ಉಡುಪು ಧರಿಸಿ, ಸಂಗೀತ-ನೃತ್ಯವನ್ನು ಸೀಮಿತ ವರ್ಗದ ಜನ ಆನಂದಿಸುತ್ತಿದ್ದ ಪಾರ್ಟಿಗಳಿಗೆ ಇವು ಪರ್ಯಾಯವಾಗಿದ್ದವು. ಗ್ಯಾರೇಜ್, ಮನೆಯ ಅಂಗಳ, ನೆಲಮಾಳಿಗೆಯಂಥ ಸ್ಥಳಗಳಲ್ಲಿ ಆಯೋಜನೆಗೊಂಡು, ಎಲ್ಲರೂ ಮುಕ್ತವಾಗಿ ಭಾಗವಹಿಸಬಹುದಾದ, ಯಾವುದೇ ನಿರ್ಬಂಧವಿಲ್ಲದೆ ತಮಗಿಷ್ಟ ಬಂದಂತೆ ಆನಂದಿಸಬಹುದಾದ ಪಾರ್ಟಿಗಳಾಗಿದ್ದವು. ಶಾಂತಿ, ಪ್ರೀತಿ, ಏಕತೆ ಮತ್ತು ಗೌರವ ಈ ನಾಲ್ಕು ಧ್ಯೇಯಗಳನ್ನು ಹೊಂದಿದ ಚಳವಳಿ ಎಂದೇ ಇವನ್ನು ಕರೆಯಲಾಗುತ್ತಿತ್ತು. ಆದರೆ ಸಂಗೀತ, ನೃತ್ಯದ ಜತೆ ಮದ್ಯ-ಮಾದಕ ವಸ್ತುಗಳ ಬಳಕೆ ಈ ರೇವ್‌ಪಾರ್ಟಿಗಳ ಸ್ವರೂಪವನ್ನು ಬದಲಿಸಿತು! ಕ್ರಮೇಣ ಇವು ಕಾನೂನುಬಾಹಿರ ಚಟುವಟಿಕೆಗಳು ಗೋಪ್ಯವಾಗಿ ನಡೆಯುವ ತಾಣಗಳಾದವು.

ಭಾರತದಲ್ಲಿ ಹಿಪ್ಪಿಗಳು ಗೋವಾದ ಬೀಚ್‌ಗಳಲ್ಲಿ ರೇವ್‌ಪಾರ್ಟಿಯನ್ನು ಮೊದಲು ಆರಂಭಿಸಿದರೂ ನಂತರ ಮಹಾನಗರಗಳಿಗೆ ಹಬ್ಬಲು ತಡವಾಗಲಿಲ್ಲ. ಈಗಂತೂ ಸಣ್ಣಪುಟ್ಟ ನಗರಗಳಲ್ಲೂ ರೇವ್‌ಪಾರ್ಟಿಗಳು ಜನಪ್ರಿಯ ಮಾತ್ರವಲ್ಲ, ಪ್ರತಿಷ್ಠೆಯ ಸಂಕೇತವೂ ಆಗಿವೆ! ಪರಿಚಯಸ್ಥರಿಗೆ ಮಾತ್ರ ಪ್ರವೇಶ, ದುಬಾರಿ ದರ, ಕೋಡ್ ಮೂಲಕ ಆಹ್ವಾನ, ಅಪರಿಚಿತ ಸ್ಥಳ... ಹೀಗೆ ರೇವ್‌ಪಾರ್ಟಿಗಳು ನಿಗೂಢವಾಗುತ್ತಿವೆ. ಈ ಪಾರ್ಟಿಗಳಲ್ಲಿ ಮಾದಕವಸ್ತುಗಳ ಸೇವನೆ ನಡೆಯುತ್ತಿದೆ ಎಂಬುದು ಗುರುತರ ಆರೋಪ.

ಅನೇಕ ರೀತಿಯ ಮಾದಕದ್ರವ್ಯಗಳು ಅವರವರ ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ ಸುಲಭವಾಗಿ ಲಭ್ಯವಾಗುತ್ತವೆ. ಮಾದಕವಸ್ತುಗಳ ಸೇವನೆಯಿಂದ ನರವಾಹಕಗಳು ಪ್ರಚೋದನೆಗೊಂಡು ಆನಂದದ ಅನುಭವದ ಜೊತೆಗೆ ಎಲ್ಲ ಹಿಂಜರಿಕೆಗಳು ಮಾಯವಾಗಿ ಆತಂಕ ಕಡಿಮೆಯಾಗುತ್ತದೆ. ಆತ್ಮವಿಶ್ವಾಸ ಹೆಚ್ಚಿ ಏನನ್ನಾದರೂ ಮಾಡಬಲ್ಲೆ ಎನಿಸುತ್ತದೆ. ಆದರೆ ಇದೆಲ್ಲವೂ ಕ್ಷಣಿಕವಾದ ಅನುಭವ. ವಾಸ್ತವಕ್ಕೆ ಮರಳಿದ ನಂತರ ಮನಸ್ಸು ಮತ್ತೆ ಆ ಅನುಭವಕ್ಕಾಗಿ ಹಾತೊರೆಯುತ್ತದೆ. ಮತ್ತಷ್ಟು, ಇನ್ನಷ್ಟು ಹೀಗೆ ಮಾದಕವಸ್ತು ಸೇವನೆಯ ವಿಷವರ್ತುಲ ಮುಂದುವರಿಯುತ್ತದೆ. ಹೀಗಾಗಿ, ರೇವ್‌ಪಾರ್ಟಿ ಎಂದರೆ ಡ್ರಗ್ಸ್ ಸರಬರಾಜು ಮಾಡುವ ಪೆಡ್ಲರ್‌ಗಳಿಗೆ ಸುಗ್ಗಿ!

ರೇವ್‌ಪಾರ್ಟಿಗಳಲ್ಲಿ ಮೊಳಗುವ ತೀವ್ರಗತಿಯ ಎಲೆಕ್ಟ್ರಾನಿಕ್ ಸಂಗೀತ ಮನಸ್ಸನ್ನು ಉದ್ದೀಪನಗೊಳಿಸಿದರೆ, ಅದಕ್ಕೆ ಜೊತೆಯಾಗಿ ಆಧುನಿಕ ತಂತ್ರಜ್ಞಾನದಿಂದ ಲಯಬದ್ಧವಾದ ಶಬ್ದ, ಕಣ್ಣು ಕೋರೈಸುವ ಚಿತ್ರವಿಚಿತ್ರ ಬೆಳಕು, ಕನಸಿನ ಲೋಕವನ್ನು ನಿರ್ಮಿಸುತ್ತವೆ. ಮಾದಕವಸ್ತು– ಮದ್ಯ ಸೇವನೆ ಉನ್ಮಾದವನ್ನು ಸೃಷ್ಟಿಸಿ ದೇಹ ಮತ್ತು ಮನಸ್ಸಿನ ನಿಯಂತ್ರಣ ತಪ್ಪುತ್ತದೆ. ಕೇಳುವವರು ಹೇಳುವವರು ಯಾರೂ ಇಲ್ಲದೆ ಸಮೂಹಸನ್ನಿಗೆ ಒಳಗಾದಂಥ ಸನ್ನಿವೇಶ ರಾತ್ರಿಯಿಡೀ ನಡೆಯುತ್ತದೆ. ಹಾಗಾಗಿಯೇ ಯುವಜನರು ಈ ರೇವ್‌ಪಾರ್ಟಿಗಳನ್ನು 'ತಮ್ಮಿಷ್ಟದಂತೆ ಅಲಂಕರಿಸಿಕೊಂಡು, ಮಿತಿಮೀರಿ ಕುಡಿದು ಕುಣಿಯುವ ಅವಕಾಶ, ದಿನನಿತ್ಯದ ಒತ್ತಡ ಕಳೆಯುವ ಸ್ಟ್ರೆಸ್ ಬಸ್ಟರ್, ದೂರದ-ಅಜ್ಞಾತ ಸ್ಥಳಗಳಲ್ಲಿ ನಡೆಯುವುದರಿಂದ ಥ್ರಿಲ್ಲಿಂಗ್ ಎಕ್ಸ್‌ಪೀರಿಯನ್ಸ್...' ಎಂದೆಲ್ಲಾ ಬಣ್ಣಿಸುತ್ತಾರೆ.

ಯುವಜನರಿಗೆ ರೇವ್‌ಪಾರ್ಟಿ ಆಕರ್ಷಕ ಎನಿಸುತ್ತದಾದರೂ ಇದರಲ್ಲಿರುವ ಅಪಾಯಗಳ ಪಟ್ಟಿ ದೊಡ್ಡದು. ತಾಸುಗಟ್ಟಲೇ ಕಿವಿಗೆ ಅಪ್ಪಳಿಸುವ ಸಂಗೀತದಿಂದ ಶ್ರವಣಶಕ್ತಿಯಲ್ಲಿ ದೋಷ ಉಂಟಾಗಬಹುದು. ಜನದಟ್ಟಣೆಯ ನಡುವೆ ಮಂದ ಬೆಳಕಿನಲ್ಲಿ ಸತತವಾಗಿ ಕುಣಿಯುವಾಗ ಬಿದ್ದು ಪೆಟ್ಟಾಗುವ ಸಾಧ್ಯತೆ ಹೆಚ್ಚು. ಮತ್ತಿನಲ್ಲಿರುವಾಗ ಗಲಾಟೆ, ಹೊಡೆದಾಟದ ಸಂಭವ ಇರುತ್ತದೆ. ಅನೇಕ ಕಡೆ ಲೈಂಗಿಕ ದೌರ್ಜನ್ಯದ ಪ್ರಕರಣಗಳೂ ನಡೆದಿರುವ ಉದಾಹರಣೆ ಇದೆ.

ಕೆಲವು ಯುವಜನರಿಗಂತೂ ಇದು ವಾರಾಂತ್ಯದ ಜೀವನಕ್ರಮವೇ ಆಗಿದೆ. ಅವರಿಂದ ಪ್ರಭಾವಿತರಾಗಿ ಹದಿಹರೆಯದ ಮಕ್ಕಳೂ ರೇವ್‌ಪಾರ್ಟಿಗಳಲ್ಲಿ ಭಾಗಿಯಾಗುತ್ತಿದ್ದಾರೆ. ಕುತೂಹಲ, ಖುಷಿಗಾಗಿ ಆರಂಭವಾದದ್ದು ಜೀವನವಿಡೀ ಮುಂದುವರಿಯುತ್ತದೆ. ಹೊಸವರ್ಷ, ರಜಾಕಾಲದಲ್ಲಂತೂ ಈ ರೇವ್‌ಪಾರ್ಟಿಗಳು ಅತ್ಯಧಿಕವಾಗಿದ್ದು ಪೊಲೀಸರಿಗೆ ದೊಡ್ಡ ತಲೆನೋವಾಗಿ ಪರಿಣಮಿಸಿವೆ. ಅಕ್ರಮವಾಗಿ ನಡೆಯುವ ಬಗ್ಗೆ ಸುಳಿವು ಸಿಕ್ಕಿ ದಾಳಿ ನಡೆಸಿದರೂ ಪ್ರತಿಷ್ಠಿತ ವ್ಯಕ್ತಿಗಳು, ಅವರ ಮಕ್ಕಳು ಭಾಗಿಯಾಗುವುದರಿಂದ ಕ್ರಮ ಕೈಗೊಳ್ಳಲು ಸಾಧ್ಯವಾಗುತ್ತಿಲ್ಲ ಎಂಬುದು ಅಧಿಕಾರಿಗಳ ಬೇಸರದ ಮಾತು. ಈ ರೇವ್‌ಪಾರ್ಟಿಗಳಿಗೆ ಸರ್ಕಾರ ಕಡಿವಾಣ ಹಾಕಬೇಕು.

ಪಾರ್ಟಿ ಮಾಡುವುದು ತಪ್ಪಲ್ಲ, ಆದರೆ ಆ ನೆಪದಲ್ಲಿ ಮಾದಕವಸ್ತು ಸೇವಿಸಿದರೆ ಮತ್ತು ಅದಕ್ಕೆ ದಾಸರಾದರೆ ಬದುಕೇ ನಾಶವಾದೀತು ಎಂಬ ಎಚ್ಚರ ನಮ್ಮಲ್ಲಿ ಇರಬೇಕು.

ವಾಚಕರ ವಾಣಿ

ಏರ್ ಇಂಡಿಯಾಗೆ ಬೇಕು ಮಾರ್ಗದರ್ಶನ

ಮೊದಲು ಟಾಟಾ ಸಂಸ್ಥೆಯ ಅಧೀನದಲ್ಲಿದ್ದ ಏರ್ ಇಂಡಿಯಾವನ್ನು ಸರ್ಕಾರ ವಶಕ್ಕೆ ಪಡೆದು, ನಷ್ಟದ ಹೊರೆ ಹೊರಲಾರದೇ ಹರಾಜಿಗಿಟ್ಟಿತು. ಪುನಃ ಟಾಟಾ ಸನ್ಸ್ ತೆಕ್ಕೆಗೆ ಮರಳಿದ ಏರ್ ಇಂಡಿಯಾ ಏಕೋ ಸರಿಯಾಗಿ 'ಟೇಕ್ ಆಫ್' ಆಗುತ್ತಲೇ ಇಲ್ಲ. ಏರ್ ಇಂಡಿಯಾವು ಟಾಟಾ ಸಂಸ್ಥೆಗೆ ಹಸ್ತಾಂತರವಾದಾಗ ಭಾರತದ ಜನ ಸಂಭ್ರಮಿಸಿದ್ದರು. ಏರ್ ಇಂಡಿಯಾದ ವಿಮಾನಗಳಲ್ಲಿ ಪಕ್ಕದ ಪ್ರಯಾಣಿಕರ ಮೇಲೆ ಮೂತ್ರ ವಿಸರ್ಜಿಸುವಂತಹ ಪ್ರಕರಣಗಳು ಮರುಕಳಿಸಿದವು. ದಿಢೀರನೆ ವಿಮಾನ ಸಂಚಾರ ರದ್ದುಗೊಳ್ಳುವುದು, ಪ್ರಯಾಣಿಕರಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸುವಲ್ಲಿ ಅಸಡ್ಡೆ ತೋರುವುದು, ಸಂಸ್ಥೆಯ ಪೈಲಟ್‌ಗಳು, ಸಹ ಸಿಬ್ಬಂದಿ ಮುಷ್ಕರಕ್ಕೆ ಇಳಿಯುವುದು... ಹೀಗೆ ದಿನಂಪ್ರತಿ ಒಂದಿಲ್ಲೊಂದು ಪ್ರಕರಣದಿಂದ ಏರ್ ಇಂಡಿಯಾ ಸುದ್ದಿಯಾಗುತ್ತಲೇ ಇದೆ. ಇದಕ್ಕೆಲ್ಲ ಕಾರಣ ಆಡಳಿತ ಮಂಡಳಿಯ ವೈಫಲ್ಯವೋ ಮಾನವ ಸಂಪನ್ಮೂಲದ ಕೊರತೆಯೋ ಪರಿಶೀಲಿಸಿ ಸರಿಪಡಿಸಬೇಕಿದೆ.

ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯ (ಡಿಜಿಸಿಎ) ಹೆಚ್ಚು ಕಡಿಮೆ ತಿಂಗಳಿಗೆ ಎರಡು ಬಾರಿಯಾದರೂ ವಿವಿಧ ಕಾರಣಗಳಿಗಾಗಿ ಅಥವಾ ತಪ್ಪುಗಳಿಗಾಗಿ ಅಗಾಧ ಮೊತ್ತದ ದಂಡವನ್ನು ಏರ್ ಇಂಡಿಯಾಕ್ಕೆ ವಿಧಿಸುತ್ತಲೇ ಇರುತ್ತದೆ. ಈಗಾಗಲೇ ಭಾರತದಲ್ಲಿ ವಿವಿಧ ಕಾರಣಗಳಿಗಾಗಿ ಕಿಂಗ್‌ಫಿಷರ್, ಜೆಟ್ ಏರ್‌ವೇಸ್ ಮೂಲೆಗುಂಪಾಗಿವೆ. ಬಹಳ ಹೆಸರುವಾಸಿಯಾಗಿದ್ದ, ಭಾರತದ ಅಸ್ಮಿತೆಗೆ ಅನ್ವರ್ಥವಾಗಿದ್ದ ಏರ್ ಇಂಡಿಯಾ ಸ್ವಯಂ ಬಲದಿಂದ ಪುಟಿದೇಳಲಿ. ಡಿಜಿಸಿಎ ಬರೀ ದಂಡ ವಿಧಿಸಿ ಸುಮ್ಮನಾಗುವ ಬದಲು ಮಾರ್ಗದರ್ಶನ ನೀಡಿ ಸಹಕರಿಸಲಿ.

ಚನ್ನು ಅ. ಹಿರೇಮಠ, ರಾಣೆಬೆನ್ನೂರು

ಬಿತ್ತನೆ ಬೀಜದ ದರ ನ್ಯಾಯಯುತವಾಗಿರಲಿ

ಮುಂಗಾರು ಮಳೆ ಹೊಸಿಲಿಗೆ ಬಂದಿದೆ. ಕೃಷಿ ಚಟುವಟಿಕೆಗಳು ವೇಗ ಪಡೆದುಕೊಳ್ಳುತ್ತಿವೆ. ಆದರೆ ಬಿತ್ತನೆ ಬೀಜಗಳ ದರ ಹಿಂದಿನ ವರ್ಷಕ್ಕಿಂತ ಬಹಳಷ್ಟು ಹೆಚ್ಚಾಗಿರುವುದು ರೈತರ ಮೇಲಿನ ಹೊರೆ ಹೆಚ್ಚಿಸಿದಂತಾಗಿದೆ. ಬರದ ಬೇಗೆಯಿಂದ ಬಳಲಿರುವ ರೈತರ ಸ್ಥಿತಿಯು ಇದರಿಂದಾಗಿ ಬಾಣಲೆಯಿಂದ ಬೆಂಕಿಗೆ ಬಿದ್ದಂತಾಗಿದೆ. ರಸಗೊಬ್ಬರ, ಬಿತ್ತನೆ ಬೀಜಗಳು ರೈತರಿಗೆ ಕೈಗೆಟಕುವ ದರದಲ್ಲಿ ಸಿಗುವಂತೆ ಸರ್ಕಾರ ನೋಡಿಕೊಳ್ಳಬೇಕು. ಈ ಮೂಲಕ ರೈತರ ಹೊರೆಯನ್ನು ಕಡಿಮೆ ಮಾಡಬೇಕು.

ರಾಸುಮ ಭಟ್, ಚಿಕ್ಕಮಗಳೂರು

ಗಾಂಧೀಜಿಯನ್ನು ಮತ್ತೆ ಮತ್ತೆ ಕೊಲ್ಲುವುದಕ್ಕಿಂತ...

'ಗಾಂಧಿ' ಚಲನಚಿತ್ರ ಬರುವವರೆಗೆ ಜಗತ್ತಿಗೆ ಮಹಾತ್ಮ ಗಾಂಧಿ ಕುರಿತು ಅರಿವು ಇರಲಿಲ್ಲ ಅನ್ನುವ ಪ್ರಧಾನಿಯವರ ಹೇಳಿಕೆ ಬಗ್ಗೆ ಅಚ್ಚರಿಪಡಬೇಕಾಗಿಲ್ಲ. ಆ ಚಿತ್ರ ಬರುವುದರೊಳಗಾಗಿ ಗಾಂಧೀಜಿ ನಮ್ಮ ದೇಶದ ಸ್ಮೃತಿಪಟಲದಲ್ಲಿಯೇ ಮಸುಕಾಗಿದ್ದರು. ಗಾಂಧೀಜಿಯನ್ನು ನಾವೇ ಮರೆತು ಮುನ್ನಡೆಯುತ್ತಿರುವಾಗ, ಜಗತ್ತಿಗೆ ಗಾಂಧೀಜಿಯನ್ನು ಪರಿಚಯಿಸುವ ಹಂಬಲವಾದರೂ ಯಾಕೆ? ಸ್ವಾತಂತ್ರ್ಯಾನಂತರ ನಾವು ವ್ಯವಸ್ಥಿತವಾಗಿ ಗಾಂಧಿ ಮಾರ್ಗದಿಂದ ದೂರ ಸರಿಯುತ್ತಾ ಬಂದೆವು. ಅವರ ಸರಳ, ಸಹಜ ಜೀವನಕ್ರಮದಿಂದ ಈಗಂತೂ ಬಹಳ ದೂರ ಸರಿದಿರುವೆವು. ಅದರಲ್ಲೂ ಹಿಂದಿನ ಒಂದು ದಶಕದಲ್ಲಿ ವಿವಿಧ ಮಾಧ್ಯಮಗಳ ಮೂಲಕ ಗಾಂಧೀಜಿ, ನೆಹರೂ ಕುರಿತು ಏನೆಲ್ಲ ಅಪಪ್ರಚಾರ, ಸುಳ್ಳು ಸಂಗತಿಗಳನ್ನು ಬಿತ್ತರಿಸಲು ಸಾಧ್ಯವೋ ಅವನ್ನೆಲ್ಲ ಅತ್ಯಂತ ವ್ಯವಸ್ಥಿತವಾಗಿ ಮಾಡಲಾಗಿದೆ.

ಗಾಂಧೀಜಿಯ ತತ್ವ, ಸಿದ್ಧಾಂತ, ರಾಜಕೀಯ, ಸಾರ್ವಜನಿಕ ಜೀವನದ ನಡೆ-ನುಡಿಗಳಿಂದ ದೂರ ಸರಿದಿರುವ ನಮಗೇ ಮೊದಲು ಗಾಂಧೀಜಿ ಕುರಿತು ಒಂದಿಷ್ಟು ಅರಿವು ಮೂಡಬೇಕಾಗಿದೆ. ಆಮೇಲೆ ಅವರನ್ನು ಜಗತ್ತಿಗೆ ಪರಿಚಯಿಸಬಹುದು. ಈಗ ಪ್ರತಿಯೊಂದು ರಂಗದಲ್ಲೂ, ಗಾಂಧಿಯವರ ಸರಳ ಜೀವನವಿಧಾನಕ್ಕೆ ತದ್ವಿರುದ್ಧವಾದ ನಡೆ ನಮ್ಮದಾಗಿದೆ. 'ನನ್ನ ಜೀವನವೇ ನನ್ನ ಸಂದೇಶ' ಅಂದ ಅವರ ಮಾತುಗಳು ನಮಗೆ ಒಂದಿಷ್ಟಾದರೂ ನಾಟಿರುವವೇ ಎಂಬ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳುವ ಅವಶ್ಯಕತೆ ಇದೆ. ಮತೀಯ ಸಾಮರಸ್ಯಕ್ಕಾಗಿ ತಮ್ಮ ಜೀವನವನ್ನೇ ಪಣಕ್ಕೊಡ್ಡಿದ್ದ, ಸತ್ಯವೇ ದೇವರು ಅಂದ ಗಾಂಧಿ ನಾಡಿನಲ್ಲಿ ಇಂದು ಮತೀಯ ಅಸಹನೆ, ಸುಳ್ಳು ದಿನಾಲೂ ವಿಜೃಂಭಿಸುತ್ತಿವೆ. ಗಾಂಧೀಜಿಯನ್ನು ಸಹಿಸಿಕೊಳ್ಳಲಾರದೆ ಅವರನ್ನು ಕೊಂದು ಹಾಕಿ, ಈಗ ಅವರನ್ನು ಜಗತ್ತಿಗೆ ಪರಿಚಯಿಸಲು ಪರಿತಪಿಸುವುದಾದರೂ ಏತಕ್ಕೆ? 'ಗಾಂಧೀಜಿಯನ್ನು ಏಕೆ ಕೊಂದು ಹಾಕಿದಿರಿ?' ಎಂದು ಜಗತ್ತು ಕೇಳಿದರೆ ನಮ್ಮ ಬಳಿ ಯಾವ ಉತ್ತರ ಇದೆ? ಆತ್ಮವಂಚನೆಯ ಮಾತು, ಕೃತಿಗಳ ಮೂಲಕ ಗಾಂಧೀಜಿಯನ್ನು ಮತ್ತೆ ಮತ್ತೆ ಕೊಲ್ಲುವುದಕ್ಕಿಂತ ಸುಮ್ಮನಿರುವುದೇ ಮೇಲು.

ವೆಂಕಟೇಶ ಮಾಚಕನೂರ, ಧಾರವಾಡ

ಇದೆಂತಹ ಮಮಕಾರ?!

ಈ ತಿಂಗಳ 31ರಿಂದ
6 ದಿನಗಳ ಕಾಲ ಮದ್ಯ
ಸಿಗುವುದಿಲ್ಲ ಅಂತ
ಸಾಮಾಜಿಕ ಜಾಲತಾಣಗಳಲ್ಲಿ
ಪ್ರಚಾರವೋ ಪ್ರಚಾರ!
'ಗೆಳೆಯರೇ, ಈಗಲೇ
ತೆಗೆದಿಟ್ಟುಕೊಳ್ಳಿ' ಎಂಬ
ಕಿವಿಮಾತಿನ ಉಪಚಾರ,
ಮದ್ಯಪ್ರಿಯರಲ್ಲಿ ಪರಸ್ಪರ
ಅಂದೆಂತಹ ಮಮಕಾರ?!

ಜೆ.ಬಿ.ಮಂಜುನಾಥ, ಪಾಂಡವಪುರ

ಪೊಳ್ಳು ಮೌಲ್ಯದ 'ಈಡಿಪಸ್ ಯುವರಾಜರು'!

ಮಕ್ಕಳು ಹುಟ್ಟಿನಿಂದ ಗಂಡು, ಹೆಣ್ಣು ಎಂಬ ಭೇದವಿಲ್ಲದೆ ಮುಗ್ಧತೆಯಲ್ಲೇ ಬೆಳೆಯುತ್ತವೆ. ಆದರೆ ಗಂಡುಮಕ್ಕಳಿಗೆ ತಾಯಿಯೇ (ಕೊಡಲಿ ಕಾವು ಕುಲಕ್ಕೆ ಮೂಲ) ಮೊದಲು, ನಂತರ ತಂದೆ ಹಾಗೂ ಸಮಾಜದ ವತಿಯಿಂದ ಸಾವಿರಾರು ವರ್ಷದ 'ಗಂಡಸು' ಎಂಬ ಮೇಲರಿಮೆಯ ಕೊಂಬಿನ ಅಹಂ ಅನ್ನು ಬಿತ್ತಿ ನೀರು, ಗೊಬ್ಬರ ಹಾಕಿ ಪೋಷಿಸಲಾಗುತ್ತಿದೆ. ಅದರ ದುಷ್ಫಲವೇ ಈಗಿನ 'ಈಡಿಪಸ್ ಯುವರಾಜರು'. ತನ್ನನ್ನು ಹೆತ್ತವಳು ಒಬ್ಬಳು ಹೆಣ್ಣು ಎಂಬುದನ್ನು ಮರೆತು, ಹೆಣ್ಣು ಎಂಬುದು ತನ್ನ ಗಂಡಸುತನದ ಅಧಿಕಾರ, ದರ್ಪ ತೋರಿಸಲು ಇರುವ ಸಾಧನ ಎಂಬಂತೆ ಆಕೆಯ ಮೇಲೆ ದೌರ್ಜನ್ಯ ಎಸಗುತ್ತಿರುವುದು ದುರ್ಗುಣದ ಪರಮಾವಧಿ. ಮಗುವಾಗಿ ಇದ್ದಾಗಿನ ಪ್ರೀತಿ, ಕರುಣೆ, ಮುಗ್ಧತೆ, ಮೈತ್ರಿ, ಸಮಾನತೆ, ಏಕತೆಯ ಸಹಪಯಣದ ನೈತಿಕತೆಯನ್ನು ಮನೆಗಳಲ್ಲಿ, ಶಾಲೆಗಳಲ್ಲಿ ಮತ್ತೆ ಮತ್ತೆ ವ್ಯವಸ್ಥಿತವಾಗಿ, ಸಹಜವಾಗಿ ನಿತ್ಯ ನಿರಂತರ ಕಲಿಸಬೇಕಾಗಿದೆ. ಇದನ್ನೆಲ್ಲ ವಿವಿಧ ಆಯಾಮಗಳಿಂದ ವಿಶ್ಲೇಷಿಸಿರುವ (ಪ್ರ.ವಾ., ಮೇ 29) ಡಾ. ಎಚ್.ಎಸ್.ಅನುಪಮಾ ಅವರಿಗೆ ಕೃತಜ್ಞತೆಗಳು.

ಶಿವನಕೆರೆ ಬಸವಲಿಂಗಪ್ಪ, ದಾವಣಗೆರೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಸತತ ಇಳಿಕೆಯ ಹಾದಿಯಲ್ಲಿ ವಿದೇಶಿ ನೇರ ಹೂಡಿಕೆ

ಪ್ರಜಾವಾಣಿ ವಾರ್ತೆ

ಯಾವುದೇ ದೇಶದಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆಯು (ಎಫ್‌ಡಿಐ), ಆ ದೇಶದ ಆರ್ಥಿಕತೆಯ ಸ್ಥಿತಿಗತಿಗೆ ಹಿಡಿದ ಕೈಗನ್ನಡಿಯಂತೆ. ಎಫ್‌ಡಿಐ ಏರಿಕೆಯಾದರೆ ಆರ್ಥಿಕತೆ ಬೆಳವಣಿಗೆ ಹೊಂದುತ್ತಿದೆ ಮತ್ತು ಎಫ್‌ಡಿಐ ಇಳಿಕೆಯಾದರೆ ಆರ್ಥಿಕತೆ ಕುಂಟುತ್ತಿದೆ ಎಂದು ಅರ್ಥ. ಭಾರತದಲ್ಲಿ ಎಫ್‌ಡಿಐ ಸತತ ಮೂರನೇ ಆರ್ಥಿಕ ವರ್ಷದಲ್ಲೂ ಇಳಿಕೆಯ ಹಾದಿಯಲ್ಲಿಯೇ ಇದೆ. ಸರ್ಕಾರದ ದಾಖಲೆಗಳ ಪ್ರಕಾರ ದೇಶೀಯ ಆರ್ಥಿಕತೆ ಬೆಳವಣಿಗೆಯ ಹಾದಿಯಲ್ಲಿ ಇದ್ದರೂ, ಅದರಲ್ಲಿನ ಹಲವು ಕೊರತೆಗಳು ಮತ್ತು ಅಡೆತಡೆಗಳ ಕಾರಣದಿಂದ ಭಾರತದಲ್ಲಿ ಎಫ್‌ಡಿಐ ಇಳಿಕೆಯಾಗುತ್ತಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

ದೇಶದಲ್ಲಿನ ಎಫ್‌ಡಿಐಗೆ ಸಂಬಂಧಿಸಿದ ದತ್ತಾಂಶಗಳನ್ನು ಕೇಂದ್ರ ಸರ್ಕಾರವು ಗುರುವಾರ ಬಿಡುಗಡೆ ಮಾಡಿದೆ. ಸರ್ಕಾರದ ವರದಿಯ ಪ್ರಕಾರ ದೇಶದಲ್ಲಿ ಎಲ್ಲಾ ಸ್ವರೂಪದ ಎಫ್‌ಡಿಐ ಇಳಿಕೆಯಾಗಿದೆ. 2022–23ನೇ ಆರ್ಥಿಕ ವರ್ಷದಲ್ಲಿ ಎಫ್‌ಡಿಐ ರೂಪದಲ್ಲಿ ದೇಶಕ್ಕೆ ಒಟ್ಟು 7,135 ಕೋಟಿ ಡಾಲರ್ ಹೂಡಿಕೆ ಬಂದಿತ್ತು. 2023–24ನೇ ಆರ್ಥಿಕ ವರ್ಷದಲ್ಲಿ ಎಫ್‌ಡಿಐ ರೂಪದಲ್ಲಿ ಹೂಡಿಕೆಯಾದ ಬಂಡವಾಳ 7,095 ಕೋಟಿ ಡಾಲರ್‌ಗಳು. ಇದು ಶೇ 1ರಷ್ಟು ಇಳಿಕೆ ಮಾತ್ರ. ಆದರೆ ಹಿಂದಿನ ನಾಲ್ಕೈದು ಆರ್ಥಿಕ ವರ್ಷಗಳಿಗೆ ಹೋಲಿಸಿದರೆ ಈ ಇಳಿಕೆಯ ಪ್ರಮಾಣ ಹೆಚ್ಚು. ದೇಶದ ಆರ್ಥಿಕ ಬೆಳವಣಿಗೆಯು ನಿಧಾನಗತಿಯಲ್ಲಿ ಇದ್ದ 2019–20ನೇ ಆರ್ಥಿಕ ವರ್ಷದಲ್ಲಿ 7,439 ಕೋಟಿ ಡಾಲರ್ ಎಫ್‌ಡಿಐ ಹರಿದುಬಂದಿತ್ತು. ಆದರೆ 2023–24ರಲ್ಲಿನ ಎಫ್‌ಡಿಐ ಮೊತ್ತ 2019–20ಕ್ಕಿಂತಲೂ ಕಡಿಮೆಯಾಗಿದೆ. ಬಂಡವಾಳ ಹೂಡಿಕೆಗೆ ಪೂರಕವಾದ ವಾತಾವರಣ ಇಲ್ಲದಿರುವುದೇ ಇದಕ್ಕೆ ಕಾರಣ ಎಂದು ವಿಶ್ಲೇಷಿಸಲಾಗಿದೆ.

ಭಾರತದಲ್ಲಿ ಹೂಡಿಕೆಯಾಗುವ ಎಫ್‌ಡಿಐನಲ್ಲಿ ಸಿಂಹಪಾಲು ಈಕ್ವಿಟಿ ರೂಪದ್ದು. ಹಿಂದಿನ ಮೂರು ಆರ್ಥಿಕ ವರ್ಷಗಳಲ್ಲಿ ಎಫ್‌ಡಿಐ ಈಕ್ವಿಟಿ ಹೂಡಿಕೆ ಕಳವಳಕಾರಿ ಮಟ್ಟದಲ್ಲಿ ಇಳಿಕೆಯಾಗಿದೆ. 2022–23ನೇ ಆರ್ಥಿಕ ವರ್ಷಕ್ಕೆ ಹೋಲಿಸಿದರೆ 2023–24ರ ಆದ ಹೂಡಿಕೆಯಲ್ಲಿನ ಇಳಿಕೆ ಶೇ 3ರಷ್ಟು ಮಾತ್ರ. ಆದರೆ ಹಿಂದಿನ ನಾಲ್ಕು ಆರ್ಥಿಕ ವರ್ಷಗಳಲ್ಲಿ ಆದ ಇಳಿಕೆಯು ಶೇ 25ಕ್ಕಿಂತಲೂ ಹೆಚ್ಚು.

ಎಫ್‌ಡಿಐ ಹರಿದುಬರುವುದು ತಯಾರಿಕಾ ವಲಯಕ್ಕೆ. ಕೇಂದ್ರ ಸರ್ಕಾರವು ತಯಾರಿಕಾ ವಲಯಕ್ಕೆ ಒತ್ತು ನೀಡುತ್ತಿದ್ದರೂ ಜೋಡಣೆ ಸ್ವರೂಪದ ಉದ್ದಿಮೆಗಳಿಗೆ ಆದ್ಯತೆ ನೀಡಲಾಗುತ್ತಿದೆ. ಈ ಸ್ವರೂಪದ ತಯಾರಿಕಾ ಉದ್ದಿಮೆಗಳು, ಕಾರ್ಯನಿರ್ವಹಣೆಗೆ ವಿದೇಶಗಳನ್ನೇ ಅವಲಂಬಿಸಬೇಕಿದೆ. ವಿದೇಶಗಳಿಂದ ಬಿಡಿಭಾಗಗಳ ಪೂರೈಕೆಯಲ್ಲಿನ ತೊಡಕುಗಳು ಮತ್ತು ತೆರಿಗೆ ಪದ್ಧತಿಗಳು ಅವುಗಳ ಕಾರ್ಯನಿರ್ವಹಣೆಯನ್ನು ಪ್ರಭಾವಿಸುತ್ತಿವೆ. ಇದು ತಯಾರಿಕಾ ವಲಯದಲ್ಲಿ ಎಫ್‌ಡಿಐ ಹೂಡಿಕೆಯಾಗುವುದನ್ನು ತಡೆಯುತ್ತಿವೆ. ಪೂರ್ಣ ಪ್ರಮಾಣದ ತಯಾರಿಕೆಗೆ ಅವಕಾಶ ಮಾಡಿಕೊಟ್ಟರೆ ಮತ್ತು ಅಂತಹ ಉದ್ದಿಮೆಗಳ ವೃದ್ಧಿಗೆ ಇರುವ ತೊಡಕುಗಳನ್ನು ನಿವಾರಣೆ ಮಾಡಿದರೆ ಈ ಕ್ಷೇತ್ರಕ್ಕೆ ಹೆಚ್ಚಿನ ಎಫ್‌ಡಿಐ ಹರಿದುಬರುತ್ತದೆ ಎಂಬುದು ವಿದೇಶಿ ಮಾರುಕಟ್ಟೆ ತಜ್ಞರ ಅಭಿಪ್ರಾಯ.





ಇಳಿಕೆಗೆ ಹಲವು ಕಾರಣಗಳು

ಜಾಗತಿಕ ಮಟ್ಟದಲ್ಲಿನ ಆರ್ಥಿಕ ಹಿಂಜರಿತವೂ ಎಫ್‌ಡಿಐ ಒಳಹರಿವನ್ನು ಪ್ರಭಾವಿಸುತ್ತದೆ. ಆದರೆ ಭಾರತದಲ್ಲಿನ ಸ್ಥಿತಿಗತಿಯೇ ಎಫ್‌ಡಿಐ ಇಳಿಕೆಗೆ ಪ್ರಮುಖ ಕಾರಣ ಎಂದು ದಿ ಡಿಪ್ಲೊಮಾಟ್ ವಿಶ್ಲೇಷಣೆ ಪ್ರಕಟಿಸಿದೆ.

2023–24ನೇ ಸಾಲಿನಲ್ಲಿ ಎಫ್‌ಡಿಐ ಅತಿಹೆಚ್ಚು ಇಳಿಕೆಯಾಗಿದ್ದು ಕಂಪ್ಯೂಟರ್ ಸಾಫ್ಟ್‌ವೇರ್ ಮತ್ತು ಹಾರ್ಡ್‌ವೇರ್ ಕ್ಷೇತ್ರದಲ್ಲಿ. ಈ ಕ್ಷೇತ್ರಗಳಿಗೆ ಸಂಬಂಧಿಸಿದ ಬಿಡಿಭಾಗಗಳ ಪೂರೈಕೆಯಲ್ಲಿನ ತೊಡಕುಗಳು, ಕಾರ್ಯನಿರ್ವಹಣೆಗೆ ಪೂರಕವಾದ ವಾತಾವರಣ ಇಲ್ಲದಿರುವುದು ಎಫ್‌ಡಿಐ ಇಳಿಕೆಯಾಗಲು ಪ್ರಮುಖ ಕಾರಣ ಎನ್ನಲಾಗಿದೆ.

ಇದರೊಟ್ಟಿಗೆ ದೂರಸಂಪರ್ಕ ಮತ್ತು ಆಟೊಮೊಬೈಲ್ ಕ್ಷೇತ್ರದಲ್ಲೂ ಎಫ್‌ಡಿಐ ಗಣನೀಯ ಪ್ರಮಾಣದಲ್ಲಿ ಇಳಿಕೆಯಾಗಿದೆ. ಈ ಕ್ಷೇತ್ರಗಳಲ್ಲಿ ತಯಾರಿಕೆಗೆ ಅಗತ್ಯವಿರುವ ಕೌಶಲಭರಿತ ಮಾನವ ಸಂಪನ್ಮೂಲ ಲಭ್ಯವಿಲ್ಲದೇ ಇರುವುದು ಮತ್ತು ಅದರಿಂದ ಉತ್ಪಾದಕತೆ ಕುಂಠಿತವಾಗುತ್ತಿರುವುದು ಈ ಕ್ಷೇತ್ರದ ಬೆಳವಣಿಗೆಯನ್ನು ನಿಧಾನಗೊಳಿಸಿದೆ.

ಭಾರತೀಯ ಕಂಪನಿಗಳು ತಯಾರಿಸಿದ ಔಷಧಗಳು ವಿಶ್ವದ ಬೇರೆ-ಬೇರೆ ದೇಶಗಳಲ್ಲಿ ಮಾರಣಾಂತಿಕ ಅಡ್ಡಪರಿಣಾಮ ಬೀರಿದ ಹಲವು ಅವಘಡಗಳು ಈಚಿನ ವರ್ಷಗಳಲ್ಲಿ ನಡೆದಿವೆ. ಪರಿಣಾಮವಾಗಿ ಭಾರತದಿಂದ ತರಿಸಿಕೊಳ್ಳುವ ಕೆಲವು ಸ್ವರೂಪದ ಔಷಧಗಳ ಮೇಲೆ ಹಲವು ದೇಶಗಳು ನಿಷೇಧ ಹೇರಿವೆ. ಈ ಕಾರಣದಿಂದಲೇ ಔಷಧ ತಯಾರಿಕಾ ಕ್ಷೇತ್ರದಲ್ಲಿ ಎಫ್‌ಡಿಐ ಭಾರಿ ಪ್ರಮಾಣದಲ್ಲಿ ಇಳಿಕೆಯಾಗಿದೆ ಎಂದು ವಿವರಿಸಲಾಗಿದೆ.



ಆಧಾರ: ಕೇಂದ್ರ ಸರ್ಕಾರದ ಕೈಗಾರಿಕಾ ಮತ್ತು ಆಂತರಿಕ ವ್ಯಾಪಾರ ಉತ್ತೇಜನ ಇಲಾಖೆಯ ವರದಿಗಳು, ದಿ ಎಕನಾಮಿಸ್ಟ್ ವರದಿಗಳು, ದಿ ಡಿಪ್ಲೊಮಾಟ್ ವರದಿಗಳು, ಪಿಟಿಐ

ಮೊದಲ ಸ್ಥಾನದಿಂದ ಮೂರನೇ ಸ್ಥಾನಕ್ಕೆ ಕುಸಿದ ಕರ್ನಾಟಕ

ವಿದೇಶಿ ನೇರ ಬಂಡವಾಳ ಹೂಡಿಕೆಗೆ ಕರ್ನಾಟಕ ನೆಚ್ಚಿನ ರಾಜ್ಯವಾಗಿತ್ತು. 2021–22ನೇ ಸಾಲಿನಲ್ಲಿ ಇತರ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದಲ್ಲಿ ಅತಿ ಹೆಚ್ಚು ಎಫ್‌ಡಿಐ ಆಗಿತ್ತು. ಆದರೆ ನಂತರದ ವರ್ಷಗಳಲ್ಲಿ ರಾಜ್ಯಕ್ಕೆ ಹರಿದು ಬಂದ ಎಫ್‌ಡಿಐ ಮೊತ್ತ ಇಳಿಕೆಯಾಗುತ್ತಲೇ ಇದೆ.

2023–24ನೇ ಆರ್ಥಿಕ ವರ್ಷದಲ್ಲಿ ಅತಿಹೆಚ್ಚು ಎಫ್‌ಡಿಐ ಹೂಡಿಕೆಯಾಗಿದ್ದು ಮಹಾರಾಷ್ಟ್ರದಲ್ಲಿ (₹1.25 ಲಕ್ಷ ಕೋಟಿ). ಅತಿಹೆಚ್ಚು ಎಫ್‌ಡಿಐ ಆಕರ್ಷಿಸಿದ ಎರಡನೇ ರಾಜ್ಯ ಗುಜರಾತ್ (₹60,600 ಕೋಟಿ). ಮೂರನೇ ಸ್ಥಾನದಲ್ಲಿ ಕರ್ನಾಟಕವಿದ್ದು, ಇಲ್ಲಿಗೆ ಹರಿದುಬಂದ ಎಫ್‌ಡಿಐ ಮೊತ್ತ ₹54,427 ಕೋಟಿ ಮಾತ್ರ. ಕರ್ನಾಟಕದಲ್ಲಿ ಹಿಂದಿನ ಸರ್ಕಾರದ ಅವಧಿಯಲ್ಲೂ ಎಫ್‌ಡಿಐ ಇಳಿಕೆಯಾಗಿತ್ತು ಮತ್ತು ಈ ಸರ್ಕಾರದ ಅವಧಿಯಲ್ಲೂ ಇಳಿಕೆಯಾಗಿದೆ.

ಈ ಅವಧಿಯಲ್ಲಿ ಅತಿಹೆಚ್ಚು ಪ್ರಗತಿ ಕಂಡಿದ್ದು ಗುಜರಾತ್ ಮಾತ್ರ. 2021–22ರಲ್ಲಿ ಗುಜರಾತ್‌ನಲ್ಲಿ ಹೂಡಿಕೆಯಾಗಿದ್ದ ಎಫ್‌ಡಿಐ ₹20,169 ಕೋಟಿಯಷ್ಟು. ಅದು 2022–23ರಲ್ಲಿ ₹37,059 ಕೋಟಿ ಮತ್ತು 2023–24ರಲ್ಲಿ ₹60 ಸಾವಿರ ಕೋಟಿಗೂ ಹೆಚ್ಚು ಎಫ್‌ಡಿಐ ಅನ್ನು ಗುಜರಾತ್ ಆಕರ್ಷಿಸಿತ್ತು. ಕರ್ನಾಟಕವೂ ಸೇರಿ ದಕ್ಷಿಣ ಭಾರತದಲ್ಲಿ ಹೂಡಿಕೆಗೆ ಆಸಕ್ತಿ ತೋರಿದ್ದ ಹಲವು ವಿದೇಶಿ ಕಂಪನಿಗಳು ಗುಜರಾತ್‌ನತ್ತ ಹೋಗಿದ್ದೇ, ಗುಜರಾತ್‌ನ ಈ ಪ್ರಗತಿಗೆ ಕಾರಣ ಎನ್ನಲಾಗಿದೆ. ಜತೆಗೆ ಕರ್ನಾಟಕದಲ್ಲಿ ಎಫ್‌ಡಿಐ ಇಳಿಕೆಗೂ ಇದೇ ಕಾರಣ ಎನ್ನಲಾಗಿದೆ.

ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ

2ನೇ ಆವೃತ್ತಿ

‘ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ’ದ 2ನೇ ಆವೃತ್ತಿ ಸಮಾರಂಭ ಶೀಘ್ರದಲ್ಲೇ ನಡೆಯಲಿದ್ದು, 19 ವಿಭಾಗಗಳಲ್ಲಿ ಪ್ರಶಸ್ತಿಗೆ ನಾಮನಿರ್ದೇಶನಗೊಂಡವರು ಮತ್ತು ಸಿನಿಮಾಗಳ ಪಟ್ಟಿಯನ್ನು ಈಗಾಗಲೇ ಪ್ರಕಟಿಸಲಾಗಿದೆ. ಇದೀಗ ‘ಅತ್ಯುತ್ತಮ ನಟಿ’ ವಿಭಾಗದಲ್ಲಿ ನಾಮನಿರ್ದೇಶಿತರಾದವರನ್ನು ಪರಿಚಯಿಸುವ ಸಮಯ. ಇನ್ನಷ್ಟು ಮಾಹಿತಿಗಳಿಗಾಗಿ ವೆಬ್‌ಸೈಟ್ ನೋಡಿ.
https://www.prajavani.net/cinesamman/season2

ಸಿರಿ ರವಿಕುಮಾರ್

‘ಸ್ವಾತಿ ಮುತ್ತಿನ ಮಳೆ ಹನಿಯೇ’ ಚಿತ್ರದಲ್ಲಿನ ನಟನೆಗಾಗಿ ಸಿರಿ ರವಿಕುಮಾರ್ ನಾಮನಿರ್ದೇಶನಗೊಂಡಿದ್ದಾರೆ. ‘ಸಕುಟುಂಬ ಸಮೇತ’ ಚಿತ್ರದ ಮೂಲಕ ಚಂದನವನದಲ್ಲಿ ಗುರುತಿಸಿಕೊಂಡ ಸಿರಿ, ಆರ್‌ಜೆ, ರೂಪದರ್ಶಿ, ನಿರೂಪಕಿಯಾಗಿ ಕೆಲಸ ಮಾಡಿದ ಅನುಭವ ಹೊಂದಿದವರು. ರಂಗಭೂಮಿಯಲ್ಲೂ ಸಕ್ರಿಯವಾಗಿರುವ ಸಿರಿ, ರಾಜ್ ಬಿ.ಶೆಟ್ಟಿ ನಟಿಸಿ, ನಿರ್ದೇಶಿಸಿರುವ ‘ಸ್ವಾತಿ ಮುತ್ತಿನ ಮಳೆ ಹನಿಯೇ’ ಚಿತ್ರದಲ್ಲಿ ‘ಪ್ರೇರಣಾ’ ಎಂಬ ಪಾತ್ರ ನಿರ್ವಹಿಸಿದ್ದರು. ಈ ಪಾತ್ರದಲ್ಲಿ ಜೀವಿಸಿ ವಿಮರ್ಶಕರ, ಜನರ ಮೆಚ್ಚುಗೆ ಪಡೆದಿದ್ದರು. ಈ ಸಿನಿಮಾದಲ್ಲಿ ತಮ್ಮ ನಟನೆಯ ಸಾಮರ್ಥ್ಯವನ್ನು ಸಿರಿ ಪ್ರದರ್ಶಿಸಿದರು. ‘ಬ್ಯಾಚುಲರ್ ಪಾರ್ಟಿ’, ‘O2’ ಬಳಿಕ, ‘ಅಬ್ರಕಡಾಬ್ರ’, ‘ಬಿಸಿಬಿಸಿ Ice-Cream’ ಚಿತ್ರಗಳ ಬಿಡುಗಡೆಗೆ ಎದುರು ನೋಡುತ್ತಿದ್ದಾರೆ.

ರುಕ್ಮಿಣಿ ವಸಂತ್

‘ಸಪ್ತ ಸಾಗರದಾಚೆ ಎಲ್ಲೋ–Side A’ ಚಿತ್ರದಲ್ಲಿನ ನಟನೆಗಾಗಿ ರುಕ್ಮಿಣಿ ವಸಂತ್ ನಾಮನಿರ್ದೇಶನಗೊಂಡಿದ್ದಾರೆ. ಲಂಡನ್‌ನ ‘ರಾಯಲ್ ಅಕಾಡೆಮಿ ಆಫ್ ಡ್ರಾಮಾಟಿಕ್ ಆರ್ಟ್ಸ್’ನಲ್ಲಿ ತರಬೇತಿ ಪಡೆದು ‘ಬೀರ್‌ಬಲ್’ ಬೆಡಗಿಯಾಗಿ ಚಂದನವನ ಪ್ರವೇಶಿಸಿದರು. ರುಕ್ಮಿಣಿ ವಸಂತ್ ಸಿನಿ ಜರ್ನಿಗೆ ‘ಸಪ್ತ ಸಾಗರದಾಚೆ ಎಲ್ಲೋ’ ಸಿನಿಮಾ ದೊಡ್ಡ ತಿರುವು ನೀಡಿದೆ. ತಮ್ಮ ಸಹಜ ನಟನೆಯಿಂದ ‘ಸಪ್ತ ಸಾಗರದಾಚೆ ಎಲ್ಲೋ’ ಸಿನಿಮಾದಲ್ಲಿ ‘ಪ್ರಿಯಾ’ ಎಂಬ ಪಾತ್ರಕ್ಕೆ ರುಕ್ಮಿಣಿ ಜೀವತುಂಬಿದ್ದರು. ‘ಬಾನದಾರಿಯಲ್ಲಿ’ ಹಾರಿದ ರುಕ್ಮಿಣಿ, ಇದೀಗ ಶ್ರೀಮುರಳಿಯ ‘ಬಘೀರ’, ಶಿವರಾಜ್‌ಕುಮಾರ್ ಅವರ ‘ಭೈರತಿ ರಣಗಲ್’ ಸಿನಿಮಾದಲ್ಲಿ ನಟಿಸಿದ್ದಾರೆ. ಕಾಲಿವುಡ್‌ಗೂ ಹೆಜ್ಜೆ ಇಟ್ಟಿರುವ ರುಕ್ಮಿಣಿ, ಬಹುಭಾಷಾ ನಟ ವಿಜಯ್ ಸೇತುಪತಿ ಅವರೊಂದಿಗೆ ತೆರೆಹಂಚಿಕೊಳ್ಳಲು ಸಜ್ಜಾಗಿದ್ದಾರೆ.

ಅಕ್ಷತಾ ಪಾಂಡವಪುರ

‘ಪಿಂಕಿ ಎಲ್ಲಿ?’ ಚಿತ್ರದ ನಟನೆಗಾಗಿ ಅಕ್ಷತಾ ಪಾಂಡವಪುರ ನಾಮನಿರ್ದೇಶನಗೊಂಡಿದ್ದಾರೆ. ಸಿನಿಮಾ ಜೊತೆಗೆ ರಂಗಭೂಮಿಯಲ್ಲಿ ಸಕ್ರಿಯರಾಗಿರುವ ಇವರು ನೀನಾಸಂನಲ್ಲಿ ರಂಗ ತರಬೇತಿ ಪಡೆದು, ದೆಹಲಿಯ ನ್ಯಾಷನಲ್ ಸ್ಕೂಲ್ ಆಫ್ ಡ್ರಾಮಾ (ಎನ್‌ಎಸ್‌ಡಿ)ಯಲ್ಲಿ ಮೂರು ವರ್ಷ ರಂಗಭೂಮಿಯಲ್ಲಿ ಹೆಚ್ಚುವರಿ ತರಬೇತಿ ಪಡೆದರು. ಏಕಾಂಕ ನಾಟಕ ‘ಒಬ್ಬಳು’ ಮೂಲಕ ರಂಗಭೂಮಿಯಲ್ಲಿ ಜನಪ್ರಿಯರಾದ ಇವರು, ‘ದಿ ಚಾನಲ್ ಥೇಟರ್ಸ್’ ಎನ್ನುವ ರಂಗ ತಂಡವನ್ನು ಕಟ್ಟಿದ್ದಾರೆ. ‘ಪಲ್ಲಟ’ ಚಿತ್ರದಲ್ಲಿನ ನಟನೆಗೆ ‘ರಾಜ್ಯ ಪ್ರಶಸ್ತಿ’ ಲಭಿಸಿದೆ. ‘ಆ ಒಂದು ನೋಟು’, ‘ಪಿಂಕಿ ಎಲ್ಲಿ?’, ‘ಕೋಳಿ ಎಸ್ರು’ ಸೇರಿದಂತೆ ಹಲವು ಸಿನಿಮಾಗಳಲ್ಲಿ ಅಭಿನಯಿಸಿದ್ದಾರೆ. ಸದ್ಯ ‘ಕೌಮದಿ’ ಚಿತ್ರದ ನಟನೆಯಲ್ಲಿ ತೊಡಗಿಸಿಕೊಂಡಿದ್ದಾರೆ.

ಸಿಂಧು ಶ್ರೀನಿವಾಸಮೂರ್ತಿ

‘ಆಚಾರ್ ಆ್ಯಂಡ್ ಕೋ.’ ಚಿತ್ರದಲ್ಲಿನ ನಟನೆಗಾಗಿ ಸಿಂಧು ಶ್ರೀನಿವಾಸ ಮೂರ್ತಿ ನಾಮನಿರ್ದೇಶನಗೊಂಡಿದ್ದಾರೆ. ತಮ್ಮ 16ನೇ ವಯಸ್ಸಿನಿಂದ ರಂಗಭೂಮಿಯಲ್ಲಿ ಸಕ್ರಿಯರಾಗಿರುವ ಇವರು, ‘ಫ್ರೆಂಚ್ ಬಿರಿಯಾನಿ’, ತೆಲುಗಿನ ‘ಸಿನಿಮಾ ಬಂಡಿ’ ಮೊದಲಾದ ಸಿನಿಮಾಗಳಲ್ಲಿ ನಟಿಸಿದ್ದಾರೆ. ವೆಬ್‌ಸೀರೀಸ್, ಜಾಹೀರಾತುಗಳಲ್ಲೂ ಕಾಣಿಸಿಕೊಂಡಿದ್ದಾರೆ. ಆನಂತರ ಚಿತ್ರಕಥೆ ಬರವಣಿಗೆ ಕಲಿಯಲು ಮುಂಬೈಗೆ ತೆರಳಿ, 2017ರಲ್ಲಿ ‘ಆಚಾರ್ ಆ್ಯಂಡ್ ಕೋ.’ ಚಿತ್ರದ ಬರವಣಿಗೆ ಪ್ರಾರಂಭಿಸುತ್ತಾರೆ. ಹಳೇ ಬೆಂಗಳೂರನ್ನು ಕಟ್ಟಿಕೊಟ್ಟ ಈ ಸಿನಿಮಾ ತನ್ನ ಕಥಾವಸ್ತುವಿನ ಕಾರಣದಿಂದ ಜನರಿಗೆ ಇಷ್ಟವಾಯಿತು. ಸದ್ಯ ಆಕರ್ಷ್ ಎಚ್.ಪಿ. ನಿರ್ದೇಶನದ ‘ಫ್ಯಾಮಿಲಿ ಡ್ರಾಮಾ’ ಚಿತ್ರದಲ್ಲಿ ಸಿಂಧು ನಟಿಸುತ್ತಿದ್ದಾರೆ.

ಮಿಲನ ನಾಗರಾಜ್

‘ಕೌಸಲ್ಯಾ ಸುಪ್ರಜಾ ರಾಮ’ ಚಿತ್ರದಲ್ಲಿನ ನಟನೆಗಾಗಿ ಮಿಲನ ನಾಗರಾಜ್ ನಾಮನಿರ್ದೇಶನಗೊಂಡಿದ್ದಾರೆ. ‘ನಮ್ ದುನಿಯಾ ನಮ್ ಸ್ಟೈಲ್’ ಚಿತ್ರದ ಮುಖಾಂತರ ನಾಯಕಿಯಾಗಿ ತಮ್ಮ ಸಿನಿಪಯಣ ಆರಂಭಿಸಿದ ಮಿಲನ, ಸದ್ಯ ಕನ್ನಡದ ಪ್ರೇಕ್ಷಕರಿಗೆ ‘ನಿಧಿಮಾ’ಳಾಗಿ ಪರಿಚಯ. ಮಿಲನ ಸಿನಿಜರ್ನಿಗೆ ತಿರುವು ನೀಡಿದ ಸಿನಿಮಾ ‘ಲವ್ ಮಾಕ್ಟೇಲ್’. ನಟಿಯಾಗಿ, ನಿರ್ಮಾಪಕಿಯಾಗಿ ಗುರುತಿಸಿಕೊಂಡಿರುವ ಮಿಲನ ತಮಿಳು ಚಿತ್ರರಂಗಕ್ಕೂ ಪರಿಚಿತ. ‘ಲವ್ ಮಾಕ್ಟೇಲ್–2’, ‘ಕೌಸಲ್ಯಾ ಸುಪ್ರಜಾ ರಾಮ’, ‘ಲವ್ ಬರ್ಡ್ಸ್’, ‘ಫಾರ್ ರಿಜಿಸ್ಟ್ರೇಷನ್’ ಸಿನಿಮಾಗಳಲ್ಲಿ ತಮ್ಮ ನಟನಾ ಸಾಮರ್ಥ್ಯವನ್ನು ಪ್ರದರ್ಶಿಸಿರುವ ಅವರು ಸದ್ಯ, ‘ಆರಾಮ್ ಅರವಿಂದ ಸ್ವಾಮಿ’ ಸಿನಿಮಾ ಬಿಡುಗಡೆಗೆ ಎದುರು ನೋಡುತ್ತಿದ್ದಾರೆ.

ಗುಂಡಣ್ಣ



ನುಡಿ ಬೆಳಗು

ಇದು ಸಣ್ಣ ಸಂಗತಿ ಅಂತೀರಾ?

ಪ್ರೊ.ಎಂ. ಕೃಷ್ಣೇಗೌಡ

ಕೆ. ಎಸ್. ನರಸಿಂಹಸ್ವಾಮಿ ಅವರು ಬರೆದಿರುವ ಒಂದು ಸಣ್ಣ ಪದ್ಯವಿದೆ. ಸಣ್ಣ ಸಂಗತಿ ಅಂತ ಆ ಪದ್ಯದ ಹೆಸರು. ಹಾಗೆ ನೋಡಿದರೆ ಪದ್ಯದಲ್ಲಿ ಕವಿ ಹೇಳುತ್ತಿರುವುದೂ ಒಂದು ಸಣ್ಣ ಸಂಗತಿಯನ್ನಷ್ಟೆ. ಇದೆಷ್ಟು ಸಣ್ಣ ಸಂಗತಿ ಅಂದರೆ ನಾವು ನೀವು ಇದನ್ನು ನೋಡಿರುತ್ತೇವೆ. ಆದರೆ ಗಮನ ಹರಿಸಿರುವುದಿಲ್ಲ. ಅಷ್ಟು ಸಣ್ಣ ಸಂಗತಿ ಇದು.

ಏನದು?

ಕವಿ ಒಂದು ಚಿತ್ರ ಕೊಡುತ್ತಾರೆ.

ಅದೊಂದು ರಾತ್ರಿ. ಕಪ್ಪು ಹೆಪ್ಪಿಟ್ಟ ಹಾಗೆ ಕತ್ತಲಿದೆ. ಜೊತೆಗೆ ಸಣ್ಣಗೆ ಸೋನೆ ಬೇರೆ ಹಿಡಿದಿದೆ. ಊರಿನ ಸದ್ದಡಗಿ ಹೋಗಿದೆ. ಅಂಥಾ ರಾತ್ರಿಯಲ್ಲಿ ಅಲ್ಲೊಂದು ಸಾಧಾರಣ ಮನೆ. ಮನೆಯ ಎಲ್ಲರೂ ಅಲ್ಲಲ್ಲಿ ಬಿದ್ದುಕೊಂಡಿದ್ದಾರೆ. ಅಲ್ಲೇ ಒಂದು ಚಾಪೆಯ ಮೇಲೆ ಒಂದು ತಾಯಿ ತನ್ನ ಮಗುವನ್ನು ಮಗ್ಗುಲಿಗೆ ಹಾಕಿಕೊಂಡು ಮಲಗಿದ್ದಾಳೆ. ಮೂಲೆಯಲ್ಲಿ ಹಚ್ಚಿಟ್ಟಿರುವ ಒಂದು ದೀಪ ಸಣ್ಣಗೆ ಉರಿಯುತ್ತಿದೆ. ಇದಿಷ್ಟೇ ಚಿತ್ರ. ಆದರೆ ಅಲ್ಲೊಂದು ಸಣ್ಣ ಸಂಗತಿ ನಡೆಯುತ್ತಿದೆ. ಅದನ್ನು ಯಾರೂ ಗಮನಿಸುವುದಿಲ್ಲ. ಆದರೂ ಅದು ನಡೆಯುತ್ತಿದೆ.

ಏನದು?

ಮಗು, ನಿದ್ದೆಗಣ್ಣಲ್ಲಿ ತನ್ನ ಮೇಲೆ ಹೊದಿಸಿರುವ ಬಟ್ಟೆಯನ್ನು ಒದ್ದು ಬಿಡುತ್ತದೆ. ಮಗು ಬಟ್ಟೆಯನ್ನು ಒದ್ದ ಕೂಡಲೇ ನಿದ್ದೆಗಣ್ಣಲ್ಲೇ ಅದು ತಾಯಿಗೆ ಅರಿವಾಗಿ ಬಿಡುತ್ತದೆ. ಅದೇ ನಿದ್ದೆಗಣ್ಣಲ್ಲಿ ಮಗು ಒದ್ದ ಬಟ್ಟೆಯನ್ನು ಮರಳಿ ಮಗುವಿನ ಮೇಲೆ ಹೊದಿಸುತ್ತಾಳೆ.

ಕೆಲಹೊತ್ತಿನ ಬಳಿಕ ಮತ್ತೆ ಮಗುವಿನ ಕಾಲು, ಯಾವ ಗ್ಯಾನದಲ್ಲೋ ಹೊದ್ದ ಬಟ್ಟೆಯನ್ನು ಮತ್ತೆ ಒದೆಯುತ್ತದೆ. ಆದರೆ ತಾಯಿಯ ಕೈ ಮತ್ತೆ ಆ ಹೊದಿಕೆಯನ್ನು ಮಗುವಿನ ಮೈ ಮೇಲೆ ಹೊದಿಸುತ್ತದೆ. ಮತ್ತೆ ಮತ್ತೆ ಮಗುವಿನ ಕಾಲು ಆ ಹೊದಿಕೆಯನ್ನು ಒದೆಯುವುದು, ತಾಯಿಯ ಕೈ ಆ ಹೊದಿಕೆಯನ್ನು ಹೊದಿಸುವುದು... ಇದು ರಾತ್ರಿಯಿಡೀ ನಡೆಯುತ್ತದೆ. ಇಷ್ಟನ್ನು ಚಿತ್ರಿಸಿದ ಕವಿ ಈಗೊಂದು ಸಾಲು ಬರೆಯುತ್ತಾರೆ.

ಹಗಲಿರುಳೂ ಪೊರೆವ ಕೈ ದುಡಿಯುತಿದೆ

ಇದೊಂದು ಸಾಲು ಈ ಸಣ್ಣ ಸಂಗತಿಗೆ ಒಂದು ದೊಡ್ಡ ಅರ್ಥವನ್ನು ಧ್ವನಿಸಿಬಿಡುತ್ತದೆ.

ಒಂದು ಕಡೆ ಮನುಷ್ಯ ಈ ಹೊದಿಕೆಯನ್ನು ಒದೆಯುವ ಕೆಲಸ ಮಾಡುತ್ತಾನೆ. ಮತ್ತೊಂದು ಕಡೆ ಯಾವುದೋ ಪೊರೆವ ಕೈ ಆ ಹೊದಿಕೆಯನ್ನು ಮರಳಿ ಹೊದಿಸುತ್ತದೆ. ಮನುಷ್ಯ ಮಾಡುತ್ತಿರುವ ಅಡಾವುಡಿ, ಹಂಡಬಂಡ ಏನು ಕಡಿಮೆಯೇ? ನಮ್ಮ ರಾಜ್ಯದಲ್ಲಿ, ನಮ್ಮ ದೇಶದಲ್ಲಿ ನಡೆಯುತ್ತಿರುವ ಎಷ್ಟೋ ಅಸಹ್ಯ ಅನಾಚಾರಗಳನ್ನು ನೋಡಿದಾಗಲೆಲ್ಲಾ ಇನ್ನು ನಾವು ಉದ್ಧಾರ ಆಗುವುದೇ ಇಲ್ಲ ಅನಿಸುತ್ತದೆ ಒಮ್ಮೊಮ್ಮೆ. ಆದರೂ ಈ ಜಗತ್ತು ನಡೆಯುತ್ತಲೇ ಇರುವುದನ್ನು ನೋಡಿ ಅಚ್ಚರಿಯಾಗುತ್ತದೆ. ಅಂತೂ ಈ ಭೂಮಿ, ಬದುಕು, ಮನುಷ್ಯ ಎಲ್ಲಾ ಇನ್ನೂ ಉಳಿದಿವೆಯೆಂದರೆ ಯಾವುದೋ ಪೊರೆವ ಕೈ ನಮ್ಮನ್ನು ನಿರಂತರ ಪೊರೆಯುತ್ತಿದೆ ಅಂತಲೇ ಅರ್ಥ.

ಇದು ಸಣ್ಣ ಸಂಗತಿ ಅಂತೀರಾ? ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಶುಕ್ರವಾರ ಮೇ 31, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಕೃಷ್ಣ ಅಷ್ಟಮಿ ಗಂ. 9-39 ನಕ್ಷತ್ರ: ಶತಭಿಷ ಗಂ. 6-14 ನಂತರ ಪೂರ್ವಾಭಾದ್ರ ಗಂ. 28-48 ಯೋಗ: ವಿಷ್ಕಂಭ ಗಂ. 18-04 ಕರಣ : ಕೌಲವ ಗಂ. 09-39, ವೃಷಭ ಮಾಸದ ನೇ 17 ದಿನ, ಮಳೆನಕ್ಷತ್ರ: ರೋಹಿಣಿ 2.
ರಾಹುಕಾಲ : ಬೆಳಿಗ್ಗೆ 10-30 – 12-00
ಸೂರ್ಯೋದಯ : 06-06 ಸೂರ್ಯಾಸ್ತ : 06-50
ಮುಸ್ಲಿಂ ದಿನಾಂಕ : 22 ಜುಲ್ಕಾಯದ್ ಅದೃಷ್ಟ ಸಂಖ್ಯೆ : 3, 4

ಮೇಷ: ಸುಂದರವಾದ ದಿನದ ಉಪಸಂಹಾರಕ್ಕೆ ಬಂದಾಗ ಈ ದಿನ ಮರುಕಳಿಸುವುದಿಲ್ಲವೆಂಬ ತಿಳಿನೋವು ಉಂಟಾಗಬಹುದು. ಶುಭ್ರವರ್ಣದ ವಸ್ತ್ರಗಳನ್ನು ಧರಿಸಿ ಇಂದಿನ ಸಮಾರಂಭದಲ್ಲಿ ಭಾಗವಹಿಸಿದಲ್ಲಿ ನಿಮ್ಮ ಘನತೆ ಹೆಚ್ಚುವುದು.

ವೃಷಭ: ವ್ಯವಹರಿಸುವಾಗ ಎಲ್ಲಾ ವಿಚಾರದಲ್ಲೂ ಸಾವಧಾನವಾಗಿ ಮುಂದುವರಿಯುವುದು ಉತ್ತಮವಾಗಿರುತ್ತದೆ. ಒಮ್ಮೆಗೆ ಹೆಚ್ಚಿನ ಹಣವು ಕೈಸೇರಿತೆಂದು ದುಂದುವೆಚ್ಚ ಮಾಡದೆ ಹಣದ ಸದ್ವಿನಿಯೋಗ ಮಾಡಿ.

ಮಿಥುನ: ಮಹಿಳೆಯರು ನಿಮ್ಮ ದೇಹದಲ್ಲಾಗುತ್ತಿರುವ ಅಸಮರ್ಪಕ ಬದಲಾವಣೆಗಳನ್ನು ಕಡೆಗಣಿಸದೆ ವೈದ್ಯರ ಸಲಹೆಯನ್ನು ಪಡೆದುಕೊಳ್ಳುವುದು ಲೇಸು. ಇಂದಿನ ಕೆಲವು ವಿದಾಯಗಳು ಬೇಸರದ ಸಂಗತಿಯಾಗಬಹುದು.

ಕರ್ಕಾಟಕ: ಉದ್ಯೋಗದಲ್ಲಿ ಕಂಡು ಬಂದಂತಹ ತಾಂತ್ರಿಕ ಸಮಸ್ಯೆ ಸಂಜೆ ಹೊತ್ತಿಗೆ ನಿವಾರಣೆಯಾಗುವುದು. ಮೈಮುರಿದು ಕೆಲಸ ಮಾಡುವ ಬದ್ಧತೆಯನ್ನು ಯಾವುದೇ ಕಾರಣಕ್ಕು ನಿಲ್ಲಿಸಬೇಡಿ.

ಸಿಂಹ: ವಿವಾಹ ವಿಚಾರದ ನಿರ್ಧಾರಗಳೆಲ್ಲವು ಅಡ್ಡಗೋಡೆಯ ಮೇಲಿನ ದೀಪದಂತೆ ಇರುವುದು ನಿಮಗೆ ಅಸಮಧಾನ ಉಂಟು ಮಾಡುತ್ತದೆ. ಈ ದಿನ ಸ್ನೇಹಿತರೊಂದಿಗೆ ಭೂಮಿ ಖರೀದಿಗಾಗಿ ಪ್ರಯತ್ನ ನಡೆಸುವಿರಿ.

ಕನ್ಯಾ: ಸುಮುಹೂರ್ತದಲ್ಲಿ ನಡೆದ ಕಾರ್ಯಕ್ರಮವು ಉತ್ತಮ ಫಲ ನೀಡುವುದರಲ್ಲಿ ಸಂಶಯವಿಲ್ಲ. ಕೆಲಸ ಕಾರ್ಯಗಳಲ್ಲಿ ಹೆಚ್ಚಿನ ಉತ್ಸಾಹ ಇರುವುದು. ಷೇರು ವ್ಯವಹಾರದಲ್ಲಿ ಹೆಚ್ಚಿನ ಕಮಿಷನ್ ಲಭ್ಯವಾಗುವುದು.

ತುಲಾ: ನಿಮ್ಮ ವಸ್ತುಗಳಿಗಾಗಿ ಇತರರು ಆಸೆ ಪಡುತ್ತಿರುವುದು ಹಾಸ್ಯಾಸ್ಪದವಾಗಿ ಕಾಣಬಹುದು. ಮನೆಯ ಹಿರಿಯರೊಬ್ಬರ ಮಧ್ಯಸ್ಥಿಕೆ ಯಿಂದ ನೆಂಟಸ್ತಿಕೆಯಲ್ಲಿ ಸಂಬಂಧ ಕೂಡಿ ಬರುವುದು. ಪ್ರೀತಿಪಾತ್ರರನ್ನು ಭೇಟಿಯಾಗುವಿರಿ.

ವೃಶ್ಚಿಕ: ಕೆಲವೊಂದು ಕಠಿಣ ನಿರ್ಧಾರಗಳನ್ನು ಕೈಗೊಳ್ಳುವ ಪ್ರಸಂಗ ಬರಬಹುದು. ವಿಚಲಿತರಾಗಬೇಕಾಗಿಲ್ಲ. ಸಮಸ್ಯೆ ಬಗೆಹರಿಸಲು ಜಾಣತನ, ಬುದ್ಧಿವಂತಿಕೆಯನ್ನು ಬಳಸಿಕೊಳ್ಳಿ.

ಧನು: ವೈಯಕ್ತಿಕ ತೃಪ್ತಿಯ ಹೊರತಾಗಿ ನೀವು ಸಮಾಜಮುಖಿ ಆಗಬೇಕಾಗುತ್ತದೆ. ಸಂಕೀರ್ಣ ಸಂದರ್ಭಗಳಲ್ಲಿ ವಿವಿಧ ವಿಷಯಗಳನ್ನು ಒಟ್ಟಿಗೆ ನೆನಪಿಸಿಕೊಳ್ಳಬೇಕಾಗಬಹುದು. ಸಾಲ ತೀರಿಸುವ ಬಗ್ಗೆ ಯೋಚಿಸಿ.

ಮಕರ: ನಿಮ್ಮ ಹವ್ಯಾಸದ ಕೆಲಸಗಳನ್ನು ಎಷ್ಟೇ ಬಿಡುವಿಲ್ಲದ ದಿನವಾಗಿದ್ದರೂ ಸಹ ಮಾಡುವಿರಿ. ನಿಮ್ಮ ಕೆಲಸಗಳಿಗೆ ಸಂಗಾತಿಯ ಸಹಕಾರ ಹಿತವೆನಿಸುತ್ತದೆ. ಮಾತುಗಳನ್ನು ಬೆಣ್ಣೆಯಲ್ಲಿ ಕೂದಲು ತೆಗೆದಂತೆ ಆಡುವಿರಿ.

ಕುಂಭ: ದಂಪತಿಗಳಿಗೆ ಒಟ್ಟಾಗಿ ದೇವರ ದರ್ಶನ ಮಾಡುವ ಅಥವಾ ಹರಕೆ ತೀರಿಸುವ ಯೋಗವಿದೆ. ಮಕ್ಕಳು ಬೆಳವಣಿಗೆಯ ಹಾದಿಯಲ್ಲಿ ದಾರಿ ತಪ್ಪುತ್ತಿದ್ದಾರೆಯೇ ಎಂಬುದನ್ನು ಸೂಕ್ಷ್ಮವಾಗಿ ಗಮನಿಸುತ್ತಿರಿ.

ಮೀನ: ವರ್ಷಾವಧಿಯ ಕಾರ್ಯಕ್ರಮಕ್ಕಾಗಿ ಇರುವ ಊರಿನಿಂದ ಮೂಲಮನೆಗೆ ಬರುವಿರಿ. ಚಿತ್ರಕಲಾದಿ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದರೆ ಬಹುಮಾನವನ್ನು ನಿರೀಕ್ಷಿಸಬಹುದು. ಅಲರ್ಜಿ ಉಂಟಾಗಬಹುದು.

ಪದಬಂಧ 5697

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಚುಂಬನದೊಂದಿಗೆ ಸಿಕ್ಕಿರುವ ರತ್ನ (2)
2.ಬಸವಣ್ಣನವರು ಕೈಲಾಸವೆಂದಿರುವ ಕೆಲಸ (3)
4.ಕಣದಲ್ಲಿರುವ ಹತೋಟಿ (4)
6.ವೀರಶೈವರ ಶ್ಮಶಾನ (4)
8.ರಾರಾಜಮಾನವಾಗಿರುವ ದೊರೆ (2)
9.ಈತ ತಿಳಿದವನು (2)
10.ಮಂಜ ನಡುವಿದ್ದರೆ ಸೂಕ್ತ! (4)
12.ಮರದೊಳಗೆ ಕಾಣುತ್ತಿರುವ ದುಂಬಿ (4)
14.ಮನಸ್ಸಿನ ಅಸ್ವಾಸ್ಥತೆ (3)
15.ಖನಿಜಗಳ ನೆಲೆ (2)

ಮೇಲಿಂದ ಕೆಳಕ್ಕೆ
1.ದುಮುಗುಟ್ಟುತ್ತಿರುವ ಅಜ್ಜ (3)
2.ವಿನಾಕಾರಣದಿಂದ ಹೇಳಿರುವ ಉದ್ದೇಶ (3)
3.ಕರು ಖರೀದಿಗೆ ಹಾಕಿದ ಷರತ್ತು (3)
5.ತಿರುಗಿ ಹಿಡಿದಿರುವ ವಂದರಿ (3)
7.ಬಂಗಾರವನ್ನು ಹೀಗೂ ಕರೆವರು (3)
8.ರಾಯರಿಂದ ಬಂದ ನಿರೂಪ (3)
9.ನೆನಪು ಹೀಗೆ ಬಂದಿದೆ (3)
11.ಉಪಪತ್ನಿ ಇಲ್ಲಿದ್ದಾಳೆ (3)
12.ಭವ್ಯವಾದ ಸೌಧ (3)
13.ಮಣಿ ಧರಿಸಿದ ಚಲುವೆ (3)



5696ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಚಕ್ಷುಃಪ್ರೀತಿ 3.ಲವಾಜಮೆ
5.ವಿಧುರ 6.ಅಡವಿ
7.ದನುಜ 9.ದಮನ
11.ಗಯ್ಯಾಳಿ 12.ಅಪಾತ್ರ
13.ಅನಿರುದ್ಧ 15.ಬಹಿರಂಗ

ಮೇಲಿಂದ ಕೆಳಕ್ಕೆ:
1.ಚಮ್ಮಾರ 2.ತಿಲ
4.ವಾಕ್ಕೋವಿದ 5.ವಿಷಾದ
8.ಜಗದ್ಗುರು 10.ನಕ್ಷತ್ರ
12.ಅನಂಗ 14.ದ್ಧಬ

ಸುಡೊಕು 6082

7				1			8	2
	3	6	8		9	5		7
4			7				9	
	7							8
		4	9	3	8		7	1
8		1						
	8						4	
1		2		8		7		3
	4		1		7		2	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6081 ಸುಡೊಕು

5	2	1	4	7	3	9	6	8
7	9	8	6	1	2	3	4	5
4	6	3	5	9	8	7	2	1
1	4	9	2	3	5	6	8	7
2	3	7	1	8	6	4	5	9
8	5	6	7	4	9	2	1	3
6	7	5	9	2	1	8	3	4
3	1	4	8	6	7	5	9	2
9	8	2	3	5	4	1	7	6

ಏಳು ರಾಜ್ಯ, ಒಂದು ಕೇಂದ್ರಾಡಳಿತ ಪ್ರದೇಶದ 57 ಕ್ಷೇತ್ರಗಳಿಗೆ ನಾಳೆ ಮತದಾನ • ಜೂನ್ 4ಕ್ಕೆ ಮತ ಎಣಿಕೆ

ಸುದೀರ್ಘ ಚುನಾವಣಾ ಪ್ರಚಾರಕ್ಕೆ ತೆರೆ

ವಾರಾಣಸಿ/ಚಂಡೀಗಢ (ಪಿಟಿಐ): ಲೋಕಸಭಾ ಚುನಾವಣೆಯ ಸುದೀರ್ಘ ಅವಧಿಯ ಬಹಿರಂಗ ಪ್ರಚಾರಕ್ಕೆ ಗುರುವಾರ ಸಂಜೆ ತೆರೆ ಬಿದ್ದಿತು. ಏಳನೇ ಹಾಗೂ ಕೊನೆಯ ಹಂತದಲ್ಲಿ ಏಳು ರಾಜ್ಯಗಳು ಮತ್ತು ಒಂದು ಕೇಂದ್ರಾಡಳಿತ ಪ್ರದೇಶದ (ಚಂಡೀಗಢ) ಒಟ್ಟು 57 ಲೋಕಸಭಾ ಕ್ಷೇತ್ರಗಳಿಗೆ ಜೂನ್ 1ರಂದು (ಶನಿವಾರ) ಮತದಾನ ನಡೆಯಲಿದೆ.

ಪ್ರಧಾನಿ ನರೇಂದ್ರ ಮೋದಿ ಅವರು ಸ್ಪರ್ಧಿಸಿರುವ ವಾರಾಣಸಿ ಕ್ಷೇತ್ರಕ್ಕೂ ಶನಿವಾರವೇ ಮತದಾನ ನಡೆಯಲಿದೆ. ಮೋದಿ ಅವರು ಸತತ ಮೂರನೇ ಬಾರಿಗೆ ಇಲ್ಲಿಂದ ಆಯ್ಕೆ ಬಯಸಿದ್ದಾರೆ.

28 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ 486 ಕ್ಷೇತ್ರಗಳಿಗೆ ಈಗಾಗಲೇ ಮತದಾನ ಮುಗಿದಿದೆ. ಮತ ಎಣಿಕೆ ಜೂನ್ 4ರಂದು ನಡೆಯಲಿದೆ.

ಆರೋಪ- ಪ್ರತ್ಯಾರೋಪ: ಏಳನೇ ಹಂತದ ಮತದಾನದ ಪ್ರಚಾರದ ವೇಳೆಯಲ್ಲೂ ಬಿಜೆಪಿ ನಾಯಕರು, ಕಾಂಗ್ರೆಸ್ ಮತ್ತು 'ಇಂಡಿಯಾ' ಮೈತ್ರಿಕೂಟದ ನಾಯಕರು ಪರಸ್ಪರ ಆರೋಪ, ಪ್ರತ್ಯಾರೋಪಗಳಲ್ಲಿ ತೊಡಗಿದ್ದರು. 'ಕಾಂಗ್ರೆಸ್ ಮತ್ತು ಇಂಡಿಯಾ ಕೂಟವು ಭ್ರಷ್ಟ, ಹಿಂದೂ ವಿರೋಧಿಯಾಗಿದ್ದು, ತುಷ್ಟೀಕರಣದ ನೀತಿ ಅನುಸರಿಸುತ್ತಿವೆ. ಅಲ್ಲದೆ ಅವು ಕುಟುಂಬ ರಾಜಕಾರಣದಲ್ಲಿ ತೊಡಗಿಕೊಂಡಿವೆ' ಎಂದು ಬಿಜೆಪಿ ನಾಯಕರು ಆರೋಪಗಳನ್ನು ಮಾಡಿದ್ದಾರೆ.

ಇದಕ್ಕೆ ಪ್ರತಿಯಾಗಿ ವಿರೋಧ ಪಕ್ಷಗಳು, 'ಬಿಜೆಪಿಯು ರೈತ ಮತ್ತು ಯುವ ಜನರ ವಿರೋಧಿಯಾಗಿದೆ. ಒಂದು ವೇಳೆ ಚುನಾವಣೆಯಲ್ಲಿ ಬಿಜೆಪಿ ಗೆದ್ದರೆ ಸಂವಿಧಾನವನ್ನು ಬದಲಿಸುತ್ತದೆ' ಎಂದು ಪ್ರತ್ಯಾರೋಪ ಮಾಡಿವೆ.

'ಬಿಜೆಪಿ ನಾಯಕರು ಮೋದಿ ಅವರನ್ನು ವಿಷ್ಣುವಿನ 11ನೇ ಅವತಾರ ಎಂದು ಬಿಂಬಿಸಲು ಪ್ರಯತ್ನಿಸುತ್ತಿದ್ದಾರೆ. ಆದರೆ ದೇಶದ ಜನರು ಅದನ್ನು ಸ್ವೀಕರಿಸುವುದಿಲ್ಲ' ಎಂದು ಒಡಿಶಾದ ಚುನಾವಣಾ ರ್‍ಯಾಲಿಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಹೇಳಿದ್ದಾರೆ.

ಪಶ್ಚಿಮ ಬಂಗಾಳದ ಟಿಎಂಸಿ ಅಭ್ಯರ್ಥಿಗಳ ಪರವಾಗಿ ಗುರುವಾರ ಕೋಲ್ಕತ್ತದಲ್ಲಿ ನಡೆದ ಚುನಾವಣಾ ಪ್ರಚಾರ ರ್‍ಯಾಲಿಯಲ್ಲಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಪಕ್ಷದ ನಾಯಕರು ಮತ್ತು ಕಾರ್ಯಕರ್ತರ ಜತೆ ಪಾಲ್ಗೊಂಡರು –ಎಎಫ್‌ಪಿ ಚಿತ್ರ

ಪಂಜಾಬ್‌ನಲ್ಲಿ ಕಾಂಗ್ರೆಸ್, ಎಎಪಿ ಪ್ರತ್ಯೇಕ ಸ್ಪರ್ಧೆ: ಇಂಡಿಯಾ ಮೈತ್ರಿಕೂಟದ ಪಾಲುದಾರರಾದ ಕಾಂಗ್ರೆಸ್ ಮತ್ತು ಎಎಪಿ ಪಂಜಾಬಿನಲ್ಲಿ ಪ್ರತ್ಯೇಕವಾಗಿ ಸ್ಪರ್ಧಿಸುತ್ತಿವೆ. ಬಿಜೆಪಿ ಇಲ್ಲಿ ಅಬ್ಬರದ ಪ್ರಚಾರ ಕೈಗೊಂಡಿದ್ದು ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಸಚಿವರಾದ ಅಮಿತ್ ಶಾ, ರಾಜನಾಥ ಸಿಂಗ್, ನಿರ್ಮಲಾ ಸೀತಾರಾಮನ್, ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಮತ್ತು ಬಿಜೆಪಿ ಆಡಳಿತವಿರುವ ರಾಜ್ಯಗಳ ಮುಖ್ಯಮಂತ್ರಿಗಳು ಪ್ರಚಾರ ನಡೆಸಿದ್ದಾರೆ.

ಕಾಂಗ್ರೆಸ್ ಪರವಾಗಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ನಾಯಕರಾದ ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ವಾದ್ರಾ ಪ್ರಚಾರದ ನೇತೃತ್ವ ವಹಿಸಿದ್ದರು. ಮಧ್ಯಂತರ ಜಾಮೀನಿನ ಮೇಲೆ ಹೊರಬಂದಿರುವ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್, ಪಂಜಾಬ್ ಮುಖ್ಯಮಂತ್ರಿ ಭಗವಂತ ಮಾನ್ ಅವರು ತಮ್ಮ ಪಕ್ಷದ ಅಭ್ಯರ್ಥಿಗಳ ಪರ ಪ್ರಚಾರ ಮಾಡಿದ್ದಾರೆ.

ಉತ್ತರ ಪ್ರದೇಶದ ಚುನಾವಣಾ ಪ್ರಚಾರ ಸಭೆಗಳಲ್ಲಿ ಬಿಜೆಪಿಯು, 'ಇಂಡಿಯಾ ಮೈತ್ರಿಕೂಟ ಅಧಿಕಾರಕ್ಕೆ ಬಂದರೆ ಮುಸ್ಲಿಂ ಮೀಸಲಾತಿಯನ್ನು ತರುತ್ತದೆ ಮತ್ತು ರಾಮಮಂದಿರಕ್ಕೆ 'ಬಾಬ್ರಿ ಬೀಗ' ಹಾಕುತ್ತದೆ' ಎಂದು ಆರೋಪಿಸಿದೆ. ಇದಕ್ಕೆ ಪ್ರತಿಯಾಗಿ ಪ್ರತಿಪಕ್ಷಗಳು ಸಂವಿಧಾನ ಉಳಿಸಲು ಮತ ಚಲಾಯಿಸುವಂತೆ ಮತದಾರರನ್ನು ಕೋರಿವೆ.

ಟಿಎಂಸಿ ಪರ ಮಮತಾ ಪ್ರಚಾರ: ಪಶ್ಚಿಮ ಬಂಗಾಳದ 9 ಲೋಕಸಭಾ ಕ್ಷೇತ್ರಗಳಲ್ಲಿ ಟಿಎಂಸಿ ಅಭ್ಯರ್ಥಿಗಳ ಪರ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಪ್ರಚಾರ ಕೈಗೊಂಡಿದ್ದಾರೆ. ಮೋದಿ ಅವರು ಕೋಲ್ಕತ್ತದಲ್ಲಿ ಮಂಗಳವಾರ ರ್‍ಯಾಲಿ ನಡೆಸಿದ್ದರು.

ಮಮತಾ ಅವರು ಗುರುವಾರ ಜಾದವ್‌ಪುರ ಪ್ರದೇಶದ ದಕ್ಷಿಣ ಭಾಗದಿಂದ ಗೋಪಾಲನಗರದವರೆಗೂ 12 ಕಿ.ಮೀ ರ್‍ಯಾಲಿಯಲ್ಲಿ ಪಾಲ್ಗೊಂಡರು. ಟಿಎಂಸಿ ನಾಯಕ ಅಭಿಷೇಕ್ ಬ್ಯಾನರ್ಜಿ ಅವರೂ ಕೊನೆಯ ದಿನ ಎರಡು ರ್‍ಯಾಲಿಗಳಲ್ಲಿ ಭಾಗವಹಿಸಿದ್ದರು.

ಪ್ರಧಾನಿಯಿಂದ 206 ಪ್ರಚಾರ ಸಭೆ, 80 ಸಂದರ್ಶನ

ನವದೆಹಲಿ (ಪಿಟಿಐ): ಲೋಕಸಭಾ ಚುನಾವಣೆಯಲ್ಲಿ ದೇಶದಾದ್ಯಂತ ಅಬ್ಬರದ ಪ್ರಚಾರ ನಡೆಸಿರುವ ಪ್ರಧಾನಿ ನರೇಂದ್ರ ಮೋದಿ ಅವರು ಪಂಜಾಬ್‌ನ ಹೋಶಿಯಾರ್‌ಪುರದಲ್ಲಿ ಗುರುವಾರ ಈ ಚುನಾವಣೆಯ ತಮ್ಮ ಕೊನೆಯ ಪ್ರಚಾರ ಸಭೆ ನಡೆಸಿದರು.

ಚುನಾವಣಾ ಆಯೋಗ (ಇ.ಸಿ) ಮಾರ್ಚ್ 16ರಂದು ಚುನಾವಣಾ ವೇಳಾಪಟ್ಟಿ ಪ್ರಕಟಿಸಿತ್ತು. ಅದಾದ ಬಳಿಕ ಮೋದಿ ಅವರು ರೋಡ್ ಶೋ, ರ್‍ಯಾಲಿ, ಬಹಿರಂಗ ಪ್ರಚಾರ ಸೇರಿದಂತೆ ಒಟ್ಟು 206 ಚುನಾವಣಾ ಪ್ರಚಾರ ಸಭೆಗಳಲ್ಲಿ ಪಾಲ್ಗೊಂಡು, ಬಿಜೆಪಿ ಅಭ್ಯರ್ಥಿಗಳ ಪರ ಪ್ರಚಾರ ನಡೆಸಿದ್ದಾರೆ.

2019ರ ಲೋಕಸಭಾ ಚುನಾವಣೆಯಲ್ಲಿ ಅವರು 68 ದಿನಗಳವರೆಗೆ 145 ಸಾರ್ವಜನಿಕ ಪ್ರಚಾರ ಸಭೆಗಳಲ್ಲಿ ಭಾಗವಹಿಸಿದ್ದರು. ಈ ಬಾರಿ ಅದನ್ನು ಮೀರಿಸಿ ಪ್ರಚಾರ ಸಭೆಗಳನ್ನು ನಡೆಸಿದ್ದು, ಒಟ್ಟು 76 ದಿನಗಳಲ್ಲಿ 206 ಸಭೆಗಳಲ್ಲಿ ಪಾಲ್ಗೊಂಡಿದ್ದಾರೆ.

ಆಯೋಗವು ಚುನಾವಣಾ ದಿನಾಂಕ ಘೋಷಿಸಿದಾಗ, ಮೋದಿ ಅವರು ಮಾರ್ಚ್ 15ರಿಂದ 17ರವರೆಗೆ ಮೂರು ದಿನ ದಕ್ಷಿಣ ಭಾರತದ ಎಲ್ಲ ಐದು ರಾಜ್ಯಗಳನ್ನು ಒಳಗೊಂಡ ಪ್ರವಾಸದಲ್ಲಿದ್ದರು. ಬಿಜೆಪಿಯು 2019ರ ಚುನಾವಣೆಯಲ್ಲಿ ಒಂದೂ ಸ್ಥಾನ ಗೆಲ್ಲದ ಕೇರಳ ಮತ್ತು ತಮಿಳುನಾಡು ರಾಜ್ಯಕ್ಕೆ ಬಿಜೆಪಿ ಒತ್ತು ನೀಡಿತ್ತು. ಅದರ ಜತೆಗೆ ಕರ್ನಾಟಕದಲ್ಲಿ ತನ್ನ ಬಲವನ್ನು ಉಳಿಸಿಕೊಳ್ಳಲು ಮತ್ತು ತೆಲಂಗಾಣದಲ್ಲಿ ತನ್ನ ಸ್ಥಾನಗಳನ್ನು ಹೆಚ್ಚಿಸಿಕೊಳ್ಳುವತ್ತ ಗಮನ ನೀಡಿತ್ತು. 73ರ ವಯಸ್ಸಿನ ಮೋದಿ ಅವರು ಚುನಾವಣಾ ಪ್ರಚಾರದ ಸಭೆಗಳೇ ಅಲ್ಲದೇ 80 ಮಾಧ್ಯಮಗಳಿಗೆ ಸಂದರ್ಶನವನ್ನೂ ನೀಡಿದ್ದಾರೆ. ಅಂದರೆ ಮತದಾನ ಪ್ರಾರಂಭವಾದಾಗಿನಿಂದ ಅವರು ಪ್ರತಿದಿನ ಸರಾಸರಿ ಒಂದಕ್ಕಿಂತ ಹೆಚ್ಚು ಸಂದರ್ಶನ ನೀಡಿದ್ದಾರೆ.

ಮೋದಿ ಅವರ ಈ ಅಬ್ಬರದ ಪ್ರಚಾರದ ಯಶಸ್ಸಿನ ಪ್ರಮಾಣ ಎಷ್ಟು ಎಂಬುದು ಜೂನ್ 4ರ ಫಲಿತಾಂಶದ ದಿನ ಗೊತ್ತಾಗಲಿದೆ.

ಲೋಕಸಭಾ ಚುನಾವಣೆ ಮತದಾನದ ಪ್ರಮಾಣ

ಹಂತಗಳು	ಮತದಾನ (ಶೇ)
ಒಂದು	66.14
ಎರಡು	66.71
ಮೂರು	65.68
ನಾಲ್ಕು	69.16
ಐದು	62.2
ಆರು	63.36

'ಸಂವಿಧಾನದ ಕತ್ತು ಹಿಸುಕಿದ್ದ ಕಾಂಗ್ರೆಸ್'

ಪಂಜಾಬ್‌ನ ಹೋಶಿಯಾರ್‌ಪುರದಲ್ಲಿ ಪ್ರಚಾರ ಸಭೆಯಲ್ಲಿ ಪಾಲ್ಗೊಂಡ ಪ್ರಧಾನಿ ಮೋದಿ ಅವರು ಗದೆ ಪ್ರದರ್ಶಿಸಿದರು –ಪಿಟಿಐ ಚಿತ್ರ

ಹೋಶಿಯಾರ್‌ಪುರ (ಪಂಜಾಬ್) (ಪಿಟಿಐ): ತುರ್ತು ಪರಿಸ್ಥಿತಿಯ ಸಮಯದಲ್ಲಿ ಸಂವಿಧಾನದ 'ಕತ್ತು ಹಿಸುಕಿ' ಕೊಂದಿದ್ದ ಕಾಂಗ್ರೆಸ್ ಪಕ್ಷ ಈಗ ಸಂವಿಧಾನದ ಬಗ್ಗೆ ದೊಡ್ಡದಾಗಿ ಮಾತನಾಡುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಗುರುವಾರ ವಾಗ್ದಾಳಿ ನಡೆಸಿದರು.

ಪಂಜಾಬ್‌ನ ಹೋಶಿಯಾರ್‌ಪುರದಲ್ಲಿ ಗುರುವಾರ ಚುನಾವಣಾ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು 1984ರ ಗಲಭೆಯಲ್ಲಿ ಸಿಖ್ಖರು ಹತ್ಯೆಯಾದಾಗ ಕಾಂಗ್ರೆಸ್ ಅದರ ಬಗ್ಗೆ ತಲೆಕೆಡಿಸಿಕೊಳ್ಳಲಿಲ್ಲ ಎಂದು ಆರೋಪಿಸಿದರು.

'ಹೊತ್ತಿ ಉರಿಯುತ್ತಿದ್ದ ಟೈರ್‌ಗಳನ್ನು ಸಿಖ್ಖರ ಸುತ್ತಲೂ ಹಾಕಿ ಅವರನ್ನು ಕೊಲ್ಲಲಾಯಿತು. ಆಗ ಕಾಂಗ್ರೆಸ್‌ನವರಿಗೆ ಸಂವಿಧಾನದ ಬಗ್ಗೆ ಕಾಳಜಿ ಇರಲಿಲ್ಲ' ಎಂದು ದೂರಿದರು. ಈ ಬಾರಿಯ ಚುನಾವಣೆಯ ತಮ್ಮ ಕೊನೆಯ ರ್‍ಯಾಲಿಯಲ್ಲೂ ಅವರು ಮೀಸಲಾತಿ, ಭ್ರಷ್ಟಾಚಾರ ಮತ್ತು ರಾಮಮಂದಿರ ವಿಷಯ ಪ್ರಸ್ತಾಪಿಸಿ ಕಾಂಗ್ರೆಸ್ ವಿರುದ್ಧ ಹರಿಹಾಯ್ದರು. 'ಈಚಿನ ದಿನಗಳಲ್ಲಿ ದೇಶದ ಜನರು 'ಇಂಡಿ' ಮೈತ್ರಿಕೂಟದ ನಾಯಕರಿಂದ ಸಂವಿಧಾನದ ಕುರಿತ ಮಾತುಗಳನ್ನು ಕೇಳುತ್ತಿದ್ದಾರೆ. ಇದೇ ಮಂದಿ ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ಸಂವಿಧಾನದ ಕತ್ತು ಹಿಸುಕಿ ಕೊಂದಿದ್ದರು' ಎಂದು ಟೀಕಿಸಿದರು.

ಮೋದಿ ಮಾತು...

- ವಿಪಕ್ಷಗಳು ಧರ್ಮದ ಆಧಾರದಲ್ಲಿ ದೇಶ ವಿಭಜನೆಗೆ ಸಂಚು ರೂಪಿಸಿವೆ. ದಲಿತರು ಮತ್ತು ಶೋಷಿತರ ಮೀಸಲಾತಿಯನ್ನು ಕಸಿದು ಮುಸ್ಲಿಮರಿಗೆ ನೀಡಲು ಹೊರಟಿವೆ.
- ಕಾಂಗ್ರೆಸ್ ಪಕ್ಷವು ಭ್ರಷ್ಟಾಚಾರದಲ್ಲಿ 'ಡಬಲ್ ಪಿಎಚ್‌ಡಿ' ಮಾಡಿದೆ. ಇನ್ನೊಂದು ಭ್ರಷ್ಟಾಚಾರಿಗಳ ಪಕ್ಷವು (ಎಎಪಿ) ಕಾಂಗ್ರೆಸ್ ಜತೆ ಕೈಜೋಡಿಸಿದೆ.
- ಕಾಂಗ್ರೆಸ್ ಮತ್ತು 'ಇಂಡಿ' ಒಕ್ಕೂಟದವರು ಓಲೈಕೆ ರಾಜಕಾರಣಕ್ಕಾಗಿ ರಾಮಮಂದಿರ ನಿರ್ಮಾಣವನ್ನು ವಿರೋಧಿಸುತ್ತಾ ಬಂದರು. ಈಗ ಸಿಎಎಯನ್ನು ವಿರೋಧಿಸುತ್ತಿದ್ದಾರೆ.
- ಕಾಂಗ್ರೆಸ್ ಮತ್ತು ಮಿತ್ರಪಕ್ಷಗಳು ಭಾರತೀಯ ಸೇನೆಯನ್ನು ತಮ್ಮ 'ರಾಜಕೀಯ ದಾಳ'ವಾಗಿ ಬಳಸಿಕೊಂಡಿವೆ. ಅದಕ್ಕಿಂತ ದೊಡ್ಡ ಪಾಪ ಬೇರೊಂದಿಲ್ಲ. ಸಶಸ್ತ್ರ ಪಡೆಗಳನ್ನು ದುರ್ಬಲಗೊಳಿಸಲು ಅವರು ತಮ್ಮಿಂದ ಸಾಧ್ಯವಿರುವ ಎಲ್ಲ ಪ್ರಯತ್ನಗಳನ್ನೂ ಮಾಡಿದ್ದಾರೆ.
- ನಮ್ಮ ಸರ್ಕಾರ ಮೂರನೇ ಅವಧಿಯ ಮೊದಲ 125 ದಿನಗಳಲ್ಲಿ ಏನೇನು ಮಾಡಲಿದೆ ಎಂಬುದರ ನೀಲನಕ್ಷೆ ಈಗಾಗಲೇ ಸಿದ್ಧವಾಗಿದೆ.

'ಇಂಡಿಯಾ' ಮೈತ್ರಿಗೆ ಸ್ಪಷ್ಟ ಬಹುಮತ: ಖರ್ಗೆ ವಿಶ್ವಾಸ

ನವದೆಹಲಿ (ಪಿಟಿಐ): ಲೋಕಸಭಾ ಚುನಾವಣೆಯಲ್ಲಿ 'ಇಂಡಿಯಾ' ಮೈತ್ರಿಕೂಟಕ್ಕೆ ಸ್ಪಷ್ಟ ಬಹುಮತ ದೊರೆಯಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು, 'ಎಲ್ಲರನ್ನೂ ಒಳಗೊಳ್ಳುವ ಮತ್ತು ರಾಷ್ಟ್ರೀಯವಾದಿ ಸರ್ಕಾರವನ್ನು ನೀಡುತ್ತೇವೆ' ಎಂದು ಹೇಳಿದರು.

ಚುನಾವಣೆಯ ಕೊನೆಯ ಹಂತದ ಪ್ರಚಾರದ ಕುರಿತು ಎಐಸಿಸಿ ಕೇಂದ್ರ ಕಚೇರಿಯಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಒಂದು ವೇಳೆ ಈಗಿರುವ ಸರ್ಕಾರಕ್ಕೆ ಮತ್ತೊಂದು ಅವಕಾಶ ಸಿಕ್ಕರೆ, ಅದು ಪ್ರಜಾಪ್ರಭುತ್ವವನ್ನು ಅಂತ್ಯಗೊಳಿಸುತ್ತದೆ ಎಂಬುದನ್ನು ಜನರು ಮನಗಂಡಿದ್ದಾರೆ' ಎಂದರು.

ಜಾತಿ, ಧರ್ಮದ ಆಧಾರದ ಮೇಲೆ ಮತ ಕೇಳದಂತೆ ಚುನಾವಣಾ ಆಯೋಗ ನಿರ್ದೇಶನ ನೀಡಿದ್ದರೂ, ಪ್ರಧಾನಿ ನರೇಂದ್ರ ಮೋದಿ ಅವರು ಚುನಾವಣಾ ಪ್ರಚಾರದ ಸಮಯದಲ್ಲಿ ಮಂದಿರ–ಮಸೀದಿ ಮತ್ತು ವಿಭಜನೆಕಾರಿ ವಿಷಯಗಳನ್ನು 421 ಬಾರಿ ಪ್ರಸ್ತಾಪಿಸಿದ್ದಾರೆ ಎಂದು ಖರ್ಗೆ ವಿವರಿಸಿದರು.

ಮೋದಿ ಅವರು ಕಳೆದ 15 ದಿನಗಳ ತಮ್ಮ ಭಾಷಣದಲ್ಲಿ 232 ಬಾರಿ ಕಾಂಗ್ರೆಸ್ ಹೆಸರನ್ನು ಪ್ರಸ್ತಾಪಿಸಿದ್ದರೆ, 758 ಬಾರಿ ತಮ್ಮದೇ ಹೆಸರನ್ನು ಹೇಳಿಕೊಂಡಿದ್ದಾರೆ. ಆದರೆ ಒಮ್ಮೆಯೂ ಅವರು ನಿರುದ್ಯೋಗ ಸಮಸ್ಯೆ ಕುರಿತು ಮಾತನಾಡಿಲ್ಲ ಎಂದು ಕಿಡಿಕಾರಿದರು.

ದೇಶದ ಜನರು ಪರ್ಯಾಯ ಸರ್ಕಾರ ರಚನೆಗೆ ಜೂನ್ 4ರಂದು ಜನಾದೇಶ ನೀಡುತ್ತಾರೆ ಎಂಬ ವಿಶ್ವಾಸ ಇದೆ ಎಂದು ಅವರು ಪ್ರತಿಪಾದಿಸಿದರು.

ರಿಚರ್ಡ್ ಅಟೆನ್‌ಬರೊ ಅವರು 'ಗಾಂಧಿ' ಚಲನಚಿತ್ರ ನಿರ್ಮಿಸುವವರೆಗೂ ಜಗತ್ತಿಗೆ ಮಹಾತ್ಮ ಗಾಂಧಿ ಕುರಿತು ಅರಿವು ಇರಲಿಲ್ಲ ಎಂದು ಹೇಳಿರುವ ಪ್ರಧಾನಿ ವಿರುದ್ಧ ವಾಗ್ದಾಳಿ ನಡೆಸಿದ ಅವರು, 'ಪ್ರಧಾನಿ ಅವರು ಗಾಂಧಿ ಬಗ್ಗೆ ಅಧ್ಯಯನ ನಡೆಸದಿರಬಹುದು, ಆದರೆ ಮಹಾತ್ಮ ಗಾಂಧಿ ಅವರು ವಿಶ್ವಕ್ಕೆ ತಿಳಿದಿರುವ ನಾಯಕ' ಎಂದು ಹೇಳಿದರು.

ಗಾಂಧಿ ಕುರಿತ ಮೋದಿ ಹೇಳಿಕೆ ನಗು ತರಿಸುತ್ತದೆ. ಬಹುಶಃ ಅವರು ಗಾಂಧೀಜಿ ಬಗ್ಗೆ ಓದಿಕೊಂಡಿಲ್ಲ. ಇಡೀ ಜಗತ್ತಿಗೆ ಮಹಾತ್ಮ ಗಾಂಧಿ ಬಗ್ಗೆ ತಿಳಿದಿದೆ. ಅವರ ಪ್ರತಿಮೆಗಳು ವಿಶ್ವಸಂಸ್ಥೆ ಸೇರಿದಂತೆ ವಿಶ್ವದ ವಿವಿಧ ಸ್ಥಳಗಳಲ್ಲಿ ಇವೆ ಎಂದರು.

ಮೋದಿ ಅವರಿಗೆ ಗಾಂಧಿ ಬಗ್ಗೆ ಗೊತ್ತಿಲ್ಲದಿದ್ದರೆ, ಸಂವಿಧಾನದ ಬಗ್ಗೆಯೂ ಹೆಚ್ಚು ತಿಳಿದಿಲ್ಲ ಎನಿಸುತ್ತದೆ. ಜೂನ್ 4ರ ಬಳಿಕ ಮೋದಿ ಅವರಿಗೆ ಸಾಕಷ್ಟು ಬಿಡುವಿನ ಸಮಯ ದೊರೆಯುತ್ತದೆ. ಆಗ ಅವರು ಮಹಾತ್ಮ ಗಾಂಧಿ ಅವರ ಆತ್ಮಚರಿತ್ರೆಯನ್ನು ಓದಬೇಕು ಎಂದು ಖರ್ಗೆ ಸಲಹೆ ನೀಡಿದರು.

ವಿಧಾನ ಪರಿಷತ್ ಚುನಾವಣೆ: ಬೆಂಗಳೂರು ಪದವೀಧರ ಕ್ಷೇತ್ರದಲ್ಲಿ ಪ್ರಬಲ ಪೈಪೋಟಿ ನಿರೀಕ್ಷೆ

ರಾಜಧಾನಿಯಲ್ಲಿ ಆಧಿಪತ್ಯಕ್ಕೆ ಕೈ–ಕಮಲ ಹಣಾಹಣಿ

• ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: ದೀರ್ಘ ಕಾಲದಿಂದ ತ್ರಿಕೋನ ಸ್ಪರ್ಧೆಯ ಅಖಾಡವಾಗಿದ್ದ ವಿಧಾನ ಪರಿಷತ್‌ನ ಬೆಂಗಳೂರು ಪದವೀಧರ ಕ್ಷೇತ್ರ, ಈ ಬಾರಿ ಬಿಜೆಪಿ–ಜೆಡಿಎಸ್ ಮೈತ್ರಿಯಿಂದಾಗಿ ನೇರ ಹಣಾಹಣಿಯ ಕಣವಾಗಿ ಬದಲಾಗಿದೆ. ಮೈತ್ರಿಯ ಬಲದಲ್ಲಿ ಆಧಿಪತ್ಯ ಮುಂದುವರಿಸುವ ಪ್ರಯತ್ನದಲ್ಲಿ ಬಿಜೆಪಿ ಇದ್ದರೆ, ಮೊದಲ ಬಾರಿಗೆ ವಿಜಯಪತಾಕೆ ಹಾರಿಸಿ ಕ್ಷೇತ್ರವನ್ನು 'ಕೈ' ವಶ ಮಾಡಿಕೊಳ್ಳಲು ಕಾಂಗ್ರೆಸ್ ಸೆಣಸುತ್ತಿದೆ.

ಬಿಬಿಎಂಪಿ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಗಳ 36 ವಿಧಾನಸಭಾ ಕ್ಷೇತ್ರಗಳಲ್ಲಿ ವ್ಯಾಪಿಸಿಕೊಂಡಿರುವ ಈ ಕ್ಷೇತ್ರದಲ್ಲಿ ಗೆಲುವು ಸಾಧಿಸುವುದನ್ನು ಬಿಜೆಪಿ–ಜೆಡಿಎಸ್ ಮೈತ್ರಿಕೂಟ ಹಾಗೂ ಕಾಂಗ್ರೆಸ್ ಇಬ್ಬರೂ ಪ್ರತಿಷ್ಠೆಯ ಪ್ರಶ್ನೆಯಾಗಿ ಪರಿಗಣಿಸಿದ್ದಾರೆ. ಈ ಕಾರಣದಿಂದ ಎರಡೂ ಕಡೆಯಲ್ಲಿ ಪ್ರಮುಖ ತಲೆಯಾಳುಗಳೇ ಪದವೀಧರ ಮತದಾರರ ಮನ ಗೆಲ್ಲಲು ಕಸರತ್ತು ನಡೆಸುತ್ತಿದ್ದಾರೆ.

ಸತತ ಐದು ಅವಧಿಗೆ ಕ್ಷೇತ್ರವನ್ನು ಪ್ರತಿನಿಧಿಸಿದ್ದ ಬಿಜೆಪಿಯ ರಾಮಚಂದ್ರೇಗೌಡ ಅವರು 2018ರ ಚುನಾವಣೆಯಲ್ಲಿ ನಿವೃತ್ತಿ ಘೋಷಿಸಿದ್ದರು. ಜೆಡಿಎಸ್ ಅಭ್ಯರ್ಥಿಯಾಗಿದ್ದು ರಾಮಚಂದ್ರೇಗೌಡರ ಎದುರಾಳಿಯಾಗಿದ್ದ ಅ. ದೇವೇಗೌಡರನ್ನು ಸೆಳೆದಿದ್ದ ಬಿಜೆಪಿ, 2018ರ ಚುನಾವಣೆಯಲ್ಲಿ ಕಣಕ್ಕಿಳಿಸಿತ್ತು. ಆಗಲೂ ಗೆಲುವು ಸಾಧಿಸುವುದರೊಂದಿಗೆ ಬಿಜೆಪಿಯ ಆಧಿಪತ್ಯ ಕ್ಷೇತ್ರದಲ್ಲಿ ಮುಂದುವರಿದಿತ್ತು.

ಈ ಬಾರಿ ಕಣಚಿತ್ರಣ ತುಸು ಬದಲಾಗಿದೆ. ಪುನರಾಯ್ಕೆ ಬಯಸಿರುವ ಅ.ದೇವೇಗೌಡ ಅವರು ಬಿಜೆಪಿ ಮತ್ತು ಜೆಡಿಎಸ್ ಎರಡೂ ಪಕ್ಷಗಳ ಮತಗಳು ತಮ್ಮನ್ನು ಸುಲಭವಾಗಿ ಗೆಲುವಿನ ದಡ ಮುಟ್ಟಿಸಬಹುದು ಎಂಬ ನಿರೀಕ್ಷೆಯಲ್ಲಿದ್ದಾರೆ. ಕಾಂಗ್ರೆಸ್ ಅಭ್ಯರ್ಥಿ ರಾಮೋಜಿಗೌಡ ಮೂರನೇ ಬಾರಿ ಇದೇ ಕ್ಷೇತ್ರದಲ್ಲಿ ಅದೃಷ್ಟ ಪರೀಕ್ಷೆಗೆ ಇಳಿದಿದ್ದಾರೆ. ರಾಜ್ಯದಲ್ಲಿ ಪಕ್ಷ ಅಧಿಕಾರದಲ್ಲಿರುವುದರಿಂದ ಪದವೀಧರರ ಮತಗಳನ್ನು ಸೆಳೆದು ಗೆಲುವು ಸಾಧಿಸುವ ತಂತ್ರಗಾರಿಕೆಯನ್ನು ನೆಚ್ಚಿಕೊಂಡಿದ್ದಾರೆ. ಈ ಬಾರಿ ಕ್ಷೇತ್ರವನ್ನು ಬಿಜೆಪಿ ತೆಕ್ಕೆಯಿಂದ ಕಿತ್ತುಕೊಳ್ಳಲೇಬೇಕು ಎಂಬ ಹಟಕ್ಕೆ ಬಿದ್ದಿರುವ ಕಾಂಗ್ರೆಸ್ ನಾಯಕರು ಕೂಡ, ತಮ್ಮ ಅಭ್ಯರ್ಥಿಯ ಬೆಂಬಲಕ್ಕೆ ಬಲವಾಗಿ ನಿಂತಿದ್ದಾರೆ.

ಕಾಂಗ್ರೆಸ್ ಬಹಳ ಮುಂಚಿತವಾಗಿಯೇ ರಾಮೋಜಿಗೌಡ ತನ್ನ ಅಭ್ಯರ್ಥಿ ಎಂದು ಘೋಷಿಸಿತ್ತು. ಹೀಗಾಗಿ ವರ್ಷಕ್ಕೂ ಮೊದಲೇ ಚುನಾವಣಾ ತಯಾರಿ ಆರಂಭಿಸಿದ್ದರು. ದೇವೇಗೌಡ ಕೂಡ ಹಾಲಿ ಸದಸ್ಯರಾಗಿದ್ದರಿಂದ ಮತ್ತೊಮ್ಮೆ ಕಣಕ್ಕಿಳಿಯಲು ಸಿದ್ಧತೆಯಲ್ಲಿದ್ದರು.

ಪಕ್ಷೇತರರ ಒಳೇಟಿನ ಭೀತಿ: ಈ ಇಬ್ಬರ ಜತೆಗೆ ಬಿಜೆಪಿ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಆಪ್ತ ಆರ್.ಎಸ್. ಉದಯ್ ಸಿಂಗ್ ಪಕ್ಷೇತರರಾಗಿ ಕಣಕ್ಕಿಳಿದಿದ್ದು, ಬಿರುಸಾಗಿಯೇ ಚುನಾವಣಾ ಪ್ರಚಾರದಲ್ಲಿ ನಿರತರಾಗಿದ್ದಾರೆ. ವರ್ಷಕ್ಕೂ ಮೊದಲೇ ಚುನಾವಣಾ ತಯಾರಿ ಆರಂಭಿಸಿದ್ದ ಉದಯ್ ಸಿಂಗ್, ಯಾವುದೇ ಪಕ್ಷದ ಟಿಕೆಟ್‌ಗೆ ಪ್ರಯತ್ನಿಸದೇ ಸ್ವತಂತ್ರ ಅಭ್ಯರ್ಥಿಯಾಗಿ ಅಖಾಡಕ್ಕಿಳಿದಿರುವುದು ಕುತೂಹಲ ಮೂಡಿಸಿದೆ.

ಇನ್ನೊಂದೆಡೆ ಪಕ್ಷೇತರ ಅಭ್ಯರ್ಥಿ ಎಂ. ಪುಟ್ಟಸ್ವಾಮಿ ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ ಮತ್ತು ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ಅವರ ಭಾವಚಿತ್ರಗಳನ್ನು ಬಳಸಿಕೊಂಡು ಮತ ಯಾಚಿಸುತ್ತಿದ್ದಾರೆ. ಇಬ್ಬರೂ ಬಿಜೆಪಿ- ಜೆಡಿಎಸ್ ಮೈತ್ರಿಕೂಟದ ಮತಗಳನ್ನು ಚದುರಿಸಬಹುದು ಎಂಬ ಆತಂಕ ಮಿತ್ರಪಕ್ಷಗಳ ನಾಯಕರಲ್ಲಿದೆ. ಈ ನಾಲ್ವರೂ ಸೇರಿದಂತೆ ಒಟ್ಟು 15 ಅಭ್ಯರ್ಥಿಗಳು ಕಣದಲ್ಲಿದ್ದಾರೆ.

ಸಮನ್ವಯಕ್ಕಾಗಿ ಹರಸಾಹಸ: ದೀರ್ಘ ಕಾಲದಿಂದಲೂ ಈ ಕ್ಷೇತ್ರದಲ್ಲಿ ಕಾದಾಟ ನಡೆಸುತ್ತಿದ್ದ ಬಿಜೆಪಿ- ಜೆಡಿಎಸ್ ಈಗ ಮೈತ್ರಿಯಲ್ಲಿ ಚುನಾವಣೆ ಎದುರಿಸುತ್ತಿವೆ. ಆದರೆ, ಪದವೀಧರರ ಮತ ಸೆಳೆಯುವ ಕೆಲಸದಲ್ಲಿ ಎರಡೂ ಪಕ್ಷಗಳ ನಾಯಕರು, ಕಾರ್ಯಕರ್ತರ ಹಂತದಲ್ಲಿ ಸಮನ್ವಯ ಸಾಧ್ಯವಾಗದೇ ಇದ್ದರೆ ಕಾಂಗ್ರೆಸ್ ಅನುಕೂಲ ಪಡೆಯಬಹುದು ಎಂಬ ಆತಂಕ ಮೈತ್ರಿಕೂಟದ ನಾಯಕರಲ್ಲಿದೆ. ಈ ಕಾರಣದಿಂದಾಗಿಯೇ ಜೆಡಿಎಸ್ ಕಚೇರಿಯಲ್ಲಿ ಜಂಟಿ ಸಮನ್ವಯ ಸಮಿತಿ ಸಭೆ ನಡೆಸಿ, ಯಾವುದೇ ಹಂತದಲ್ಲೂ ಎರಡೂ ಪಕ್ಷಗಳ ಮಧ್ಯೆ ಒಡಕು ಮೂಡದಂತೆ ತಡೆಯುವ ಪ್ರಯತ್ನಗಳಾಗಿವೆ.

ಮೈತ್ರಿಯ ಕುರಿತು ಅಸಹನೆ ಹೊಂದಿರುವ, ಹೊಂದಾಣಿಕೆಗೆ ಸಿದ್ಧರಿಲ್ಲದ ಪ್ರಮುಖರ ಮೇಲೆ ಕಣ್ಣಿಟ್ಟಿರುವ ಕಾಂಗ್ರೆಸ್, ಅವರನ್ನು ತನ್ನತ್ತ ಸೆಳೆದು ಚುನಾವಣೆಯಲ್ಲಿ ಲಾಭ ಪಡೆಯುವ ಕಸರತ್ತು ಮಾಡುತ್ತಿದೆ. ಆಡಳಿತಾರೂಢ ಕಾಂಗ್ರೆಸ್ ಉರುಳಿಸುವ ದಾಳಗಳಿಗೆ ತನ್ನ ಮತಗಳು ಚದುರದಂತೆ ತಡೆಯುವುದು ಇಲ್ಲಿ ಬಿಜೆಪಿ-ಜೆಡಿಎಸ್ ಮೈತ್ರಿಕೂಟಕ್ಕಿರುವ ದೊಡ್ಡ ಸವಾಲು.

ಅ. ದೇವೇಗೌಡ

ರಾಮೋಜಿ ಗೌಡ

ಉದಯ್ ಕುಮಾರ್ ಸಿಂಗ್

ಮತದಾರರ ವಿವರ



ಕಣದಲ್ಲಿರುವ ಇತರ ಅಭ್ಯರ್ಥಿಗಳು

ಎಲ್ ಜೀವನ್ (ಕರ್ನಾಟಕ ರಾಷ್ಟ್ರ ಸಮಿತಿ), ಪ್ರಜಾಕೀಯ ಸಂತೋಷ್ (ಉತ್ತಮ ಪ್ರಜಾಕೀಯ ಪಾರ್ಟಿ).
ಪಕ್ಷೇತರರು: ಅಭಿಷೇಕ್ ಬ್ರಹ್ಮರಿಶಿ, ಆರ್.ಎಸ್. ಉದಯ್ ಸಿಂಗ್, ಕರಬಸಪ್ಪ ಎಂ.ಪಿ., ಕಾಂತಕುಮಾರ್ ಆರ್., ನೀಲಕಂಠ ಆರ್. ಗೌಡ (ಕಂಠ), ಎಂ. ಪುಟ್ಟಸ್ವಾಮಿ, ಫರ್ಡಿನಾಂಡ್ ಲಾರೆನ್ಸ್, ಡಾ. ಭಾನುಪ್ರಕಾಶ್, ಮುನಿರಾಜು ಎಂ.ಜಿ., ವಿ. ಮಂಜುನಾಥ ಮತ್ತು ಈರಪ್ಪ ವಸಂತಕುಮಾರ್.

ಹಾಲಿ ಸದಸ್ಯರು
ಅ. ದೇವೇಗೌಡ, ಬಿಜೆಪಿ

ಮತದಾರರ ಸಂಖ್ಯೆಯಲ್ಲಿ ಭಾರಿ ಹೆಚ್ಚಳ

2012ರ ಚುನಾವಣೆಯಲ್ಲಿ ಕೇವಲ 243 ಮತಗಳ ಅಂತರದಿಂದ ಸೋಲು ಕಂಡಿದ್ದ ದೇವೇಗೌಡ, 2018ರ ಚುನಾವಣೆಯಲ್ಲಿ ಬಿಜೆಪಿಯಿಂದ ಕಣಕ್ಕಿಳಿದು 3,864 ಮತಗಳ ಅಂತರದಿಂದ ಗೆದ್ದರು. 2012ರ ಚುನಾವಣೆಯಲ್ಲಿ 7,000 ಮತ ಗಳಿಸಿ ಮೂರನೇ ಸ್ಥಾನದಲ್ಲಿದ್ದ ರಾಮೋಜಿಗೌಡ, 2018ರ ಚುನಾವಣೆಯಲ್ಲಿ 12,838 ಮತಗಳೊಂದಿಗೆ ಎರಡನೇ ಸ್ಥಾನಕ್ಕೆ ಜಿಗಿದರು.

2018ರ ಚುನಾವಣೆಯಲ್ಲಿ ಬೆಂಗಳೂರು ಪದವೀಧರರ ಕ್ಷೇತ್ರದ ಮತದಾರರ ಸಂಖ್ಯೆ 65,223 ಇತ್ತು. 2024ರ ಚುನಾವಣೆಯಲ್ಲಿ 1,21,860ಕ್ಕೆ ಜಿಗಿದಿದ್ದು, ಮತದಾರರ ಸಂಖ್ಯೆಯಲ್ಲಿ 56,637ರಷ್ಟು ಹೆಚ್ಚಳವಾಗಿದೆ. ಕ್ಷೇತ್ರ ಉಳಿಸಿಕೊಳ್ಳಲು ಪ್ರಯತ್ನಿಸುತ್ತಿರುವ ದೇವೇಗೌಡ ಮತ್ತು ಮೊದಲ ಬಾರಿಗೆ ವಿಜಯ ಪತಾಕೆ ಹಾರಿಸಲು ಪೈಪೋಟಿ ನಡೆಸುತ್ತಿರುವ ರಾಮೋಜಿಗೌಡ ಇಬ್ಬರಿಗೂ ಮತ ಗಳಿಕೆಯಲ್ಲಿ ದೊಡ್ಡ ಪ್ರಮಾಣದ ಹೆಚ್ಚಳ ಸಾಧಿಸುವುದು ಅನಿವಾರ್ಯ ಆಗಿದೆ.

ಚುಟುಕು

'ಸಾರ್ವಜನಿಕ ಭಾಷಣದ ಘನತೆ ಕುಸಿಯುವಂತೆ ಮಾಡಿದ ಮೋದಿ'

ನವದೆಹಲಿ (ಪಿಟಿಐ): 'ಚುನಾವಣಾ ಪ್ರಚಾರದ ಸಮಯದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ದ್ವೇಷಪೂರಿತ ಹೇಳಿಕೆಗಳನ್ನು ನೀಡುವ ಮೂಲಕ, ಸಾರ್ವಜನಿಕ ಭಾಷಣದ ಘನತೆ ಮತ್ತು ಪ್ರಧಾನಿ ಹುದ್ದೆಯ ಗೌರವ ಕುಸಿಯುವಂತೆ ಮಾಡಿದ್ದಾರೆ' ಎಂದು ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ವಾಗ್ದಾಳಿ ನಡೆಸಿದ್ದಾರೆ.

ಜೂನ್ 1ರಂದು ನಡೆಯಲಿರುವ ಏಳನೇ ಹಂತದ ಮತದಾನಕ್ಕೂ ಮುನ್ನ ಅವರು ಪಂಜಾಬ್ ಮತದಾರರಿಗೆ ಬರೆದಿರುವ ಪತ್ರದಲ್ಲಿ, 'ಕಾಂಗ್ರೆಸ್ ಪಕ್ಷವು ಪ್ರಜಾಪ್ರಭುತ್ವ ಮತ್ತು ಸಂವಿಧಾನ ಸಂರಕ್ಷಿಸುವ ಮೂಲಕ ಬೆಳವಣಿಗೆ ಆಧಾರಿತ ಪ್ರಗತಿಪರ ಭವಿಷ್ಯವನ್ನು ಖಚಿತಪಡಿಸುತ್ತದೆ' ಎಂದು ಪ್ರತಿಪಾದಿಸಿದ್ದಾರೆ.

ಸಶಸ್ತ್ರ ಪಡೆಗಳ ಮೇಲೆ ಬಿಜೆಪಿ ಸರ್ಕಾರ ಹೇರಿರುವ 'ಅಗ್ನಿವೀರ' ಯೋಜನೆಯನ್ನು 'ಕಳಪೆ ಪರಿಕಲ್ಪನೆ' ಎಂದು ಟೀಕಿಸಿದ ಸಿಂಗ್, 'ದೇಶಭಕ್ತಿ, ಶೌರ್ಯ ಮತ್ತು ಸೇವೆಯ ಮೌಲ್ಯ ಕೇವಲ ನಾಲ್ಕು ವರ್ಷಗಳು ಎಂದು ಬಿಜೆಪಿ ಭಾವಿಸಿದಂತಿದೆ. ಇದು ಅವರ ನಕಲಿ ರಾಷ್ಟ್ರೀಯತೆಯನ್ನು ತೋರಿಸುತ್ತದೆ' ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

'ಈ ಚುನಾವಣಾ ಪ್ರಚಾರದ ಸಮಯದಲ್ಲಿ ರಾಜಕೀಯ ಭಾಷಣಗಳನ್ನು ನಾನು ಸೂಕ್ಷ್ಮವಾಗಿ ಗಮನಿಸುತ್ತಿದ್ದೇನೆ. ಮೋದಿ ಅವರಂತೂ ದ್ವೇಷ ಭಾಷಣಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಅದೂ ಸಂಪೂರ್ಣವಾಗಿ ವಿಭಜಿಸುವ ಸ್ವಭಾವದ್ದಾಗಿದೆ' ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

'ದೇಶದಲ್ಲಿ ಹಿಂದೆ ಯಾವ ಪ್ರಧಾನಿಯೂ ಇಂತಹ ದ್ವೇಷಪೂರಿತ, ಅಸಂಸದೀಯ ಮತ್ತು ಒರಟು ಪದಗಳನ್ನು ಬಳಸಿಲ್ಲ. ಅವರ ಮಾತುಗಳಂತೂ ಸಮಾಜದ ನಿರ್ದಿಷ್ಟ ವರ್ಗವನ್ನು ಗುರಿಯಾಗಿಸುತ್ತದೆ. ಅವರು ನನ್ನ ವಿರುದ್ಧವೂ ಕೆಲ ಸುಳ್ಳು ಹೇಳಿಕೆಗಳನ್ನು ನೀಡಿದ್ದಾರೆ. ನನ್ನ ಜೀವನದಲ್ಲಿ ಎಂದಿಗೂ ನಾನು ಸಮುದಾಯವನ್ನು ಪ್ರತ್ಯೇಕಿಸುವ ಕುರಿತ ಮಾತುಗಳನ್ನಾಡಿಲ್ಲ. ಅದು ಏನಿದ್ದರೂ ಬಿಜೆಪಿಯ ಹಕ್ಕುಸ್ವಾಮ್ಯ' ಎಂದು ಟೀಕಿಸಿದ್ದಾರೆ.

'48 ಗಂಟೆಗಳೊಳಗೆ ಪ್ರಧಾನಿ ಆಯ್ಕೆ'

ನವದೆಹಲಿ (ಪಿಟಿಐ): 'ಇಂಡಿಯಾ' ಮೈತ್ರಿಕೂಟ ಪೂರ್ಣ ಬಹುಮತದೊಂದಿಗೆ ಅಧಿಕಾರಕ್ಕೆ ಬರುವುದು ಖಚಿತ ಎಂಬ ಮಾತನ್ನು ಪುನರುಚ್ಚರಿಸಿರುವ ಕಾಂಗ್ರೆಸ್ ನಾಯಕ ಜೈರಾಮ್ ರಮೇಶ್, 'ಫಲಿತಾಂಶ ಹೊರಬಿದ್ದ 48 ಗಂಟೆಗಳ ಒಳಗಾಗಿ ನೂತನ ಪ್ರಧಾನಿಯನ್ನು ಆಯ್ಕೆ ಮಾಡಲಾಗುವುದು' ಎಂದು ಹೇಳಿದರು.

'ಜನಾದೇಶವು ಇಂಡಿಯಾ ಮೈತ್ರಿಕೂಟದ ಪರ ಬರಲಿದ್ದು, ಬಹುಮತಕ್ಕೆ ಅಗತ್ಯವಿರುವ 272 ಸ್ಥಾನಗಳ ಗಡಿಯನ್ನು ದಾಟಲಿದ್ದೇವೆ' ಎಂದು ಪಿಟಿಐಗೆ ನೀಡಿದ ಸಂದರ್ಶನದಲ್ಲಿ ವಿಶ್ವಾಸ ವ್ಯಕ್ತಪಡಿಸಿದರು.

ಎನ್‌ಡಿಎ ಮೈತ್ರಿಕೂಟದ ಕೆಲವು ಪಕ್ಷಗಳು 'ಇಂಡಿಯಾ' ಕೂಟವನ್ನು ಸೇರುವ ಸಾಧ್ಯತೆಯಿದೆ. ಅವರನ್ನು ಮೈತ್ರಿಕೂಟಕ್ಕೆ ಸೇರಿಸಬೇಕೇ ಎಂಬುದನ್ನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ನಾಯಕರಾದ ರಾಹುಲ್ ಗಾಂಧಿ ಮತ್ತು ಸೋನಿಯಾ ಗಾಂಧಿ ಅವರನ್ನೊಳಗೊಂಡ ಕಾಂಗ್ರೆಸ್ ಹೈಕಮಾಂಡ್ ನಿರ್ಧರಿಸಲಿದೆ ಎಂದರು.

ಎನ್‌ಡಿಎ ಜತೆಗಿರುವ ಜೆಡಿಯು ಮುಖ್ಯಸ್ಥ ನಿತೀಶ್ ಕುಮಾರ್ ಮತ್ತು ಟಿಡಿಪಿ ಅಧ್ಯಕ್ಷ ಎನ್.ಚಂದ್ರಬಾಬು ನಾಯ್ಡು ಅವರಿಗೆ 'ಇಂಡಿಯಾ' ಮೈತ್ರಿಕೂಟದ ಬಾಗಿಲು ತೆರೆದಿದೆಯೇ ಎಂಬ ಪ್ರಶ್ನೆಗೆ, 'ನಿತೀಶ್ ಅವರು 'ಪಲ್ಟಿ ರಾಜಕಾರಣ'ಕ್ಕೆ ಹೆಸರುವಾಸಿಯಾಗಿದ್ದಾರೆ. ನಾಯ್ಡು ಅವರು 2019ರಲ್ಲಿ ಕಾಂಗ್ರೆಸ್ ಜತೆ ಮೈತ್ರಿ ಮಾಡಿಕೊಂಡಿದ್ದರು' ಎಂದರು.

'ಕಾಂಗ್ರೆಸ್ ಈ ಬಾರಿ ರಾಜಸ್ಥಾನ, ಕರ್ನಾಟಕ, ತೆಲಂಗಾಣ ಮತ್ತು ಮಹಾರಾಷ್ಟ್ರದಲ್ಲಿ ಹೆಚ್ಚಿನ ಸ್ಥಾನಗಳನ್ನು ಗೆಲ್ಲಲಿದೆ. ಛತ್ತೀಸಗಢ, ಮಧ್ಯಪ್ರದೇಶ ಮತ್ತು ಅಸ್ಸಾಂನಲ್ಲೂ ನಮ್ಮ ಬಲ ಹೆಚ್ಚಲಿದೆ' ಎಂದು ನುಡಿದರು.

'2004ರ ಲೋಕಸಭಾ ಚುನಾವಣೆಯ ಫಲಿತಾಂಶ ಮೇ 13ರಂದು ಹೊರಬಿದ್ದಿತ್ತು. ಮೇ 16ರಂದು ಯುಪಿಎ ರಚನೆಯಾಗಿತ್ತಲ್ಲದೆ, ಪ್ರಧಾನಿ ಹುದ್ದೆಗೆ ಮನಮೋಹನ್ ಸಿಂಗ್ ಅವರ ಹೆಸರನ್ನು ಮೇ 17ರಂದು ಸೂಚಿಸಲಾಗಿತ್ತು. ಅಂದರೆ, ಫಲಿತಾಂಶ ಹೊರಬಿದ್ದ ಕೆಲವೇ ದಿನಗಳ ಒಳಗಾಗಿ ಪ್ರಧಾನಿಯ ಆಯ್ಕೆ ನಡೆದಿತ್ತು. ಈ ಬಾರಿ ನಾವು ಅದಕ್ಕಾಗಿ (ಪ್ರಧಾನಿಯ ಆಯ್ಕೆಗೆ) 48 ಗಂಟೆಗಳನ್ನೂ ತೆಗೆದುಕೊಳ್ಳುವುದಿಲ್ಲ. ಮೈತ್ರಿಕೂಟದ ನಾಯಕನನ್ನು ಕೆಲವೇ ಗಂಟೆಗಳ ಒಳಗಾಗಿ ನಿರ್ಧರಿಸುತ್ತೇವೆ. ಹೆಚ್ಚು ಸ್ಥಾನಗಳನ್ನು ಪಡೆಯುವ ಪಕ್ಷವು ಸ್ವಾಭಾವಿಕವಾಗಿ ಮೈತ್ರಿಕೂಟದ ನಾಯಕತ್ವ ವಹಿಸಿಕೊಳ್ಳಲಿದೆ' ಎಂದು ಅಭಿಪ್ರಾಯಪಟ್ಟರು.

'ಅನುಮಾನ ಬಂದರೆ ಶಂಖ ಊದಿ'

ಬಶೀರ್‌ಹಾಟ್ (ಪಶ್ಚಿಮ ಬಂಗಾಳ) (ಪಿಟಿಐ): ಬಶೀರ್‌ಹಾಟ್ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಸಂದೇಶ್‌ಖಾಲಿ ಮತ್ತು ಇತರ ಪ್ರದೇಶಗಳಲ್ಲಿ ಮತದಾನ ನಡೆಯುವ ಜೂನ್ 1ಕ್ಕೂ ಮುನ್ನ ಯಾವುದೇ ಅನುಮಾನಾಸ್ಪದ ಚಟುವಟಿಕೆ ಕಂಡುಬಂದರೆ ಶಂಖ ಊದುವ ಮೂಲಕ ಸಂಕೇತ ನೀಡಿ ಎಂದು ಬಿಜೆಪಿ ನಾಯಕ ಸುವೇಂದು ಅಧಿಕಾರಿ ಮಹಿಳೆಯರಿಗೆ ಗುರುವಾರ ಕರೆ ನೀಡಿದರು.

ಬಿಜೆಪಿ ಅಭ್ಯರ್ಥಿ ರೇಖಾ ಪಾತ್ರಾ ಅವರ ಪರ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ಆಡಳಿತ ಪಕ್ಷಕ್ಕೆ ಮತ ಹಾಕುವಂತೆ ನಿವಾಸಿಗಳನ್ನು ಬೆದರಿಸಲು ಟಿಎಂಸಿ ನಿಯಂತ್ರಿತ ರಾಜ್ಯ ಪೊಲೀಸರು ಮತ್ತು ಇತರರು ಭೇಟಿ ನೀಡುವ ಸಾಧ್ಯತೆಗಳಿವೆ ಎಂದು ಹೇಳಿದರು.

ಇದಕ್ಕೆ ಪ್ರತಿಕ್ರಿಯಿಸಿರುವ ಟಿಎಂಸಿ ನಾಯಕ ಕುನಾಲ್ ಘೋಷ್, 'ಇಡೀ ಚುನಾವಣೆಯು ಚುನಾವಣಾ ಆಯೋಗದ ಕಣ್ಗಾವಲಿನಲ್ಲಿ ನಡೆಯುತ್ತಿದೆ. ಹೀಗಿರುವಾಗ ಟಿಎಂಸಿ ಮತ್ತು ರಾಜ್ಯ ಪೊಲೀಸರ ವಿರುದ್ಧ ಸುಳ್ಳುಗಳನ್ನು ಹರಡುವುದು ಸರಿಯಲ್ಲ. ಬಶೀರ್‌ಹಾಟ್ ಫಲಿತಾಂಶ ಏನಾಗುತ್ತದೆ ಎಂಬುದು ಬಿಜೆಪಿಗೆ ತಿಳಿದಿದೆ. ಹೀಗಾಗಿ ಅಪಪ್ರಚಾರದಲ್ಲಿ ತೊಡಗಿದೆ' ಎಂದು ಟೀಕಿಸಿದ್ದಾರೆ.

ಇವಿಎಂ ಭದ್ರತೆ: ದಿಗ್ವಿಜಯ್ ತೃಪ್ತಿ

ಆಗರ್ ಮಾಲ್ವಾ (ಪಿಟಿಐ): ವಿದ್ಯುನ್ಮಾನ ಮತ ಯಂತ್ರಗಳನ್ನು (ಇವಿಎಂ) ಸುರಕ್ಷಿತವಾಗಿ ಇರಿಸಲು ಮತ್ತು ಅವುಗಳ ಭದ್ರತೆಗೆ ಸಂಬಂಧಿಸಿದಂತೆ ಮಾಡಲಾಗಿರುವ ವ್ಯವಸ್ಥೆ ಕುರಿತು ತೃಪ್ತಿ ವ್ಯಕ್ತಪಡಿಸಿರುವ ಕಾಂಗ್ರೆಸ್‌ನ ಹಿರಿಯ ನಾಯಕ ದಿಗ್ವಿಜಯ ಸಿಂಗ್, ಮತಯಂತ್ರದಲ್ಲಿ 'ಹಸ್ತಕ್ಷೇಪ'ದ ಕೆಲಸಗಳು ಉನ್ನತ ಮಟ್ಟದಲ್ಲಿ ನಡೆಯುತ್ತವೆ ಎಂದು ಹೇಳಿದ್ದಾರೆ.

ಇವಿಎಂಗಳನ್ನು ಇರಿಸಲಾಗಿರುವ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿದರು.

'ಇವಿಎಂಗಳನ್ನು ಇರಿಸಿರುವ ಸ್ಟ್ರಾಂಗ್ ರೂಮ್‌ನಲ್ಲಿ ವಿದ್ಯುತ್ ಪೂರೈಕೆ ಸ್ಥಗಿತವಾಗಬಾರದು. ಈ ನಿಟ್ಟಿನಲ್ಲಿ ಸ್ಥಳೀಯ ಆಡಳಿತ ಎಚ್ಚರವಹಿಸಬೇಕು' ಎಂದು ಅವರು ಹೇಳಿದರು. ಸಿಂಗ್ ಅವರು ಈ ಹಿಂದೆ ಇವಿಎಂಗಳ ವಿಶ್ವಾಸಾರ್ಹತೆಯನ್ನು ಪ್ರಶ್ನಿಸಿದ್ದರು.

ಎಂಥಾ ಮಾತು!

ಬಿಜೆಪಿ ನಾಯಕರೊಬ್ಬರು 'ಜಗನ್ನಾಥ ದೇವರು ಮೋದಿ ಅವರ ಭಕ್ತ' ಎಂಬ ಹೇಳಿಕೆ ಕೊಟ್ಟಿದ್ದರು. ಆ ಮೂಲಕ ಬಿಜೆಪಿಯು ಒಡಿಶಾದ ಜನರಿಗೆ ಅವಮಾನ ಮಾಡಿದೆ. ಬಿಜೆಪಿ ಹಾಗೂ ಮಿತ್ರಪಕ್ಷಗಳು ಪ್ರಜಾಪ್ರಭುತ್ವ ಮತ್ತು ಸಂವಿಧಾನವನ್ನು ನಾಶಮಾಡಲು ಒಂದುಗೂಡಿವೆ. ಜಗತ್ತಿನ ಯಾವುದೇ ಶಕ್ತಿಗೂ ನಮ್ಮ ಸಂವಿಧಾನವನ್ನು ನಾಶಪಡಿಸಲು ಸಾಧ್ಯವಿಲ್ಲ

ರಾಹುಲ್ ಗಾಂಧಿ, ಕಾಂಗ್ರೆಸ್ ನಾಯಕ



'ಒಂದು ರಾಷ್ಟ್ರ, ಒಂದು ಚುನಾವಣೆ' ವ್ಯವಸ್ಥೆಯನ್ನು ಮುಂದಿನ ಐದು ವರ್ಷಗಳಲ್ಲಿ ಜಾರಿಗೊಳಿಸಲು ಎಲ್ಲ ಪ್ರಯತ್ನಗಳನ್ನೂ ಮಾಡುತ್ತೇವೆ. ಲೋಕಸಭಾ ಮತ್ತು ವಿವಿಧ ರಾಜ್ಯಗಳ ವಿಧಾನಸಭಾ ಚುನಾವಣೆಗಳು ಏಕಕಾಲಕ್ಕೆ ನಡೆಯಬೇಕು ಎಂಬುದು ಬಿಜೆಪಿಯ ಬಯಕೆ. ಬಿಜೆಪಿಯು ಹಿಂದೂ–ಮುಸ್ಲಿಂ ರಾಜಕಾರಣ ಮಾಡಿಲ್ಲ. ಹಿಂದೂ, ಮುಸ್ಲಿಂ, ಕ್ರೈಸ್ತರು ಒಳಗೊಂಡಂತೆ ಪ್ರತಿಯೊಬ್ಬರನ್ನೂ ನಾವು ಭಾರತದ ಪ್ರಜೆ ಎಂದು ಪರಿಗಣಿಸುತ್ತೇವೆ. ನಾವಾಗಲಿ, ನಮ್ಮ ಪ್ರಧಾನಿಯಾಗಲಿ ಧರ್ಮದ ಆಧಾರದಲ್ಲಿ ಎಂದೂ ತಾರತಮ್ಯ ಮಾಡಿಲ್ಲ

ರಾಜನಾಥ್ ಸಿಂಗ್, ಕೇಂದ್ರ ಸಚಿವ

ಭ್ರೂಣಹತ್ಯೆ: ಓದಿದ್ದು ಬರೀ ಪಿಯುಸಿ, ಮಹಾಲಿಂಗಪುರದಲ್ಲಿ ವಾಸವಿದ್ದರೂ ಮಹಾರಾಷ್ಟ್ರದ ನಂಟು

ಮೂರನೇ ಸಲ ಸಿಕ್ಕಿಬಿದ್ದ ಆರೋಪಿ

• ಬಸವರಾಜ ಹವಾಲ್ದಾರ

ಮಹಾಲಿಂಗಪುರದ ಕವಿತಾ ಬಾಡನವರ ಮನೆ ಮೇಲೆ 2022ರಲ್ಲಿ ದಾಳಿ ನಡೆಸಿದ ವೇಳೆ ಕವಿತಾ ವಿಚಾರಣೆ ಮಾಡುತ್ತಿರುವ ಅಂದಿನ ಡಿಎಚ್‌ಒ ಡಾ.ಜಯಶ್ರೀ –(ಸಂಗ್ರಹ ಚಿತ್ರ)

ಬಾಗಲಕೋಟೆ: ಜಿಲ್ಲೆಯ ಮಹಾಲಿಂಗಪುರದಲ್ಲಿ ಭ್ರೂಣಹತ್ಯೆ ಆರೋಪದ ಮೇಲೆ ಬಂಧಿತೆಯಾದ ಕವಿತಾ ಬಾಡನವರ ಓದಿದ್ದು ಪಿಯುಸಿ. ‘ತಜ್ಞೆ’ ಎಂದೇ ಬಿಂಬಿಸಿಕೊಂಡು ಭ್ರೂಣಹತ್ಯೆ ಪ್ರಕರಣದಲ್ಲಿ ಸಿಕ್ಕಿಬಿದ್ದಿದ್ದು ಮೂರನೇ ಸಲ.

‘ಮನೆಯಲ್ಲೇ ಸುಸಜ್ಜಿತ ವೈದ್ಯಕೀಯ ಕೊಠಡಿ ಹಾಗೂ ಔಷಧಗಳನ್ನು ಹೊಂದಿರುವ ಕವಿತಾ ಭ್ರೂಣಹತ್ಯೆಯಂಥ ಕೃತ್ಯದಲ್ಲಿ ತೊಡಗಿರುವುದು ಪ್ರಾಥಮಿಕ ಹಂತದ ತನಿಖೆಯಿಂದ ಗೊತ್ತಾಗಿದೆ. ಕೆಲ ವರ್ಷಗಳ ಹಿಂದೆ ಖಾಸಗಿ ಆಸ್ಪತ್ರೆಯಲ್ಲಿ ‘ಆಯಾ’ ಆಗಿ ಕೆಲಸ ಮಾಡಿದ್ದು, ಜೊತೆಗೆ ಹೊರ ಹಾಗೂ ರಾಜ್ಯದ ವೈದ್ಯರೊಂದಿಗೆ ನಂಟಿನಿಂದ ಇದೆಲ್ಲವೂ ಸಾಧ್ಯವಾಗಿದೆ’ ಎಂದು ಪೊಲೀಸ್ ಇಲಾಖೆ ಮೂಲಗಳು ತಿಳಿಸಿವೆ.

ಗರ್ಭಪಾತಕ್ಕೆ ಬೇಕಾದ ಸಲಕರಣೆಗಳ ಜೊತೆಗೆ, ಕೃತಕ ಹೆರಿಗೆ ನೋವು ಬರಿಸುವ ಮಾತ್ರೆ, ಗರ್ಭಪಾತಕ್ಕೆ ನೀಡುವ ಇಂಜೆಕ್ಷನ್, ಆ್ಯಂಟಿ ಬಯೋಟಿಕ್ ಗುಳಿಗೆ, ನೋವು ನಿವಾರಕ ಸೇರಿದಂತೆ ಹಲವು ಬಗೆಯ ಔಷಧಗಳು ಪತ್ತೆಯಾಗಿವೆ.

ಮಹಾರಾಷ್ಟ್ರದ ನಂಟು: ಮಹಾರಾಷ್ಟ್ರ ರಾಜ್ಯದ ಸೊಲ್ಲಾಪುರದ ಕವಿತಾ ಅಲ್ಲಿಯೇ ಪಿಯುಸಿ ಓದಿ, ಮದುವೆ ಬಳಿಕ ಪತಿಯ ಊರು ಮಹಾಲಿಂಗಪುರಕ್ಕೆ ಬಂದು ನೆಲೆಸಿದರು. ಭ್ರೂಣಹತ್ಯೆಗೆ ಸಂಬಂಧಿಸಿದಂತೆ ಎರಡು ಬಾರಿ ದಾಳಿಯಾದ ಬಳಿಕ ರಾಜ್ಯದ ಗರ್ಭಿಣಿಯರ ಬದಲು ಮಹಾರಾಷ್ಟ್ರದ ಗರ್ಭಿಣಿಯರನ್ನು ಗರ್ಭಪಾತಕ್ಕೆ ಗುರಿಯಾಗಿಸಿಕೊಂಡಿದ್ದು ಗೊತ್ತಾಗಿದೆ.

2019, 2022ರಲ್ಲಿ ಭ್ರೂಣಹತ್ಯೆ ಆರೋಪದ ಮೇಲೆ ಮನೆಯ ಮೇಲೆ ಆರೋಗ್ಯ ಇಲಾಖೆ ಅಧಿಕಾರಿಗಳು ದಾಳಿ ನಡೆಸಿದ ಬಳಿಕ ಸುಮ್ಮನಿದ್ದ ಕವಿತಾ ನಂತರ ಮತ್ತೆ ಭ್ರೂಣಹತ್ಯೆಯಲ್ಲಿ ತೊಡಗಿಸಿಕೊಂಡಿರುವುದು, ಕೊಲ್ಹಾಪುರ ಜಿಲ್ಲೆಯ ಅಳತೆ ಗ್ರಾಮದ ಸೋನಾಲಿ ಕದಮ್ ಸಾವಿನ ಮೂಲಕ ಖಚಿತವಾಗಿದೆ.

‘ಮರಾಠಿ ಭಾಷೆ ಗೊತ್ತಿದ್ದ ಕಾರಣ ಮಹಾರಾಷ್ಟ್ರದ ಗರ್ಭಿಣಿಯರ ಸಂಪರ್ಕ ಸುಲಭವಾಗಿತ್ತು. ಸೊಲ್ಲಾಪುರ, ಜತ್ತ, ಇಚಲಕರಂಜಿ, ಕೊಲ್ಹಾಪುರ ಕಾರ್ಯಕ್ಷೇತ್ರವಾಗಿತ್ತು’ ಎಂದು ಆರೋಗ್ಯ ಇಲಾಖೆ ಅಧಿಕಾರಿಗಳು ಹೇಳುತ್ತಾರೆ.

ಡಿಎಚ್‌ಒ ಸೇರಿ ಐವರಿಗೆ ನೋಟಿಸ್

ಮಹಾಲಿಂಗಪುರದಲ್ಲಿ ನಡೆದ ಭ್ರೂಣಹತ್ಯೆಗೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜಿಲ್ಲಾ ಆರೋಗ್ಯಾಧಿಕಾರಿ ಸೇರಿ ಐವರಿಗೆ ಕಾರಣ ಕೇಳಿ ನೋಟಿಸ್ ಜಿಲ್ಲಾಧಿಕಾರಿ ಜಾನಕಿ ಕೆ.ಎಂ. ನೀಡಿದ್ದಾರೆ.

ಜಿಲ್ಲಾ ಆರೋಗ್ಯಾಧಿಕಾರಿ ಡಾ.ರಾಜಕುಮಾರ ಯರಗಲ್, ಜಮಖಂಡಿ ಉಪವಿಭಾಗಾಧಿಕಾರಿ ಸಂತೋಷ ಕಾಮಗೌಡ, ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿ ಡಾ.ಡಿ.ಬಿ. ಪಟ್ಟಣಶೆಟ್ಟಿ, ಜಿಲ್ಲಾ ಆಸ್ಪತ್ರೆಯ ರೇಡಿಯಾಲಜಿಸ್ಟ್ ಡಾ.ಅನಿಲ ಕಾನಡೆ, ರಬಕವಿ–ಬನಹಟ್ಟಿ ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಗೈಬುಸಾಬ್ ಗಲಗಲಿ ಅವರಿಗೆ 24 ಗಂಟೆಗಳಲ್ಲಿ ಉತ್ತರಿಸಲು ಸೂಚಿಸಿದ್ದಾರೆ.

‘ಮಹಾಲಿಂಗಪುರದಲ್ಲಿ ಭ್ರೂಣಹತ್ಯೆಯ ಜತೆಗೆ ಗರ್ಭಿಣಿ ಮೃತಪಟ್ಟಿದ್ದಾರೆ. ಗರ್ಭಪೂರ್ವ ಮತ್ತು ಪ್ರಸವಪೂರ್ವ ಭ್ರೂಣಲಿಂಗ ಪತ್ತೆ ಕಾಯ್ದೆ ಸಕ್ಷಮ ಪ್ರಾಧಿಕಾರದಿಂದ ಕಾಯ್ದೆ ಸಮರ್ಪಕವಾಗಿ ಅನುಷ್ಠಾನಗೊಳಿಸಿಲ್ಲ. ಇಲಾಖೆ ಕೆಲಸದಲ್ಲಿ ಬೇಜವಾಬ್ದಾರಿ ಮತ್ತು ಕರ್ತವ್ಯ ನಿರ್ಲಕ್ಷ್ಯ ತೋರಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ’ ಎಂದು ಅವರು ತಿಳಿಸಿದ್ದಾರೆ.

ರಸ್ತೆಯಲ್ಲಿ ನಮಾಜ್: ಪ್ರಕರಣ ದಾಖಲಿಸಿದ್ದ ಪಿಐಗೆ ಕಡ್ಡಾಯ ರಜೆ

ಮಂಗಳೂರು: ಇಲ್ಲಿನ ಕಂಕನಾಡಿಯ ಮಸೀದಿಯೊಂದರ ಮುಂಭಾಗದ ರಸ್ತೆಯಲ್ಲಿ ಮೇ 24ರಂದು ನಮಾಜ್ ಮಾಡಿದ್ದರ ಸಂಬಂಧ ಸ್ವಯಂ ಪ್ರೇರಿತವಾಗಿ ಪ್ರಕರಣ ದಾಖಲಿಸಿಕೊಂಡಿದ್ದ ಕದ್ರಿ ನಗರ ಪೂರ್ವ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಸೋಮಶೇಖರ್ ಅವರಿಗೆ ಕಡ್ಡಾಯ ರಜೆ ನೀಡಲಾಗಿದೆ.

ಸಂಚಾರಕ್ಕೆ ಅಡೆತಡೆ ಮಾಡುವ ಉದ್ದೇಶ ಇಲ್ಲದ ನಮಾಜ್ ಮಾಡಿರುವುದರಿಂದ ಈ ಪ್ರಕರಣದಲ್ಲಿ ನ್ಯಾಯಾಲಯಕ್ಕೆ ‘ಬಿ ರಿಪೋರ್ಟ್’ ಸಲ್ಲಿಸಲಾಗಿದೆ. ಹಿರಿಯ ಅಧಿಕಾರಿಗಳಿಗೆ ಮಾಹಿತಿ ನೀಡದೆ ಪ್ರಕರಣ ದಾಖಲಿಸಿದ್ದ ಪೊಲೀಸ್ ಇನ್‌ಸ್ಪೆಕ್ಟರ್ ಅವರನ್ನು ಕಡ್ಡಾಯ ರಜೆಯಲ್ಲಿ ಕಳುಹಿಸಿ, ಎಸಿಪಿ ದರ್ಜೆಯ ಅಧಿಕಾರಿಯನ್ನು ವಿಚಾರಣೆಗೆ ನೇಮಕ ಮಾಡಲಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಅನುಪಮ್ ಅಗರ್‌ವಾಲ್ ತಿಳಿಸಿದ್ದಾರೆ.

ರಸ್ತೆಯಲ್ಲಿ ನಮಾಜ್ ಮಾಡಿದ ವಿಡಿಯೊ ತುಣುಕು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು. ಪೊಲೀಸರು ಸ್ವಯಂ ಪ್ರೇರಿತ ಪ್ರಕರಣ (ಐಪಿಸಿ ಸೆಕ್ಷನ್ 341,283,143,149) ದಾಖಲಿಸಿಕೊಂಡಿದ್ದರು. ಇದಕ್ಕೆ ಮುಸ್ಲಿಂ ಸಂಘಟನೆಗಳವರು, ಜಿಲ್ಲಾ ಕಾಂಗ್ರೆಸ್ ಅಲ್ಪಸಂಖ್ಯಾತ ಘಟಕದವರು ಆಕ್ಷೇಪ ವ್ಯಕ್ತಪಡಿಸಿ, ಪ್ರಕರಣ ವಾಪಸ್‌ಗೆ ಕ್ರಮ ಕೈಗೊಳ್ಳುವಂತೆ ಕೋರಿದ್ದರು.

‘ಮುಸ್ಲಿಂ ಸಂಘಟನೆಯ ಒತ್ತಡಕ್ಕೆ ಮಣಿದು, ಬಿ ವರದಿ ಸಲ್ಲಿಸಿದ್ದು ಸರಿಯಲ್ಲ’ ಎಂದು ವಿಎಚ್‌ಪಿ ಪ್ರಾಂತ ಸಹ ಕಾರ್ಯದರ್ಶಿ ಶರಣ್ ಪಂಪ್‌ವೆಲ್ ತಿಳಿಸಿದ್ದಾರೆ. ರಾಜ್ಯದಲ್ಲಿ ತುಷ್ಟೀಕರಣದ ರಾಜಕಾರಣ ನಡೆಯುತ್ತಿದೆ ಎಂದು ಅವರು ಹೇಳಿದ್ದಾರೆ.

ಶರಣ್ ಪಂಪ್‌ವೆಲ್ ವಿರುದ್ಧ ಪ್ರಕರಣ

ಇದೇ ವಿಷಯಕ್ಕೆ ಸಂಬಂಧಿಸಿದಂತೆ ಫೇಸ್‌ಬುಕ್‌ನಲ್ಲಿ ಪೋಸ್ಟ್ ಮಾಡಿದ ಆರೋಪದ ಮೇರೆಗೆ ವಿಶ್ವ ಹಿಂದೂ ಪರಿಷತ್ ಪ್ರಾಂತ ಸಹ ಕಾರ್ಯದರ್ಶಿ ಶರಣ್ ಪಂಪ್‌ವೆಲ್ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

‘ಮಂಗಳೂರಿನ ಕಂಕನಾಡಿ ಬಳಿ ಸಾರ್ವಜನಿಕರಿಗೆ ಉದ್ದೇಶಪೂರ್ವಕವಾಗಿ ತೊಂದರೆ ನೀಡಲು ನಡೆಸಿರುವ ನಮಾಜ್ ಬಗ್ಗೆ ಸಂಬಂಧಪಟ್ಟವರಿಗೆ ಈಗಾಗಲೇ ತಿಳಿಸಲಾಗಿದೆ. ಶುಕ್ರವಾರ ಮತ್ತೆ ಅದೇ ಜಾಗದಲ್ಲಿ ನಮಾಜ್ ನಡೆದರೆ ಬಜರಂಗದಳದ ಕಾರ್ಯಕರ್ತರು ನಿಲ್ಲಿಸುತ್ತಾರೆ’ ಎಂದು ಪೋಸ್ಟ್ ಮಾಡಲಾಗಿತ್ತು. ಇದು ಜನರಲ್ಲಿ ದ್ವೇಷ ಭಾವನೆ ಬಿತ್ತುವ ಮತ್ತು ಕಾನೂನು ಕೈಗೆತ್ತಿಕೊಳ್ಳುವ ಬೆದರಿಕೆ ಹಾಗೂ ಸಮಾಜದಲ್ಲಿ ಭಯ ಉಂಟುಮಾಡುವ ಪೋಸ್ಟ್ ಆಗಿದ್ದು, ಕೋಮು ಸೌಹಾರ್ದಕ್ಕೆ ಧಕ್ಕೆ ಉಂಟಾಗುವ ಸಾಧ್ಯತೆ ಇರುವುದರಿಂದ ಆ ವ್ಯಕ್ತಿಯ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸ್ ಕಮಿಷನರ್ ತಿಳಿಸಿದ್ದಾರೆ.

ಚೇತನ್, ಲಿಖಿತ್‌ಗೆ ಜಾಮೀನು

ಹಾಸನ: ಅಶ್ಲೀಲ ವಿಡಿಯೊಗಳಿದ್ದ ಪೆನ್ ಡ್ರೈವ್ ಹಂಚಿಕೆ ಪ್ರಕರಣದ ಆರೋಪಿಗಳಾದ ಚೇತನ್ ಹಾಗೂ ಲಿಖಿತ್‌ಗೌಡಗೆ ಗುರುವಾರ ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಜಾಮೀನು ಮಂಜೂರು ಮಾಡಿದೆ. ಗುರುವಾರ ಸಂಜೆ ಅಥವಾ ಶುಕ್ರವಾರ ಜೈಲಿನಿಂದ ಬಿಡುಗಡೆಯಾಗುವ ಸಾಧ್ಯತೆ ಇದೆ.

ಪ್ರಜಾವಾಣಿ
ಪತ್ರಿಕೆ ಚಂದಾದಾರಿಕೆ/ವಿತರಣೆಗೆ ಸಂಬಂಧಿಸಿದ ಸಮಸ್ಯೆಗಳಿಗೆ ಸಂಪರ್ಕಿಸಿ
(ವಿಳಂಬವಾಗಿ ಪತ್ರಿಕೆ ತಲುಪುವುದು, ಪತ್ರಿಕೆ ತಲುಪದೇ ಇರುವುದು, ನಿಯಮಿತವಾಗಿ ಪತ್ರಿಕೆ ಪೂರೈಕೆ ಆಗದಿರುವುದು)
: 9008366666
support@deccanherald.co.in

‘ನಾಗೇಂದ್ರ ತಲೆದಂಡಕ್ಕೆ ವಾರದ ಗಡುವು’

ಒಂದನೇ ಪುಟದಿಂದ...

ಬಿಜೆಪಿ ಮುಖಂಡ ಸಿ.ಟಿ.ರವಿ ಮಾತನಾಡಿ, ಚಂದ್ರಶೇಖರನ್ ಅವರು ಮರಣ ಪತ್ರ ಬರೆದಿಟ್ಟು, ಆತ್ಮಹತ್ಯೆ ಮಾಡಿಕೊಂಡು ನಾಲ್ಕು ದಿನಗಳು ಕಳೆದಿವೆ. ಆದರೂ ಎಫ್‌ಐಆರ್‌ನಲ್ಲಿ ಸಚಿವರ ಹೆಸರು ಉಲ್ಲೇಖಿಸಿಲ್ಲ. ಭ್ರಷ್ಟಾಚಾರದ ಕಲಂಗಳನ್ನೂ ಸೇರಿಸಿಲ್ಲ. ಎಸ್‌ಸಿ, ಎಸ್‌ಟಿ ಕಾಯ್ದೆಯಡಿ ಪ್ರಕರಣಗಳನ್ನು ತರಬೇಕಿದ್ದರೂ ಅದನ್ನು ಮಾಡಿಲ್ಲ. ಅದರ ಬದಲು ರಾಜಿ ಪಂಚಾಯಿತಿ ಮೂಲಕ ಹಗರಣವನ್ನು ಮುಚ್ಚಿ ಹಾಕುವ ಪ್ರಯತ್ನ ಮಾಡಿದೆ ಎಂದು ಹೇಳಿದರು.

ಸಚಿವರ ಮೌಖಿಕ ಸೂಚನೆ ಇದೆ ಎಂದು ಚಂದ್ರಶೇಖರನ್ ಮರಣಪತ್ರದಲ್ಲಿ ಉಲ್ಲೇಖಿಸಿದ್ದಾರೆ. ಇದಕ್ಕಿಂತ ಇನ್ನಾವ ಸಾಕ್ಷ್ಯ ಬೇಕು? ಇಷ್ಟು ದೊಡ್ಡ ಹಗರಣ ದೊಡ್ಡವರ ಬಲ ಇಲ್ಲದೇ ನಡೆಯಲು ಸಾಧ್ಯವೇ ಎಂದು ಅವರು ಪ್ರಶ್ನಿಸಿದರು.

ಮಾಜಿ ಸಚಿವ ಗೋವಿಂದ ಕಾರಜೋಳ ಮಾತನಾಡಿ, ಅಧಿಕಾರಿಗಳು ಈಗ ಬ್ಯಾಂಕ್ ಅಧಿಕಾರಿಗಳ ಮೇಲೆ ಆರೋಪ ಹೊರಿಸಿದ್ದಾರೆ. ಬ್ಯಾಂಕ್ ಅಧಿಕಾರಿಗಳು ಸರ್ಕಾರದ ಹಣವನ್ನು ಬೇಕಾಬಿಟ್ಟಿ ವರ್ಗಾವಣೆ ಮಾಡಲು ಸಾಧ್ಯವಿಲ್ಲ. ಆರ್‌ಬಿಐನಲ್ಲಿ ವಿಜಿಲೆನ್ಸ್ ವಿಭಾಗ ಇದೆ. ಅವರೂ ತನಿಖೆ ಮಾಡುತ್ತಾರೆ. ಈ ಹಗರಣ ಅಂತರ್ ರಾಜ್ಯ ಮಟ್ಟದಲ್ಲಿ ನಡೆದಿರುವುದರಿಂದ ಸಿಬಿಐ ತನಿಖೆಯೇ ಸೂಕ್ತ ಎಂದರು.

ಲೋಕಸಭಾ ಚುನಾವಣೆಗಾಗಿ ಹಣ ವರ್ಗಾವಣೆಯೇ : ವಿಜಯೇಂದ್ರ ಪ್ರಶ್ನೆ

ಒಂದನೇ ಪುಟದಿಂದ..

ಮೇಲ್ನೋಟಕ್ಕೆ ಕಾಣುವಂತೆ ಇದು ಬರೀ ನಿಗಮದ ಅಧಿಕಾರಿಯೊಬ್ಬರ ಆತ್ಮಹತ್ಯೆ ಪ್ರಕರಣ ಅಲ್ಲ. ಇದರ ಹಿಂದೆ ದೊಡ್ಡ ದೊಡ್ಡ ಕುಳಗಳ ಕೈವಾಡ ಇದೆ. ಅದನ್ನು ಬರೀ ಸಿಐಡಿ ಇಲ್ಲವೇ ಎಸ್‌ಐಟಿ ತನಿಖೆಯಿಂದ ಹೊರತರಲು ಸಾಧ್ಯವಿಲ್ಲ. ಹೀಗಾಗಿ ಸಿಬಿಐ ತನಿಖೆಗೆ ಒತ್ತಾಯಿಸುತ್ತಿದ್ದೇವೆ ಎಂದರು.

ಇಲಾಖೆಯ ಸಚಿವರ ಗಮನಕ್ಕೆ ಬಾರದೇ ನಿಗಮದಲ್ಲಿ ಇಷ್ಟೊಂದು ದೊಡ್ಡ ಅವ್ಯವಹಾರ ನಡೆಯಲು ಸಾಧ್ಯವೇ ಇಲ್ಲ. ಇದರ ನೈತಿಕ ಹೊಣೆ ಹೊತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಚಿವ ಬಿ.ನಾಗೇಂದ್ರ ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ತನಿಖೆ ಎದುರಿಸಲಿ. ಮುಖ್ಯಮಂತ್ರಿ ಸಿದ್ದರಾಮಯ್ಯ ಸಚಿವರ ರಾಜೀನಾಮೆ ಪಡೆಯಲಿ ಎಂದರು.

2,700 ಕೆ.ಜಿ ಕಳಪೆ ಬಿತ್ತನೆ ಬೀಜ ಜಪ್ತಿ

ಪ್ರಜಾವಾಣಿ ವಾರ್ತೆ

ರಾಣೆಬೆನ್ನೂರು (ಹಾವೇರಿ ಜಿಲ್ಲೆ): ಮುಂಗಾರು ಹಂಗಾಮಿಗೆ ಬಿತ್ತನೆಗೆ ಮಾರಾಟ ಮಾಡಲು ತಾಲ್ಲೂಕಿನ ಅಂತರವಳ್ಳಿ ಗ್ರಾಮದಲ್ಲಿ ಅನಧಿಕೃತವಾಗಿ ದಾಸ್ತಾನು ಮಾಡಿದ್ದ 50 ಕೆಜಿ ತೂಕದ ಒಟ್ಟು 54 ಚೀಲಗಳಲ್ಲಿ ಸಂಗ್ರಹಿಸಿಟ್ಟಿದ್ದ 2,700 ಕೆಜಿ ಬಿತ್ತನೆ ಬೀಜಗಳನ್ನು ವಶಪಡಿಸಿಕೊಳ್ಳಲಾಗಿದೆ.

ಕೃಷ್ಣಪ್ಪ ರಾಯಪ್ಪ ವಡೇರಹಳ್ಳಿ ಎಂಬುವರ ವಾಸದ ಮನೆಯಲ್ಲಿ ಇವುಗಳನ್ನು ಸಂಗ್ರಹಿಸಲಾಗಿದ್ದು ಸಹಾಯಕ ಕೃಷಿ ಅಧಿಕಾರಿ ಶಾಂತಮಣಿ ಜಿ. ಹಾಗೂ ಅವರ ತಂಡ ಬುಧವಾರ ದಾಳಿ ನಡೆಸಿ, ವಶಪಡಿಸಿಕೊಂಡಿದೆ. ಹಲಗೇರಿ ಠಾಣೆ ಪೊಲೀಸರು ದಾಳಿಯಲ್ಲಿ ಪಾಲ್ಗೊಂಡಿದ್ದರು.

‘ಪಟ್ಟಣದಲ್ಲಿ ಅನಧಿಕೃತವಾಗಿ ಕಳಪೆ ಬಿತ್ತನೆ ಬೀಜಗಳನ್ನು ಮಾರುತ್ತಿರುವುದು ಕಂಡು ಬಂದಿದೆ. ಈ ಬೀಜಗಳು ಸಂಪೂರ್ಣ ಕಳಪೆಯಾಗಿದ್ದು, ಮಾರುಕಟ್ಟೆಯಲ್ಲಿ ಇಂತಹ ಬೀಜಗಳನ್ನು ಖರೀದಿಸಿ ರೈತರು ಮೋಸ ಹೋಗಬಾರದು’ ಎಂದು ಸಹಾಯಕ ಕೃಷಿ ನಿರ್ದೇಶಕಿ ಶಾಂತಮಣಿ ತಿಳಿಸಿದ್ದಾರೆ.

ತನಿಖೆ: ಸಿಬಿಐಗೆ ದೂರು ನೀಡಿದ ಬ್ಯಾಂಕ್

ಬೆಂಗಳೂರು(ಪಿಟಿಐ): ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರ ಕುರಿತು ಸಮಗ್ರ ತನಿಖೆ ಹಾಗೂ ತಪ್ಪಿತಸ್ಥರನ್ನು ಪತ್ತೆ ಮಾಡುವುದಕ್ಕಾಗಿ ಸಿಬಿಐಗೆ ದೂರು ನೀಡಲಾಗಿದೆ ಎಂದು ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಈ ಕುರಿತು ಗುರುವಾರ ನೀಡಿರುವ ಪ್ರಕಟಣೆಯಲ್ಲಿ ತಿಳಿಸಿದೆ.

‘ನಿಧಿ’ ಬಳಕೆ: ಶಾಸಕರ ನಿರಾಸಕ್ತಿ

ಒಂದನೇ ಪುಟದಿಂದ...

ಜಿಲ್ಲಾ ಉಸ್ತುವಾರಿ ಸಚಿವರು, ಸಂಬಂಧಪಟ್ಟ ಶಾಸಕರು, ಅನುಷ್ಠಾನ ಇಲಾಖೆ, ಏಜೆನ್ಸಿಗಳಾದ ಲೋಕೋಪಯೋಗಿ ಇಲಾಖೆ, ಪಂಚಾಯತ್‌ರಾಜ್ ಎಂಜಿನಿಯರಿಂಗ್ ಇಲಾಖೆ, ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮದ ಜೊತೆ ಜಿಲ್ಲಾಮಟ್ಟದಲ್ಲಿ ಸಭೆ ನಡೆಸಬೇಕು. ಕೆಡಿಪಿ ಸಭೆಗಳಲ್ಲಿ ಪ್ರಗತಿ ಪರಿಶೀಲನೆ ಮಾಡಬೇಕು ಎಂದೂ ಮುಖ್ಯಮಂತ್ರಿ ಸೂಚಿಸಿದ್ದಾರೆ.

ಯೋಜನೆಯ ಮಾರ್ಗಸೂಚಿ ಅನ್ವಯ, ಪ್ರತಿ ವರ್ಷ ಜೂನ್ ತಿಂಗಳ ಒಳಗೆ ಎಲ್ಲ ಶಾಸಕರು ತಮ್ಮ ಕ್ಷೇತ್ರದ ಅಭಿವೃದ್ಧಿಗೆ ಸಂಬಂಧಿಸಿ ತಲಾ ₹2 ಕೋಟಿವರೆಗಿನ ಪ್ರಸ್ತಾವಗಳನ್ನು ಜಿಲ್ಲಾಧಿಕಾರಿಗಳಿಗೆ ನೀಡಬೇಕು ಮತ್ತು ಪ್ರಸ್ತಾವಿತ ಕಾಮಗಾರಿಯನ್ನು ಎರಡು ವರ್ಷದ ಒಳಗೆ ಪೂರ್ಣಗೊಳಿಸಬೇಕಾಗಿದೆ. ಆದರೆ, ಸಾವಿರಾರು ಕಾಮಗಾರಿಗಳು ಹಲವು ವರ್ಷಗಳಿಂದ ಪೂರ್ಣಗೊಳ್ಳದೆ ಬಾಕಿ ಇರುವುದು ಗೊತ್ತಾಗಿದೆ.

‘ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯ ಅನುದಾನದಲ್ಲಿ ಕ್ಷೇತ್ರದಲ್ಲಿ ಕೈಗೊಳ್ಳಬೇಕಾದ ಅಭಿವೃದ್ಧಿ ಕೆಲಸಗಳಿಗೆ ಸಂಬಂಧಿಸಿದಂತೆ ಹಲವು ಶಾಸಕರು ಹಿಂದಿನ ವರ್ಷದ ಶೇ 100ರಷ್ಟು ಕ್ರಿಯಾಯೋಜನೆಗಳನ್ನು ನೀಡಿಲ್ಲ. ಜಾಗದ ಸಮಸ್ಯೆ ಸೇರಿ ನಾನಾ ಕಾರಣಗಳಿಗೆ ಎರಡು ವರ್ಷಕ್ಕೂ ಹೆಚ್ಚು ಅವಧಿಯಿಂದ ಆರಂಭವಾಗದ ಕಾಮಗಾರಿಗಳನ್ನು ಕೈಬಿಟ್ಟು ಹೊಸ ಪ್ರಸ್ತಾವ ಸಲ್ಲಿಸದೇ ಇರುವುದರಿಂದ ಅನುದಾನ ವೆಚ್ಚವಾಗದೆ ಉಳಿದಿದೆ’ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

ದೆಹಲಿಯಲ್ಲಿ 45.6 ಡಿಗ್ರಿ ತಾಪಮಾನ

ನವದೆಹಲಿ (ಪಿಟಿಐ): ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಗುರುವಾರ ದಾಖಲಾದ ಗರಿಷ್ಠ ತಾಪಮಾನ 45.6 ಡಿಗ್ರಿ ಸೆಲ್ಸಿಯಸ್ ಆಗಿತ್ತು. ಇದು ವಾಡಿಕೆಯ ತಾಪಮಾನಕ್ಕಿಂತ 5.2 ಡಿಗ್ರಿಯಷ್ಟು ಹೆಚ್ಚು ಎಂದು ಹವಾಮಾನ ಇಲಾಖೆ ತಿಳಿಸಿದೆ.

ದೆಹಲಿಯು ಕಳೆದ ನಾಲ್ಕು ದಿನಗಳಿಂದ ಉಷ್ಣಗಾಳಿಯ ಪ್ರಕೋಪಕ್ಕೆ ತುತ್ತಾಗಿದೆ. ದೆಹಲಿಯ ಸಫ್ದರ್‌ಜಂಗ್ ಅಬ್ಸರ್ವೇಟರಿಯಲ್ಲಿ ಗುರುವಾರ ದಾಖಲಾಗಿರುವುದು ಈ ಬಾರಿಯ ಬೇಸಿಗೆಯ ಎರಡನೆಯ ಅತಿಹೆಚ್ಚಿನ ತಾಪಮಾನ.

ದೆಹಲಿಯ ಮಂಗೇಶಪುರದಲ್ಲಿ ಬುಧವಾರ ಗರಿಷ್ಠ 52.9 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿತ್ತು. ಇದು ದೇಶದಲ್ಲಿ ದಾಖಲಾದ ಅತಿಹೆಚ್ಚಿನ ತಾಪಮಾನ. ಈ ವಿಚಾರವಾಗಿ ಹೇಳಿಕೆಯೊಂದನ್ನು ಬಿಡುಗಡೆ ಮಾಡಿರುವ ಹವಾಮಾನ ಇಲಾಖೆಯ ಅಧಿಕಾರಿಗಳು, ಅಲ್ಲಿ ತಾಪಮಾನವನ್ನು ದಾಖಲಿಸುವಲ್ಲಿ ಏನಾದರೂ ದೋಷಗಳು ಆಗಿವೆಯೇ ಎಂಬುದನ್ನು ಪರಿಶೀಲಿಸುವ ಕೆಲಸ ನಡೆದಿದೆ ಎಂದು ಹೇಳಿದ್ದಾರೆ.

ಚಿನ್ನ ಕಳ್ಳಸಾಗಣೆ: ಶಶಿ ತರೂರ್ ಮಾಜಿ ಸಹಾಯಕ ಕಸ್ಟಮ್ಸ್ ವಶಕ್ಕೆ

ನವದೆಹಲಿ (ಪಿಟಿಐ): ಸುಮಾರು ₹35 ಲಕ್ಷ ಮೌಲ್ಯದ ಚಿನ್ನ ಕಳ್ಳಸಾಗಣೆ ಆರೋಪದ ಪ್ರಕರಣದಲ್ಲಿ ಕಾಂಗ್ರೆಸ್‌ನ ಮಾಜಿ ಸಂಸದ ಶಶಿ ತರೂರ್ ಅವರ ಮಾಜಿ ಸಹಾಯಕ ಮತ್ತು ಇನ್ನೊಬ್ಬ ವ್ಯಕ್ತಿಯನ್ನು ಇಲ್ಲಿನ ಇಂದಿರಾ ಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕಸ್ಟಮ್ಸ್ ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ. ಬುಧವಾರ ಬ್ಯಾಂಕಾಕ್‌ನಿಂದ ಭಾರತಕ್ಕೆ ಮರಳಿದ ತರೂರು ಆಪ್ತನಿಂದ 500 ಗ್ರಾಂ ತೂಕದ ಚಿನ್ನದ ಸರ ವಶಪಡಿಸಿಕೊಳ್ಳಲಾಗಿದೆ.

THE FEDERAL BANK LIMITED
Regd. Office: Aluva, Kerala.
ZONAL OFFICE: 1st Floor, Halcyon Complex, No.9, St Marks Road, Bangalore-560 001.
e-mail:bgrr-cpc@federalbank.co.in Ph:080-22074610//24/25

BGRR/Online Auction/2024-25 PUBLIC NOTICE GOLD AUCTION 30/05/2024

Notice is hereby given to the public in general and the account holders in particular that e-auction of the pledged gold ornaments in the below mentioned account/s will be conducted by Federal Bank Ltd, on 18.06.2024 through online portal, https://gold.samil.in interested buyers may log on to the auction portal or contact the Bank at contact@federalbank.co.in for further information. In case e-auction is not materialised for any reason on the date mentioned above, with respect any or all items of the of the pledged ornaments, Bank shall be conducting private sale of the items on any susequent date/s without further notise.

Br.Bangalore/Banaswadi:-14716500001859,14716500002501,14716800038411,14716800050952,14716800051398. Br. Bangalore/Jalahalli :-15826100622480,15826200076009,15826800030513,15826800043037. Br. Bangalore/Basavanagudi :-13186800019400,13186800019681. Br. Shimoga:- 15906800012818. Br.Bng/HSR Layout:-17696800045524,17696800053056,17696800054773,17696800055838,17696800056208,17696800056471,17696800058352,17696800060093,17696800060416,17696800062503,17696800078640. Br.Bng/J P Nagar:-18276800063337,18276800064749,18276800065746,18276800067429,18276800082899,18276800083855,18276800083863,18276800084689,18276800086049,18276800086817,18276800088144,18276800089134,18276800091635,18276800103745,18276800106672,18276800106722. Br. Bangalore/Krishnarajapuram :- 15616800014561,15616800016533,15616800020543. Br. Bangalore/Rajajinagar :- 13346800052492,13346800052849,13346800053540,13346800056881. Br. Bangalore / R T Nagar :- 14726100216500,14726100216534,14726800038287,14726800039491,14726800040606,14726800040747,14726800041737. Br. Bangalore/Marathahalli :- 14546800006666. Br. Bangalore/Vijayanagar :- 16436800058180,16436800074815,16436800076950,16436800077040. Br. Bangalore/Visweswaraya layout:- 21676800004832,21676800005805,21676800006464,21676800006498,21676800006712,21676800007140,21676800007322,21676800007363,21676800007504,21676800007546,21676800007587,21676800007595,21676800007645,21676800007652,21676800007843,21676800007918,21676800007926,21676800007975,21676800007983,21676800008213,21676800008320,21676800008346,21676800008643,21676800008650,21676800008676,21676800009302,21676800009666. Br. Mysore/Jayalakshmipuram :- 16896800019708,16896800021019. Br. Bangalore/St. Marks Road:- 11046800000705. Br. Bangalore/Vignan Nagar :-16296800003275. Br.Bangalore/Kodathi Ghate:- 21716800001931. Br. Bng / Sadashiva Nagar :- 21986800014750. Br. Mysore :- 12816800016730,12816800017878,12816800017027. Br. Hassan :- 13546800014992,13546800015080,13546800016146,13546800016625,13546800017680,13546800020916,13546800021120. Br. Bangalore / Thirumalashettyhalli :- 22626800001048. Br. Bangalore / Wipro Park Koramangala :- 21996800014718,21996800019063.

Bangalore 30-05-2024 For The Federal Bank Ltd Senior Vice President & Zonal Head

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ತೋಟಗಾರಿಕೆ ಉಪನಿರ್ದೇಶಕರವರ ಕಚೇರಿ, ಅನೆಕ್ಸ್–3 ಕಟ್ಟಡ, ಬಿಬಿಎಂಪಿ ಕೇಂದ್ರ ಕಚೇರಿ, ಎನ್.ಆರ್. ಚೌಕ, ಬೆಂಗಳೂರು.
ಸಂಖ್ಯೆ:ತೋಉನಿ/ಟೆಂಡರ್/01/2023-24 ದಿನಾಂಕ: 29-05-2024
ಟೆಂಡರ್ ಪ್ರಕಟಣೆ (ಐಎಫ್‌ಟಿ): 2ನೇ ಕರೆ
(ದ್ವಿ ಲಕೋಟೆ ಪದ್ಧತಿ) ಕೆಡಬ್ಲ್ಯೂ–1 ರಿಂದ 4 (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)
ತೋಟಗಾರಿಕೆ ಉಪನಿರ್ದೇಶಕರು, (ಈ ದಾಖಲೆಗಳಲ್ಲಿ ಉದ್ಯೋಗದಾತ ಎಂದು ಉಲ್ಲೇಖಿಸಲಾಗಿದೆ) ಕೆಟಿಪಿಪಿ ನಿಯಮಗಳು 2000 ರ ಅನುಸಾರವಾಗಿ ಕಾರ್ಮಿಕ ಇಲಾಖೆಯಲ್ಲಿ ನೋಂದಾಯಿತ ಅರ್ಹ ಮತ್ತು ಅನುಭವಿ ವ್ಯಕ್ತಿಗಳು / ಏಜೆನ್ಸಿಗಳು / ಸಂಸ್ಥೆಗಳಿಂದ (ಈ ದಾಖಲೆಗಳಲ್ಲಿ ಟೆಂಡರ್‌ದಾರರು ಎಂದು ಉಲ್ಲೇಖಿಸಲಾಗಿದೆ) ಉದ್ಯಾನವನಗಳ ನಿರ್ವಹಣೆಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರ್‌ನ ಅಂದಾಜು ವೆಚ್ಚ (ರೂ. ಗಳಲ್ಲಿ)	ಇಎಂಡಿ ಮೊತ್ತ (ರೂ. ಗಳಲ್ಲಿ)
1.	ಉದ್ಯಾನವನಗಳ ಸುತ್ತಲಿನ ಹಾಟ್‌ಸ್ಪಾಟ್ ಪ್ರದೇಶವನ್ನು ಗುರುತಿಸುವ ಮೂಲಕ ಉದ್ಯಾನವನದ ಉದ್ದಕ್ಕೂ ಹಸಿರಿಗೆ ಒತ್ತು ನೀಡುವ ಮೂಲಕ ತೋಟಗಾರಿಕೆ ಇಲಾಖೆಯಿಂದ ಹೊಸ ಉದ್ಯಾನವನಗಳನ್ನು ಅಭಿವೃದ್ಧಿಪಡಿಸುವುದು (ಪ್ಯಾಕೇಜ್ 2).	7,00,00,000/-.	10,50,000/-.

ಟೆಂಡರ್‌ನ ಕಾರ್ಯಸೂಚಿ: 1) ಪ್ರಕಟಣೆ ದಿನಾಂಕ: 30-05-2024. 2) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ದಿನಾಂಕ: 31-05-2024 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 3) ಪೂರ್ವ ಬಿಡ್ ಸಭೆಯನ್ನು ದಿನಾಂಕ: 07-06-2024 ರಂದು ಬೆಳಗ್ಗೆ 11:30 ಗಂಟೆಗೆ ನಡೆಸಲಾಗುವುದು. 4) ಟೆಂಡರ್ ಮುಚ್ಚುವ ದಿನಾಂಕ: 13-06-2024 ರ ಸಂಜೆ 4:30 ಗಂಟೆಗೆ. 5) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 14-06-2024ರ ಸಂಜೆ 4:30 ಗಂಟೆಗೆ. 6) ಆರ್ಥಿಕ ಬಿಡ್ ತೆರೆಯುವ ದಿನಾಂಕ: ತಾಂತ್ರಿಕ ಬಿಡ್‌ನ ಅನುಮೋದನೆಯ ನಂತರ. 7) ಈ ಟೆಂಡರ್ ಸೂಚನೆಯನ್ನು ಬೃಬೆಂಮಪಾಲಿಕೆಯ ವೆಬ್‌ಸೈಟ್: www.bbmp.gov.in ನಲ್ಲಿಯೂ ನೋಡಬಹುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಕೆಲಸದ ದಿನದಂದು ಕಛೇರಿ ವೇಳೆಯಲ್ಲಿ ಪಡೆಯಬಹುದು ಅಥವಾ ವೆಬ್‌ಸೈಟ್‌ಗೆ https://kppp.karnataka.gov.in ಇಲ್ಲಿಗೆ ಲಾಗಿನ್‌ಮಾಡಿ ಪಡೆಯಬಹುದು.
ಸಹಿ/– ತೋಟಗಾರಿಕೆ ಉಪನಿರ್ದೇಶಕರು, ಬೃಬೆಂಮಪಾ.

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
Ref: 1) No: EE/ UTP/PB-3/2024-25/318 Dated: 28-05-2024
ಅಲ್ಪಾವಧಿ ಟೆಂಡರ್ ಪ್ರಕಟಣೆ ಕರೆ (KPPP ಪೋರ್ಟಲ್ ಮುಖಾಂತರ)
ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರರು, ಕನೀನಿನಿ, ತುಂ.ಮೇ.ಯೋಜನಾ ವಿಭಾಗ, ರಾಣೇಬೆನ್ನೂರು ಇವರು KPP–ಪೋರ್ಟಲ್ ಮುಖಾಂತರ ಅರ್ಹ ಗುತ್ತಿಗೆದಾರರಿಂದ ಉಲ್ಲೇಖಿತ ಪತ್ರ (1) ರನ್ವಯ ಒಟ್ಟು ರೂ 42.13 (ಜಿಎಸ್‌ಟಿ ಹೊರತುಪಡಿಸಿ) ಲಕ್ಷ ಮೊತ್ತದ 4701 ಲೆಕ್ಕ ಶೀರ್ಷಿಕೆಯ ಕಾಮಗಾರಿಯ ಟೆಂಡರ್ ಆಹ್ವಾನಿಸಲಾಗಿದೆ ಟೆಂಡರ್ ಅಕ್ಸೆಸ್ ಮಾಡುವ ದಿನಾಂಕ: 29–05–2024 to 06–06–2024 ರ ಸಂಜೆ 5.00ರ ವರೆಗೆ ಇರುವುದು. ಟೆಂಡರ್ ಬಗ್ಗೆ ವಿಚಾರಣೆಗೆ ಕೊನೆಯ ದಿನಾಂಕ:03–06–2024ಸಂಜೆ 4.00ರ ವರೆಗೆ ಇರುತ್ತದೆ. ದಿನಾಂಕ:07–06–2024ರಂದು ಸಂಜೆ 5.30 ಗಂಟೆಗೆ ತಾಂತ್ರಿಕ/ಆರ್ಥಿಕ ಬಿಡ್‌ನ್ನು ಕಾರ್ಯನಿರ್ವಾಹಕ ಇಂಜನೀಯರರು, ಕನೀನಿನಿ, ತುಂ.ಮೇ.ಯೋಜನಾ ವಿಭಾಗ, ರಾಣೇಬೆನ್ನೂರು ಇವರ ಕಚೇರಿಯಲ್ಲಿ ತೆರೆಯಲಾಗುವುದು. ಆರ್ಥಿಕ ಬಿಡ್‌ನ್ನು ತಾಂತ್ರಿಕ ಬಿಡ್ ಅನುಮೋದನೆ ನಂತರ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು KPPP-ಪೋರ್ಟಲ್ ಮುಖಾಂತರ ನೋಡಿಕೊಳ್ಳತಕ್ಕದ್ದು.
ಸದರಿ ಟೆಂಡರ್‌ನಲ್ಲಿ ಏನಾದರೂ ತಿದ್ದುಪಡಿ ಮಾಡಿದಲ್ಲಿ ಇ-ಪ್ರೊಕ್ಯುರ್‌ಮೆಂಟ್ ಪೋರ್ಟಲ್‌ನಲ್ಲಿ/ ದಿನ ಪತ್ರಿಕೆಗಳಲ್ಲಿ ಪ್ರಚುರ ಪಡಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಈ ಕಚೇರಿ ದೂರವಾಣಿ ಸಂ. (08373) 297332 ಕ್ಕೆ ಸಂಪರ್ಕಿಸುವುದು. ಟೆಂಡರ್ ಅಂಗೀಕರಿಸುವ ಅಧಿಕಾರಿಯು ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ರದ್ದು ಪಡಿಸುವ ಅಧಿಕಾರ ಹೊಂದಿರುತ್ತಾರೆ.
ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು(ಪ್ರ), ಕನೀನಿನಿ, ತುಂ.ಮೇ.ಯೋಜನಾ ವಿಭಾಗ, ರಾಣೇಬೆನ್ನೂರು.
34

ಕಾರ್ಮಿಕ ಇಲಾಖೆ
“ಕಾರ್ಮಿಕ ಭವನ” ಡೈರಿ ಸರ್ಕಲ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು–560 029
ದೂರವಾಣಿ ಸಂ: 29753078 ಇಮೇಲ್: labour.commissioner42@gmail.com
ವೆಬ್‌ಸೈಟ್: karmikaspandana@karnataka.gov.in
ಸಂ:ಎನ್‌ಜಿಒ–03/ಸಿಆರ್–40/2023–24 ದಿನಾಂಕ: 28.05.2024
ಇ–ಟೆಂಡರ್ ಪ್ರಕಟಣೆ
ಕಾರ್ಮಿಕ ಆಯುಕ್ತರು, ಬೆಂಗಳೂರು ಇವರು ಕಾರ್ಮಿಕ ಇಲಾಖೆಗೆ ಹೊರಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿಗಳನ್ನು ಪೂರೈಸಲು ಸೂಕ್ತ ಸಂಸ್ಥೆಯನ್ನು ಆಯ್ಕೆ ಮಾಡುವ ಉದ್ದೇಶಕ್ಕಾಗಿ, ಇ–ಆಡಳಿತ ಇಲಾಖೆಯ, ಇ–ಸಂಗ್ರಹಣಾ ವೇದಿಕೆಯ ಮುಖಾಂತರ ಪ್ರತ್ಯೇಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಬಿಡ್ ಸಲ್ಲಿಸಲು ಕೊನೆಯ ದಿನಾಂಕ: 05.06.2024 ರ ಸಾಯಂಕಾಲ 5.30 ಗಂಟೆ ಆಗಿರುತ್ತದೆ. ಹೆಚ್ಚಿನ ಮಾಹಿತಿ ಮತ್ತು ವಿವರಗಳನ್ನು ಇ–ಸಂಗ್ರಹಣಾ ವೇದಿಕೆಯ ವೆಬ್‌ಸೈಟ್ www.kppp.karnataka.gov.in ನಲ್ಲಿ ಪಡೆಯಬಹುದಾಗಿದೆ.
ಸಹಿ/– ಆಯುಕ್ತರು ಕಾರ್ಮಿಕ ಇಲಾಖೆ
ವಾ.ಸಾ.ಸಂ.ಇ/ವಾಪ್ರ/147/ಆಕಾರ್/2024–25

ಮಹಾನಿರ್ದೇಶಕರ ಕಛೇರಿ
ಕಾರಾಗೃಹ ಮತ್ತು ಸುಧಾರಣಾ ಸೇವೆ
ನಂ.4, ಶೇಷಾದ್ರಿ ರಸ್ತೆ, ಬೆಂಗಳೂರು – 560009.
ದೂ: 080–22262263 ಇ–ಮೇಲ್: phq.prisons-kar@gov.in
No: PCSD/2024-25/SE0012/Call-3 Date: 24.05.2024
ಟೆಂಡರ್ ಪ್ರಕಟಣೆ
ಕಾರಾಗೃಹ ಮತ್ತು ಸುಧಾರಣಾ ಸೇವಾ ಇಲಾಖೆಯ ವಿವಿಧ ಕೇಂದ್ರ ಮತ್ತು ಜಿಲ್ಲಾ ಕಾರಾಗೃಹಗಳಿಗೆ Towers of the Harmonious Call Blocking System (T-HCBS) ಗಳ ಸರಬರಾಜು, ಅಳವಡಿಕೆ ಮತ್ತು ನಿರ್ವಹಣೆಗಾಗಿ ಕರೆ–3 ರ ಮೂಲಕ ಆನ್‌ಲೈನ್ ಟೆಂಡರ್‌ಗಳನ್ನು ಈ ಕೆಳಕಂಡಂತೆ ಆಹ್ವಾನಿಸಲಾಗಿದೆ.
ಟೆಂಡರ್‌ನ ಅಂದಾಜು ಮೌಲ್ಯ: ರೂ. 624 ಲಕ್ಷಗಳು.
ಟೆಂಡರ್ ಪೂರ್ವಭಾವಿ ಸಭೆಯ ದಿನಾಂಕ, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಹಾಗೂ ಇತರೆ ಮಾಹಿತಿಯನ್ನು https://kppp.karnataka.gov.in ರಲ್ಲಿ ಪಡೆಯಬಹುದು ಹಾಗೂ ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.
ಸಹಿ/– ಮಹಾ ನಿರ್ದೇಶಕರು, ಕಾರಾಗೃಹ ಮತ್ತು ಸುಧಾರಣಾ ಸೇವೆ, ಕರ್ನಾಟಕ ರಾಜ್ಯ
DIPR/CP/153/SPAN/2024-25

ಕರ್ನಾಟಕ ಸರ್ಕಾರ
(ಕಾರಾಗೃಹ ಮತ್ತು ಸುಧಾರಣ ಸೇವೆ ಇಲಾಖೆ)
ಮುಖ್ಯ ಅಧೀಕ್ಷಕರ ಕಾರ್ಯಾಲಯ, ಕೇಂದ್ರ ಕಾರಾಗೃಹ, ಪರಪ್ಪನ ಅಗ್ರಹಾರ, ಎಲೆಕ್ಟ್ರಾನಿಕ್ ಸಿಟಿ ಪೋಸ್ಟ್, ಬೆಂಗಳೂರು – 560100.
ಸಂ.:ಕೇಕಾಬೆಂ/ದರಖಾಸ್ತು/2370/2024–25 ದಿನಾಂಕ: 23–05–2024
ಅಲ್ಪಾವಧಿ ಮರು ಇ–ಟೆಂಡರ್ ನೋಟಿಸ್ (ಕರೆ–2)
2024-25 ನೇ ಸಾಲಿಗೆ ಬೆಂಗಳೂರು ಕೇಂದ್ರ ಕಾರಾಗೃಹ ಹಾಗೂ ಆಧೀನ ಕಾರಾಗೃಹಗಳಿಗೆ ಆವಶ್ಯಕವಿರುವ ಆಹಾರ ಪದಾರ್ಥಗಳು / ತರಕಾರಿಗಳು / ಮಾಂಸ ಮತ್ತು ಕೋಳಿ ಮೊಟ್ಟೆ / ಇತರೆ ವಸ್ತುಗಳು, ಬೇಕರಿ ಕಚ್ಚಾ ವಸ್ತುಗಳು ಮತ್ತು ಕಾರ್ಖಾನೆ ಕಚ್ಚಾ ವಸ್ತುಗಳನ್ನು ಖರೀದಿಸುವ ಸಲುವಾಗಿ ಕೆ.ಟಿ.ಪಿ.ಪಿ ನಿಯಮದನ್ವಯ ಅಲ್ಪಾವಧಿ ಮರು ಇ-ದರಖಾಸ್ತು(ಕರೆ-2) ಮೂಲಕ ಖರೀದಿಸಲು ನಿರ್ಧರಿಸಿದೆ.
1) ದರಖಾಸ್ತು ವಿವರ : ಬೆಂಗಳೂರು ಕೇಂದ್ರ ಕಾರಾಗೃಹದ ಭಾಗ–1, 2 ಮತ್ತು 3 ಹಾಗೂ ವಲಯದ ಕಾರಾಗೃಹಗಳಿಗೆ ಭಾಗ–1 ಮತ್ತು 2ರಲ್ಲಿ ಬರುವ ಆಹಾರ ಪದಾರ್ಥಗಳನ್ನು ಖರೀದಿಸುವ ಬಗ್ಗೆ.
2) ಬೆಂಗಳೂರು ಕೇಂದ್ರ ಕಾರಾಗೃಹದ ಭಾಗ–4 ಮತ್ತು ವಲಯದ ಕಾರಾಗೃಹಗಳಿಗೆ ಭಾಗ–3 ರಲ್ಲಿ ಬರುವ ಹಣ್ಣು ಮತ್ತು ತರಕಾರಿಗಳನ್ನು ಖರೀದಿಸುವ ಬಗ್ಗೆ.
3) ಬೆಂಗಳೂರು ಕೇಂದ್ರ ಕಾರಾಗೃಹದ ಭಾಗ–5 ಮತ್ತು ವಲಯದ ಕಾರಾಗೃಹಗಳಿಗೆ ಭಾಗ–4 ರಲ್ಲಿ ಬರುವ ಗಂಡು ಕುರಿಯ ಮೂಳೆ ರಹಿತ ಮಾಂಸ, ಕೋಳಿಮಾಂಸ ಮತ್ತು ಕೋಳಿಮೊಟ್ಟೆ ಖರೀದಿಸುವ ಬಗ್ಗೆ.
4) ಬೆಂಗಳೂರು ಕೇಂದ್ರ ಕಾರಾಗೃಹದ ಭಾಗ–6 ಮತ್ತು ವಲಯದ ಕಾರಾಗೃಹಗಳಿಗೆ ಭಾಗ–5 ರಲ್ಲಿ ಬರುವ ಇತರೆ ವಸ್ತುಗಳನ್ನು ಖರೀದಿಸುವ ಬಗ್ಗೆ.
5) ಬೆಂಗಳೂರು ಕೇಂದ್ರ ಕಾರಾಗೃಹದ ಭಾಗ–7 ರಲ್ಲಿ ಬರುವ ಬೇಕರಿ ಕಚ್ಚಾವಸ್ತುಗಳನ್ನು ಖರೀದಿಸುವ ಬಗ್ಗೆ.
6) ಬೆಂಗಳೂರು ಕೇಂದ್ರ ಕಾರಾಗೃಹದ ಭಾಗ–8 ರಲ್ಲಿ ಬರುವ ಕಾರ್ಖಾನೆ ಕಚ್ಚಾವಸ್ತುಗಳನ್ನು ಖರೀದಿಸುವ ಬಗ್ಗೆ.
ಟೆಂಡರ್ ಇಂಡೆಂಟ್ ಸಂಖ್ಯೆ, ಇಎಂಡಿ ಮೊತ್ತ ಮತ್ತು ಬಿಡ್ ಸಲ್ಲಿಸಲು ಕೊನೆಯ ದಿನಾಂಕ: ಇ–ಪೋರ್ಟಲ್‌ನಂತೆ.
ಆಹಾರ ಪದಾರ್ಥಗಳ ಸ್ಯಾಂಪಲ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ 05–06–2024 ಸಂಜೆ 5:00 ರವರೆಗೆ ಹಾಗೂ ದರಖಾಸ್ತುದಾರರು ಹೆಚ್ಚಿನ ಮಾಹಿತಿಯನ್ನು ಇ-ಪೋರ್ಟಲ್‌ನ ವೆಬ್‌ಸೈಟ್ kppp.karnataka.gov.in or Helpline No. +91-8046010000, +91-8068948777 ಸಂಪರ್ಕಿಸಿ ಪಡೆಯಬಹುದಾಗಿದೆ.
ಸಹಿ/– ಮುಖ್ಯ ಅಧೀಕ್ಷಕರು, ಕೇಂದ್ರ ಕಾರಾಗೃಹ, ಬೆಂಗಳೂರು
DIPR/CP/RO133/AAPL/2024-25

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ರಸ್ತೆ ಮೂಲಭೂತ ಸೌಕರ್ಯ, ಟಿಇಸಿ ವಿಭಾಗ, ನರಸಿಂಹರಾಜ ಚೌಕ, ಬೆಂಗಳೂರು – 560 002.
ಸಂಖ್ಯೆ: ಕಾಪಾಅ/ರಮೂಸೌ–ಟಿಇಸಿ/ಟೆಂಡರ್/02/2024–25 ದಿನಾಂಕ: 30.05.2024
ಟೆಂಡರ್ ಆಹ್ವಾನ ಪ್ರಕಟಣೆ (ಐಎಫ್‌ಟಿ) (ದ್ವಿಲಕೋಟೆ ಪದ್ಧತಿ)
(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)
ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ–ಟಿಇಸಿ ವಿಭಾಗ, ಬೃ.ಬೆಂ.ಮ.ಪಾಲಿಕೆ, ಬೆಂಗಳೂರು ಇವರು ಈ ಕೆಳಕಂಡ ಕಾಮಗಾರಿಗಾಗಿ ಅರ್ಹ ಟೆಂಡರುದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಗಳ ಹೆಸರು
1	ದೀಪಾಂಜಲಿನಗರ ಬಸ್ ಘಟಕದಿಂದ ರಂಗನಾಥ ಕಾಲೋನಿಗೆ ಸಂಪರ್ಕಿಸುವ ಮೈಸೂರು ರಸ್ತೆಯಲ್ಲಿ ವಾಣಿಜ್ಯ ಜಾಹೀರಾತು ಹಕ್ಕುಗಳಡಿಯಲ್ಲಿ “ಡೈನಮಿಕ್ ಡ್ಯೂರೇಷನ್” ಮಾದರಿ ಆಧಾರಿತವಾಗಿ ವಿನ್ಯಾಸ, ನಿರ್ಮಾಣ, ಹಣಕಾಸು, ಕಾರ್ಯಾಚರಣೆ ಮತ್ತು ಹಸ್ತಾಂತರ (ಡಿಬಿಎಫ್‌ಒಟಿ) ಪ್ರಕ್ರಿಯೆ ಮೇಲೆ ಪಿಪಿಪಿ ಮಾದರಿ ಅಡಿಯಲ್ಲಿ ಸ್ಕೈವಾಕ್‌ಗಳನ್ನು ನಿರ್ಮಾಣ ಮಾಡುವುದು. ಇಎಂಡಿ ರೂ.4,00,000/–
2	ಸರ್ಜಾಪುರ ರಸ್ತೆಯ ಸಂತ. ಫ್ರಾನ್ಸಿಸ್ ಶಾಲೆಯ ಬಳಿ ವಾಣಿಜ್ಯ ಜಾಹೀರಾತು ಹಕ್ಕುಗಳಡಿಯಲ್ಲಿ “ಡೈನಮಿಕ್ ಡ್ಯೂರೇಷನ್” ಮಾದರಿ ಆಧಾರಿತವಾಗಿ ವಿನ್ಯಾಸ, ನಿರ್ಮಾಣ, ಹಣಕಾಸು, ಕಾರ್ಯಾಚರಣೆ ಮತ್ತು ಹಸ್ತಾಂತರ (ಡಿಬಿಎಫ್‌ಒಟಿ) ಪ್ರಕ್ರಿಯೆ ಮೇಲೆ ಪಿಪಿಪಿ ಮಾದರಿ ಅಡಿಯಲ್ಲಿ ಸ್ಕೈವಾಕ್‌ಗಳನ್ನು ನಿರ್ಮಾಣ ಮಾಡುವುದು. ಇಎಂಡಿ ರೂ.4,00,000/–

ಟೆಂಡರ್ ವೇಳಾಪಟ್ಟಿ: (1) ಟೆಂಡರ್‌ಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ಆನ್‌ಲೈನ್ ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ 21.06.2024ರ ಸಂಜೆ 4:00 ಗಂಟೆಯವರೆಗೆ ಅಥವಾ ಮುಂಚಿತವಾಗಿ. (2) ಆರ್‌ಎಫ್‌ಪಿಗಳ ಲಭ್ಯತೆ 05.06.2024ರಿಂದ (3) ಟೆಂಡರ್ ಆಕ್ಷೇಪಣೆಗಳಿಗೆ ಕೊನೆಯ ದಿನಾಂಕ 11.06.2024 ರ ಮಧ್ಯಾಹ್ನ 3:00 ಗಂಟೆಯವರೆಗೆ. (4) ಬಿಡ್ ಪೂರ್ವಭಾವಿ ಸಭೆಯನ್ನು ಪ್ರಧಾನ ಅಭಿಯಂತರರ ಕಚೇರಿ, ಸಂ.109, 1ನೇ ಮಹಡಿ, ಅನೆಕ್ಸ್ ಕಟ್ಟಡ–2, ಎನ್.ಆರ್ ಚೌಕ, ಬೆಂಗಳೂರು ಇಲ್ಲಿ ದಿನಾಂಕ 12.06.2024ರ ಮಧ್ಯಾಹ್ನ 3:30 ಗಂಟೆಗೆ ನಡೆಸಲಾಗುವುದು. (5) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: 21.06.2024 ರ ಸಂಜೆ 4:00 ಗಂಟೆಯವರೆಗೆ. (6) ತಾಂತ್ರಿಕ ಬಿಡ್ಡನ್ನು ದಿನಾಂಕ: 24.06.2024ರ ಸಂಜೆ 4:30 ಗಂಟೆಗೆ ತೆರೆಯಲಾಗುವುದು (7) ಆರ್ಥಿಕ ಬಿಡ್ ತೆರೆಯುವ ದಿನಾಂಕವನ್ನು ತಾಂತ್ರಿಕ ಬಿಡ್‌ಗೆ ಅನುಮೋದನೆ ದೊರೆತ ನಂತರ.
ಸಹಿ/– ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ–ಟಿಇಸಿ ವಿಭಾಗ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ರಸ್ತೆ ಮೂಲಸೌಕರ್ಯ–ಆರ್‌ಆರ್‌ನಗರ ವಿಭಾಗ, DWCC ಸೆಂಟರ್ ಹತ್ತಿರ, ರೆಮ್ಕೋ ಲೇಔಟ್, ಜವರೇಗೌಡನ ದೊಡ್ಡಿ ಮುಖ್ಯರಸ್ತೆ, ರಾಜರಾಜೇಶ್ವರಿನಗರ, ಬೆಂಗಳೂರು–560098.
ಸಂಖ್ಯೆ:ಕಾಪಾಅ/ರಮೂರಾರಾನವಿ/ಟೆಂಡರ್/01/2024-25 ದಿನಾಂಕ: 30-05-2024
ಅಲ್ಪಾವಧಿ ಟೆಂಡರ್ ಪ್ರಕಟಣೆ (ಐಎಫ್‌ಟಿ) (ಕೆಡಬ್ಲ್ಯೂ–4) (ದ್ವಿ ಲಕೋಟೆ ಪದ್ಧತಿ)
ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)
ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಸೌಕರ್ಯ-ರಾಜರಾಜೇಶ್ವರಿ ನಗರ ವಿಭಾಗ, ಬೃಬೆಂಮಪಾ, ಬೆಂಗಳೂರು ರವರು ಬಿ.ಬಿ.ಎಂ.ಪಿ/ಕೆ.ಪಿ.ಡಬ್ಲ್ಯೂ.ಡಿ/ಸಿ.ಪಿ.ಡಬ್ಲ್ಯೂ.ಡಿ/ರೈಲ್ವೇಸ್/ಎಂಇಎಸ್/ರಾಷ್ಟ್ರೀಯ ಹೆದ್ದಾರಿ ಅಥವಾ ಇತರೆ ಯಾವುದೇ ರಾಜ್ಯ ಸಂಸ್ಥೆಗಳಲ್ಲಿ ನೊಂದಾಯಿತರಾಗಿರುವ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕೆಲಸದ ಹೆಸರು
1.	ಕೆಂಗೇರಿ, ಆರ್‌ಆರ್ ನಗರ, ಅತ್ತಿಗುಪ್ಪೆ, ವಿಜಯನಗರ, ಬಿಜಿಎಸ್ ಮತ್ತು ಮಾಗಡಿ ರಸ್ತೆ, 7 ಮೆಟ್ರೋ ನಿಲ್ದಾಣಗಳನ್ನು ಸಂಪರ್ಕಿಸುವ ನೇರಳೆ ಮಾರ್ಗದಲ್ಲಿ “ಲಾಸ್ಟ್ ಮೈಲ್ ಕನೆಕ್ಟಿವಿಟಿ“ ಸ್ಥಾಪಿಸಲು ಬೆಂಗಳೂರು ನಗರದ ಮೆಟ್ರೋ ಕಾರಿಡಾರ್‌ಗಳನ್ನು ಸೇರುವ ಪ್ರಮುಖ ರಸ್ತೆಗಳಲ್ಲಿ ಲೈಟ್ ಟೆಂಡರ್ ಶ್ಯೂರ್ ಮಾಡೆಲ್ ಅಡಿಯಲ್ಲಿ ಫುಟ್‌ಪಾತ್‌ನ ಪುನರಾಭಿವೃದ್ಧಿ ಮತ್ತು ನಿರ್ಮಾಣ. ರಸ್ತೆಗಳು ಅವುಗಳೆಂದರೆ ರೈಲ್ವೆ ಸಮಾನಾಂತರ ರಸ್ತೆ, ಆರ್‌ಆರ್ ನಗರ ಮುಖ್ಯ ರಸ್ತೆ, 5ನೇ ಮುಖ್ಯ ರಸ್ತೆ, 8ನೇ ಮುಖ್ಯ ರಸ್ತೆ, 1ನೇ ಮುಖ್ಯ ರಸ್ತೆ, 1ನೇ ಅಡ್ಡ ರಸ್ತೆ ಮತ್ತು ಡಾ. ರಾಜ್‌ಕುಮಾರ್ ರಸ್ತೆ (ಜಿಟಿ ವರ್ಲ್ಡ್ ಮಾಲ್‌ನಿಂದ). ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ): 2431.83 (ಶೇ.18 ಜಿಎಸ್‌ಟಿ ಸೇರಿದಂತೆ). ಇಎಂಡಿ ಮೊತ್ತ (ರೂ.ಲಕ್ಷಗಳಲ್ಲಿ): 24.31 ಲಕ್ಷಗಳು (ಕೆಪಿಪಿಪಿ ಪೋರ್ಟಲ್ ಮೂಲಕ ರೂ.1.00 ಲಕ್ಷ ಮತ್ತು ಬ್ಯಾಂಕ್ ಗ್ಯಾರಂಟಿ ರೂಪದಲ್ಲಿ ರೂ.23.31 ಲಕ್ಷಗಳು).

ಟೆಂಡರ್‌ನ ಕಾರ್ಯಸೂಚಿ: 1) ಟೆಂಡರ್ ಡಾಕ್ಯುಮೆಂಟ್‌ಗಳನ್ನು ದೊರೆಯುವ ದಿನಾಂಕ: 03-06-2024 ರ ನಂತರ. 2) ಪೂರ್ವ ಬಿಡ್ ಸಭೆಯನ್ನು ದಿನಾಂಕ: 10-06-2024 ರಂದು ಸಂಜೆ 4:00 ಗಂಟೆಗೆ ನಡೆಸಲಾಗುವುದು. 3) ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: 14-06-2024 ರ ಸಂಜೆ 4:00 ಗಂಟೆಯವರೆಗೆ. 4) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 15-06-2024ರ ಸಂಜೆ 4:30 ಗಂಟೆಗೆ. 5) ಆರ್ಥಿಕ ಬಿಡ್ ತೆರೆಯುವ ದಿನಾಂಕ: (ತಾಂತ್ರಿಕ ಮೌಲ್ಯಮಾಪನಕ್ಕೆ ಅನುಮೋದನೆಯನ್ನು ಪಡೆದ ನಂತರ ತಿಳಿಸಲಾಗುವುದು).
ಸಹಿ/– ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಸೌಕರ್ಯ-ಆರ್‌ಆರ್‌ನಗರ ವಿಭಾಗ, ಬೃಬೆಂಮಪಾ.

ಕರ್ನಾಟಕ ಸರ್ಕಾರ
(ನಗರಾಭಿವೃದ್ಧಿ ಇಲಾಖೆ)
ಜಿಲ್ಲಾ ನಗರಾಭಿವೃದ್ಧಿ ಕೋಶ
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಮಂಡ್ಯ ಜಿಲ್ಲೆ, ಮಂಡ್ಯ
E-Mail:dudc_mnd@yahoo.co.in Ph.No:08232-231111
ಸಂ: MDY:CR:E-T-TENDER(fodder)/06/2023–24
ದಿನಾಂಕ:29–05–2024
ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
ಮಂಡ್ಯ ಜಿಲ್ಲೆಯ ತಾಲ್ಲೂಕುಗಳನ್ನು ಬರಪೀಡಿತ ತಾಲ್ಲೂಕುಗಳೆಂದು ಘೋಷಿಸಲಾಗಿರುವುದರಿಂದ ಮುಂಬರುವ ದಿನಗಳಲ್ಲಿ ಮಂಡ್ಯ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಜಾನುವಾರುಗಳಿಗೆ ಮೇವಿನ ಕೊರತೆ ಉಂಟಾಗದಂತೆ ಮುಂಜಾಗ್ರತೆವಹಿಸಿ ಪಶು ಪಾಲನಾ ಇಲಾಖೆ, ಮಂಡ್ಯವತಿಯಿಂದ ಮೇವು ಖರೀದಿ ಮಾಡಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದೇಶ 1999 ಮತ್ತು ನಿಯಮಗಳು 2000 ರಂತೆ ಅರ್ಹ ಮೇವು ಸರಬರಾಜುದಾರರುಗಳಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದ್ದು. ಟೆಂಡರ್ ಇಂಡೆಂಟ್ ಸಂಖ್ಯೆ: RD/2024-25/IND0191, ಟೆಂಡರ್‌ಗಿಟ್ಟ ಮೊತ್ತ ರೂ. 252.00 ಲಕ್ಷಗಳು, ಇ.ಎಂ.ಡಿ. ಮೊತ್ತ ರೂ. 3.79 ಲಕ್ಷಗಳು. ಅಸಕ್ತಿಯುಳ್ಳ ಮೇವು ಸರಬರಾಜುದಾರರು ಟೆಂಡರ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೇದಿಕೆ www.kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಂಡು www.kppp.karnataka.gov.in ವಿದ್ಯುನ್ಮಾನ ಮೂಲಕವೇ ತಮ್ಮ ಟೆಂಡರ್‌ಗಳನ್ನು ಸಲ್ಲಿಸುವುದು. ಟೆಂಡರ್‌ನಲ್ಲಿ ತಿದ್ದುಪಡಿಗಳಿದ್ದಲ್ಲಿ, ಇ_ಪ್ರೊಕ್ಯೂರ್‌ಮೆಂಟ್‌ನ ಕೆಪಿಪಿಪಿ ಪೋರ್ಟಲ್‌ನಲ್ಲಿ ಪ್ರಚುರಪಡಿಸಲಾಗುವುದು. (1) ಫ್ರೀ–ಬಿಡ್ ಮಿಟಿಂಗ್ ದಿನಾಂಕ:01.06.2024 ಬೆಳಿಗ್ಗೆ 11.30 ಗಂಟೆಗೆ. (2) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 12.06.2024ರ ಸಂಜೆ 5.30 ಗಂಟೆಯವರೆಗೆ. (3) ಟೆಂಡರ್ ತೆರೆಯುವ ದಿನಾಂಕ:14.06.2024 ಬೆಳಿಗ್ಗೆ 11.00 ಗಂಟೆಗೆ
ಸಹಿ/–ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಮಂಡ್ಯ ಜಿಲ್ಲೆ, ಮಂಡ್ಯ.
ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/011/2024–25

ಷೇರುಪೇಟೆ ವಹಿವಾಟು 617



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,704
ಇಂದಿನ ಅಂತ್ಯ	22,488
▼	216
ದಿನದ ಕನಿಷ್ಠ	22,417

ವಿನಿಮಯ ದರ

$ ಡಾಲರ್	83.29
£ ಪೌಂಡ್	105.93
€ ಯುರೊ	90.10
¥ ಯೆನ್ (100ಕ್ಕೆ)	53

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹575
12 ಕ್ಕೆ	₹75
ಮೈಸೂರು	
100ಕ್ಕೆ	₹575

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ದಿನದ ದರ)

ಶೇಂಗಾ (ರಿಫೈನ್ಡ್)	₹1490 (1500)
ಸೋಯಾ (ರಿಫೈನ್ಡ್)	₹950 (950)
ಸೂರ್ಯಕಾಂತಿ (ರಿಫೈನ್ಡ್)	₹955 (957)
ಪಾಮೋಲಿನ್	₹900 (905)

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹8500-8900
ದಾವಣಗೆರೆ	₹6700-6700
ಕೆ.ಆರ್.ಪೇಟೆ	₹8700-8700
ತಿಪಟೂರು	₹8500-9200

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹186
ಆರ್‌ಎಸ್‌ಎಸ್-5	₹180
ಗುಡ್ ಲಾಟ್ (ಪ್ರತಿ ಕೆ.ಜಿಗೆ)	₹171

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹333-480
ದ್ವಿತಳಿ (ಬಿ.ವಿ)	₹350-620

ಮುಂಬೈ ಧಾರಣೆ

ಶೇಂಗಾ

30-5-2024

ಜಾವಾ 70/80(ಹೊಸ)	11200-11300
ಜಾವಾ 80/90(ಹೊಸ)	10800-10900
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10600-10700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1500 (1510)
ಒಂದು ವಾರದ ಡೆಲಿವರಿ	1495 (1505)
ಸೋಯಾ ಕಚ್ಚಾ	915 (920)
ಪಾಮ್ ವಾರದ ಡೆಲಿವರಿ	898 (903)
ಸೂರ್ಯಕಾಂತಿ ಎಣ್ಣೆ ಕಚ್ಚಾ	900 (900)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

₹72,000 (72,150)

ಬೆಳ್ಳಿ ಕೆ.ಜಿ ₹92,900 (94,100)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಚಿರಸ್ಮರಣೆ

ಶ್ರೀಮತಿ ಕೆ.ಎಸ್.ವಾಸಂತಿ ಹೆಗ್ಡೆಯವರು
ದಿ॥ ಶ್ರೀ ಎಂ.ವಿ.ಪುಟ್ಟಪ್ಪ ಹೆಗ್ಡೆ ರವರ ಧರ್ಮಪತ್ನಿ
ಮಲ್ಲಿಕ, ಶಿವಮೊಗ್ಗ
ಇವರು ದಿನಾಂಕ 21-5-2024 ರಂದು
ಬೆಳಗ್ಗೆ 9.15 ಗಂಟೆಗೆ ದೈವಾಧೀನರಾದರೆಂದು
ತಿಳಿಸಲು ವಿಷಾದಿಸುತ್ತೇವೆ.
ನಿಮ್ಮ ಅಗಲಿಕೆ ನಮಗೆ ಬರಿಸಲಾಗದ ನೋವಾಗಿದೆ.
ನಿಮ್ಮ ನೆನಪು ಸದಾ ನಮ್ಮ ಮನದಾಳದಲ್ಲದೆ.
ನಿಮ್ಮ ದಿವ್ಯಾತ್ಮವು ಭಗವಂತನ ಪದತಳದಲ್ಲಿ
ಚಿರಶಾಂತಿ ಪಡೆಯಲೆಂದು ಪ್ರಾರ್ಥಿಸುವ
ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಮತ್ತು ಎಲ್ಲಾ
ಕುಟುಂಬಸ್ಥರು, ಶಿವಮೊಗ್ಗ.
ಫೋನ್: 9481320229 / 9480204505
9845027001 / 9480086310

ಲಾಭ ಗಳಿಕೆ ಒತ್ತಡ ಷೇರುಪೇಟೆ ಇಳಿಕೆ

ಮುಂಬೈ (ಪಿಟಿಐ): ದೇಶದ ಷೇರುಪೇಟೆಗಳು ಸತತ ಐದನೇ ದಿನವಾದ ಗುರುವಾರವೂ ಲಾಭ ಗಳಿಕೆಯ ಒತ್ತಡಕ್ಕೆ ಸಿಲುಕಿ ಇಳಿಕೆ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 617 ಅಂಶ ಇಳಿಕೆ (ಶೇ 0.83ರಷ್ಟು) ಕಂಡು, 73,885 ಅಂಶಗಳಿಗೆ ತಲುಪಿದೆ. ಅತಿಹೆಚ್ಚು ಎಂ–ಕ್ಯಾಪ್ ಹೊಂದಿದ ಕಂಪನಿಗಳ ಷೇರಿನ ಮಾರಾಟ ಹೆಚ್ಚಿದ್ದರಿಂದ ಈ ಕುಸಿತ ಕಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 216 ಅಂಶ ಇಳಿಕೆ (ಶೇ 0.95ರಷ್ಟು) ಕಂಡು, 22,488 ಅಂಶಗಳಲ್ಲಿ ವಹಿವಾಟು ಮುಕ್ತಾಯಗೊಂಡಿತು.

ವಾರದ ಹಿಂದೆ ಷೇರು ಸೂಚ್ಯಂಕಗಳು ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ತಲುಪಿದ್ದವು. ಲೋಕಸಭಾ ಚುನಾವಣಾ ಫಲಿತಾಂಶದ ಅನಿಶ್ಚಿತತೆ ಹಾಗೂ ಹೂಡಿಕೆದಾರರು ಲಾಭ ಗಳಿಕೆಯತ್ತ ಚಿತ್ತ ನೆಟ್ಟಿರುವುದರಿಂದ ಇಳಿಕೆ ಕಂಡಿವೆ. ಕಳೆದ ಐದು ವಹಿವಾಟುಗಳಲ್ಲಿ ಸೆನ್ಸೆಕ್ಸ್ ಮತ್ತು ನಿಫ್ಟಿ ಸುಮಾರು ಶೇ 2ರಷ್ಟು ಕುಸಿದಿವೆ.

‘ಅಮೆರಿಕದ ಫೆಡರಲ್ ರಿಸರ್ವ್‌ನ ಬಡ್ಡಿದರ ಕಡಿತ ವಿಳಂಬವಾಗುತ್ತಿದೆ. ಜಾಗತಿಕ ಮಟ್ಟದಲ್ಲಿ ಹಣದುಬ್ಬರ ಇಳಿಕೆಯಾಗುವ ಲಕ್ಷಣಗಳು ಗೋಚರಿಸುತ್ತಿಲ್ಲ. ಇದರಿಂದ ಅಮೆರಿಕದಲ್ಲಿ ಬಾಂಡ್‌ಗಳ ಮೇಲಿನ ಗಳಿಕೆ ಏರಿಕೆಯಾಗುತ್ತಿದೆ. ಇದು ದೇಶೀಯ ಷೇರುಪೇಟೆ ಮೇಲೆ ಪರಿಣಾಮ ಬೀರಿದೆ’ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ (ಸಂಶೋಧನಾ ವಿಭಾಗ) ಮುಖ್ಯಸ್ಥ ವಿನೋದ್ ನಾಯರ್ ತಿಳಿಸಿದ್ದಾರೆ.

ಸೆನ್ಸೆಕ್ಸ್ ಗುಚ್ಛದಲ್ಲಿನ ಟಾಟಾ ಸ್ಟೀಲ್, ಟೈಟನ್, ಟೆಕ್ ಮಹೀಂದ್ರ, ವಿಪ್ರೊ, ಬಜಾಜ್ ಫಿನ್‌ಸರ್ವ್, ಬಜಾಜ್ ಫೈನಾನ್ಸ್, ನೆಸ್ಲೆ ಇಂಡಿಯಾ, ಟಾಟಾ ಮೋಟರ್ಸ್ ಮತ್ತು ಜೆಎಸ್‌ಡಬ್ಲ್ಯು ಸ್ಟೀಲ್‌ನ ಷೇರಿನ ಮೌಲ್ಯ ಕುಸಿದಿದೆ.

ಐಸಿಐಸಿಐ ಬ್ಯಾಂಕ್, ಎಕ್ಸಿಸ್ ಬ್ಯಾಂಕ್, ಎಚ್‌ಡಿಎಫ್‌ಸಿ ಬ್ಯಾಂಕ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಟೆಕ್ ಮಹೀಂದ್ರ ಬ್ಯಾಂಕ್‌ನ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ.

ಜಮಾ–ಖರ್ಚು ಗಾತ್ರ: ಪಾಕ್‌ನ ಜಿಡಿಪಿಗಿಂತ ಎರಡೂವರೆ ಪಟ್ಟು ಹೆಚ್ಚು

ಆರ್‌ಬಿಐ ವರಮಾನ ಏರಿಕೆ

ನವದೆಹಲಿ (ಪಿಟಿಐ): 2023–24ನೇ ಆರ್ಥಿಕ ವರ್ಷದಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್‌ನ ವರಮಾನದಲ್ಲಿ ಶೇ 17.04ರಷ್ಟು ಏರಿಕೆಯಾಗಿದ್ದರೆ, ವೆಚ್ಚದ ಪ್ರಮಾಣವು ಶೇ 56.30ರಷ್ಟು ತಗ್ಗಿದೆ. ಒಟ್ಟು ಜಮಾ–ಖರ್ಚು ಪಟ್ಟಿಯ (ಬ್ಯಾಲನ್ಸ್ ಷೀಟ್) ಗಾತ್ರವೂ ಹೆಚ್ಚಳವಾಗಿದೆ.

2022–23ನೇ ಆರ್ಥಿಕ ವರ್ಷದಲ್ಲಿ ₹2.35 ಲಕ್ಷ ಕೋಟಿ ವರಮಾನ ಗಳಿಸಿತ್ತು. 2023–24ರಲ್ಲಿ ₹2.75 ಲಕ್ಷ ಕೋಟಿ ಗಳಿಸಿದೆ ಎಂದು ಗುರುವಾರ ಬಿಡುಗಡೆಯಾಗಿರುವ ವಾರ್ಷಿಕ ವರದಿ ತಿಳಿಸಿದೆ.

ಬಡ್ಡಿ ವರಮಾನವು ₹1.88 ಲಕ್ಷ ಕೋಟಿ ಆಗಿದೆ. ವಿದೇಶಿ ಸೆಕ್ಯುರಿಟೀಸ್‌ಗಳಿಂದ ₹65,327 ಕೋಟಿ ಬಡ್ಡಿ ವರಮಾನ ಗಳಿಸಿದೆ. ತುರ್ತು ನಿಧಿಗೆ ₹42,820 ಕೋಟಿ ನೀಡಿದೆ.

ಜಮಾ–ಖರ್ಚು ಪಟ್ಟಿ ಗಾತ್ರ ಏರಿಕೆ: 2023ರ ಮಾರ್ಚ್ ಅಂತ್ಯಕ್ಕೆ ಆರ್‌ಬಿಐನ ಜಮಾ–ಖರ್ಚು ಪಟ್ಟಿಯ ಮೊತ್ತ ₹63.45 ಲಕ್ಷ ಕೋಟಿ ಇತ್ತು.

ಮುಖ್ಯಾಂಶಗಳು

- ಜಮಾ–ಖರ್ಚು ಗಾತ್ರ ₹70.47 ಲಕ್ಷ ಕೋಟಿ
- 2023–24ರಲ್ಲಿ 36,075 ಬ್ಯಾಂಕಿಂಗ್ ವಂಚನೆ ಪ್ರಕರಣ
- ತುರ್ತು ನಿಧಿಗೆ ₹42,820 ಕೋಟಿ ನೀಡಿಕೆ

ಪ್ರಸಕ್ತ ವರ್ಷದ ಮಾರ್ಚ್ ಅಂತ್ಯಕ್ಕೆ ₹70.47 ಲಕ್ಷ ಕೋಟಿಗೆ ಮುಟ್ಟಿದೆ. ಒಟ್ಟು ₹7.02 ಲಕ್ಷ ಕೋಟಿ ಸೇರ್ಪಡೆಯಾಗಿದ್ದು, ಒಟ್ಟಾರೆ ಶೇ 11.08ರಷ್ಟು ಏರಿಕೆಯಾಗಿದೆ.

ಆರ್‌ಬಿಐ ಜಮಾ–ಖರ್ಚಿನ ಮೊತ್ತವು ನೆರೆಯ ಪಾಕಿಸ್ತಾನದ ಜಿಡಿಪಿ ಗಾತ್ರಕ್ಕಿಂತಲೂ (₹28 ಲಕ್ಷ ಕೋಟಿ) ಎರಡೂವರೆ ಪಟ್ಟು ಹೆಚ್ಚಿದೆ.

ಸ್ವತ್ತಿನ ಮೌಲ್ಯ ಏರಿಕೆ: ವಿದೇಶಿ ಕರೆನ್ಸಿ ಸ್ವತ್ತುಗಳು, ಚಿನ್ನ, ವಿದೇಶದಲ್ಲಿರುವ ಸಂಸ್ಥೆಗಳಿಗೆ ಸಾಲ ಮತ್ತು ಮುಂಗಡ ನೀಡಿಕೆಯಲ್ಲೂ ಶೇ 76.92ರಷ್ಟು ಏರಿಕೆಯಾಗಿದೆ. ಆದರೆ, ದೇಶೀಯ ಮಟ್ಟದಲ್ಲಿನ ಸ್ವತ್ತುಗಳ ಮೌಲ್ಯದಲ್ಲಿ ಶೇ 26.08ರಿಂದ ಶೇ 23.31ಕ್ಕೆ ಇಳಿಕೆಯಾಗಿದೆ.

ಕಳೆದ ಆರ್ಥಿಕ ವರ್ಷದಲ್ಲಿ ಆರ್‌ಬಿಐನ ಚಿನ್ನ ಸಂಗ್ರಹ ಪ್ರಮಾಣವು 6.94 ಟನ್‌ನಷ್ಟು ಹೆಚ್ಚಳವಾಗಿದೆ. ಒಟ್ಟು ಚಿನ್ನದ ಸಂಗ್ರಹ 822.10 ಟನ್ ಆಗಿದೆ.

ವಂಚನೆ: 2023–24ನೇ ಹಣಕಾಸು ವರ್ಷದಲ್ಲಿ ದೇಶದ ಬ್ಯಾಂಕಿಂಗ್ ವಲಯದಲ್ಲಿ 36,075 ವಂಚನೆ ಪ್ರಕರಣಗಳು ವರದಿಯಾಗಿದ್ದು, ಒಟ್ಟು ಮೊತ್ತ ₹13,930 ಕೋಟಿ ಆಗಿದೆ.

ಜಿಡಿಪಿ: ಶೇ 7ರಷ್ಟು ಪ್ರಗತಿ ನಿರೀಕ್ಷೆ

2024–25ನೇ ಆರ್ಥಿಕ ವರ್ಷದಲ್ಲಿ ದೇಶದ ಜಿಡಿಪಿ ಬೆಳವಣಿಗೆಯು ಶೇ 7ರಷ್ಟು ಪ್ರಗತಿ ಕಾಣಲಿದೆ ಎಂದು ಆರ್‌ಬಿಐ ತಿಳಿಸಿದೆ.

ದೇಶದ ಸ್ಥೂಲ ಆರ್ಥಿಕ ಅಂಶಗಳು ಬಲಗೊಂಡಿವೆ. ಹಾಗಾಗಿ, ಭಾರತದ ಆರ್ಥಿಕತೆಯು ಜಾಗತಿಕ ಮಟ್ಟದಲ್ಲಿ ಕ್ಷಿಪ್ರಗತಿಯಲ್ಲಿ ಬೆಳೆಯುತ್ತಿದೆ ಎಂದು ಹೇಳಿದೆ.

ಚಿಲ್ಲರೆ ಹಣದುಬ್ಬರವು ಇಳಿಕೆಯಾಗಲಿದೆ ಎಂದು ವರದಿ ಹೇಳಿದೆ. ಆದರೂ, ಪೂರೈಕೆ ಸರಪಳಿಯಲ್ಲಿನ ಕೊರತೆಯಿಂದಾಗಿ ಆಹಾರದ ಹಣದುಬ್ಬರ ಏರಿಕೆಯಾಗಲಿದೆ ಎಂದು ಅಂದಾಜಿಸಿದೆ.

₹78,213 ಕೋಟಿಗೆ ವಾರಸುದಾರರೇ ಇಲ್ಲ!

ಮುಂಬೈ (ಪಿಟಿಐ): ಪ್ರಸಕ್ತ ವರ್ಷದ ಮಾರ್ಚ್ ಅಂತ್ಯಕ್ಕೆ ದೇಶದ ಸರ್ಕಾರಿ ಮತ್ತು ಖಾಸಗಿ ಸ್ವಾಮ್ಯದ ಬ್ಯಾಂಕ್‌ಗಳಲ್ಲಿ ವಾರಸುದಾರರು ಇಲ್ಲದ ಠೇವಣಿಯು ಶೇ 26ರಷ್ಟು ಏರಿಕೆಯಾಗಿದ್ದು, ₹78,213 ಕೋಟಿಗೆ ತಲುಪಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ ತಿಳಿಸಿದೆ.

2023ರ ಮಾರ್ಚ್ ಅಂತ್ಯಕ್ಕೆ ಠೇವಣಿದಾರರ ಶಿಕ್ಷಣ ಮತ್ತು ಜಾಗೃತಿ ನಿಧಿಯಲ್ಲಿನ (ಡಿಇಎ) ಮೊತ್ತವು ₹62,225 ಕೋಟಿ ಇತ್ತು ಎಂದು ಗುರುವಾರ ಬಿಡುಗಡೆಯಾಗಿರುವ ವರದಿ ತಿಳಿಸಿದೆ.

ಸಹಕಾರ ಬ್ಯಾಂಕ್‌ಗಳು ಸೇರಿ ಎಲ್ಲಾ ಬ್ಯಾಂಕ್‌ಗಳಲ್ಲಿ ಇರುವ ಈ ಖಾತೆಗಳಲ್ಲಿ ಕಳೆದ 10 ವರ್ಷಗಳಿಂದ ಯಾವುದೇ ವಹಿವಾಟು ನಡೆದಿಲ್ಲ ಎಂದು ಹೇಳಿದೆ.

ಆರ್‌ಬಿಐ ಮಾರ್ಗಸೂಚಿ ಏನು?: ವಾರಸುದಾರರು ಇಲ್ಲದ ಠೇವಣಿಗಳ ಪ್ರಮಾಣ ತಗ್ಗಿಸಲು ಮತ್ತು ಅರ್ಹ ಹಕ್ಕುದಾರರಿಗೆ ಠೇವಣಿ ಮರಳಿಸಲು ಆರ್‌ಬಿಐ ಹಲವಾರು ಕ್ರಮಗಳನ್ನು ಕೈಗೊಂಡಿದೆ. ಈ ಕುರಿತು ಪ್ರಸಕ್ತ ವರ್ಷದ ಆರಂಭದಲ್ಲಿಯೇ ಸಮಗ್ರ ಮಾರ್ಗಸೂಚಿಯನ್ನು ಪ್ರಕಟಿಸಿತ್ತು.

ಏಪ್ರಿಲ್ 1ರಂದು ಮತ್ತೆ ಪರಿಷ್ಕೃತ ಮಾರ್ಗಸೂಚಿ ಪ್ರಕಟಿಸಿದೆ. ವಾಣಿಜ್ಯ ಬ್ಯಾಂಕ್‌ಗಳು (ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳು ಒಳಗೊಂಡಂತೆ) ಹಾಗೂ ಎಲ್ಲಾ ಸಹಕಾರ ಬ್ಯಾಂಕ್‌ಗಳಿಗೆ ಇದು ಅನ್ವಯಿಸಲಿದೆ.

ವಹಿವಾಟು ನಡೆಸದ ಖಾತೆಗಳು ಮತ್ತು ವಾರಸುದಾರರಿಲ್ಲದ ನಿಶ್ಚಿತ ಠೇವಣಿಗಳನ್ನು ಪ್ರತ್ಯೇಕವಾಗಿ ವರ್ಗೀಕರಿಸಬೇಕು ಎಂದು ಬ್ಯಾಂಕ್‌ಗಳಿಗೆ ಸೂಚಿಸಿದೆ.

ನಿಷ್ಕ್ರಿಯ ಖಾತೆಗಳ ಬಗ್ಗೆ ನಿಯಮಿತವಾಗಿ ಪರಿಶೀಲಿಸಬೇಕು. ಇವುಗಳ ಮೂಲಕ ವಂಚನೆ ನಡೆಯದಂತೆ ಮುಂಜಾಗ್ರತೆವಹಿಸ ಬೇಕು. ಠೇವಣಿ ಬಗ್ಗೆ ಹಕ್ಕುದಾರರು ಸಲ್ಲಿಸುವ ದೂರುಗಳ ಇತ್ಯರ್ಥಕ್ಕೆ ಕುಂದುಕೊರತೆ ಪರಿಹಾರ ಕಾರ್ಯ ವಿಧಾನವನ್ನು ಅಳವಡಿಸಿಕೊಳ್ಳಬೇಕಿದೆ ಎಂದು ನಿರ್ದೇಶನ ನೀಡಿದೆ.

ಇಂತಹ ಖಾತೆಗಳನ್ನು ಮರು ಸಕ್ರಿಯಗೊಳಿಸುವಿಕೆ, ಕ್ಲೈಮ್‌ಗಳ ಇತ್ಯರ್ಥ ಅಥವಾ ಅರ್ಹ ಹಕ್ಕುದಾರರು ಅಥವಾ ಉತ್ತರಾಧಿಕಾರಿಗಳು, ಅರ್ಹ ಖಾತೆದಾರರನ್ನು ಪತ್ತೆ ಹಚ್ಚಲು ಕ್ರಮ ವಹಿಸಬೇಕಿದೆ ಎಂದು ಸೂಚಿಸಿದೆ.

ಆರ್‌ಬಿಐ ಸೂಚಿಸಿರುವ ಈ ವಿಧಾನಗಳನ್ನು ಬ್ಯಾಂಕ್‌ಗಳು ಅನುಸರಿಸಿದರೆ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ವಾರಸುದಾರರಿಲ್ಲದ ಠೇವಣಿಗಳ ಪ್ರಮಾಣ ತಗ್ಗಲಿದೆ. ಜೊತೆಗೆ, ಅರ್ಹ ಹಕ್ಕುದಾರರಿಗೆ ಠೇವಣಿ ಮೊತ್ತವು ದೊರೆಯಲಿದೆ.

ಬ್ಯಾಂಕ್‌ಗಳಲ್ಲಿ ಹಲವು ವರ್ಷಗಳಿಂದ ಉಳಿದುಕೊಂಡಿರುವ ಠೇವಣಿಗಳನ್ನು ಹುಡುಕಿ, ಹಿಂದಕ್ಕೆ ಪಡೆದುಕೊಳ್ಳಲು ನೆರವು ನೀಡುವ ಕೇಂದ್ರೀಕೃತ ಪೋರ್ಟಲ್ (ಯುಡಿಜಿಎಎಂ) ವ್ಯವಸ್ಥೆಯನ್ನೂ ಅಭಿವೃದ್ಧಿಪಡಿಸಲಾಗಿದೆ.

ಸುದ್ದಿ 2 ನಿಮಿಷ

ಬಾಂಡ್‌ನಡಿ 44 ಟನ್ ಚಿನ್ನ ಖರೀದಿ

ಮುಂಬೈ (ಪಿಟಿಐ): 2023–24ನೇ ಹಣಕಾಸು ವರ್ಷದಲ್ಲಿ ಹೂಡಿಕೆದಾರರು ₹27,031 ಕೋಟಿ ಮೌಲ್ಯದ ಚಿನ್ನದ ಬಾಂಡ್‌ಗಳನ್ನು ಖರೀದಿಸಿದ್ದಾರೆ ಎಂದು ರಿಸರ್ವ್ ಬ್ಯಾಂಕ್ ತಿಳಿಸಿದೆ.

ಕಳೆದ ಹಣಕಾಸು ವರ್ಷದಲ್ಲಿ 44.34 ಟನ್ ಚಿನ್ನವನ್ನು ಬಾಂಡ್‌ಗಳ ಮೂಲಕ ಖರೀದಿಸಿದ್ದಾರೆ. 2022–23ರ ಇದೇ ಅವಧಿಯಲ್ಲಿ 12.26 ಟನ್ ಖರೀದಿಸಿದ್ದು, ಇದರ ಮೌಲ್ಯ ₹6,551 ಕೋಟಿ ಆಗಿತ್ತು. ಇದಕ್ಕೆ ಹೋಲಿಸಿದರೆ ಚಿನ್ನದ ಖರೀದಿ ಪ್ರಮಾಣದಲ್ಲಿ ನಾಲ್ಕು ಪಟ್ಟು ಏರಿಕೆಯಾಗಿದೆ.‘ಹೆಚ್ಚಿನ ಆದಾಯ ಮತ್ತು ತೆರಿಗೆ ಪ್ರಯೋಜನ ಪಡೆಯುವ ಉದ್ದೇಶದಿಂದಾಗಿ ಖರೀದಿ ಪ್ರಮಾಣದಲ್ಲಿ ಏರಿಕೆಯಾಗಿದೆ’ ಎಂದು ಆರ್‌ಬಿಐ ತಿಳಿಸಿದೆ.

2015ರ ನವೆಂಬರ್‌ನಲ್ಲಿ ಚಿನ್ನದ ಬಾಂಡ್ ಖರೀದಿ ಯೋಜನೆ ಆರಂಭಿಸಲಾಯಿತು. ಇಲ್ಲಿಯವರೆಗೆ 67 ಕಂತುಗಳಲ್ಲಿ ₹72,274 ಕೋಟಿ ಮೌಲ್ಯದ ಚಿನ್ನ ಖರೀದಿಸಲಾಗಿದೆ.

ಸ್ನೈಡರ್ ಎಲೆಕ್ಟ್ರಿಕ್ಸ್ ಉದ್ಯೋಗಿ ಕ್ಯಾಂಪಸ್ ಉದ್ಘಾಟನೆ

ಬೆಂಗಳೂರು: ಇಂಧನ ನಿರ್ವಹಣೆ ಮತ್ತು ನೆಕ್ಸ್ಟ್‌ಜೆನ್ ಆಟೊಮೇಷನ್‌ನಲ್ಲಿ ಮುಂಚೂಣಿಯಲ್ಲಿರುವ ಸ್ನೈಡರ್ ಎಲೆಕ್ಟ್ರಿಕ್ಸ್‌ನ ಅತಿದೊಡ್ಡ ಉದ್ಯೋಗಿ ಕ್ಯಾಂಪಸ್ ಗುರುವಾರ ನಗರದಲ್ಲಿ ಉದ್ಘಾಟನೆಯಾಯಿತು.

ಬಾಗ್‌ಮನೆ ಸೋಲಾರಿಯಂ ಸಿಟಿಯಲ್ಲಿರುವ ಈ ಕ್ಯಾಂಪಸ್ 6.30 ಲಕ್ಷ ಚದರ ಅಡಿ ವಿಸ್ತೀರ್ಣ ಹೊಂದಿದೆ. ಗ್ಲೋಬಲ್ ಇನ್ನೋವೇಶನ್ ಹಬ್, ತರಬೇತಿ ಕೇಂದ್ರ, ಆರ್ ಆ್ಯಂಡ್ ಡಿ ಸೆಂಟರ್, ಕೌಶಲ ಕೇಂದ್ರ ಮತ್ತು ಡಿಜಿಟಲ್ ಹಬ್ ಹೊಂದಿದ್ದು, 8 ಸಾವಿರ ವೃತ್ತಿಪರರಿಗೆ ಅವಕಾಶ ಕಲ್ಪಿಸುವ ಸಾಮರ್ಥ್ಯ ಹೊಂದಿದೆ ಎಂದು ಕಂಪನಿ ತಿಳಿಸಿದೆ.

ಉತ್ಪಾದನೆ, ನಾವೀನ್ಯತೆ, ಆರ್ ಆ್ಯಂಡ್ ಡಿ ಮತ್ತು ಕೌಶಲ ನಿರ್ಮಾಣದಲ್ಲಿ ನಡೆಯುತ್ತಿರುವ ಹೂಡಿಕೆಗಳನ್ನು ‘ಭಾರತ ಮತ್ತು ಪ್ರಪಂಚಕ್ಕಾಗಿ ಭಾರತದಲ್ಲಿಯೇ ತಯಾರಿಸಿ’ ಎಂಬ ಧ್ಯೇಯ ಹೊಂದಲಾಗಿದೆ ಎಂದು ತಿಳಿಸಿದೆ.

₹200 ಕೋಟಿ ಹೂಡಿಕೆ: ‘ಭಾರತದಲ್ಲಿ ಕಂಪನಿಯ ಹೂಡಿಕೆಯ ವೇಗ ಹೆಚ್ಚಿಸಲು ಒತ್ತು ನೀಡಲಾಗಿದೆ. ₹200 ಕೋಟಿ ವೆಚ್ಚದೊಂದಿಗೆ ಈ ಕ್ಯಾಂಪಸ್ ಆರಂಭಿಸಲಾಗಿದೆ. ಈ ಹೂಡಿಕೆಯು ಭಾರತದಲ್ಲಿ ಕಂಪನಿಯ ಬೆಳವಣಿಗೆಯ ವೇಗವನ್ನು ಹೆಚ್ಚಿಸಲಿದೆ’ ಎಂದು ಕಂಪನಿಯ ಸಿಇಒ ಪೀಟರ್ ಹರ್ವೆಕ್ ಹೇಳಿದರು.

‘ಇಂಧನ ನಿರ್ವಹಣೆ, ಕೈಗಾರಿಕಾ ಯಾಂತ್ರೀಕರಣದ ಬಗ್ಗೆ ಸಮಗ್ರ ಮಾಹಿತಿಯನ್ನು ಈ ಕ್ಯಾಂಪಸ್ ನೀಡಲಿದೆ. ಭಾರತವಲ್ಲದೆ ಜಾಗತಿಕ ಮಾರುಕಟ್ಟೆಗಳಿಗೂ ಅತ್ಯಾಧುನಿಕ ಉತ್ಪನ್ನಗಳನ್ನು ಹೆಚ್ಚಿಸಲು ಉದ್ಯೋಗಿಗಳ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳಲಿದ್ದೇವೆ’ ಎಂದು ಗ್ರೇಟರ್ ಇಂಡಿಯಾದ ವಲಯ ಅಧ್ಯಕ್ಷ ದೀಪಕ್ ಶರ್ಮಾ ತಿಳಿಸಿದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Domestic Helpers / Housekeeping

REQUIRED URGENTLY: Housekeeping, Patient care staff for immediate joining at Marthahalli. For details contact ELJAY MEDICAL STAFFING INDIA PVT.LTD, Gandhinagar, Bangalore. Call:7022399993, 6366883838

Drivers

ಚಾಲಕ ಅಗತ್ಯವಿದೆ! ಬೆಂಗಳೂರಿನಲ್ಲಿ ಎವರೆಸ್ಟ್ ಫ್ಲೀಟ್ CNG ಕಾರ್ ಅನ್ನು ಓಡಿಸಿ ಮತ್ತು ತಿಂಗಳಿಗೆ ₹35,000* ಸಂಪಾದಿಸಿ!! +91 9493275000 ಗೆ ಕರೆಮಾಡಿ

General

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆ ಕೆಲಸಕ್ಕೆ, ಅಡುಗೆಗೆ, ಮಹಿಳೆಯರು, ಹುಡುಗಿಯರು ಬೇಕಾಗಿದ್ದಾರೆ. ಊಟ ವಸತಿಯಿದೆ. 13,000-17,000. 8951315839, 7022770052

Part-Time Jobs

ಆಣಿ ತರಬೇತಿ ಪಡೆದು ಮನೆಯಿಂದಲೇ ಅಣಿ ಬೇಸಿ ತಿಂಗಳಿಗೆ 30,000ಕ್ಕೂ ಹೆಚ್ಚು ಸಂಪಾದಿಸಿ ತರಬೇತಿಗಾಗಿ ಬೆಂಗಳೂರು 8095555516 ಶಿವಮೊಗ್ಗ 8095555517

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಘಾರಂತುಂಬುವ ಮೂಲಕ ತಿಂಗಳಿಗೆ 15,000 20,000ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 9663542555, 9663563555

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಘಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/ ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಪ್ರವಾಸ

Travel

ದೆಹಲಿ ಯುಮುನೋತ್ರಿ, ಗಂಗೋತ್ರಿ ಕೇದಾರನಾಥ್ ಬದರಿನಾಥ್ ಹರಿದ್ವಾರ್, 09.06.2024 23.06.2024 ರಿಂದ 14 ದಿನಗಳು. ಅಯೋಧ್ಯ,ಪ್ರಯಾಗ್ ಕಾಶಿ,ಗಯಾ,ಬೈದ್ಯನಾಥಧಾಮ್ 03.06.2024 ರಿಂದ 8 ದಿನಗಳು. ಸ್ವಯಂಭೂ ಅಮರನಾಥ್ ಕಾಶ್ಮೀರ್ ಅಮೃತಸರ್ ಕುರುಕ್ಷೇತ್ರ 14 ದಿನಗಳು. ಮತ್ತು ನೇಪಾಳ ಮುಕ್ತಿನಾಥ, ಜನಕಪುರ್ ಬೈದ್ಯನಾಥಧಾಮ್ 11 ದಿನಗಳು 03.07.2024 ರಿಂದ ಸಂಪರ್ಕಿಸಿ. 26508925 9980993631 ಶ್ರೀಚೈತನ್ಯ ಟ್ರಾವಲ್, ಚಾಮರಾಜಪೇಟೆ ಬೆಂಗಳೂರು.18

08.06.2024, 14.06.2024 ಚಾರ್-ಧಾಮ್ ಸಮೇತಪ್ರವಾಸ. 26.06.2024 ಕಾಶಿ, ಅಯೋಧ್ಯಾ,ಬದ್ರನಾಥ. 28.06.2024, 11.07.2024 ವೈಷ್ಣೋದೇವಿ,ವಾಘಾಬಾರ್ಡರ್, ಕಾಶ್ಮೀರ, ಗುಲ್ಮಾರ್ಗ್,ಅಮರನಾಥ ಇತ್ಯಾದಿ,ಸಂಪರ್ಕಿಸಿ. ವಿಷ್ಣು ಟ್ರಾವಲ್ಸ್,ಬೆಂ-, ಶೇಷಾದ್ರಿಪುರಂ, ಬೆಂಗಳೂರು-4. 26574131, 7204173686, 8431888138

8 ದಿನಗಳ ಮುಕ್ತಿನಾಥ ನೇಪಾಳ ವಿಶೇಷ. 7/11 ದಿನಗಳು ಸಿಂಗಾಪುರ್ ಮಲೇಶಿಯಾ ಥೈಲ್ಯಾಂಡ್. 11 ದಿನಗಳ ವಿಯೆಟ್ನಾಂ ಮತ್ತು ಕಾಂಬೋಡಿಯ. 6 ದಿನಗಳ ಬಾಲಿ. 13 ದಿನಗಳ ಚಾರ್‌ಧಾಮ್. 9/5 ದಿನಗಳ ಕಾಶಿ,ಅಯೋಧ್ಯ,ಗಯಾ. 6 ದಿನಗಳ ಶ್ರೀಲಂಕಾ. ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್. 9900080793 9900080792

ಮೇ ತಿಂಗಳಿಂದ ಪ್ರತಿ ತಿಂಗಳು 8 ದಿನಗಳ ಕಾಶಿ,ಗಯಾ,ಅಯೋಧ್ಯ/ ಚಾರ್‌ಧಾಮ್, ಸಪ್ಟೆಂಬರ್ ತಿಂಗಳಲ್ಲಿ ಮುಕ್ತಿನಾಥ ನೇಪಾಳ ಮನೋಕಾಮನ ಮೌಂಟ್ ಎವರೆಸ್ಟ್ ಜನಕಪುರಿ ಅಯೋಧ್ಯ ಕಾಶಿ,ಗಯಾ. ಸಂಪರ್ಕಿಸಿ 'ಶ್ರೀಸುಧಾ ಟ್ರಾವಲ್ಸ್' 080-22429289 9448119290 9019301300

ವೈಯಕ್ತಿಕ

Change of Name

ಹೆಸರು ಬದಲಾವಣೆ
ನಾನು, ಮಂಡ್ಯ ಜಿಲ್ಲೆ, ಮಂಡ್ಯ ತಾಲ್ಲೂಕು, ಬಿಳಗೂಲಿ ಗ್ರಾಮದ, ಬೆಂಗಳೂರು ಗ್ರಾಮಾಂತ್ರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ವಿಜಯಪುರ ಟೌನ್, 11ನೇ ವಾರ್ಡ್, ಚಂದೇನಹಳ್ಳಿ ಗೇಟ್ ಬಳಿ ಇರುವ ಬಸವ ಕಲ್ಯಾಣ ಮಠದಲ್ಲಿ ವಾಸವಾಗಿರುವ ನಾನು ಶ್ರೀ ಗೌರೀಶ್ ಕುಮಾರ್, ನೋಟರಿ ಎಸ್.ಪಿ. ಗಾಂಧಿ, ಬೆಂಗಳೂರು. ದಿನಾಂಕ 25.3.2024 ರ ಅಫಿಡವಿಟ್ ಮೂಲಕ ನನ್ನ ಹೆಸರನ್ನು ಶ್ರೀ ಸದಾಶಿವಸ್ವಾಮಿ ... ಎಂದು ಬದಲಾಯಿಸಿಕೊಂಡಿರುತ್ತೇನೆ. ಇನ್ನು ಮುಂದೆ ನನ್ನನ್ನು, ಶ್ರೀ ಸದಾಶಿವಸ್ವಾಮಿ ಎಂದು ಕರೆಯಬೇಕು.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರಕಟವಾಗುವ ಉತ್ಪನ್ನ, ಸೇವೆ, ಉದ್ಯೋಗದ ಗುಣಮಟ್ಟ, ವಿಶ್ವಾಸಾರ್ಹತೆ ಅಥವಾ ಜಾಹೀರಾತುದಾರರ ಕುರಿತು ಪತ್ರಿಕೆಯು ಖಾತರಿ ನೀಡುವುದಿಲ್ಲ. ಓದುಗರು ಜಾಹೀರಾತುದಾರರನ್ನು ಸಂಪರ್ಕಿಸುವ ಮುನ್ನ ವಿವರಗಳನ್ನು ಪರಿಶೀಲಿಸಿಕೊಳ್ಳಬೇಕು.
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೆಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ರಿಯಲ್ ಎಸ್ಟೇಟ್
ಪ್ರತಿ ಶನಿವಾರ + ಭಾನುವಾರ
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
@ 2244/-* FOR 15 WORDS
www.dhclassifieds.com
ಬುಕ್ ಮಾಡಿ
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9845114560 | +91 9901641752 | 080-45557163/164

ನೀಂದ್‌ನಿಂದ ಡ್ರಿಲ್ಡ್ ಏರ್ ಕೂಲ್ ಮ್ಯಾಟ್ರೆಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದಲ್ಲಿ ಪ್ರಥಮ ಬಾರಿಗೆ ನೀಂದ್ ಮ್ಯಾಟ್ರೆಸಸ್‌ನಿಂದ ಏರ್ ಡ್ರಿಲ್ ತಂತ್ರಜ್ಞಾನ ಬಳಸಿ ತಯಾರಿಸಿರುವ ಡ್ರಿಲ್ಡ್ ಏರ್ ಕೂಲ್ ಮ್ಯಾಟ್ರೆಸ್‌ಗಳನ್ನು ಮಾರುಕಟ್ಟೆಗೆ ಪರಿಚಯಿಸಲಾಗಿದೆ.

‘ಈ ತಂತ್ರಜ್ಞಾನವು ಹಾಸಿಗೆಯಲ್ಲಿ ಗಾಳಿಯ ಹರಿವು ಹೆಚ್ಚಿಸಲಿದೆ. ಹಾಸಿಗೆಯು ದೇಹದ ಆಕಾರಕ್ಕೆ ತಕ್ಕಂತೆ ಹೊಂದಿಕೊಳ್ಳುತ್ತದೆ. ಅಲ್ಲದೆ, ಇದರ ಬಹುಪದರ ವಿನ್ಯಾಸವು ಮೃದುತ್ವದಿಂದ ಕೂಡಿದ್ದು, ಆರಾಮದಾಯಕ ನಿದ್ರೆಗೆ ಸಹಕಾರಿಯಾಗಲಿದೆ’ ಎಂದು ಧನ್ಯಾ ಪ್ಲಾಸ್ಟಿಕ್ಸ್ ಆ್ಯಂಡ್ ಫೋಮ್ಸ್ ಪ್ರೈವೆಟ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಮಂಜುನಾಥ ಹೆಗಡೆ ಅವರು, ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಡ್ರಿಲ್ಡ್ ಏರ್ ಕೂಲ್ ಡ್ಯುಯಲ್ ಕಂಫರ್ಟ್ ಮ್ಯಾಟ್ರೆಸಸ್, ಡ್ರಿಲ್ಡ್ ಏರ್ ಕೂಲ್ ಆರ್ಥೋ ಮೆಮೊರಿ ಮ್ಯಾಟ್ರೆಸಸ್, ಡ್ರಿಲ್ಡ್ ಏರ್ ಕೂಲ್ ನ್ಯಾಚುರಲ್ ಲೇಟೆಕ್ಸ್ ಮ್ಯಾಟ್ರೆಸಸ್, ಡ್ರಿಲ್ಡ್ ಏರ್ ಕೂಲ್ ಪಾಕೆಟ್ ಸ್ಪ್ರಿಂಗ್ ಮ್ಯಾಟ್ರೆಸಸ್ ಹಾಗೂ ಡ್ರಿಲ್ಡ್ ಏರ್ ಕೂಲ್ ಟಾಪರ್ ಆ್ಯಂಡ್ ಪಿಲ್ಲೊ ಮ್ಯಾಟ್ರೆಸಸ್ ಅನ್ನು ಮಾರುಕಟ್ಟೆಗೆ ಪರಿಚಯಿಸಲಾಗಿದೆ ಎಂದರು.

ಹಾಸಿಗೆಯು ದೀರ್ಘಕಾಲದವರೆಗೆ ಬಾಳಿಕೆಗೆ ಬರಲು ಹಾಗೂ ಗುಣಮಟ್ಟ ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಆಳವಾದ ಪರೀಕ್ಷೆ ನಡೆಸಿ ಈ ಉತ್ಪನ್ನಗಳನ್ನು ತಯಾರಿಸಲಾಗಿದೆ. ಶುದ್ಧವಾದ ಫೋಮ್ ಬಳಸಲಾಗಿದೆ. ಅಲ್ಲದೆ ದಪ್ಪನಾದ ಹತ್ತಿ ಬಟ್ಟೆ ಬಳಸಿ ತಯಾರಿಸಲಾಗಿದೆ ಎಂದು ಹೇಳಿದರು.

2005ರಲ್ಲಿ ಕಂಪನಿ ಸ್ಥಾಪನೆಯಾಗಿದ್ದು, ಗುಣಮಟ್ಟದ ಉತ್ಪನ್ನಗಳ ತಯಾರಿಕೆಯಲ್ಲಿ ಮುಂಚೂಣಿಯಲ್ಲಿದೆ. ರಾಜ್ಯದಾದ್ಯಂತ ಫ್ರಾಂಚೈಸಿ ಹೊಂದಿದ್ದು, ಗ್ರಾಹಕರಿಗೆ ಉತ್ಪನ್ನಗಳನ್ನು ಪೂರೈಸುತ್ತಿದೆ. ನೀಂದ್ ಬ್ರ್ಯಾಂಡ್‌ನ ಈ ಹೊಸ ಉತ್ಪನ್ನಗಳ ಮಾರಾಟಕ್ಕೆ 500ಕ್ಕೂ ಹೆಚ್ಚು ಡೀಲರ್‌ಗಳನ್ನು ನೇಮಿಸಲಾಗಿದೆ ಎಂದರು.

ಕಳೆದ ಆರ್ಥಿಕ ವರ್ಷದಲ್ಲಿ ಕಂಪನಿಯು ಸುಮಾರು ₹25 ಕೋಟಿ ವಹಿವಾಟು ನಡೆಸಿದೆ. ಪ್ರಸಕ್ತ ಹಣಕಾಸು ವರ್ಷದಲ್ಲಿ ₹100 ಕೋಟಿ ವಹಿವಾಟು ನಡೆಸುವ ಗುರಿ ಹೊಂದಿದೆ. ಅಲ್ಲದೆ, ದಕ್ಷಿಣ ಭಾರತದ ಇತರೆ ರಾಜ್ಯಗಳಲ್ಲೂ ಉದ್ಯಮದ ವಿಸ್ತರಣೆಗೆ ಯೋಜನೆ ರೂಪಿಸಲಾಗಿದೆ ಎಂದರು.

ಕಂಪನಿಯ ಮಾರಾಟ ವಿಭಾಗದ ಜನರಲ್ ಮ್ಯಾನೇಜರ್ ವಿಶ್ವನಾಥ ಹೆಗಡೆ ಇದ್ದರು.

ಅಡಿಕೆ ಧಾರಣೆ

ಬಂಟ್ವಾಳ		ಚಾಲಿ	24989-36609	ಕೆಂಪುಗೋಟು	26689-29389
ಕೋಕ	18000-28500	ಕೋಕ	10199-30699	ರಾಶಿ	44099-49599
ಹೊಸತು	28500-38000	ಕೆಂಪುಗೋಟು	26989-34989	ತಟ್ಟಿಬೆಟ್ಟೆ	35800-46099
ಹಳತು	38000-46500	ರಾಶಿ	36077-53299	ಶಿರಸಿ	
ಚಿತ್ರದುರ್ಗ		ಸಿಪ್ಪೆಗೋಟು	8786-19589	ಬೆಟ್ಟೆ	33700-47989
ಅಪಿ	52719-53129	ಶಿವಮೊಗ್ಗ		ಬಿಳಿಗೋಟು	17199-30399
ಬೆಟ್ಟೆ	37149-37579	ಬೆಟ್ಟೆ	30109-55629	ಚಾಲಿ	32270-38206
ಕೆಂಪುಗೋಟು	29609-30010	ಗೊರಬಲು	19009-36069	ಕೆಂಪುಗೋಟು	19600-32099
ರಾಶಿ	52239-52669	ರಾಶಿ	28509-53599	ರಾಶಿ	44759-50589
ಕುಮಟ		ಸರಕು	52909-82596	ಯಲ್ಲಾಪುರ	
ಚಿಪ್ಪು	22609-31669	ಸಿದ್ದಾಪುರ		ಅಪಿ	54769-60699
ಕೋಕ	13011-27269	ಬಿಳಿಗೋಟು	26809-29209	ಬಿಳಿಗೋಟು	22899-32091
ಹಳೆಚಾಲಿ	35669-39199	ಚಾಲಿ	34019-36649	ಕೋಕ	11899-30099
ಹೊಸಚಾಲಿ	31619-36411	ಕೋಕ	26119-28399	ಹಳೆಚಾಲಿ	38301-39099
ಸಾಗರ		ಹಳೆಚಾಲಿ	35109-35699	ಹೊಸಚಾಲಿ	33050-37260
ಬಿಳಿಗೋಟು	14989-28599				

ಶಿಕ್ಷೆಯ ನಂತರ ಬಿಎಸ್‌ಎಫ್‌ಗೆ ಭಾರತದ ಮಹಿಳೆ, ಪುತ್ರ ಹಸ್ತಾಂತರ

ಲಾಹೋರ್ (ಪಿಟಿಐ): ಮಾನವ ಕಳ್ಳಸಾಗಣೆಯ ಜಾಲಕ್ಕೆ ಸಿಲುಕಿ, ಕಳೆದ ವರ್ಷ ಪಾಕಿಸ್ತಾನಕ್ಕೆ ಅಕ್ರಮವಾಗಿ ಪ್ರವೇಶಿಸಿದ್ದ ಭಾರತದ ಮಹಿಳೆ ಹಾಗೂ ಆಕೆಯ ಅಪ್ರಾಪ್ತ ವಯಸ್ಸಿನ ಮಗನನ್ನು ಭಾರತದ ಗಡಿ ಭದ್ರತಾ ಪಡೆ (ಬಿಎಸ್‌ಎಫ್)ನವರಿಗೆ ಬುಧವಾರ ವಾಘಾ ಗಡಿಯಲ್ಲಿ ಹಸ್ತಾಂತರಿಸಲಾಗಿದೆ.

ಅಕ್ರಮ ಪ್ರವೇಶದ ಕಾರಣಕ್ಕೆ ಕ್ವೆಟಾ ಜೈಲಿನಲ್ಲಿ ಒಂದು ವರ್ಷ ಶಿಕ್ಷೆಯನ್ನು ಪೂರೈಸಿದ ನಂತರ ಮಹಿಳೆ ಹಾಗೂ ಆತನ ಪುತ್ರನನ್ನು ಭಾರತದ ವಶಕ್ಕೆ ಒಪ್ಪಿಸಲಾಗಿದೆ ಎಂದು ಪಾಕಿಸ್ತಾನದ ಅಧಿಕಾರಿ ಗುರುವಾರ ತಿಳಿಸಿದ್ದಾರೆ.

ಅಸ್ಸಾಂನ ನಗಾಂವ್ ನಗರದ ವಹೀದಾ ಬೇಗಂ ಹಾಗೂ ಅವರ ಮಗ ಫೈಜ್ ಎಂಬುವವರೇ ಶಿಕ್ಷೆ ಅನುಭವಿಸಿದವರು.

‘ಕಳೆದ ವರ್ಷ ಭಾರತದ ಏಜೆಂಟ್ ಒಬ್ಬ ಕೆನಡಾಗೆ ಕೊಂಡೊಯ್ಯುವುದಾಗಿ ನನ್ನನ್ನು ನಂಬಿಸಿದ್ದ. ಆತನೇ ನನ್ನನ್ನು ಹಾಗೂ ಮಗನನ್ನು ದುಬೈಗೆ ಕರೆದೊಯ್ದಿದ್ದ. ಅಲ್ಲಿಂದ ಅಫ್ಗಾನಿಸ್ತಾನಕ್ಕೆ ಪ್ರಯಾಣ ಮಾಡಿದ್ದೆವು. ಅಲ್ಲಿ ನಮ್ಮ ಪಾಸ್‌ಪೋರ್ಟ್‌ಗಳನ್ನು ಕಿತ್ತುಕೊಂಡು, ಹಣವನ್ನೂ ಪಡೆದು ಪರಾರಿಯಾಗಿದ್ದ. ಚಮನ್ ಗಡಿ ದಾಟಿ, ಪಾಕಿಸ್ತಾನ ಪ್ರವೇಶಿಸಿದೆವು. ಅಲ್ಲಿಂದ ಹೇಗಾದರೂ ಮಾಡಿ ಭಾರತ ತಲುಪಬಹುದು ಎಂದುಕೊಂಡಿದ್ದೆವು. ಪೊಲೀಸರು ಅಲ್ಲಿ ಬಂಧಿಸಿದರು’ ಎಂದು ವಹೀದಾ ಅವರು ಪಾಕಿಸ್ತಾನದ ಪೊಲೀಸರಿಗೆ ನೀಡಿದ್ದ ಹೇಳಿಕೆಯಲ್ಲಿ ತಿಳಿಸಿದ್ದರು.

2022ರಲ್ಲಿ ಪತಿಯ ಮರಣದ ನಂತರ ಜಮೀನು ಮಾರಿ, ಆ ಹಣವನ್ನು ಏಜೆಂಟ್‌ಗೆ ಕೊಟ್ಟಿದ್ದಾಗಿಯೂ ಅವರು ಉಲ್ಲೇಖಿಸಿದ್ದರು.

ದಶಕದಿಂದ ಸೈಬರ್ ವಂಚನೆ ಚೀನಾ ವ್ಯಕ್ತಿಯ ಬಂಧನ

ವಾಷಿಂಗ್ಟನ್ (ಎ.ಪಿ): ಒಂದು ದಶಕಕ್ಕೂ ಹೆಚ್ಚು ಕಾಲ ‘ಬಾಟ್‌ನೆಟ್’ ಮೂಲಕ ಅಕ್ರಮವಾಗಿ ಅಪರಾಧಿಗಳಿಗೆ ಮಾಹಿತಿ ದೊರೆಯುವಂತೆ ಮಾಡಿ, ಸುಮಾರು 9.9 ಕೋಟಿ ಅಮೆರಿಕನ್ ಡಾಲರ್‌ನಷ್ಟು (₹824 ಕೋಟಿ) ಲಾಭ ಮಾಡಿದ ಆರೋಪದ ಮೇಲೆ ಚೀನಾದ ವ್ಯಕ್ತಿಯೊಬ್ಬನನ್ನು ಅಂತರರಾಷ್ಟ್ರೀಯ ಕಾನೂನು ಜಾರಿ ತಂಡವೊಂದು ಬಂಧಿಸಿದೆ.

‘ಆರೋಪಿಯು ‘911 ಎಸ್‌5’ ಎಂಬ ‘ಬಾಟ್‌ನೆಟ್’ (ಮಾಲ್‌ವೇರ್‌ಗಳ ನೆಟ್‌ವರ್ಕ್) ಮೂಲಕ 200 ದೇಶಗಳ ಅಸಂಖ್ಯ ಕಂಪ್ಯೂಟರ್‌ಗಳ ಮಾಹಿತಿಯನ್ನು 2014ರಿಂದ ಕಳವು ಮಾಡಿದ್ದ’ ಎಂದು ಅಮೆರಿಕದ ನ್ಯಾಯಿಕ ವಿಭಾಗವು, ‘ಫೆಡರಲ್ ಬ್ಯೂರೊ ಆಫ್ ಇನ್‌ವೆಸ್ಟಿಗೇಷನ್’ (ಎಫ್‌ಬಿಐ) ನಿರ್ದೇಶಕ ಕ್ರಿಸ್ಟೋಫರ್ ರೇ ಅವರ ಹೇಳಿಕೆಯನ್ನು ಆಧರಿಸಿ ತಿಳಿಸಿದೆ.

ಬಂಧಿತನನ್ನು ಯುನ್ಹೆ ವಾಂಗ್ (35) ಎಂದು ಗುರುತಿಸಲಾಗಿದೆ. ಮೇ 24ರಂದು ಸಿಂಗಪುರ್‌ನಲ್ಲಿ ಈತನನ್ನು ಬಂಧಿಸಲಾಯಿತು ಎಂದು ಎಫ್‌ಬಿಐನ ಉಪ ಸಹಾಯಕ ನಿರ್ದೇಶಕ ಬ್ರೆಟ್ ಲೆದರ್‌ಮನ್ ಲಿಂಕ್ಡ್ ಇನ್ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ. ಅಕ್ರಮ ವ್ಯವಹಾರಗಳ ನಿರ್ವಹಣೆಗೆಂದೇ 150 ಸರ್ವರ್‌ಗಳನ್ನು ಆರೋಪಿಯು ನಿರ್ವಹಿಸುತ್ತಿದ್ದ ಎಂದೂ ತಿಳಿಸಿದ್ದಾರೆ.

2 ಪ್ರಕರಣಗಳಲ್ಲಿ ಇಮ್ರಾನ್ ಖುಲಾಸೆ

ಇಸ್ಲಾಮಾಬಾದ್ (ಪಿಟಿಐ): ಕಳೆದ ವರ್ಷ ಮೇ 9ರಂದು ನಡೆದಿದ್ದ ಹಿಂಸಾಚಾರಕ್ಕೆ ಸಂಬಂಧಿಸಿದ ಎರಡು ಪ್ರಕರಣಗಳಲ್ಲಿ ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರನ್ನು ಅಲ್ಲಿಯ ಕೋರ್ಟೊಂದು ಸಾಕ್ಷ್ಯಗಳ ಕೊರತೆಯ ಕಾರಣದಿಂದಾಗಿ ಈಚೆಗೆ ಖುಲಾಸೆಗೊಳಿಸಿದೆ.

ಪಾಕಿಸ್ತಾನ್–ಎ–ಇನ್ಸಾಫ್ (ಪಿಟಿಐ) ಪಕ್ಷದ ಸಂಸ್ಥಾಪಕರೂ ಆದ ಇಮ್ರಾನ್ ಖಾನ್ ಅವರ ಬೆಂಬಲಿಗರು ಸಾರ್ವಜನಿಕ ಸ್ವತ್ತುಗಳಿಗೆ ಹಾನಿ ಮಾಡಿದ್ದರು. ಜೊತೆಗೆ, ಸ್ಥಳದಲ್ಲಿ ಜಮಾವಣೆಗೊಂಡಿದ್ದ ಸೇನಾ ತುಕಡಿಗಳಿಗೂ ತೊಂದರೆ ಉಂಟುಮಾಡಿದ್ದರು.

ಈ ಘಟನೆಗೆ ಸಂಬಂಧಿಸಿದಂತೆ ಶೆಹಜಾದ್ ಟೌನ್ ಪೊಲೀಸ್ ಠಾಣೆಯಲ್ಲಿ ಎರಡು ಪ್ರತ್ಯೇಕ ದೂರುಗಳು ದಾಖಲಾಗಿದ್ದವು. ಈ ದೂರುಗಳನ್ನು ಪ್ರಶ್ನಿಸಿ ಇಮ್ರಾನ್ ಅವರು ಅರ್ಜಿ ಸಲ್ಲಿಸಿದ್ದರು.

ಅರ್ಜಿ ವಿಚಾರಣೆ ನಡೆಸಿದ್ದ ನ್ಯಾಯಾಂಗ ಮ್ಯಾಜಿಸ್ಟ್ರೇಟ್ ಸಾಹಿಬ್ ಬಿಲಾಲ್ ಅವರು ಈ ಆದೇಶ ಹೊರಡಿಸಿದ್ದಾರೆ.

ಸದ್ಯ ಇಮ್ರಾನ್ ಖಾನ್ ಅವರು ರಾವಲ್ಪಿಂಡಿಯ ಅಡಿಯಾಲಾ ಜೈಲಿನಲ್ಲಿದ್ದಾರೆ. ಅವರು ಬಂಧನಕ್ಕೊಳಗಾದ ವೇಳೆ ಆಕ್ರೋಶಭರಿತರಾದ ಬೆಂಬಲಿಗರು ಹಲವಾರು ಸಾರ್ವಜನಿಕ ಸ್ವತ್ತುಗಳಿಗೆ ಹಾನಿ ಉಂಟು ಮಾಡಿದ್ದರು.

ಮೆಕ್ಸಿಕೊ: ಅಲ್ಲಲ್ಲಿ ಹಿಂಸಾಚಾರ

ಮೆಕ್ಸಿಕೊ ಸಿಟಿ(ಎಪಿ): ಮೆಕ್ಸಿಕೊದಲ್ಲಿ ಭಾನುವಾರ ಸಾರ್ವತ್ರಿಕ ಚುನಾವಣೆ ನಡೆಯಲಿದ್ದು, ಪ್ರಚಾರ ಕಾರ್ಯ ಮುಕ್ತಾಯಗೊಂಡ ಬುಧವಾರ ದೇಶದ ವಿವಿಧೆಡೆ ಹಿಂಸಾಚಾರ ಘಟನೆಗಳು ನಡೆದಿವೆ.

ಕ್ಲಾಡಿಯಾ

ಕೆಲವೆಡೆ ಅಭ್ಯರ್ಥಿಗಳ ಮೇಲೆ ಹಲ್ಲೆ ಮಾಡಿರುವ ಘಟನೆಗಳು ವರದಿಯಾಗಿವೆ. ದಕ್ಷಿಣದ ಗುಯೆರೆರೊ ನಗರದ ಮೇಯರ್ ಸ್ಥಾನದ ಅಭ್ಯರ್ಥಿಯನ್ನು ಗುಂಡಿಕ್ಕಿ ಕೊಲ್ಲಲಾಗಿದೆ. ಪಶ್ಚಿಮದಲ್ಲಿರುವ ಜಲಿಸ್ಕೊ ರಾಜ್ಯದ ಮೇಯರ್ ಅಭ್ಯರ್ಥಿ ಮೇಲೆ ದುಷ್ಕರ್ಮಿಗಳು ಮಂಗಳವಾರ ತಡರಾತ್ರಿ ಹಲವು ಸುತ್ತು ಗುಂಡು ಹಾರಿಸಿದ್ದಾರೆ. ಅವರನ್ನು ಆಸ್ಪತ್ರೆಗೆ ದಾಖಲಿಸಿದ್ದು, ಸ್ಥಿತಿ ಗಂಭೀರವಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಮೆಕ್ಸಿಕೊ ನಗರದ ಹೊರವಲಯದಲ್ಲಿ ಹಮ್ಮಿಕೊಂಡಿದ್ದ ಪ್ರಚಾರ ಸಭೆಯಲ್ಲಿ ಮಾತನಾಡಿದ ಮೊರೆನಾ ಪಕ್ಷದ ಶೊಚಿದಲ್ ಗಾಲ್ವೆಜ್, ಅಧ್ಯಕ್ಷ ಆಂಡ್ರೆ ಮ್ಯಾನ್ಯುಯೆಲ್ ಲೋಪೆಜ್ ಒಬ್ರಡಾರ್ ವಿರುದ್ಧ ವಾಗ್ದಾಳಿ ನಡೆಸಿದರು.

‘ಡ್ರಗ್ಸ್ ಜಾಲವನ್ನು ಮಟ್ಟ ಹಾಕುವ ಬದಲು, ಅಧ್ಯಕ್ಷ ಒಬ್ರಡಾರ್ ಅವರನ್ನು ಅಪ್ಪಿಕೊಳ್ಳುತ್ತಿದ್ದಾರೆ’ ಎಂದು ಟೀಕಿಸಿದರು.

ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿರುವ ಮೊರೆನಾ ಪಕ್ಷದ ಕ್ಲಾಡಿಯಾ ಶೀನ್‌ಬಾಮ್ ಅವರು ಒಬ್ರಡಾರ್ ಅವರಿಗೆ ತೀವ್ರ ಪೈಪೋಟಿ ನೀಡುತ್ತಿದ್ದಾರೆ.

ಶೃಂಗಸಭೆ: ಇಸ್ರೇಲ್–ಹಮಾಸ್ ಯುದ್ಧ ಕೊನೆಗಾಣಿಸಲು ಒತ್ತಾಯ

ಸಹಕಾರ ವೃದ್ಧಿ: ಅರಬ್ ದೇಶಗಳಿಗೆ ಷಿ ಕರೆ

ತೈಪೆ(ತೈವಾನ್)(ಎಪಿ): ಅರಬ್ ರಾಷ್ಟ್ರಗಳೊಂದಿಗೆ ವ್ಯಾಪಾರ ಸಂಬಂಧವನ್ನು ವೃದ್ಧಿಸುವ ಉದ್ದೇಶದಿಂದ ಬೀಜಿಂಗ್‌ನಲ್ಲಿ ಆಯೋಜಿಸಿರುವ ‘ಚೀನಾ–ಅರಬ್ ರಾಷ್ಟ್ರಗಳ ಸಹಕಾರ ವೇದಿಕೆ’ಯ ಶೃಂಗಸಭೆಯನ್ನು ಅಧ್ಯಕ್ಷ ಷಿ ಜಿನ್‌ಪಿಂಗ್ ಗುರುವಾರ ಉದ್ಘಾಟಿಸಿದರು.

‘ವ್ಯಾಪಾರ, ಶುದ್ಧ ಇಂಧನ, ಬಾಹ್ಯಾಕಾಶ ಅನ್ವೇಷಣೆ ಹಾಗೂ ಆರೋಗ್ಯ ಕ್ಷೇತ್ರದಲ್ಲಿ ಸಾಕಷ್ಟು ಅವಕಾಶಗಳಿದ್ದು, ಈ ವಿಚಾರದಲ್ಲಿ ಅರಬ್ ರಾಷ್ಟ್ರಗಳ ಸಹಕಾರ ಮತ್ತಷ್ಟು ಹೆಚ್ಚಬೇಕಾಗಿರುವುದು ಅಗತ್ಯ’ ಎಂದು ಜಿನ್‌ಪಿಂಗ್ ಪ್ರತಿಪಾದಿಸಿದರು.

ಇಸ್ರೇಲ್ ಮತ್ತು ಹಮಾಸ್ ಬಂಡುಕೋರರ ನಡುವಿನ ಯುದ್ಧವನ್ನು ಪ್ರಸ್ತಾಪಿಸಿದ ಅವರು, ‘ಈ ಯುದ್ಧದಿಂದಾಗಿ ಹಲವು ರಾಷ್ಟ್ರಗಳು ತೊಂದರೆ ಅನುಭವಿಸುವಂತಾಗಿದೆ. ಎರಡು ರಾಷ್ಟ್ರಗಳ ಪರಿಹಾರವನ್ನು ಯಾರೂ ಅಲ್ಲಗಳೆಯಲಾಗದು’ ಎಂದು ಅವರು ಹೇಳಿದರು.

ಬೀಜಿಂಗ್‌ನಲ್ಲಿ ಗುರುವಾರ ಉದ್ಘಾಟನೆಗೊಂಡ ‘ಚೀನಾ–ಅರಬ್ ರಾಷ್ಟ್ರಗಳ ಸಹಕಾರ ವೇದಿಕೆ’ಯ ಶೃಂಗಸಭೆಯಲ್ಲಿ ಕೊಲ್ಲಿ ರಾಷ್ಟ್ರಗಳ ನಾಯಕರೊಂದಿಗೆ ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಇದ್ದಾರೆ —ಎಪಿ ಚಿತ್ರ

‘ಇಸ್ರೇಲ್ –ಹಮಾಸ್ ನಡುವಿನ ಯುದ್ಧದಿಂದಾಗಿ ಸಂತ್ರಸ್ತರಾಗಿರುವವರಿಗೆ ಹೆಚ್ಚು ಮಾನವೀಯ ನೆರವಿನ ಅಗತ್ಯವಿದೆ. ಅಲ್ಲದೇ, ಈ ಸಂಘರ್ಷ ಶಮನ ಮಾಡಿ ಶಾಂತಿ ಸ್ಥಾಪನೆ ಮಾಡುವುದಕ್ಕಾಗಿ ಅಂತರರಾಷ್ಟ್ರೀಯ ಸಮಾವೇಶವನ್ನು ಆಯೋಜಿಸುವ ಅಗತ್ಯ ಇದೆ’ ಎಂದೂ ಹೇಳಿದರು.

ಈಜಿಪ್ಟ್ ಅಧ್ಯಕ್ಷ ಅಬ್ದೆಲ್‌–ಫತಾಹ್ ಎಲ್‌ಸಿಸಿ, ಟ್ಯುನಿಷಿಯಾ ಅಧ್ಯಕ್ಷ ಕೈಸ್ ಸಯೀದ್, ಯುಎಇ ಅಧ್ಯಕ್ಷ ಶೇಖ್ ಮೊಹಮ್ಮದ್ ಬಿನ್ ಜಯೇದ್ ಅಲಿ ನಹ್ಯಾನ್, ಬಹರೇನ್ ರಾಜ ಹಮದ್ ಸೇರಿದಂತೆ ಹಲವು ರಾಷ್ಟ್ರಗಳ ನಾಯಕರು ಶೃಂಗಸಭೆಯಲ್ಲಿ ಪಾಲ್ಗೊಂಡಿದ್ದರು.

‘ಆರ್ಥಿಕತೆಗೆ ಆದ್ಯತೆ’: ‘ಕೊಲ್ಲಿ ರಾಷ್ಟ್ರಗಳನ್ನು ಒಳಗೊಂಡ ಪ್ರದೇಶದಲ್ಲಿ ತನ್ನ ಆರ್ಥಿಕತೆ ವೃದ್ಧಿಸಲು ಅನುಕೂಲ ವಾತಾವರಣ ಸೃಷ್ಟಿಸುವುದೇ ಚೀನಾದ ಆದ್ಯತೆಯಾಗಿದೆ’ ಎಂದು ಬ್ರಿಟನ್‌ನ ಎಕ್ಸ್‌ಟರ್ ವಿಶ್ವವಿದ್ಯಾಲಯದಲ್ಲಿ ರಾಜಕೀಯ ಮತ್ತು ಅಂತರರಾಷ್ಟ್ರೀಯ ಸಂಬಂಧಗಳ ಪ್ರಾಧ್ಯಾಪಕಿಯಾಗಿರುವ ಮಾರಿಯಾ ಪಪಾಜಿಯಾರ್ಜಿಯೊ ಅಭಿಪ್ರಾಯಪಡುತ್ತಾರೆ.

‘ಇತ್ತೀಚಿನ ದಿನಗಳಲ್ಲಿ ಕೊಲ್ಲಿ ರಾಷ್ಟ್ರಗಳೊಂದಿಗೆ ಸ್ಥಾಪಿಸಿರುವ ಸಂಬಂಧವನ್ನು ಮತ್ತೊಂದು ಮಜಲಿಗೆ ಕೊಂಡೊಯ್ಯಲು ಚೀನಾ ಬಯಸುತ್ತಿದೆ. ಮುಖ್ಯವಾಗಿ, ವ್ಯಾಪಾರ, 5ಜಿ ತಂತ್ರಜ್ಞಾನ ಹಾಗೂ ಸೈಬರ್ ಕ್ಷೇತ್ರಕ್ಕೆ ಸಂಬಂಧಿಸಿದ ಹೂಡಿಕೆಯನ್ನು ಹೆಚ್ಚಿಸುವುದು ಅದರ ಆದ್ಯತೆಯಾಗಿದೆ’ ಎಂದು ವಿಶ್ಲೇಷಿಸಿದ್ದಾರೆ.

‘ತಾನು ಪಶ್ಚಿಮ ರಾಷ್ಟ್ರಗಳಿಗೆ ಪರ್ಯಾಯವಾಗಿದ್ದು, ಕೊಲ್ಲಿ ರಾಷ್ಟ್ರಗಳ ಪಾಲಿಗೆ ತಾನು ವಿಶ್ವಾಸಾರ್ಹ ಪಾಲುದಾರ ರಾಷ್ಟ್ರ ಎಂಬುದನ್ನು ತೋರಿಸುವುದು ಸಹ ಚೀನಾದ ಉದ್ದೇಶವಾಗಿದೆ’ ಎಂದು ಹೇಳುತ್ತಾರೆ.

ಅಪರೂಪದ ವಿದ್ಯಮಾನಕ್ಕೆ ಕಾರಣವಾದ ರೀಮಲ್ ಚಂಡಮಾರುತ

ಕೇರಳ, ಈಶಾನ್ಯಕ್ಕೆ ಮುಂಗಾರು ಲಗ್ಗೆ

ಪ್ರಜಾವಾಣಿ ವಾರ್ತೆ

ನವದೆಹಲಿ: ನೈರುತ್ಯ ಮುಂಗಾರು ಕೇರಳ ಮತ್ತು ಈಶಾನ್ಯ ಭಾರತವನ್ನು ಏಕಕಾಲಕ್ಕೆ ಗುರುವಾರ ಪ್ರವೇಶಿಸಿದೆ. ಪರಸ್ಪರ ದೂರದಲ್ಲಿರುವ ಎರಡು ಪ್ರದೇಶಗಳು ಒಂದೇ ದಿನ ಮುಂಗಾರು ಮಳೆಯ ಮೊದಲ ಸಿಂಚನ ಸಂಭ್ರಮಿಸಿದ ಅಪರೂಪದ ವಿದ್ಯಮಾನಕ್ಕೆ ದೇಶ ಸಾಕ್ಷಿಯಾದಂತಾಗಿದೆ.

ವಾಡಿಕೆಯಂತೆ ಜೂನ್ 1ರಂದು ಕೇರಳ ಪ್ರವೇಶಿಸುವ ಮುಂಗಾರು, ಈಶಾನ್ಯ ಭಾರತವನ್ನು ಜೂನ್ 5ರಂದು ತಲುಪುತ್ತದೆ. ಆದರೆ, ಈ ಬಾರಿ ರೀಮಲ್ ಚಂಡಮಾರುತದ ಪರಿಣಾಮ ಮುಂಗಾರು ಮಾರುತವು ವಾಡಿಕೆಗಿಂತ ಎರಡು ದಿನ ಮುಂಚಿತವಾಗಿ ಕೇರಳ ಕರಾವಳಿ ತಲುಪಿದ್ದರೆ, ಈಶಾನ್ಯ ಭಾರತದಲ್ಲಿ ಆರು ದಿನ ಮುಂಚಿತವಾಗಿ ಮಳೆ ಸುರಿಸಿದೆ.

‘ನೈರುತ್ಯ ಮುಂಗಾರು 30ರಂದು ಕೇರಳ ಮತ್ತು ಮಾಹೆ ಪ್ರವೇಶಿಸಿದ್ದು, ನಾಗಾಲ್ಯಾಂಡ್, ಮಣಿಪುರ, ಮಿಜೋರಾಂ, ಅರುಣಾಚಲ ಪ್ರದೇಶ, ಅಸ್ಸಾಂ ಮತ್ತು ಮೇಘಾಲಯದ ಬಹುತೇಕ ಭಾಗದತ್ತ ಸಾಗಿದೆ’ ಎಂದು ಭಾರತೀಯ ಹವಾಮಾನ ಇಲಾಖೆಯು (ಐಎಂಡಿ) ಪ್ರಕಟಣೆಯಲ್ಲಿ ತಿಳಿಸಿದೆ.

‘ವಾಸ್ತವದಲ್ಲಿ, ಕೇರಳ ಮತ್ತು ಈಶಾನ್ಯ ಭಾರತಕ್ಕೆ ಬೇರೆ ಬೇರೆ ದಿನಗಳಂದು ಮುಂಗಾರು ಮಾರುತ ಪ್ರವೇಶಿಸುತ್ತದೆ. ಎರಡು ಪ್ರತ್ಯೇಕ ಹವಾಮಾನ ಪ್ರಕ್ರಿಯೆಗಳು ಇದಕ್ಕೆ ಕಾರಣ. ಆದರೆ, ಈ ಬಾರಿ ಬಂಗಾಳ ಕೊಲ್ಲಿಯಲ್ಲಿ ಕಂಡುಬಂದ ಚಂಡಮಾರುತವು ವಾತಾವರಣದಲ್ಲಿ ಬದಲಾವಣೆಗೆ ಕಾರಣವಾಗಿದ್ದು, ಇದರಿಂದ ಕೇರಳದ ಜೊತೆಗೆ ಈಶಾನ್ಯ ಭಾರತದಲ್ಲಿಯೂ ಮಳೆ ಬಿದ್ದಿದೆ’ ಎಂದು ತಜ್ಞರು ವಿಶ್ಲೇಷಿಸಿದ್ದಾರೆ.

ವಾಡಿಕೆಗಿಂತ ಮೊದಲೇ ಮುಂಗಾರು ಪ್ರವೇಶವಾಗಿದೆಯಾದರೂ, ಈ ಭಾಗದಲ್ಲಿ ಬೀಳಬಹುದಾದ ಮಳೆ ಪ್ರಮಾಣಕ್ಕೂ ಈ ವಿದ್ಯಮಾನಕ್ಕೂ ಯಾವುದೇ ನಂಟು ಇಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ.

2017ರಲ್ಲಿ ಈ ರೀತಿ ಏಕಕಾಲಕ್ಕೆ ಮುಂಗಾರು ಪ್ರವೇಶವಾಗಿತ್ತು. ಅದಕ್ಕೂ ಹಿಂದೆ, 1991, 1995 ಹಾಗೂ 1997ರಲ್ಲಿಯೂ ಇಂತಹ ಪ್ರಾಕೃತಿಕ ವಿದ್ಯಮಾನ ಕಂಡುಬಂದಿತ್ತು ಎಂದೂ ಅವರು ಮಾಹಿತಿ ನೀಡಿದ್ದಾರೆ.

‘ಮುಂದಿನ ವಾರ ಕರ್ನಾಟಕದತ್ತ’

‘ಸದ್ಯದ ಹವಾಮಾನ ಮಾದರಿಗಳ ಪ್ರಕಾರ, ಮುಂದಿನ ವಾರ ಕರ್ನಾಟಕ ಮತ್ತು ಮಹಾರಾಷ್ಟ್ರದತ್ತ ಮುಂಗಾರು ಸಾಗಲಿದೆ. ನಂತರ, 10–15 ದಿನ ಮಳೆ ಬೀಳುವುದಿಲ್ಲ. ಈ ಕಾರಣದಿಂದ, ಮುಂಗಾರು ಮಳೆ ದೇಶದ ಉತ್ತರ ಭಾಗವನ್ನು ತಲುಪುವುದು ವಿಳಂಬವಾಗುವುದು’ ಎಂದು ಹವಾಮಾನ ವಿಜ್ಞಾನಿಯೂ ಆಗಿರುವ ಭೂವಿಜ್ಞಾನಗಳ ಸಚಿವಾಲಯದ ಮಾಜಿ ಕಾರ್ಯದರ್ಶಿ ಎಂ.ರಾಜೀವನ್ ಅವರು ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

‘ಜೂನ್ ಅವಧಿಯಲ್ಲಿ ಮುಂಗಾರು ದುರ್ಬಲವಾಗಿಯೇ ಇರಲಿದೆ. ಜುಲೈ–ಸೆಪ್ಟೆಂಬರ್ ವೇಳೆ ಲಾ ನಿನಾ ಪರಿಣಾಮದಿಂದ ಮತ್ತೆ ಜೋರಾಗಲಿದೆ’ ಎಂದಿದ್ದಾರೆ.

ಈ ಮೊದಲು, ದೇಶದಲ್ಲಿ ಈ ಬಾರಿ ವಾಡಿಕೆಗಿಂತ ಹೆಚ್ಚು ಅಂದರೆ, ಜೂನ್‌ನಿಂದ ಸೆಪ್ಟೆಂಬರ್ ಅವಧಿಯಲ್ಲಿ ಬೀಳುವ ಮಳೆ ಸರಾಸರಿ ಶೇ 106ರಷ್ಟು ಆಗಲಿದೆ ಎಂದು ಐಎಂಡಿ ಹೇಳಿತ್ತು. ಈಶಾನ್ಯ ಭಾರತದಲ್ಲಿ ವಾಡಿಕೆಗಿಂತ ಕಡಿಮೆ ಮಳೆ, ದೇಶದ ದಕ್ಷಿಣ ಹಾಗೂ ಕೇಂದ್ರ ಭಾಗದಲ್ಲಿ ವಾಡಿಕೆಗಿಂತ ಹೆಚ್ಚು ಹಾಗೂ ಪಶ್ಚಿಮ ಭಾಗದಲ್ಲಿ ಸಾಮಾನ್ಯ ಮಳೆ ಬೀಳಲಿದೆ ಎಂದು ಹೇಳಿದೆ.

ಸುಬ್ರಹ್ಮಣ್ಯ: ಧಾರಾಕಾರ ಮಳೆ

ಆದಿ ಸುಬ್ರಹ್ಮಣ್ಯ ಬಳಿ ಜಲಾವೃತವಾಗಿದ್ದ ರಸ್ತೆಯಲ್ಲಿ ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದ ಆನೆಯನ್ನು ಕರೆತರಲಾಯಿತು

ಸುಬ್ರಹ್ಮಣ್ಯ (ದಕ್ಷಿಣ ಕನ್ನಡ): ಕುಕ್ಕೆ ಸುಬ್ರಹ್ಮಣ್ಯ ಪರಿಸರದಲ್ಲಿ ಗುರುವಾರ ಮಧ್ಯಾಹ್ನ ಧಾರಾಕಾರ ಮಳೆಯಾಗಿದೆ.

ಬೆಳಿಗ್ಗೆಯಿಂದ ಮಧ್ಯಾಹ್ನದ ವರೆಗೆ ಬಿಸಿಲಿನ ವಾತಾವರಣ ಇತ್ತು. ಸುಬ್ರಹ್ಮಣ್ಯ-ಗುತ್ತಿಗಾರು-ಸುಳ್ಯ ರಸ್ತೆ ಹಾಗೂ ಸುಬ್ರಹ್ಮಣ್ಯ-ಪಂಜ-ಬೆಳ್ಳಾರೆ ರಸ್ತೆಯ ಹಲವೆಡೆ ಅಸಮರ್ಪಕ ಚರಂಡಿಯಿಂದಾಗಿ ಮಳೆ ನೀರು ರಸ್ತೆಯಲ್ಲೇ ಹರಿದಿದ್ದರಿಂದ ವಾಹನ ಸವಾರರು ಸಮಸ್ಯೆ ಅನುಭವಿಸಿದರು.

ಸುಬ್ರಹ್ಮಣ್ಯ, ಬಿಳಿನೆಲೆ, ಯೇನೆಕಲ್ಲು, ಬಳ್ಪ, ಪಂಜ, ಹರಿಹರ ಪಲ್ಲತ್ತಡ್ಕ, ಕೊಲ್ಲಮೊಗ್ರು, ಗುತ್ತಿಗಾರು, ನಡುಗಲ್ಲು, ಎಲಿಮಲೆ, ಸಂಪಾಜೆ ಭಾಗದಲ್ಲೂ ಉತ್ತಮ ಮಳೆಯಾಗಿದೆ. ಸುಬ್ರಹ್ಮಣ್ಯ, ಆದಿ ಸುಬ್ರಹ್ಮಣ್ಯದ ಬಳಿ ಮನೆ, ಅಂಗಡಿಗಳಿಗೆ ನೀರು ನುಗ್ಗಿದೆ. ನೀರು ತುಂಬಿದ್ದ ಇಲ್ಲಿನ ರಸ್ತೆಯಲ್ಲಿ ದೇವಳದ ಆನೆಯನ್ನು ನಡೆಸಿಕೊಂಡು ಹೋದ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದೆ.

ನೂಚಿಲ ಎಂಬಲ್ಲಿ ಆವರಣ ಗೋಡೆ ಕುಸಿದಿದೆ. ಹರಿಹರ ಪಲ್ಲತ್ತಡ್ಕದ ಹೊಳೆ, ದರ್ಪಣತೀರ್ಥ ಸೇರಿದಂತೆ ಹೊಳೆಗಳಲ್ಲಿ ನೀರಿನ ಹರಿವು ಹೆಚ್ಚಾಗಿದೆ.

ಲಂಗರು

ಜೂನ್ 1ರಿಂದ ಆಳ ಸಮುದ್ರ ಮೀನುಗಾರಿಕೆ ನಿಷೇಧದ ಹಿನ್ನಲೆಯಲ್ಲಿ ಮೋಟರ್ ಚಾಲಿತ ದೋಣಿಗಳು ಮಂಗಳೂರಿನ ದಕ್ಕೆಯಲ್ಲಿ ಲಂಗರು ಹಾಕಿವೆ
– ಪ್ರಜಾವಾಣಿ ಚಿತ್ರ / ಫಕ್ರುದ್ದೀನ್ ಎಚ್

‘ಈ ಬಾರಿಯೂ ಮುಂಗಾರು ಕೊರತೆ ಸಾಧ್ಯತೆ’

ಬೆಂಗಳೂರು: ‘ಭೂ ಹವಾಮಾನ ವಿಜ್ಞಾನದ ಪ್ರಕಾರ ರಾಜ್ಯದಲ್ಲಿ ಈ ಬಾರಿಯೂ ಮುಂಗಾರು ಕೊರತೆಯಾಗುವ ಸಾಧ್ಯತೆಯಿದ್ದು, ವಾಡಿಕೆಗಿಂತ ಕಡಿಮೆ ಪ್ರಮಾಣದಲ್ಲಿ ಮಳೆಯಾಗಲಿದೆ’ ಎಂದು ಭಾರತೀಯ ಭೂವೈಜ್ಞಾನಿಕ ಸರ್ವೇಕ್ಷಣ ಇಲಾಖೆಯ ನಿವೃತ್ತ ಉಪ ಮಹಾನಿರ್ದೇಶಕ ಎಚ್.ಎಸ್.ಎಂ. ಪ್ರಕಾಶ್ ತಿಳಿಸಿದ್ದಾರೆ.

ಮುಂಗಾರು ಅವಧಿಯಾದ ಜೂನ್‌ನಿಂದ ಸೆಪ್ಟೆಂಬರ್ ತಿಂಗಳಲ್ಲಿ ಕಳೆದ ಬಾರಿಯ ಸ್ಥಿತಿಯೇ ಇರಲಿದೆ. ಹಿಂಗಾರಿನ ಬಗ್ಗೆ 2024ರ ಅಕ್ಟೋಬರ್ ಮೊದಲ ವಾರದಲ್ಲಿ ನಿರ್ಧರಿಸಬಹುದು ಎಂದು ಹೇಳಿದ್ದಾರೆ.

ಭಾರತದ ಸುತ್ತಮುತ್ತಲ ಭೂ ಪ್ರದೇಶದ ಮೇಲಿರುವ ಅಥವಾ ಸಮುದ್ರದ ಒಳಗಿರುವ ಹಲವಾರು ದೊಡ್ಡ ಜ್ವಾಲಾಮುಖಿಗಳು ನಿಷ್ಕ್ರಿಯ ಆಗಿರುವುದರಿಂದ ಆವಿಯ ಮೂಲಗಳು ಸ್ಥಗಿತವಾಗಿವೆ. ಈ ಜ್ವಾಲಾಮುಖಿಗಳು ಮುಂದಿನ ತಿಂಗಳುಗಳಲ್ಲಿ ಸಕ್ರಿಯವಾಗುವ ಯಾವ ಮುನ್ಸೂಚನೆಗಳೂ ಕಂಡುಬಂದಿಲ್ಲ. ಮುಂಗಾರಿನ ಕೊರತೆಗೆ ಇದೇ ಮುಖ್ಯ ಕಾರಣ ಎಂದು ತಿಳಿಸಿದ್ದಾರೆ.

ಉತ್ತರ ಕರ್ನಾಟಕ, ಕೊಡಗು ಮತ್ತು ಕೇರಳದಲ್ಲಿ ಪ್ರವಾಹ ಮತ್ತು ಭೂಕುಸಿತ ಪ್ರಕರಣಗಳ ಸಾಧ್ಯತೆ ಕಡಿಮೆಯಿದೆ. 2018 ಮತ್ತು 2019ರ ದುರಂತ ಪರಿಸ್ಥಿತಿಯ ರೀತಿ ಘಟನೆಗಳು ನಡೆಯುವುದಿಲ್ಲ. ಮಳೆಯ ಕೊರತೆಯಿಂದಾಗಿ 2025ರ ಬೇಸಿಗೆಯಲ್ಲಿಯೂ ಕುಡಿಯುವ ನೀರಿನ ಸಮಸ್ಯೆ ಎದುರಾಗುವ ಸಾಧ್ಯತೆಯಿದೆ ಎಂದು ಅವರು ಹೇಳಿಕೆಯಲ್ಲಿ ವಿವರಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಅಪಘಾತ: 22 ಮಂದಿ ದುರ್ಮರಣ

ಜಮ್ಮು(ಪಿಟಿಐ): ಜಿಲ್ಲೆಯ ಚೌಕಿ ಚೋರಾ ಬಳಿಯ ತುಂಗಿ–ಮೋರ್ಹ ಎಂಬ ಪ್ರದೇಶದಲ್ಲಿ ಗುರುವಾರ ಬಸ್‌ವೊಂದು ಕಮರಿಗೆ ಬಿದ್ದ ಪರಿಣಾಮ 22 ಜನ ಯಾತ್ರಾರ್ಥಿಗಳು ಮೃತಪಟ್ಟು, ಇತರ 47 ಜನರು ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಚಾಲಕನ ನಿಯಂತ್ರಣ ತಪ್ಪಿದ ಪರಿಣಾಮ ಪಲ್ಟಿಯಾದ ಬಸ್, 150 ಅಡಿ ಆಳದಲ್ಲಿ ಬಿದ್ದಿದೆ ಎಂದೂ ತಿಳಿಸಿದ್ದಾರೆ.

ಹರಿಯಾಣದ ಕುರುಕ್ಷೇತ್ರದ ಯಾತ್ರಾರ್ಥಿಗಳು ಪ್ರಯಾಣಿಸುತ್ತಿದ್ದರು. ಜಮ್ಮು–ಕಾಶ್ಮೀರದ ರಿಯಾಸಿ ಜಿಲ್ಲೆಯ ಪೌನಿ ಎಂಬಲ್ಲಿ ಇರುವ ಶಿವ ಖೋರಿ ಕ್ಷೇತ್ರಕ್ಕೆ ತೆರಳುವಾಗ ಈ ಅಪಘಾತ ಸಂಭವಿಸಿದೆ.

‘ಬಂಧಿತರು ಧಾರ್ಮಿಕ ಉಗ್ರರಲ್ಲ’

ಕೊಲಂಬೊ (ಪಿಟಿಐ): ಭಾರತದಲ್ಲಿ ಕಳೆದ ವಾರ ಬಂಧಿಸಲಾದ ಶಂಕಿತ ಐಎಸ್ ಉಗ್ರರು ‘ಧಾರ್ಮಿಕ ಉಗ್ರಗಾಮಿಗಳಲ್ಲ’; ಮಾದಕದ್ರವ್ಯ ವ್ಯಸನಿಗಳು ಎಂದು ಶ್ರೀಲಂಕಾ ಸರ್ಕಾರ ಗುರುವಾರ ತಿಳಿಸಿದೆ.

ಅಂಪರ ನಗರದಲ್ಲಿ ಮಾತನಾಡಿದ ಶ್ರೀಲಂಕಾದ ರಕ್ಷಣಾ ಕಾರ್ಯದರ್ಶಿ ಕಮಲ್ ಗುಣರತ್ನೆ, ‘ಭಾರತದಲ್ಲಿ ಬಂಧಿತರಾದವರ ಹಿನ್ನೆಲೆಯ ಕುರಿತು ತನಿಖೆ ನಡೆಸುತ್ತಿದ್ದೇವೆ. ಅವರೆಲ್ಲ ಮಾದಕದ್ರವ್ಯ ವ್ಯಸನಿಗಳು ಎನ್ನುವುದು ದೃಢಪಟ್ಟಿದೆ. ಅವರ ಕೆಲವು ಆಪ್ತರನ್ನೂ ವಶಕ್ಕೆ ತೆಗೆದುಕೊಂಡು, ವಿಚಾರಣೆ ನಡೆಸಿದ್ದೇವೆ. ಅವರಿಂದ ಕಲೆಹಾಕಿರುವ ಮಾಹಿತಿಯನ್ನು ಈಗಲೇ ಹಂಚಿಕೊಳ್ಳಲು ಸಾಧ್ಯವಿಲ್ಲ’ ಎಂದು ಹೇಳಿದ್ದಾರೆ.

ಬಾಲಕನ ರಕ್ತದ ಬದಲಿಗೆ ಇರಿಸಿದ್ದು ಮಹಿಳೆಯ ರಕ್ತ

ಪುಣೆ (ಪಿಟಿಐ): ಪೋರ್ಶೆ ಕಾರು ಅಪಘಾತದಲ್ಲಿ ಭಾಗಿಯಾದ 17 ವರ್ಷ ವಯಸ್ಸಿನ ಬಾಲಕನ ರಕ್ತದ ಮಾದರಿಯನ್ನು ಬದಲಿಸಿ, ಅದರ ಜಾಗದಲ್ಲಿ ಮಹಿಳೆಯೊಬ್ಬರ ರಕ್ತದ ಮಾದರಿಯನ್ನು ಇರಿಸಲಾಗಿತ್ತು ಎಂದು ನ್ಯಾಯಾಲಯಕ್ಕೆ ಪೊಲೀಸರು ಗುರುವಾರ ತಿಳಿಸಿದ್ದಾರೆ.

ರಕ್ತದ ಮಾದರಿಯನ್ನು ಈ ರೀತಿ ಬದಲಾಯಿಸಿ, ಬಾಲಕ ಕಾರು ಚಾಲನೆ ಮಾಡುತ್ತಿದ್ದ ಸಂದರ್ಭದಲ್ಲಿ ಮದ್ಯ ಕುಡಿದಿರಲಿಲ್ಲ ಎಂದು ತೋರಿಸುವ ಯತ್ನ ನಡೆಸಲಾಗಿದೆ ಎಂದು ವಿವರಿಸಿದ್ದಾರೆ.

ಪೊಲೀಸರು ಬಂಧಿಸಿರುವ ಸಸ್ಸೂನ್ ಆಸ್ಪತ್ರೆಯ ಇಬ್ಬರು ವೈದ್ಯರು ಹಾಗೂ ಒಬ್ಬ ನೌಕರನ ಪೊಲೀಸ್ ಕಸ್ಟಡಿಯ ಅವಧಿಯನ್ನು ಜೂನ್ 5ರವರೆಗೆ ವಿಸ್ತರಿಸಿ ಸೆಷನ್ಸ್ ನ್ಯಾಯಾಲಯವು ಆದೇಶಿಸಿದೆ. ಬಾಲಕನ ರಕ್ತದ ಮಾದರಿಯ ಬದಲಿಗೆ ಇರಿಸಿದ್ದ ರಕ್ತದ ಮಾದರಿಯು ಯಾವ ಮಹಿಳೆಯದ್ದು ಎಂಬುದನ್ನು ಗುರುತಿಸಬೇಕಿದೆ ಎಂದು ಪೊಲೀಸರು ನ್ಯಾಯಾಲಯಕ್ಕೆ ಮಾಹಿತಿ ನೀಡಿದ್ದಾರೆ. ಆದರೆ ಸರ್ಕಾರದ ಮೂಲವೊಂದರ ಪ್ರಕಾರ, ಅದು ಬಾಲಕನ ತಾಯಿಯ ರಕ್ತದ ಮಾದರಿ.

ಅಧಿಕಾರಿಗಳ ಬಂಧನ

ರಾಜ್‌ಕೋಟ್ (ಪಿಟಿಐ): ಟಿಆರ್‌ಪಿ ಗೇಮ್ ಜೋನ್ ಅಗ್ನಿ ಅನಾಹುತಕ್ಕೆ ಸಂಬಂಧಿಸಿದಂತೆ ಗುಜರಾತ್ ಪೊಲೀಸರು ಗುರುವಾರ ನಾಲ್ಕು ಮಂದಿ ಸರ್ಕಾರಿ ಅಧಿಕಾರಿಗಳನ್ನು ಬಂಧಿಸಿದ್ದಾರೆ.

ನಗರ ಯೋಜನಾ ಅಧಿಕಾರಿ ಎಂ.ಡಿ. ಸಗಾಥಿಯಾ, ಸಹಾಯಕ ಟಿಪಿಒಗಳಾದ ಮುಕೇಶ್ ಮಕ್ವಾನಾ ಮತ್ತು ಗೌತಮ್ ಜೋಷಿ, ಕಲಾವಾದ್ ರಸ್ತೆ ಅಗ್ನಿಶಾಮಕ ಠಾಣೆಯ ಠಾಣಾಧಿಕಾರಿ ಆಗಿದ್ದ ರೋಹಿತ್ ವಿಗೋರಾ ಅವರು ಬಂಧಿತರು.

ಮಣಿಪುರದಲ್ಲಿ ಪ್ರವಾಹ: ಉಕ್ಕೇರಿದ ನದಿಗಳು, ತಗ್ಗು ಪ್ರದೇಶ ಜಲಾವೃತ

ಸಂಕಷ್ಟಕ್ಕೆ ಸಿಲುಕಿದ ಸಾವಿರಾರು ಜನ

ಇಂಫಾಲ್ (ಪಿಟಿಐ): ಮಣಿಪುರದ ಇಂಫಾಲ್ ಕಣಿವೆಯಲ್ಲಿ ಭಾರಿ ಮಳೆಯಿಂದಾಗಿ ಪ್ರವಾಹ ಉಂಟಾಗಿದ್ದು, ಸಾವಿರಾರು ಜನರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಪ್ರಾಥಮಿಕ ಮಾಹಿತಿ ಪ್ರಕಾರ ಮೂವರು ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸೇನಾಪತಿ ಜಿಲ್ಲೆಯ ಥಾಂಗ್ಲಾಂಗ್ ರಸ್ತೆಯಲ್ಲಿ ಭಾರಿ ಮಳೆಯಿಂದ ಉಂಟಾದ ಭೂಕುಸಿತದಲ್ಲಿ 34 ವರ್ಷದ ವ್ಯಕ್ತಿಯೊಬ್ಬರು ಮೃತಪಟ್ಟಿದ್ದು, ಮೂವರು ಗಾಯಗೊಂಡಿದ್ದಾರೆ. ಪ್ರವಾಹದಿಂದ ಉಕ್ಕೇರಿದ ಸೇನಾಪತಿ ನದಿಯಲ್ಲಿ 83 ವರ್ಷದ ಮಹಿಳೆಯೊಬ್ಬರು ಮುಳುಗಿ ಮೃತಪಟ್ಟಿದ್ದಾರೆ.

ಇಂಫಾಲ್ ನದಿಯು ಉಕ್ಕಿ ಹರಿಯುತ್ತಿದ್ದು, ಹಲವು ಪ್ರದೇಶಗಳು ಮುಳುಗಡೆಯಾಗಿವೆ. ಕಣಿವೆಯಲ್ಲಿನ ನೂರಾರು ಮನೆಗಳಿಗೆ ನೀರು ನುಗ್ಗಿದ್ದರಿಂದ, ಸ್ಥಳೀಯ ನಿವಾಸಿಗಳು ಸಮುದಾಯ ಭವನಗಳಲ್ಲಿ ಆಸರೆ ಪಡೆದಿದ್ದಾರೆ.

ನಿರಂತರ ಮಳೆಯಿಂದಾಗಿ ಇಂಫಾಲ್ ಪೂರ್ವ ಜಿಲ್ಲೆಯ ಕೀರಂಗ್, ಖಬಮ್ ಮತ್ತು ಲೈರಿಯೆಂಗ್ಬಾಮ್ ಲೀಕೈ ಪ್ರದೇಶಗಳ ಬಳಿ ಇಂಫಾಲ್ ನದಿಯ ದಂಡೆಯು ಕೊಚ್ಚಿ ಹೋಗಿದ್ದು, ಹಲವು ಪ್ರದೇಶಗಳಿಗೆ ನೀರು ನುಗ್ಗಿದೆ.

ಇಂಫಾಲ್ ಪೂರ್ವ ಜಿಲ್ಲೆಯ ಹೆಯಿಂಗಾಂಗ್ ಮತ್ತು ಖುರೈ ವಿಧಾನಸಭಾ ಕ್ಷೇತ್ರದ ಹಲವು ಕಡೆ ಪ್ರವಾಹದ ನೀರು ಎದೆಮಟ್ಟದವರೆಗೂ ಬಂದಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆಯ (ಎನ್‌ಡಿಆರ್‌ಎಫ್) ತಂಡವು ಬುಧವಾರ ರಾತ್ರಿ 10 ಗಂಟೆ ಸುಮಾರಿಗೆ ವಾಯುಪಡೆಯ ವಿಶೇಷ ವಿಮಾನದ ಮೂಲಕ ಇಂಫಾಲ್‌ಗೆ ಬಂದಿದ್ದು, ಪ್ರವಾಹದಲ್ಲಿ ಸಿಲುಕಿದವರ ರಕ್ಷಣಾ ಕಾರ್ಯಾಚರಣೆ ಕೈಗೊಂಡಿದೆ.

ಪ್ರವಾಹ- ಜನರ ರಕ್ಷಣೆ: ರೀಮಲ್ ಚಂಡಮಾರುತದಿಂದ ನಿರಂತರವಾಗಿ ಸುರಿದ ವರ್ಷಧಾರೆಗೆ ತೀವ್ರವಾಗಿ ಹಾನಿಗೊಳಗಾದ ಮಣಿಪುರದ ಪ್ರವಾಹ ಪೀಡಿತ ಪ್ರದೇಶಗಳಿಂದ ಒಂದು ಸಾವಿರಕ್ಕೂ ಹೆಚ್ಚು ಜನರನ್ನು ರಕ್ಷಿಸಲಾಗಿದೆ ಎಂದು ಅಸ್ಸಾಂ ರೈಫಲ್ಸ್ ಪಡೆಗಳು ಹೇಳಿವೆ.

ರೀಮಲ್ ಚಂಡಮಾರುತದಿಂದ ಮಣಿಪುರದಲ್ಲಿ ಭಾರಿ ಮಳೆಯಾಗುತ್ತಿದ್ದು ಇಂಫಾಲ್‌ನಲ್ಲಿ ಗೋಚರಿಸಿದ ಪ್ರವಾಹದ ಚಿತ್ರಣ –ಪಿಟಿಐ ಚಿತ್ರ

ಧ್ಯಾನ ಆರಂಭಿಸಿದ ಮೋದಿ

ಕನ್ಯಾಕುಮಾರಿ (ಪಿಟಿಐ): ಸರಿಸುಮಾರು ಎರಡು ತಿಂಗಳ ಕಾಲ ಅಬ್ಬರದ ಚುನಾವಣಾ ಪ್ರಚಾರದಲ್ಲಿ ತೊಡಗಿಸಿಕೊಂಡಿದ್ದ ಪ್ರಧಾನಿ ನರೇಂದ್ರ ಮೋದಿ ಅವರು ಇಲ್ಲಿನ ವಿವೇಕಾನಂದ ಸ್ಮಾರಕದಲ್ಲಿ 45 ತಾಸುಗಳ ಧ್ಯಾನವನ್ನು ಗುರುವಾರ ಸಂಜೆ ಆರಂಭಿಸಿದರು.

ತಿರುವನಂತಪುರದಿಂದ ಹೆಲಿಕಾಪ್ಟರ್ ಮೂಲಕ ಕನ್ಯಾಕುಮಾರಿಗೆ ಆಗಮಿಸಿದ ಪ್ರಧಾನಿ, ಭಗವತಿ ಅಮ್ಮನವರ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿದರು. ನಂತರ ಸ್ಮಾರಕಕ್ಕೆ ನಾವೆಯ ಮೂಲಕ ತೆರಳಿದರು. ಮೋದಿ ಅವರು ಜೂನ್ 1ರಂದು ಧ್ಯಾನವನ್ನು ಕೊನೆಗೊಳಿಸಲಿದ್ದಾರೆ.

ಧೋತಿ ಮತ್ತು ಬಿಳಿ ಬಣ್ಣದ ಶಾಲು ಧರಿಸಿದ್ದ ಮೋದಿ ಅವರು ದೇವಸ್ಥಾನದ ಪ್ರಸಾದ ಸ್ವೀಕರಿಸಿದರು. ಧ್ಯಾನಕ್ಕೆ ಕೂರುವುದಕ್ಕೂ ಮೊದಲು ಮೋದಿ ಅವರು, ‘ಧ್ಯಾನ ಮಂಟಪ’ಕ್ಕೆ ಸಾಗುವ ಮೆಟ್ಟಿಲುಗಳ ಮೇಲೆ ತುಸು ಹೊತ್ತು ನಿಂತಿದ್ದರು.

ರಾಮಕೃಷ್ಣ ಪರಮಹಂಸ, ಶಾರದಾದೇವಿ ಅವರ ಭಾವಚಿತ್ರಗಳಿಗೆ ಹೂವುಗಳನ್ನು ಅರ್ಪಿಸಿ ಗೌರವ ಸಲ್ಲಿಸಿದರು. ನಂತರ ಅವರು ‘ಧ್ಯಾನ ಮಂಟಪ’ದಲ್ಲಿ ಇರುವ ಸ್ವಾಮಿ ವಿವೇಕಾನಂದರ ಪ್ರತಿಮೆಗೆ ಗೌರವ ಸಲ್ಲಿಸಿದರು. ಅದಾದ ನಂತರ ಧ್ಯಾನ ಆರಂಭಿಸಿದರು.

ವಿವೇಕಾನಂದ ಸ್ಮಾರಕಕ್ಕೆ ಮೋದಿ ಅವರು ನೀಡಿರುವ ಭೇಟಿಯು ‘ಸಂಪೂರ್ಣವಾಗಿ ಖಾಸಗಿ’ ಎಂದು ಬಿಜೆಪಿಯ ತಮಿಳುನಾಡು ಘಟಕದ ಅಧ್ಯಕ್ಷ ಕೆ. ಅಣ್ಣಾಮಲೈ ಹೇಳಿದ್ದಾರೆ. ಈ ಕಾರಣಕ್ಕಾಗಿಯೇ ಪಕ್ಷದ ನಾಯಕರು ಹಾಗೂ ಕಾರ್ಯಕರ್ತರು ಇದರಲ್ಲಿ ಭಾಗಿಯಾಗಿಲ್ಲ ಎಂದು ಅಣ್ಣಾಮಲೈ ತಿಳಿಸಿದ್ದಾರೆ.

ಜೂನ್ 1ರಂದು ಇಲ್ಲಿಂದ ವಾಪಸ್ಸಾಗುವ ಮೊದಲು ಮೋದಿ ಅವರು ತಿರುವಳ್ಳುವರ್ ಪ್ರತಿಮೆಗೆ ಭೇಟಿ ನೀಡುವ ಸಾಧ್ಯತೆ ಇದೆ. ಇದು ವಿವೇಕಾನಂದ ಸ್ಮಾರಕದ ಸನಿಹದಲ್ಲಿಯೇ ಇದೆ.

ಪ್ರಧಾನಿ ಮೋದಿ ಅವರ ಭೇಟಿಯನ್ನು ವಿರೋಧಿಸಿ ಮದುರೈನಲ್ಲಿ ಕೆಲವು ಸಂಘಟನೆಗಳು ಪ್ರತಿಭಟನೆ ನಡೆಸಿವೆ. ಸಾಮಾಜಿಕ ಜಾಲತಾಣ ‘ಎಕ್ಸ್’ನಲ್ಲಿ ಹಲವರು ‘ಗೋಬ್ಯಾಕ್‌ಮೋದಿ’ ಹ್ಯಾಷ್‌ಟ್ಯಾಗ್ ಇದ್ದ ಪೋಸ್ಟ್‌ಗಳನ್ನು ಪ್ರಕಟಿಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರು ಕನ್ಯಾಕುಮಾರಿಯ ಭಗವತಿ ಅಮ್ಮನವರ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿದರು. –ಪಿಟಿಐ ಚಿತ್ರ

ಶಹಜಹಾನ್ ವಿರುದ್ಧ ಇ.ಡಿ ಆರೋಪಪಟ್ಟಿ

ನವದೆಹಲಿ(ಪಿಟಿಐ): ಹಣದ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ತನಿಖೆ ಭಾಗವಾಗಿ, ಅಮಾನತುಗೊಂಡಿರುವ ಟಿಎಂಸಿ ನಾಯಕ, ಪಶ್ಚಿಮ ಬಂಗಾಳದ ಶಹಜಹಾನ್ ಶೇಖ್, ಆತನ ಸಹೋದರ ಹಾಗೂ ಇಬ್ಬರು ಸಹಚರರ ವಿರುದ್ಧ ಮೊದಲ ಆರೋಪಪಟ್ಟಿ ಸಲ್ಲಿಸಲಾಗಿದೆ ಎಂದು ಜಾರಿ ನಿರ್ದೇಶನಾಲಯ(ಇ.ಡಿ) ಗುರುವಾರ ತಿಳಿಸಿದೆ.

ಶಹಜಹಾನ್ ಶೇಖ್ ಸಹೋದರ ಶೇಖ್ ಆಲಂಗಿರ್ ಹಾಗೂ ಶಿವಪ್ರಸಾದ್ ಹಜ್ರಾ ಮತ್ತು ದೀದಾರ್ ಬಕ್ಷ್ ಮೊಲ್ಲ ಎಂಬುವವರ ಹೆಸರುಗಳನ್ನು ಆರೋಪಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ.ಜಾರಿ ನಿರ್ದೇಶನಾಲಯವು ಶೀಘ್ರವೇ ಪೂರಕ ಆರೋಪಪಟ್ಟಿಯನ್ನು ಸಲ್ಲಿಸುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

ಕೋಲ್ಕತ್ತದಲ್ಲಿರುವ ಪಿಎಂಎಲ್‌ಎ ವಿಶೇಷ ನ್ಯಾಯಾಲಯಕ್ಕೆ ಇ.ಡಿ ಆರೋಪ ಪಟ್ಟಿ ಸಲ್ಲಿಸಿದೆ.

‘ಶಹಜಹಾನ್, ಭೂಕಬಳಿಕೆ, ಅಕ್ರಮ ಮೀನುಗಾರಿಕೆ/ವ್ಯಾಪಾರ ಸೇರಿದಂತೆ ಕ್ರಿಮಿನಲ್ ಸಾಮ್ರಾಜ್ಯ ನಿರ್ಮಿಸಿದ್ದಾನೆ. ಈ ಅಕ್ರಮಗಳ ಜೊತೆಗೆ, ಇಟ್ಟಿಗೆ ತಯಾರಿಸುವ ಪ್ರದೇಶಗಳ ಕಬಳಿಕೆ, ಗುತ್ತಿಗೆಗಳನ್ನು ನಿಯಂತ್ರಿಸುವ ಕೂಟ ರಚನೆ, ಕಾನೂನುಬಾಹಿರ ತೆರಿಗೆ ಸಂಗ್ರಹ, ಜಮೀನುಗಳ ಪರಭಾರೆಯಲ್ಲಿ ಕಮಿಷನ್ ಪಡೆಯುವಂತಹ ಚಟುವಟಿಕೆಗಳ ಸುತ್ತಲೇ ಈ ಕ್ರಿಮಿನಲ್ ಸಾಮ್ರಾಜ್ಯ ಗಿರಕಿ ಹೊಡೆಯುತ್ತದೆ’ ಎಂದು ಆರೋಪಪಟ್ಟಿಯಲ್ಲಿ ಇ.ಡಿ ಆರೋಪಿಸಿದೆ.

ಬೇರೆ ಪ್ರಕರಣಗಳಿಗೆ ಸಂಬಂಧಿಸಿ ತನಿಖೆ ನಡೆಸುತ್ತಿರುವ ಸಿಬಿಐ ಕೂಡ, ಶೇಖ್ ಹಾಗೂ ಇತರರ ವಿರುದ್ಧ ಇದೇ ವಾರ ಆರೋಪ ಪಟ್ಟಿ ಸಲ್ಲಿಸಿದೆ.

ಎನ್‌ಒಸಿಗೆ ₹70 ಸಾವಿರ ಲಂಚ ನೀಡಿದ್ದ ಬಿಜೆಪಿ ಮುಖಂಡ

ಅಹಮದಾಬಾದ್ (ಪಿಟಿಐ): ರಾಜ್‌ಕೋಟ್ ಮಹಾನಗರ ಪಾಲಿಕೆಯ ಅಗ್ನಿಶಾಮಕ ಇಲಾಖೆಯಿಂದ ನಿರಾಕ್ಷೇಪಣಾ ಪತ್ರವನ್ನು ಪಡೆದುಕೊಳ್ಳಲು ತಾವು ₹70 ಸಾವಿರ ಲಂಚ ನೀಡಿರುವುದಾಗಿ ಬಿಜೆಪಿಯ ಹಿರಿಯ ಮುಖಂಡ ಹಾಗೂ ರಾಜ್ಯಸಭಾ ಸದಸ್ಯ ರಾಮ್ ಮೊಕಾರಿಯಾ ಹೇಳಿದ್ದಾರೆ.

ರಾಜ್‌ಕೋಟ್‌ನ ಟಿಆರ್‌ಪಿ ಗೇಮ್ ಜೋನ್‌ನಲ್ಲಿ ಅಗ್ನಿ ದುರಂತ ನಡೆದ ಕೆಲವೇ ದಿನಗಳಲ್ಲಿ ಅವರು ಈ ಹೇಳಿಕೆ ನೀಡಿದ್ದಾರೆ. ಈ ಗೇಮ್ ಜೋನ್, ಅಗ್ನಿಶಾಮಕ ಇಲಾಖೆಯಿಂದ ನಿರಾಕ್ಷೇಪಣಾ ಪತ್ರ ಪಡೆಯದೆಯೇ ಕಾರ್ಯಾಚರಣೆ ನಡೆಸುತ್ತಿತ್ತು ಎಂದು ಆರೋಪಿಸಲಾಗಿದೆ.

ರಾಜ್‌ಕೋಟ್‌ನಲ್ಲಿ ವ್ಯಾಪಕವಾಗಿರುವ ಭ್ರಷ್ಟಾಚಾರದ ಬಗ್ಗೆ ಮಾಹಿತಿ ನೀಡಲು ಮೊಕಾರಿಯಾ ಅವರು ತಮ್ಮ ವೈಯಕ್ತಿಕ ಅನುಭವವೊಂದನ್ನು ಸುದ್ದಿಗಾರರ ಜೊತೆ ಹಂಚಿಕೊಂಡಿದ್ದಾರೆ.

ತಾವು ಲಂಚವನ್ನು ಪಾಲಿಕೆಯ ಉಪ ಅಗ್ನಿಶಾಮಕ ಅಧಿಕಾರಿ ಬಿ.ಜೆ. ಥೆಬಾ ಅವರಿಗೆ ಸರಿಸುಮಾರು ಐದು ವರ್ಷಗಳ ಹಿಂದೆ ನೀಡಿದ್ದಾಗಿ, ಆಗ ತಾವು ರಾಜ್ಯಸಭಾ ಸದಸ್ಯ ಆಗಿರಲಿಲ್ಲ ಎಂಬುದಾಗಿ ಮೊಕಾರಿಯಾ ಸ್ಪಷ್ಟಪಡಿಸಿದ್ದಾರೆ. ಮೊಕಾರಿಯಾ ಅವರು ಆಗ ಉದ್ಯಮಿ ಆಗಿದ್ದರು.

ಮೊಕಾರಿಯಾ ಅವರು 2021ರಲ್ಲಿ ರಾಜ್ಯಸಭಾ ಸದಸ್ಯರಾಗಿ ಆಯ್ಕೆಯಾದರು. ‘ಥೆಬಾ ಅವರನ್ನು ಪೊಲೀಸರು ಗೇಮ್ ಜೋನ್ ಅಗ್ನಿದುರಂತದ ವಿಚಾರವಾಗಿ ವಿಚಾರಣೆಗೆ ಗುರಿಪಡಿಸಿದ್ದಾರೆ ಎಂದು ಗೊತ್ತಾಗಿದೆ. ಭ್ರಷ್ಟಾಚಾರವು ವ್ಯಾಪಕವಾಗಿದೆ, ನಾನು ಈ ಬಗ್ಗೆ ಹಿಂದೆಯೂ ಮನವಿಗಳನ್ನು ಸಲ್ಲಿಸಿದ್ದೇನೆ ಎಂಬುದನ್ನು ಹೇಳಲಷ್ಟೇ ಬಯಸಿದ್ದೇನೆ’ ಎಂದು ಮೊಕಾರಿಯಾ ಅವರು ತಿಳಿಸಿದ್ದಾರೆ.

ತಾವು ರಾಜ್ಯಸಭಾ ಸದಸ್ಯರಾದ ನಂತರ ಥೆಬಾ ಅವರು ಲಂಚದ ಹಣವನ್ನು ಮರಳಿಸಿದ್ದರು ಎಂದೂ ಮೊಕಾರಿಯಾ ಹೇಳಿದ್ದಾರೆ.

ಆಜಂ ಖಾನ್‌ಗೆ 10 ವರ್ಷ ಶಿಕ್ಷೆ

ಪ್ರಜಾವಾಣಿ ವಾರ್ತೆ

ಲಖನೌ: ಸಮಾಜವಾದಿ ಪಕ್ಷದ (ಎಸ್‌ಪಿ) ಹಿರಿಯ ನಾಯಕ ಮತ್ತು ಪಕ್ಷದ ಪ್ರಧಾನ ಕಾರ್ಯದರ್ಶಿ ಆಜಂ ಖಾನ್ ಅವರಿಗೆ 2016ರಲ್ಲಿ ದಾಖಲಾಗಿದ್ದ ಹಲ್ಲೆ, ಡಕಾಯಿತಿ ಮತ್ತು ಇತರ ಪ್ರಕರಣಗಳಲ್ಲಿ ಉತ್ತರಪ್ರದೇಶದ ರಾಂಪುರ ಪಟ್ಟಣದ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ಗುರುವಾರ 10 ವರ್ಷಗಳ ಜೈಲು ಶಿಕ್ಷೆ ವಿಧಿಸಿದೆ.

ಖಾನ್ ಅವರ ಸಹಾಯಕ ಮತ್ತು ಗುತ್ತಿಗೆದಾರ ಬರ್ಕತ್ ಅಲಿ ಅವರಿಗೂ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಏಳು ವರ್ಷಗಳ ಜೈಲು ಶಿಕ್ಷೆ ವಿಧಿಸಿದೆ. ಸದ್ಯ ಸೀತಾಪುರ ಜಿಲ್ಲಾ ಕಾರಾಗೃಹದಲ್ಲಿರುವ ಖಾನ್ ಅವರಿಗೆ ನ್ಯಾಯಾಲಯವು ₹14 ಲಕ್ಷ ದಂಡವನ್ನೂ ವಿಧಿಸಿದೆ. ಖಾನ್ ಅವರು ವಿಡಿಯೊ ಕಾನ್ಫರೆನ್ಸ್ ಮೂಲಕ ನ್ಯಾಯಾಲಯದ ಕಲಾಪಕ್ಕೆ ಹಾಜರಾಗಿದ್ದರು.

ಪ್ರಾಸಿಕ್ಯೂಷನ್ ಪ್ರಕಾರ, ಆಜಂ ಖಾನ್ ಅವರ ನಿರ್ದೇಶನದ ಮೇರೆಗೆ ಬರ್ಕತ್ ಅಲಿ ಮತ್ತು ಇತರರು 2016ರಲ್ಲಿ ರಾಂಪುರ ಪಟ್ಟಣದ ಡುಂಗರ್‌ಪುರ್ ಬಸ್ತಿ ನಿವಾಸಿಗಳ ಮನೆಗಳಿಗೆ ನುಗ್ಗಿ ಅವರ ಮೇಲೆ ಹಲ್ಲೆ ನಡೆಸಿದ್ದಲ್ಲದೆ, ಅವರನ್ನು ಮನೆಗಳಿಂದ ಹೊರಹಾಕಿದ್ದರು. ನಿವಾಸಿಗಳ ಮನೆಗಳಿಂದ ಬೆಲೆಬಾಳುವ ವಸ್ತುಗಳನ್ನು ಸಹ ದೋಚಿಕೊಂಡು ಹೋಗಿದ್ದರು.

2019ರಲ್ಲಿ ಈ ಸಂಬಂಧ ಖಾನ್ ಮತ್ತು ಅವರ ಸಹಚರರ ವಿರುದ್ಧ ಒಟ್ಟು 12 ಪ್ರಕರಣಗಳು ದಾಖಲಾಗಿದ್ದವು. ಹತ್ತಾರು ಪ್ರಕರಣಗಳಲ್ಲಿ ವಿಚಾರಣೆ ಎದುರಿಸಿರುವ ಆಜಂ ಖಾನ್, ಈ ಹಿಂದೆ ಡುಂಗರ್‌ಪುರ ಬಸ್ತಿ ತೆರವಿಗೆ ಸಂಬಂಧಿಸಿದ ಪ್ರಕರಣಗಳ ಪೈಕಿ ಒಂದು ಪ್ರಕರಣದಲ್ಲಿ ತಪ್ಪಿತಸ್ಥರೆಂದು ಸಾಬೀತಾಗಿದ್ದು, ಎಂಟು ವರ್ಷಗಳ ಜೈಲು ಶಿಕ್ಷೆಗೆ ಗುರಿಯಾಗಿದ್ದಾರೆ. ಕೆಲವು ತಿಂಗಳ ಹಿಂದೆ ಖಾನ್ ಅವರಿಗೆ ಅವರ ಮಗ ಅಬ್ದುಲ್ಲಾ ಆಜಂಗೆ ನಕಲಿ ಜನನ ಪ್ರಮಾಣಪತ್ರ ಕೊಡಿಸಿದ ಪ್ರಕರಣದಲ್ಲಿ ಏಳು ವರ್ಷಗಳ ಜೈಲು ಶಿಕ್ಷೆ ವಿಧಿಸಲಾಗಿದೆ. ಅಲ್ಲದೆ, ಈ ಪ್ರಕರಣದಲ್ಲಿ ಖಾನ್ ಅವರ ಪತ್ನಿ ತಂಝೀನ್ ಫಾತಿಮಾ ಮತ್ತು ಮಗ ಅಬ್ದುಲ್ಲಾ ಆಜಂಗೂ ಏಳು ವರ್ಷಗಳ ಜೈಲು ಶಿಕ್ಷೆ ವಿಧಿಸಲಾಗಿದೆ.

ಆಜಂ ಖಾನ್

ನ್ಯಾಯಾಲಯದ ತೀರ್ಪಿನ ಬಗ್ಗೆ ಪ್ರತಿಕ್ರಿಯಿಸಿರುವ ಸಮಾಜವಾದಿ ಪಕ್ಷದ ನಾಯಕರು, ‘ಬಿಜೆಪಿಯ ಕೃಪಾಪೋಷಿತರಾಗಿ ಕೆಲವು ಅಧಿಕಾರಿಗಳು ಆಜಂ ಖಾನ್ ವಿರುದ್ಧ ಸಂಚು ರೂಪಿಸಿದ್ದಾರೆ. ಆಜಂ ಖಾನ್ ಮತ್ತು ಅವರ ಕುಟುಂಬವನ್ನು ಗುರಿಯಾಗಿಸಲಾಗುತ್ತಿದೆ. ಇದು ಸಮಾಜದ ಒಂದು ವರ್ಗವನ್ನು ಭಯಭೀತಗೊಳಿಸುವ ಭಾರಿ ಹುನ್ನಾರದ ಭಾಗವಾಗಿದೆ’ ಎಂದು ಹೇಳಿದ್ದಾರೆ.

ದ್ವೇಷ ಭಾಷಣ ಆರೋಪ ಪ್ರಕರಣದಲ್ಲಿ ಮೂರು ವರ್ಷಗಳ ಶಿಕ್ಷೆಗೆ ಗುರಿಯಾದ ನಂತರ ಆಜಂ ಖಾನ್ ಅವರು 2022ರಲ್ಲಿ ಉತ್ತರ ಪ್ರದೇಶ ವಿಧಾನಸಭೆ ಸದಸ್ಯತ್ವವನ್ನು ಕಳೆದುಕೊಂಡಿದ್ದಾರೆ.

ಛೋಟಾ ರಾಜನ್‌ಗೆ ಜೀವಾವಧಿ ಶಿಕ್ಷೆ

ಮುಂಬೈ (ಪಿಟಿಐ): 2001ರಲ್ಲಿ ಇಲ್ಲಿನ ಹೋಟೆಲ್ ಉದ್ಯಮಿ ಜಯಾ ಶೆಟ್ಟಿ ಹತ್ಯೆ ಪ್ರಕರಣದಲ್ಲಿ ಭೂಗತ ಪಾತಕಿ ಛೋಟಾ ರಾಜನ್‌ಗೆ ಮುಂಬೈನ ವಿಶೇಷ ನ್ಯಾಯಾಲಯ ಜೀವಾವಧಿ ಶಿಕ್ಷೆ ವಿಧಿಸಿದೆ.

ಮಹಾರಾಷ್ಟ್ರ ಸಂಘಟಿತ ಅಪರಾಧ ನಿಯಂತ್ರಣ ಕಾಯ್ದೆಯಡಿ (ಎಂಸಿಒಸಿಎ) ಸ್ಥಾಪಿಸಿರುವ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಎಂ.ಎಂ.ಪಾಟೀಲ ಅವರು ರಾಜನ್ ಅಪರಾಧಿ ಎಂದು ಘೋಷಿಸಿದರು.

ಜಯಾ ಶೆಟ್ಟಿ ಅವರು ಮುಂಬೈನ ಗಾಮ್ದೇವಿಯಲ್ಲಿ ಗೋಲ್ಡನ್ ಕ್ರೌನ್ ಹೋಟೆಲ್ ಹೊಂದಿದ್ದರು. 2001ರ ಮೇ 4ರಂದು ಹೋಟೆಲ್‌ನ ಮೊದಲ ಮಹಡಿಯಲ್ಲಿ ರಾಜನ್ ಗ್ಯಾಂಗ್‌ನ ಇಬ್ಬರು ಆರೋಪಿಗಳು ಶೆಟ್ಟಿಯನ್ನು ಗುಂಡಿಕ್ಕಿ ಕೊಂದಿದ್ದರು.

ರೆಗ್ಯುಲರ್ ಜಾಮೀನಿಗೆ ಕೇಜ್ರಿವಾಲ್ ಮೊರೆ

ಪ್ರಜಾವಾಣಿ ವಾರ್ತೆ

ನವದೆಹಲಿ: ದೆಹಲಿಯ ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದ ಹಣದ ಅಕ್ರಮ ವರ್ಗಾವಣೆ ಪ್ರಕರಣದ ಆರೋಪಿಯಾಗಿರುವ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ರೆಗ್ಯುಲರ್ ಜಾಮೀನು ಕೋರಿ ನ್ಯಾಯಾಲಯದ ಮೊರೆ ಹೋಗಿದ್ದಾರೆ.

ಚುನಾವಣಾ ಪ್ರಚಾರದಲ್ಲಿ ಪಾಲ್ಗೊಳ್ಳಲು ಸುಪ್ರೀಂ ಕೋರ್ಟ್ ನೀಡಿರುವ ಮಧ್ಯಂತರ ಜಾಮೀನು ಜೂನ್ 1ಕ್ಕೆ ಕೊನೆಗೊಳ್ಳಲಿದೆ. ಕೇಜ್ರಿವಾಲ್ ಸಲ್ಲಿಸಿರುವ ರೆಗ್ಯುಲರ್ ಜಾಮೀನು ಅರ್ಜಿಗೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯಕ್ಕೆ (ಇ.ಡಿ) ನೋಟಿಸ್ ಜಾರಿಗೆ ನ್ಯಾಯಾಧೀಶರಾದ ಕಾವೇರಿ ಬವೇಜಾ ಅವರು ಆದೇಶಿಸಿದ್ದಾರೆ. ಇ.ಡಿ. ಅಧಿಕಾರಿಗಳು ಜೂನ್ 1ರಂದು ಪ್ರತಿಕ್ರಿಯೆ ಸಲ್ಲಿಸಬೇಕು ಎಂದು ಸೂಚಿಸಿದ್ದಾರೆ.

ವಿಚಾರಣೆಯನ್ನು ಕೋರ್ಟ್ ಶನಿವಾರಕ್ಕೆ ನಿಗದಿಪಡಿಸಿದೆ. ಮಧ್ಯಂತರ ಜಾಮೀನಿನ ಅವಧಿಯನ್ನು ಏಳು ದಿನಗಳವರೆಗೆ ವಿಸ್ತರಿಸಬೇಕು ಎಂಬ ಕೋರಿಕೆ ಇದ್ದ ಅರ್ಜಿಯನ್ನು ವಿಚಾರಣೆಗೆ ಎತ್ತಿಕೊಳ್ಳಲು ಸುಪ್ರೀಂ ಕೋರ್ಟ್‌ನ ರಿಜಿಸ್ಟ್ರಿ ನಿರಾಕರಿಸಿದ ನಂತರ ಕೇಜ್ರಿವಾಲ್ ಅವರು ರೌಜ್ ಅವಿನ್ಯು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದಾರೆ.

ಮೂವರು ಲೆಫ್ಟಿನೆಂಟ್ ಕರ್ನಲ್‌ಗಳ ವಿರುದ್ಧ ಎಫ್‌ಐಆರ್

ಕುಪ್ವಾರ (ಪಿಟಿಐ): ಕುಪ್ವಾರ ಪೊಲೀಸ್ ಠಾಣೆ ಮೇಲೆ ಹಿಂಸಾತ್ಮಕ ದಾಳಿ ನಡೆಸಿದ್ದ ಆರೋಪದಲ್ಲಿ ಸೇನೆಯ ಮೂವರು ಲೆಫ್ಟಿನೆಂಟ್ ಕರ್ನಲ್‌ಗಳು ಮತ್ತು ಇತರ 13 ಮಂದಿ ವಿರುದ್ಧ ಕೊಲೆಗೆ ಯತ್ನ, ದರೋಡೆ ಮತ್ತು ಇನ್ನಿತರ ಪ್ರಕರಣಗಳನ್ನು ದಾಖಲಿಸಲಾಗಿದೆ.

ಮಾದಕವಸ್ತು ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಾದೇಶಿಕ ಸೇನೆಯ ಯೋಧರೊಬ್ಬರನ್ನು ಜಮ್ಮು ಮತ್ತು ಕಾಶ್ಮೀರ ಪೊಲೀಸರು ವಿಚಾರಣೆಗೆ ಒಳಪಡಿಸಿದ್ದರು. ಇದರಿಂದ ಕುಪಿತರಾಗಿದ್ದ ಸೇನಾ ಸಿಬ್ಬಂದಿ ಪೊಲೀಸ್ ಠಾಣೆ ಮೇಲೆ ಮೇ 28ರ ರಾತ್ರಿ ದಾಳಿ ನಡೆಸಿದ್ದರು. ಉದ್ರಿಗ್ನರ ತಂಡವನ್ನು ಲೆಫ್ಟಿನಂಟ್ ಕರ್ನಲ್‌ಗಳಾದ ಅಂಕಿತ್ ಸೂದ್, ರಾಜೀವ್ ಚೌಹಾನ್ ಮತ್ತು ನಿಖಿಲ್ ಅವರು ಮುನ್ನಡೆಸಿದ್ದರು. ಪೊಲೀಸ್ ಠಾಣೆಯನ್ನು ವಶಕ್ಕೆ ತೆಗೆದುಕೊಂಡಿದ್ದ ಅವರು, ಪೊಲೀಸ್ ಅಧಿಕಾರಿಗಳ ಮೇಲೆ ದಾಳಿ ನಡೆಸಿದ್ದರು.

ಖಾಸಗಿ ನವೋದ್ಯಮ ‘ಅಗ್ನಿಕುಲ ಕಾಸ್ಮಾಸ್’ ನಿರ್ಮಿತ ರಾಕೆಟ್

‘ಅಗ್ನಿಬಾಣ’ ರಾಕೆಟ್ ಪರೀಕ್ಷಾರ್ಥ ಪ್ರಯೋಗ ಯಶಸ್ವಿ

ನವದೆಹಲಿ (ಪಿಟಿಐ): ಚೆನ್ನೈ ಮೂಲದ, ಬಾಹ್ಯಾಕಾಶ ಕ್ಷೇತ್ರದ ನವೋದ್ಯಮ ‘ಅಗ್ನಿಕುಲ ಕಾಸ್ಮಾಸ್’ ಅಭಿವೃದ್ಧಿಪಡಿಸಿರುವ ಸೆಮಿ ಕ್ರಯೋಜನಿಕ್ ಎಂಜಿನ್ ಹೊಂದಿರುವ ‘ಅಗ್ನಿಬಾಣ’ ರಾಕೆಟ್‌ನ ಪರೀಕ್ಷಾರ್ಥ ಪ್ರಯೋಗವನ್ನು ಸಂಸ್ಥೆ ಗುರುವಾರ ಯಶಸ್ವಿಯಾಗಿ ನೆರವೇರಿಸಿದೆ.

ಶ್ರೀಹರಿಕೋಟಾದಲ್ಲಿರುವ ತನ್ನದೇ ಉಡಾವಣಾನೆಲೆಯಿಂದ ಸಂಸ್ಥೆಯು ಈ ರಾಕೆಟ್ ಅನ್ನು ಉಡ್ಡಯನ ಮಾಡಿದೆ.

3ಡಿ ತಂತ್ರಜ್ಞಾನ ಬಳಸಿ ಅಗ್ನಿಕುಲ ಕಾಸ್ಮೋಸ್ ಈ ರಾಕೆಟ್ ನಿರ್ಮಿಸಿದೆ. ಇಂತಹ ರಾಕೆಟ್ ಅನ್ನು ಅಭಿವೃದ್ಧಿಪಡಿಸಿರುವ ಭಾರತದ ಖಾಸಗಿ ಕ್ಷೇತ್ರದ ಎರಡನೇ ಸಂಸ್ಥೆ ಎಂಬ ಹೆಗ್ಗಳಿಕೆಗೂ ಪಾತ್ರವಾಗಿದೆ.

ಈ ರಾಕೆಟ್, ಭೂಮಿಯ ಕಕ್ಷೆ ಸೇರುವುದಕ್ಕೆ ಬೇಕಾದುದಕ್ಕಿಂತ ಕಡಿಮೆ ವೇಗದಲ್ಲಿ ನಿರ್ದಿಷ್ಟ ಎತ್ತರದವರೆಗೆ ಹಾರಿ ಮರಳಿ ಭೂಮಿಯನ್ನು ಸೇರಿತು. ರಾಕೆಟ್‌ನ ಇಂತಹ ಹಾರಾಟಕ್ಕೆ ಸಬ್ ಆರ್ಬಿಟಲ್ ಫ್ಲೈಟ್ ಎನ್ನಲಾಗುತ್ತದೆ.

ಸಂಸ್ಥೆ ಈ ಹಿಂದೆ ಕೈಗೊಂಡಿದ್ದ ನಾಲ್ಕು ಪ್ರಯತ್ನಗಳು ಕೈಗೂಡಿರಲಿಲ್ಲ. ಗುರುವಾರ ಬೆಳಿಗ್ಗೆ 7.15ಕ್ಕೆ ಸಂಸ್ಥೆ ಕೈಗೊಂಡ ಪರೀಕ್ಷೆ ಯಶಸ್ವಿಯಾಯಿತು. ಶ್ರೀಹರಿಕೋಟಾದಲ್ಲಿರುವ ಇಸ್ರೊದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದ ಬಳಿಯೇ ಸಂಸ್ಥೆ ಹೊಂದಿರುವ ಉಡ್ಡಯನ ನೆಲೆಯಿಂದ ಈ ರಾಕೆಟ್ ನಭಕ್ಕೆ ಚಿಮ್ಮಿತು. ಸಂಸ್ಥೆಯ ಈ ಯಶಸ್ಸಿಗೆ ಕೇಂದ್ರದಲ್ಲಿ ಹಾಜರಿದ್ದ ಕೆಲವು ಜನ ಗಣ್ಯರು ಸಾಕ್ಷಿಯಾದರು.

ಈ ಕುರಿತು ‘ಎಕ್ಸ್’ನಲ್ಲಿ ಸಂತಸ ಹಂಚಿಕೊಂಡಿರುವ ಅಗ್ನಿಕುಲ ಕಾಸ್ಮೋಸ್ ಸಂಸ್ಥೆ, ‘ಅಗ್ನಿಬಾಣ ಸಬ್ ಆರ್ಬಿಟಲ್ ಟೆಕ್ನಾಲಜಿ ಪ್ರಾತ್ಯಕ್ಷಿಕೆ (ಎಸ್‌ಒಆರ್‌ಟಿಇಡಿ) ಪರೀಕ್ಷೆ ಯಶಸ್ವಿಯಾಗಿದೆ ಎಂದು ಘೋಷಿಸಲು ಸಂತಸವೆನಿಸುತ್ತದೆ. ಈ ಪರೀಕ್ಷೆಯು ರಾಕೆಟ್‌ನ ಸಾಮರ್ಥ್ಯವನ್ನು ದೃಢೀಕರಿಸಿದೆ’ ಎಂದು ಪೋಸ್ಟ್ ಮಾಡಿದೆ.

‘3ಡಿ ತಂತ್ರಜ್ಞಾನ ಆಧರಿತ ಹಾಗೂ ಸೆಮಿ ಕ್ರಯೋಜನಿಕ್ ಎಂಜಿನ್ ಹೊಂದಿರುವ ದೇಶದ ಪ್ರಥಮ ರಾಕೆಟ್ ಇದಾಗಿದೆ’ ಎಂದೂ ಸಂಸ್ಥೆ ಹೇಳಿದೆ.

ಹೈದರಾಬಾದ್ ಮೂಲದ ಸ್ಕೈರೂಟ್ ಏರೋಸ್ಪೇಸ್ ಕಂಪನಿಯು ತಾನು ಅಭಿವೃದ್ಧಿಪಡಿಸಿದ್ದ ‘ವಿಕ್ರಮ್–ಎಸ್’ ಎಂಬ ಸಬ್ ಆರ್ಬಿಟಲ್ ರಾಕೆಟ್ ಅನ್ನು 2022ರ ನವೆಂಬರ್‌ನಲ್ಲಿ ಉಡ್ಡಯನ ಮಾಡಿತ್ತು.



ಶ್ರೀಹರಿಕೋಟಾದಲ್ಲಿರುವ ತನ್ನ ಉಡ್ಡಯನ ನೆಲೆಯಿಂದ ಚೆನ್ನೈ ಮೂಲದ ‘ಅಗ್ನಿಕುಲ ಕಾಸ್ಮೋಸ್’ ಸಂಸ್ಥೆಯು ತಾನು ಅಭಿವೃದ್ಧಿಪಡಿಸಿರುವ ‘ಅಗ್ನಿಬಾಣ’ ರಾಕೆಟ್‌ನ ಪರೀಕ್ಷಾರ್ಥ ಉಡ್ಡಯನವನ್ನು ಗುರುವಾರ ಯಶಸ್ವಿಯಾಗಿ ನಡೆಸಿತು
–ಪಿಟಿಐ ಚಿತ್ರ

ಪ್ರಧಾನಿ ಮೋದಿ ಮೆಚ್ಚುಗೆ

‘ಅಗ್ನಿಬಾಣ’ ರಾಕೆಟ್‌ನ ಪರೀಕ್ಷಾರ್ಥ ಪ್ರಯೋಗ ಯಶಸ್ವಿಯಾಗಿರುವುದಕ್ಕೆ ಸಂತಸ ವ್ಯಕ್ತಪಡಿಸಿರುವ ಪ್ರಧಾನಿ ನರೇಂದ್ರ ಮೋದಿ, ‘ಇದೊಂದು ಗಮನಾರ್ಹ ಸಾಧನೆ. ಇದು ಇಡೀ ದೇಶವೇ ಹೆಮ್ಮೆ ಪಡುವಂತೆ ಮಾಡಿದೆ’ ಎಂದು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

‘3ಡಿ ತಂತ್ರಜ್ಞಾನ ಬಳಸಿ ನಿರ್ಮಿಸಿರುವ ಸೆಮಿ ಕ್ರಯೋಜನಿಕ್ ಎಂಜಿನ್ ಹೊಂದಿದ ವಿಶ್ವದ ಮೊದಲ ಏಕರಚನೆಯ ರಾಕೆಟ್ ‘ಅಗ್ನಿಬಾಣ’ದ ಪರೀಕ್ಷೆ ಯಶಸ್ವಿಯಾಗಿರುವುದು ಭಾರತದ ಬಾಹ್ಯಾಕಾಶ ಕ್ಷೇತ್ರದ ಪಾಲಿಗೆ ಅವಿಸ್ಮರಣೀಯ ಸಂಗತಿ. ದೇಶದ ಯುವಶಕ್ತಿಯ ಸಾಮರ್ಥ್ಯಕ್ಕೂ ಇದು ಸಾಕ್ಷಿಯಾಗಿದೆ. ಅಗ್ನಿಕುಲ ಕಾಸ್ಮೋಸ್ ತಂಡ ಕೈಗೊಳ್ಳುವ ಭವಿಷ್ಯದ ಯೋಜನೆಗಳಿಗೆ ನನ್ನ ಶುಭಾಶಯಗಳು’ ಎಂದು ಮೋದಿ ಪೋಸ್ಟ್ ಮಾಡಿದ್ದಾರೆ.

ಅಗ್ನಿಕುಲ ಕಾಸ್ಮೋಸ್‌ನ ಈ ಸಾಧನೆ ಬಾಹ್ಯಾಕಾಶ ಕ್ಷೇತ್ರದ ನವೋದ್ಯಮಗಳಿಗೆ ಮತ್ತಷ್ಟು ನೆರವು ನೀಡಲು ಇಸ್ರೊಗೆ ಪ್ರೇರಣೆ ನೀಡಿದೆ

ಎಸ್.ಸೋಮನಾಥ್, ಇಸ್ರೊ ಅಧ್ಯಕ್ಷ

ಅಗ್ನಿಬಾಣ ರಾಕೆಟ್‌ನ ಯಶಸ್ವಿ ಪರೀಕ್ಷೆ ಐತಿಹಾಸಿಕ ಕ್ಷಣ. ಇದು ದೇಶದ ಬಾಹ್ಯಾಕಾಶ ಕ್ಷೇತ್ರಕ್ಕೆ ಖಾಸಗಿ ವಲಯದ ಕೊಡುಗೆಯನ್ನು ತೋರಿಸುತ್ತದೆ

ಪವನ್ ಗೋಯೆಂಕಾ, ಅಧ್ಯಕ್ಷ ಭಾರತೀಯ ಬಾಹ್ಯಾಕಾಶ ಉತ್ತೇಜನ ಮತ್ತು ದೃಢೀಕರಣ ಕೇಂದ್ರ

ಪ್ರಜ್ಞಾನಂದಗೆ ಮಣಿದ ಕಾರ್ಲ್‌ಸನ್

ಸ್ಟೆವೆಂಜರ್, ನಾರ್ವೆ (ಪಿಟಿಐ): ಭಾರತದ ಗ್ರ್ಯಾಂಡ್‌ಮಾಸ್ಟರ್ ಆರ್. ಪ್ರಜ್ಞಾನಂದ ಅವರು ಮತ್ತೊಂದು ಮಹತ್ವದ ಸಾಧನೆಯನ್ನು ದಾಖಲಿಸಿದರು.

ನಾರ್ವೆ ಚೆಸ್ ಟೂರ್ನಿಯಲ್ಲಿ ಪ್ರಜ್ಞಾನಂದ ಅವರು ವಿಶ್ವದ ಅಗ್ರಮಾನ್ಯ ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್ ಅವರನ್ನು ಮಣಿಸಿದರು. ಕ್ಲಾಸಿಕಲ್ ಮಾದರಿಯ ಚೆಸ್‌ನಲ್ಲಿ ಇದೇ ಮೊದಲ ಸಲ ಪ್ರಜ್ಞಾನಂದ ಈ ಸಾಧನೆ ಮಾಡಿದ್ದಾರೆ.

ಆನ್‌ಲೈನ್ ಮತ್ತು ರ್‍ಯಾಪಿಡ್ ಮಾದರಿಗಳಲ್ಲಿ ಚೆನ್ನೈನ ಪ್ರಜ್ಞಾನಂದ ಅವರು ಕಾರ್ಲ್‌ಸನ್ ಅವರನ್ನು ಈ ಹಿಂದೆ ಸೋಲಿಸಿದ್ದರು. ಆದರೆ ಈ ಬಾರಿ ಕ್ಲಾಸಿಕಲ್‌ನಲ್ಲಿ ಮ್ಯಾಗ್ನಸ್ ಅವರನ್ನು ಅವರದ್ದೇ ತವರಿನಲ್ಲಿ ಮಣಿಸಿದ್ದಾರೆ. ಪ್ರಜ್ಞಾನಂದ ಅವರು 5.5 ಅಂಕಗಳೊಂದಿಗೆ ಪುರುಷರ ವಿಭಾಗದಲ್ಲಿ ಅಗ್ರಸ್ಥಾನಕ್ಕೇರಿದ್ದಾರೆ. ಮ್ಯಾಗ್ನಸ್ 3 ಅಂಕ ಗಳಿಸಿದ್ದಾರೆ.

ಅಮೆರಿಕದ ಹಿಕಾರು ನಕಾಪುರಾ, ಫ್ರಾನ್ಸ್‌ನ ಫಿರೌಜಾ ಅಲಿರೇಜಾ ಮತ್ತು ಚೀನಾದ ಡಿಂಗ್ ಲಿರೇನ್ ತಲಾ 2.5 ಅಂಕ ಗಳಿಸಿ ಜಂಟಿ ನಾಲ್ಕನೇ ಸ್ಥಾನದಲ್ಲಿದ್ದಾರೆ.

ಆರು ಆಟಗಾರರು ಇರುವ ಡಬಲ್ ರೌಂಡ್ ರಾಬಿನ್ ಸ್ಪರ್ಧೆ ಇದಾಗಿದೆ. ಕ್ಲಾಸಿಕಲ್ ಚೆಸ್ ನಿಧಾನಗತಿಯದ್ದಾಗಿದೆ. ಆಟಗಾರರು ಯೋಚಿಸಿ ಯೋಜಿಸಲು ಬಹಳಷ್ಟು ಸಮಯ ದೊರೆಯುತ್ತದೆ. ಪಂದ್ಯವು ಕನಿಷ್ಠ ಒಂದು ಗಂಟೆಯಾದರೂ ನಡೆಯುತ್ತದೆ. ಪ್ರಜ್ಞಾನಂದ ಮತ್ತು ಮ್ಯಾಗ್ನಸ್ ಅವರು ಈ ಹಿಂದೆ ಮೂರು ಸಲ ಈ ಮಾದರಿಯಲ್ಲಿ ಮುಖಾಮುಖಿಯಾದಾಗ ಡ್ರಾ ಮಾಡಿಕೊಂಡಿದ್ದರು. ಆದರೆ ಈ ಸಲ 18 ವರ್ಷದ ಪ್ರಜ್ಞಾನಂದ ಮೇಲುಗೈ ಸಾಧಿಸಿದರು.

ಆರ್. ಪ್ರಜ್ಞಾನಂದ

ವೈಶಾಲಿಗೆ ಅಗ್ರಸ್ಥಾನ

ಮಹಿಳೆಯರ ವಿಭಾಗದಲ್ಲಿ ಪ್ರಜ್ಞಾನಂದ ಅವರ ಅಕ್ಕ ಆರ್. ವೈಶಾಲಿ ಅಗ್ರಸ್ಥಾನದಲ್ಲಿ ಮುಂದುವರಿದಿದ್ದಾರೆ. ಅವರು ನಾರ್ವೆಯ ಅನಾ ಮುಝಿಚುಕ್ ವಿರುದ್ಧ ಆರ್ಮ್‌ಗೆಡಾನ್ ಗೇಮ್‌ನಲ್ಲಿ ಡ್ರಾ ಮಾಡಿಕೊಂಡಿದ್ದರು. ವೈಶಾಲಿ 5.5 ಅಂಕಗಳನ್ನು ಗಳಿಸಿದ್ದಾರೆ.

ಇನ್ನೊಂದು ಹಣಾಹಣಿಯಲ್ಲಿ ಭಾರತದ ಕೋನೇರು ಹಂಪಿ ಚೀನಾದ ಟಿಂಗ್ಲಿ ಲೀ ವಿರುದ್ಧ ಜಯಿಸಿದರು.

ಫ್ರೆಂಚ್ ಓಪನ್ ಟೆನಿಸ್: ಮೂರನೇ ಸುತ್ತಿಗೆ ಜ್ವೆರೆವ್, ಸಬಲೆಂಕಾ

ಜೊಕೊವಿಚ್ ಮುನ್ನಡೆ

ಪ್ಯಾರಿಸ್ (ರಾಯಿಟರ್ಸ್/ಎಎಫ್‌ಪಿ): ಹಾಲಿ ಚಾಂಪಿಯನ್ ನೊವಾಕ್ ಜೊಕೊವಿಚ್ ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯಲ್ಲಿ ಮೂರನೇ ಸುತ್ತು ಪ್ರವೇಶಿಸಿದರು.

ರೊಲ್ಯಾಂಡ್ ಗ್ಯಾರೊಸ್‌ನಲ್ಲಿ ಗುರುವಾರ ನಡೆದ ಪುರುಷರ ಸಿಂಗಲ್ಸ್ ಪಂದ್ಯದಲ್ಲಿ ನೊವಾಕ್ 6-4, 6-1, 6-2ರಿಂದ ಸ್ಪೇನ್ ದೇಶದ ರಾಬರ್ಟೊ ಕಾರ್ಬೆಲೆಸ್ ಬೇಯ್ನಾ ವಿರುದ್ಧ ಗೆದ್ದರು.

ತಮ್ಮ ವೃತ್ತಿಜೀವನದ 25ನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಮೇಲೆ ಕಣ್ಣಿಟ್ಟಿರುವ ಸರ್ಬಿಯಾದ ನೊವಾಕ್ ಮೊದಲ ಸೆಟ್‌ನಲ್ಲಿ ಸ್ಪೇನ್ ಆಟಗಾರನಿಂದ ತುಸು ಪೈಪೋಟಿ ಎದುರಿಸಿದರು.

ಈ ಸೆಟ್‌ನ ಒಂಬತ್ತನೇ ಗೇಮ್‌ನಲ್ಲಿ 37 ವರ್ಷದ ನೊವಾಕ್ ಬ್ರೇಕ್ ಪಾಯಿಂಟ್ ಪಡೆದರು. 24 ಶಾಟ್‌ಗಳ ರ್‍ಯಾಲಿಯ ನಂತರ ದೊಡ್ಡ ಸ್ಮ್ಯಾಷ್ ಹೊಡೆದ ನೊವಾಕ್ ಈ ಪಾಯಿಂಟ್ ಗಿಟ್ಟಿಸಿದರು.

ನಂತರದ ಸೆಟ್‌ನಲ್ಲಿ ನೊವಾಕ್ 4-0 ಮುನ್ನಡೆ ಸಾಧಿಸಿದರು. ಈ ಹಂತದಲ್ಲಿ 31 ವರ್ಷದ ಬೆಯ್ನಾ ಅವರು ತಿರುಗೇಟು ನೀಡುವ ಪ್ರಯತ್ನ ಮಾಡಿದರು. ಒಂದು ಗೇಮ್ ಗೆದ್ದರು. ಆದರೆ ನೊವಾಕ್ ಸೆಟ್ ಬಿಟ್ಟು ಕೊಡಲಿಲ್ಲ. ಕೊನೆಯ ಸೆಟ್‌ನಲ್ಲಿಯೂ ತಮ್ಮ ಅನುಭವದ ಆಟದ ಮೂಲಕ ನೊವಾಕ್ ಪಾರಮ್ಯ ಮೆರೆದರು.

ಜ್ವೆರೆವ್ ಮುನ್ನಡೆ: ಈ ಟೂರ್ನಿಯ ಮೊದಲ ಸುತ್ತಿನಲ್ಲಿ ರಫೆಲ್ ನಡಾಲ್ ಅವರನ್ನು ಮಣಿಸಿದ್ದ ಅಲೆಕ್ಸಾಂಡರ್ ಜ್ವೆರೆವ್ 32ರ ಘಟ್ಟಕ್ಕೆ ಪ್ರವೇಶಿಸಿದ್ದಾರೆ.

ನಾಲ್ಕನೇ ಶ್ರೇಯಾಂಕದ ಜ್ವೆರೆವ್ 7-6, 6-2, 6-2ರಿಂದ ಬೆಲ್ಜಿಯಂ ದೇಶದ ಡೇವಿಡ್ ಗಾಫಿನ್ ವಿರುದ್ಧ ಜಯಿಸಿದರು.

ಜ್ವೆರೆವ್ ಅವರು ಮುಂದಿನ ಸುತ್ತಿನಲ್ಲಿ ಇಟಲಿಯ ಲೂಸಿಯಾನೊ ದಾರ್ಡೇರಿ ಅಥವಾ ನೆದರ್ಲೆಂಡ್ಸ್‌ನ ಟಾಲನ್ ಗ್ರೀಕ್‌ಸ್ಪೂರ್ ಅವರನ್ನು ಎದುರಿಸುವ ಸಾಧ್ಯತೆ ಇದೆ.

ಜ್ವೆರೆವ್ ಅವರು ಈಚೆಗೆ ರೋಮ್ ಓಪನ್ ಟೆನಿಸ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದ ನಂತರ ಫ್ರೆಂಚ್ ಓಪನ್ ಟೂರ್ನಿಯಲ್ಲಿ ಆಡುತ್ತಿದ್ದಾರೆ.

ಪುರುಷರ ವಿಭಾಗದ ಎರಡನೇ ಸುತ್ತಿನ ಇನ್ನುಳಿದ ಪಂದ್ಯಗಳಲ್ಲಿ; ಇಟಲಿಯ ಮ್ಯಾಡಿಯೊ ಅರ್ನಾಲ್ಡಿ 6-4, 6-1, 6-3ರಿಂದ ಫ್ರಾನ್ಸ್‌ನ ಅಲೆಕ್ಸಾಂಡ್ರೆ ಮುಲ್ಲರ್ ವಿರುದ್ಧ; ಅಮೆರಿಕದ ಸೆಬಾಸ್ಟಿಯನ್ ಕೊರ್ಡಾ 6-4, 6-4, 1-6, 6-3ರಿಂದ ಕೊರಿಯಾದ ಕೆವೊನ್ ಸೂನ್ ವೂ ವಿರುದ್ಧ; ಬಲ್ಗೇರಿಯಾದ 10ನೇ ಕ್ರಮಾಂಕದ ಗ್ರಿಗೊರ್ ಡಿಮಿಟ್ರೊವ್ 6-0, 6-3, 6-4ರಿಂದ ಹಂಗರಿಯ ಫ್ಯಾಬಿಯಾನ್ ಮಾರೊಜ್ಸನ್ ವಿರುದ್ಧ ಜಯಿಸಿದರು. ಇನ್ನೊಂದು ಪಂದ್ಯದಲ್ಲಿ ಸರ್ಬಿಯಾದ ಮಿಯಾಮಿರ್ ಕೆಚಮಾನೊವಿಚ್ ಅವರು ರಷ್ಯಾದ ಡೇನಿಯಲ್ ಮೆಡ್ವೆಡೆವ್ ಎದುರಿನ ಪಂದ್ಯದಲ್ಲಿ ಗಾಯಗೊಂಡು ನಿವೃತ್ತಿಯಾದರು. ಇದರಿಂದಾಗಿ ಮೆಡ್ವೆಡೆವ್ ಮುನ್ನಡೆ ಸಾಧಿಸಿದರು. ಮೆಡ್ವೆಡೆವ್ 6-1, 5-0ಯಿಂದ ಮುನ್ನಡೆಯಲ್ಲಿದ್ದರು.

ಮಹಿಳೆಯರ ವಿಭಾಗದ ಎರಡನೇ ಸುತ್ತಿನಲ್ಲಿ; ರಷ್ಯಾದ ಅನಾಸ್ತಾಸಿಯಾ ಪಾಟಪೊವಾ 6-2, 6-2ರಿಂದ ಸ್ವಿಸ್ ಆಟಗಾರ್ತಿ ವಿಕ್ಟೋರಿಯಾ ಗೊಲುಬಿಕ್ ವಿರುದ್ಧ; ಕ್ರೊವೆಷ್ಯಾದ ಡೊನಾ ವೆಕಿಕ್ 7-5, 6-4ರಿಂದ ಉಕ್ರೇನ್‌ನ ಮಾರ್ತಾ ಕೊಸ್ತಾಯುಕ್ ವಿರುದ್ಧ; ಉಕ್ರೇನ್‌ನ ಡಯಾನಾ ಯಸ್ತರೆಮ್ಸಕಾ 6-2, 6-0ಯಿಂದ ಚೀನಾದ ವಾಂಗ್ ಯಫಾನ್ ವಿರುದ್ಧ; 15ನೇ ಶ್ರೇಯಾಂಕದ ಎಲಿನಾ ಸ್ವಿಟೋಲಿನಾ 6-4, 7-6 (7-3)ರಿಂದ ಫ್ರಾನ್ಸ್‌ನ ಡೆಯಾನಾ ಪೆರಿ ವಿರುದ್ಧ; ಕಜಕಸ್ತಾನದ ಎಲಿನಾ ರಿಬಾಕಿನಾ 6-3, 6-4ರಿಂದ ಅರಾಂಚಾ ರೂಸ್ ವಿರುದ್ಧ; ಬಲ್ಗೇರಿಯಾದ ಅರಿನಾ ಸಬಲೆಂಕಾ 6-2, 6-2ರಿಂದ ಮೊಯುಕಾ ಉಚಿಜಿಮಾ ವಿರುದ್ಧ ಗೆದ್ದರು.

ಸರ್ಬಿಯಾದ ನೊವಾಕ್ ಜೊಕೊವಿಚ್ ಆಟ –ಎಎಫ್‌ಪಿ ಚಿತ್ರ

ಇಂಗ್ಲೆಂಡ್ ಕಿರೀಟವೂ.. ಕೊಹ್ಲಿ ಆಟವೂ..

ಟಿ20 ವಿಶ್ವಕಪ್ ಮೆಲುಕು

ಕೋವಿಡ್‌ನಿಂದಾಗಿ ಆರ್ಥಿಕ ಹಿನ್ನಡೆ ಅನುಭವಿಸಿದ್ದ ಆಸ್ಟ್ರೇಲಿಯಾ ಕ್ರಿಕೆಟ್ ಸಂಸ್ಥೆಗೆ ಬಲ ತುಂಬಿದ್ದು 2022ರ ಟಿ20 ವಿಶ್ವಕಪ್ ಟೂರ್ನಿ. 2020ರಲ್ಲಿಯೇ ಈ ಟೂರ್ನಿಯು ಆಸ್ಟ್ರೇಲಿಯಾ ಆತಿಥ್ಯದಲ್ಲಿ ನಡೆಯಬೇಕಿತ್ತು. ಆದರೆ ಕೋವಿಡ್ ಬಂದ ಕಾರಣ ಮುಂದೂಡಲಾಯಿತು. ಈ ನಡುವೆ 2021ರಲ್ಲಿ ಭಾರತದ ಆತಿಥ್ಯದಲ್ಲಿ ಏಳನೇ ಟಿ20 ವಿಶ್ವಕಪ್ ಯುಎಇಯಲ್ಲಿ ನಡೆಯಿತು. ಅದರಲ್ಲಿ ಆಸ್ಟ್ರೇಲಿಯಾ ಗೆದ್ದಿತ್ತು. ಆದರೆ ತನ್ನದೇ ಆತಿಥ್ಯದಲ್ಲಿ ನಡೆದ ಎಂಟನೇ ವಿಶ್ವಕಪ್ ಟೂರ್ನಿಯಲ್ಲಿ ಆಸ್ಟ್ರೇಲಿಯಾ ಪ್ರಶಸ್ತಿ ಜಯಿಸಲಿಲ್ಲ.

ಭಾರತ ತಂಡದ ಪ್ರಶಸ್ತಿ ಬರ ಈ ಟೂರ್ನಿಯಲ್ಲಿಯೂ ನೀಗಲಿಲ್ಲ. ಸೆಮಿಫೈನಲ್‌ವರೆಗೆ ಬಂದ ಭಾರತ ತಂಡವನ್ನು ಇಂಗ್ಲೆಂಡ್ ಸೋಲಿಸಿತು. ಫೈನಲ್‌ನಲ್ಲಿ ಪಾಕಿಸ್ತಾನ ವಿರುದ್ಧ ಅಮೋಘ ಜಯ ಸಾಧಿಸಿದ ಇಂಗ್ಲೆಂಡ್ ಪ್ರಶಸ್ತಿಗೆ ಮುತ್ತಿಕ್ಕಿತು. ಪಾಕ್ ತಂಡವು ನಾಲ್ಕರ ಘಟ್ಟದಲ್ಲಿ ನ್ಯೂಜಿಲೆಂಡ್ ವಿರುದ್ಧ ಜಯಿಸಿತ್ತು.

ಭಾರತದ ಮಟ್ಟಿಗೆ ಈ ಟೂರ್ನಿಯಲ್ಲಿ ನೆನಪಿಡುವ ಪ್ರಮುಖ ಸಂಗತಿಯೆಂದರೆ ವಿರಾಟ್ ಕೊಹ್ಲಿಯ ಬ್ಯಾಟಿಂಗ್. ಮೆಲ್ಬರ್ನ್‌ನಲ್ಲಿ ನಡೆದಿದ್ದ ಸಾಂಪ್ರದಾಯಿಕ ಎದುರಾಳಿ ಪಾಕಿಸ್ತಾನ ಎದುರಿನ ಗುಂಪು ಹಂತದ ಪಂದ್ಯದಲ್ಲಿ ಭಾರತ ತಂಡವು 160 ರನ್‌ಗಳ ಗುರಿ ಬೆನ್ನಟ್ಟಿತ್ತು. ತಂಡಕ್ಕೆ ಕೊನೆಯ 2 ಓವರ್‌ಗಳಲ್ಲಿ 31 ರನ್ ಅಗತ್ಯವಿತ್ತು. ತಮ್ಮ ಮೊದಲ ಸ್ಪೆಲ್ ಉತ್ತಮವಾಗಿ ಬೌಲಿಂಗ್ ಮಾಡಿದ್ದ ಹ್ಯಾರಿಸ್ ರವೂಫ್ 19ನೇ ಓವರ್ ಬೌಲಿಂಗ್‌ಗೆ ಬಂದರು. ಕೊನೆಯ ಎರಡೂ ಎಸೆತಗಳನ್ನು ವಿರಾಟ್ ಸಿಕ್ಸರ್‌ಗೆ ಎತ್ತಿದರು. ಐದನೇ ಎಸೆತದಲ್ಲಿ ಹೊಡೆದ ಸಿಕ್ಸರ್ 'ಶತಮಾನದ ಹೊಡೆತ' ಎಂಬ ಹೆಗ್ಗಳಿಕೆಗೆ ಪಾತ್ರವಾಯಿತು. ಗುಡ್‌ಲೆಂಗ್ತ್ ಎಸೆತವು ಬೇಲ್ಸ್ ಎತ್ತರಕ್ಕೆ ಪುಟಿದು ಸೀದಾ ನುಗ್ಗಿತ್ತು. ತುಸು ಕಠಿಣವೇ ಆದ ನೇರ ಹೊಡೆತ ಪ್ರಯೋಗಿಸಿದ ಅವರ ಕೌಶಲಕ್ಕೆ ಚೆಂಡು ಸೀದಾ ಸೈಟ್‌ಸ್ಕ್ರೀನ್‌ಗೆ ಅಪ್ಪಳಿಸಿತ್ತು. ಇಂತಹ ಹೊಡೆತಗಳು ಕ್ರಿಕೆಟ್‌ನಲ್ಲಿ ಅಪರೂಪವೆಂದು ವಿಶ್ಲೇಷಿಸಲಾಗಿದೆ. ಕೊನೆಯ ಓವರ್‌ನಲ್ಲಿ ವಿರಾಟ್ ಮತ್ತು ಅಶ್ವಿನ್ ಅವರ ಚಾಣಾಕ್ಷ ಆಟದಿಂದ ತಂಡಕ್ಕೆ ಗೆಲುವು ಸಾಧ್ಯವಾಯಿತು.

- ಎಂಟನೇ ವಿಶ್ವಕಪ್: 2022 (16 ಅಕ್ಟೋಬರ್–13 ನವೆಂಬರ್)
- ಆತಿಥ್ಯ: ಆಸ್ಟ್ರೇಲಿಯಾ
- ಚಾಂಪಿಯನ್: ಇಂಗ್ಲೆಂಡ್
- ರನ್ನರ್ಸ್ ಅಪ್: ಪಾಕಿಸ್ತಾನ
- ಸ್ಪರ್ಧಿಸಿದ ತಂಡಗಳು: 16
- ಪಂದ್ಯಗಳು: 45
- ಸರಣಿಶ್ರೇಷ್ಠ: ಸ್ಯಾಮ್ ಕರನ್ (ಇಂಗ್ಲೆಂಡ್)
- ಶ್ರೇಷ್ಠ ಬ್ಯಾಟರ್: ವಿರಾಟ್ ಕೊಹ್ಲಿ (ಭಾರತ– 296 ರನ್)
- ಶ್ರೇಷ್ಠ ಬೌಲರ್: ವನಿಂದು ಹಸರಂಗಾ (ಶ್ರೀಲಂಕಾ– 15 ವಿಕೆಟ್)

ವಿಶ್ವಕಪ್ ಟ್ರೋಫಿಯೊಂದಿಗೆ ಇಂಗ್ಲೆಂಡ್ ತಂಡದ ನಾಯಕ ಜೋಸ್ ಬಟ್ಲರ್ –ಎಎಫ್‌ಪಿ ಚಿತ್ರ

ಪ್ರಮುಖ ಅಂಶಗಳು

- ಆತಿಥೇಯ ಆಸ್ಟ್ರೇಲಿಯಾ ತಂಡವು ಸೆಮಿಫೈನಲ್ ಪ್ರವೇಶಿಸದೇ ಹೊರಬಿದ್ದಿತು.
- ಸೂಪರ್ 12 ಹಂತದ ಪಂದ್ಯದಲ್ಲಿ ಜಿಂಬಾಬ್ವೆ ತಂಡವು ಪಾಕಿಸ್ತಾನ ವಿರುದ್ಧ 1 ರನ್ ರೋಚಕ ಜಯ ಸಾಧಿಸಿತ್ತು
- ಗುಂಪು ಹಂತದ ಪಂದ್ಯದಲ್ಲಿ ಬಲಿಷ್ಠ ದಕ್ಷಿಣ ಆಫ್ರಿಕಾ ತಂಡಕ್ಕೆ ನೆದರ್ಲೆಂಡ್ಸ್; ಇಂಗ್ಲೆಂಡ್ ತಂಡಕ್ಕೆ ಐರ್ಲೆಂಡ್ ಆಘಾತ ನೀಡಿದ್ದವು.
- ಎರಡು ಬಾರಿಯ ಚಾಂಪಿಯನ್ ವೆಸ್ಟ್ ಇಂಡೀಸ್ ಆರಂಭಿಕ ಸುತ್ತಿನಲ್ಲಿ ಸ್ಕಾಟ್ಲೆಂಡ್ ಮತ್ತು ಐರ್ಲೆಂಡ್ ತಂಡಕ್ಕೆ ಮಣಿದಿತ್ತು. ಶ್ರೀಲಂಕಾವು ನಮೀಬಿಯಾ ತಂಡದ ಎದುರು ಸೋತಿತ್ತು.

ದಕ್ಷಿಣ ಆಫ್ರಿಕಾ ವಿರುದ್ಧ ಸರಣಿ: ಭಾರತ ತಂಡದಲ್ಲಿ ಶ್ರೇಯಾಂಕಾ

ನವದೆಹಲಿ (ಪಿಟಿಐ): ಕರ್ನಾಟಕದ ಶ್ರೇಯಾಂಕಾ ಪಾಟೀಲ ಅವರು ಜೂನ್ ಮತ್ತು ಜುಲೈನಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ನಡೆಯಲಿರುವ ಏಕದಿನ ಮತ್ತು ಟಿ20 ಸರಣಿಗೆ ಭಾರತ ಮಹಿಳಾ ಕ್ರಿಕೆಟ್ ತಂಡದಲ್ಲಿ ಸ್ಥಾನ ಪಡೆದಿದ್ದಾರೆ.

ಬಿಸಿಸಿಐ ಮಹಿಳಾ ತಂಡದ ಆಯ್ಕೆ ಸಮಿತಿಯು ಗುರುವಾರ ಭಾರತ ತಂಡವನ್ನು ಪ್ರಕಟಿಸಿದೆ. ಹರ್ಮನ್‌ಪ್ರೀತ್ ಕೌರ್ ಅವರು ಮೂರು ಮಾದರಿಯಲ್ಲೂ ಭಾರತ ತಂಡವನ್ನು ಮುನ್ನಡೆಸಲಿದ್ದು, ಸ್ಮೃತಿ ಮಂದಾನ ಉಪನಾಯಕಿಯಾಗಿದ್ದಾರೆ.

ಅನುಭವಿ ಆಟಗಾರ್ತಿಯರಾದ ಜೆಮಿಮಾ ರಾಡ್ರಿಗಸ್ ಮತ್ತು ಪೂಜಾ ವಸ್ತ್ರಕರ್ ಅವರೂ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಅಗ್ರ ಕ್ರಮಾಂಕದ ಬ್ಯಾಟರ್ ಪ್ರಿಯಾ ಪೂನಿಯಾ ಏಕದಿನ ಮತ್ತು ಟೆಸ್ಟ್ ತಂಡಕ್ಕೆ ಮರಳಿದ್ದಾರೆ. ಬಲಗೈ ಸ್ಪಿನ್ನರ್ ಶ್ರೇಯಾಂಕಾ, ಡಬ್ಲ್ಯುಪಿಎಲ್‌ನಲ್ಲಿ ಈ ಬಾರಿ ಆರ್‌ಸಿಬಿ ತಂಡದ ಪರ 13 ವಿಕೆಟ್ ಪಡೆದು ಮಿಂಚಿದ್ದರು.

ಜೂನ್ 16ರಿಂದ ಜುಲೈ 9ರ ವರೆಗೆ ಮೂರು ಮಾದರಿಗಳ ಸರಣಿ ನಡೆಯಲಿದೆ. ಒಂದು ಟೆಸ್ಟ್, ಮೂರು ಏಕದಿನ ಮತ್ತು ಮೂರು ಟಿ20 ಪಂದ್ಯಗಳು ನಡೆಯಲಿವೆ. ಏಕದಿನ ಪಂದ್ಯಗಳು ಬೆಂಗಳೂರಿನಲ್ಲಿ ಮತ್ತು ಉಳಿದ ಪಂದ್ಯಗಳು ಚೆನ್ನೈನಲ್ಲಿ ನಡೆಯಲಿವೆ.

ಏಕದಿನ ತಂಡ ಹೀಗಿದೆ: ಹರ್ಮನ್‌ಪ್ರೀತ್ ಕೌರ್ (ನಾಯಕಿ), ಸ್ಮೃತಿ ಮಂದಾನ (ಉಪನಾಯಕಿ), ಶಫಾಲಿ ವರ್ಮಾ, ದೀಪ್ತಿ ಶರ್ಮಾ, ಜೆಮಿಮಾ ರಾಡ್ರಿಗಸ್, ರಿಚಾ ಘೋಷ್ (ವಿಕೆಟ್ ಕೀಪರ್), ಉಮಾ ಚೆಟ್ರಿ (ವಿಕೆಟ್ ಕೀಪರ್), ದಯಾಳನ್ ಹೇಮಲತಾ, ರಾಧಾ ಯಾದವ್, ಆಶಾ ಶೋಭನ, ಶ್ರೇಯಾಂಕಾ ಪಾಟೀಲ, ಸೈಕಾ ಇಶಾಕ್, ಪೂಜಾ ವಸ್ತ್ರಕರ್, ರೇಣುಕಾ ಸಿಂಗ್ ಠಾಕೂರ್, ಅರುಂಧತಿ ರೆಡ್ಡಿ, ಪ್ರಿಯಾ ಪೂನಿಯಾ.

ಶ್ರೇಯಾಂಕಾ ಪಾಟೀಲ

ಪಂತ್‌ಗೆ ಭಾರತದ ಪೋಷಾಕು ಧರಿಸುವ ತವಕ

ನ್ಯೂಯಾರ್ಕ್ (ಪಿಟಿಐ): ರಸ್ತೆ ಅಪಘಾತದಿಂದಾಗಿ ಸುಮಾರು 527 ದಿನ ಮೈದಾನದಿಂದ ಹೊರಗುಳಿದಿದ್ದ ಭಾರತ ಕ್ರಿಕೆಟ್ ತಂಡದ ವಿಕೆಟ್ ಕೀಪರ್ ಎಡಗೈ ಬ್ಯಾಟರ್ ರಿಷಭ್ ಪಂತ್ ಮತ್ತೆ ಪುನರಾಗಮನದ ಹೊಸ್ತಿಲಲ್ಲಿದ್ದಾರೆ.

ಐಸಿಸಿ ಟ್ವೆಂಟಿ-20 ವಿಶ್ವಕಪ್‌ಗೆ ಭಾರತ ತಂಡದಲ್ಲಿ ಸ್ಥಾನ ಪಡೆದಿರುವ ಪಂತ್, ಜೂನ್ 5 ರಂದು ನಸ್ಸೌ ಕೌಂಟಿ ಮೈದಾನದಲ್ಲಿ ಐರ್ಲೆಂಡ್ ವಿರುದ್ಧ ನಡೆಯುವ ಮೊದಲ ಪಂದ್ಯಕ್ಕೆ ಭಾರತದ ಪೋಷಾಕು ಧರಿಸಿ ಆಟವಾಡಲು ಕಾತರದಿಂದ ಇದ್ದಾರೆ. 2022ರ ಮಾರ್ಚ್ 23ರಂದು ಸಂಭವಿಸಿದ ಕಾರು ಅಪಘಾತದಲ್ಲಿ ಪಂತ್ ತೀವ್ರವಾಗಿ ಗಾಯಗೊಂಡಿದ್ದರು. ಗಾಯದಿಂದ ಸಂಪೂರ್ಣ ಚೇತರಿಸಿಕೊಂಡು ಚುಟುಕು ಕ್ರಿಕೆಟ್ ಮೂಲಕ ಪುನರಾಗಮನ ಮಾಡಿದ್ದಾರೆ. ಇತ್ತೀಚೆಗೆಷ್ಟೇ ಮುಕ್ತಾಯಗೊಂಡ ಐಪಿಎಲ್‌ನಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು ಮುನ್ನಡೆಸಿದ್ದ ಅವರು, ನೀಲಿ ಪೋಷಾಕು ಧರಿಸಿ ಆಟವಾಡಿದ್ದರು. ಈಗ 'ಇಂಡಿಯಾ ಬ್ಲೂ' ಧರಿಸಲು ಹೆಚ್ಚು ಉತ್ಸುಕರಾಗಿದ್ದಾರೆ.

ಈ ಕುರಿತು ಬಿಸಿಸಿಐ ಬಿಡುಗಡೆ ಮಾಡಿದ ವಿಡಿಯೊದಲ್ಲಿ ಪ್ರತಿಕ್ರಿಯಿಸಿರುವ ಪಂತ್, 'ಭಾರತದ ಜೆರ್ಸಿ ಧರಿಸಿ ಆಡುವುದೇ ವಿಭಿನ್ನ ಅನುಭವ. ಈ ಕ್ಷಣವನ್ನು ತುಂಬಾ ಮಿಸ್ ಮಾಡಿಕೊಂಡಿದ್ದೆ. ಉತ್ತಮ ಪ್ರದರ್ಶನ ನೀಡುವ ಭರವಸೆಯಿದೆ. ತಂಡವನ್ನು ಮತ್ತೆ ಸೇರಿಕೊಂಡಿರುವುದು, ಸಹ ಆಟಗಾರರೊಂದಿಗೆ ಸಮಯ ಕಳೆಯಲು ಸಾಧ್ಯವಾಗಿರುವುದು, ಪರಸ್ಪರ ತಮಾಷೆ, ಸಂಭಾಷಣೆ, ನಿಜಕ್ಕೂ ಈ ಎಲ್ಲ ಕ್ಷಣಗಳನ್ನು ಆನಂದಿಸುತ್ತಿದ್ದೇನೆ' ಎಂದು ಹೇಳಿದ್ದಾರೆ.

ಅಮೆರಿಕದಲ್ಲಿ ಕ್ರಿಕೆಟ್ ಬೆಳವಣಿಗೆ ಕುರಿತು ಮಾತನಾಡಿದ ಅವರು, 'ಟ್ವೆಂಟಿ-20 ವಿಶ್ವಕಪ್ ಆಯೋಜನೆಯ ಮೂಲಕ ಅಮೆರಿಕದಲ್ಲಿ ಕ್ರಿಕೆಟ್ ಹೆಚ್ಚು ಜನಪ್ರಿಯತೆ ಗಳಿಸುವ ನಂಬಿಕೆಯಿದೆ' ಎಂದಿದ್ದಾರೆ.

ಐಪಿಎಲ್‌ನಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು ಮುನ್ನಡೆಸಿದ್ದ ಪಂತ್ 13 ಪಂದ್ಯಗಳಲ್ಲಿ 446 ರನ್ ಗಳಿಸಿದ್ದರು.

ರಿಷಭ್ ಪಂತ್ ಎಕ್ಸ್ ಚಿತ್ರ

'ಭಾರತ–ಪಾಕಿಸ್ತಾನ ಪಂದ್ಯಕ್ಕೆ ಬಿಗಿ ಭದ್ರತೆ'

ನ್ಯೂಯಾರ್ಕ್ (ಪಿಟಿಐ): ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಜೂನ್ 9ರಂದು ನಡೆಯಲಿರುವ ಭಾರತ ಹಾಗೂ ಪಾಕಿಸ್ತಾನ ಪಂದ್ಯಕ್ಕೆ ಭಯೋತ್ಪಾದಕರ ದಾಳಿಯ ಭೀತಿ ಎದುರಾಗಿದೆ. ಅದಕ್ಕಾಗಿ ಇಲ್ಲಿಯ ಸರ್ಕಾರವು ಬಿಗಿ ಭದ್ರತಾ ವ್ಯವಸ್ಥೆ ಮಾಡಿದೆ.

'ವಿಶ್ವಕಪ್ ಆಯೋಜನೆಯ ಸಿದ್ಧತೆಗಾಗಿ ನಮ್ಮ ತಂಡವು ಫೆಡರಲ್ ಮತ್ತು ಸ್ಥಳೀಯ ಕಾನೂನು, ಸುವ್ಯವಸ್ಥೆ ಇಲಾಖೆಗಳೊಂದಿಗೆ ಕಾರ್ಯನಿರ್ವಹಿಸುತ್ತಿದೆ. ಪಂದ್ಯದ ಸಂದರ್ಭದಲ್ಲಿ ದಾಳಿ ನಡೆಸುವುದಾಗಿ ಭಯೋತ್ಪಾದಕರು ಬೆದರಿಕೆ ಒಡ್ಡಿದ್ದಾರೆನ್ನುವ ಮಾಹಿತಿಯು ಅಧಿಕೃತವಲ್ಲ. ಆದರೂ ಉನ್ನತ ದರ್ಜೆಯ ಭದ್ರತಾ ವ್ಯವಸ್ಥೆಯನ್ನು ಮಾಡಲಾಗಿದೆ. ಯಾವುದೇ ಅನಾಹುತಗಳು ನಡೆಯದಂತೆ ನೋಡಿಕೊಳ್ಳಲಾಗುವುದು' ಎಂದು ರಾಜ್ಯದ ಗವರ್ನರ್ ಕ್ಯಾಥಿ ಹಾಚುಲ್ ಎಕ್ಸ್‌ನಲ್ಲಿ ಸಂದೇಶ ಹಾಕಿದ್ದಾರೆ.

ಲಮಿಚಾನೆಗೆ ವೀಸಾ ನಿರಾಕರಣೆ

ಕಠ್ಮಂಡು (ಎಎಫ್‌ಪಿ): ನೇಪಾಳ ಕ್ರಿಕೆಟ್ ತಂಡದ ಮಾಜಿ ನಾಯಕ ಸಂದೀಪ್ ಲಾಮಿಚಾನೆ ಅವರಿಗೆ ಅಮೆರಿಕ ರಾಯಭಾರ ಕಚೇರಿ ವೀಸಾ ನಿರಾಕರಿಸಿದೆ. ಅವರು ಟಿ20 ವಿಶ್ವಕಪ್‌ನಲ್ಲಿ ಆಡುವ ಸಾಧ್ಯತೆ ಕಡಿಮೆ ಎಂದು ನೇಪಾಳ ಗುರುವಾರ ಹೇಳಿದೆ.

ಅಮೆರಿಕ ಮತ್ತು ವೆಸ್ಟ್‌ಇಂಡೀಸ್ ಜಂಟಿ ಸಹಭಾಗಿತ್ವದಲ್ಲಿ ಶನಿವಾರದಿಂದ ಟಿ20 ವಿಶ್ವಕಪ್ ಆರಂಭವಾಗಲಿದ್ದು, ನೇಪಾಳದ ಮೊದಲ ಪಂದ್ಯ ಜೂನ್ 4ರಂದು ಡಲ್ಲಾಸ್‌ನಲ್ಲಿ ನಡೆಯಲಿದೆ.

ಅತ್ಯಾಚಾರ ಪ್ರಕರಣದಲ್ಲಿ ಲಾಮಿಚಾನೆ ಶಿಕ್ಷೆಗೆ ಗುರಿಯಾಗಿದ್ದರು. ನಂತರ ಹೈಕೋರ್ಟ್ ಅವರನ್ನು ಖುಲಾಸೆ ಗೊಳಿಸಿತ್ತು.

'ಅಮೆರಿಕ ವೀಸಾ ನಿರಾಕರಿಸಿದೆ. ಈ ನಿರ್ಧಾರ ದುರದೃಷ್ಟಕರ' ಎಂದು ಲಮಿಚಾನೆ ಬೇಸರ ವ್ಯಕ್ತಪಡಿಸಿದ್ದಾರೆ.

ನೇಪಾಳ ಕ್ರಿಕೆಟ್ ಸಂಸ್ಥೆಯ ಕೇಂದ್ರ ಸಮಿತಿ ಸದಸ್ಯ ಚುಂಬಿ ಲಾಮಾ, ಅಮೆರಿಕ ವೀಸಾಕ್ಕಾಗಿ ನಡೆಸಿದ ಪ್ರಯತ್ನವು ವಿಫಲವಾಗಿದೆ ಎಂದು ಹೇಳಿದರು.

ಸಿಂಗಪುರ ಓಪನ್: ಮರಿನ್ ವಿರುದ್ಧ ಸಿಂಧುಗೆ ನಿರಾಸೆ

ಕ್ವಾರ್ಟರ್‌ಗೆ ಟ್ರಿಸಾ–ಗಾಯತ್ರಿ ಜೋಡಿ

ಸಿಂಗಪುರ (ಪಿಟಿಐ): ಮಾಜಿ ಚಾಂಪಿಯನ್ ಭಾರತದ ಪಿ.ವಿ. ಸಿಂಧು ಅವರು ಸಿಂಗಪುರ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಮಹಿಳಾ ಸಿಂಗಲ್ಸ್‌ನ ಎರಡನೇ ಸುತ್ತಿನಲ್ಲಿ ವಿಶ್ವದ ಮೂರನೇ ಕ್ರಮಾಂಕದ ಆಟಗಾರ್ತಿ ಕರೊಲಿನಾ ಮರಿನ್ ವಿರುದ್ಧ ಸೋತರು.

ಮಹಿಳಾ ಡಬಲ್ಸ್ ಜೋಡಿ ಟ್ರಿಸಾ ಜೋಳಿ ಮತ್ತು ಗಾಯತ್ರಿ ಗೋಪಿಚಂದ್ ವಿಶ್ವದ ಎರಡನೇ ಸ್ಥಾನದ ಬೇಕ್ ಹಾ ನಾ ಮತ್ತು ದಕ್ಷಿಣ ಕೊರಿಯಾದ ಲೀ ಸೋ ಹೀ ಅವರನ್ನು ಸೋಲಿಸಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದೆ.

ಡಬಲ್ ಒಲಿಂಪಿಕ್ ಪದಕ ವಿಜೇತೆ ಸಿಂಧು ಅವರು 21-13, 11-21, 20-22 ರಲ್ಲಿ ಮರಿನ್ ವಿರುದ್ಧ ಸೋಲು ಅನುಭವಿಸಿದರು. 2018ರಿಂದ ಈಚೆಗೆ ಸಿಂಧು ತಮ್ಮ ಸಾಂಪ್ರದಾಯಿಕ ಎದುರಾಳಿ ವಿರುದ್ಧ ಅನುಭವಿಸಿದ ಆರನೇ ಸೋಲು ಇದಾಗಿದೆ. ಕಳೆದ ವಾರ ಮಲೇಷ್ಯಾ ಮಾಸ್ಟರ್ಸ್‌ನಲ್ಲಿ ರನ್ನರ್ ಅಪ್ ಸ್ಥಾನ ಪಡೆದಿದ್ದ ಸಿಂಧು, ರಿಯೊ ಒಲಿಂಪಿಕ್ ಚಾಂಪಿಯನ್ ವಿರುದ್ಧ ಮೊದಲ ಗೇಮ್ ಗೆದ್ದರು. ನಂತರ ಪುಟಿದೆದ್ದ ಮರಿನ್, ಎರಡು ಮತ್ತು ಮೂರನೇ ಗೇಮ್ ಗೆದ್ದರು. ಈ ಮೂಲಕ ಮರಿನ್, ಸಿಂಧು ವಿರುದ್ಧದ ಗೆಲುವಿನ ದಾಖಲೆಯನ್ನು 12–5ಕ್ಕೆ ಹೆಚ್ಚಿಸಿಕೊಂಡರು.

ಕಾಮನ್‌ವೆಲ್ತ್ ಗೇಮ್ಸ್ ಕಂಚಿನ ಪದಕ ವಿಜೇತ ಜೋಡಿ ಟ್ರಿಸಾ ಮತ್ತು ಗಾಯತ್ರಿ ಸುಮಾರು ಒಂದು ಗಂಟೆ ಸೆಣಸಾಟದಲ್ಲಿ ಬೇಕ್ ಮತ್ತು ಲೀ ಅವರನ್ನು 21-9, 14-21, 21-15 ಅಂತರದಿಂದ ಸೋಲಿಸಿದರು.

ಟ್ರಿಸಾ ಮತ್ತು ಗಾಯತ್ರಿ ಜೋಡಿ ಮೊದಲ ಗೇಮ್ ಅನ್ನು ನಿರಾಯಾಸವಾಗಿ ಗೆದ್ದುಕೊಂಡರು. ಎರಡನೇ ಗೇಮ್ ನಲ್ಲಿ ಅನಗತ್ಯ ತಪ್ಪುಗಳನ್ನು ಮಾಡುವ ಮೂಲಕ ದಕ್ಷಿಣ ಕೊರಿಯಾ ಜೋಡಿ ಪುಟಿದೇಳಲು ಅವಕಾಶ ಮಾಡಿಕೊಟ್ಟರು. ಪಂದ್ಯವು ನಿರ್ಣಾಯಕ ಮೂರನೇ ಗೇಮ್‌ಗೆ ಹೋಯಿತು. ಅಂತಿಮ ಗೇಮ್‌ನಲ್ಲಿ ಭಾರತದ ಜೋಡಿ ಮುನ್ನಡೆ ಸಾಧಿಸುವ ಮೂಲಕ ಮೇಲುಗೈ ಸಾಧಿಸಿತು.

ಪುರುಷರ ಸಿಂಗಲ್ಸ್‌ನಲ್ಲಿ 45 ನಿಮಿಷಗಳ ಹೋರಾಟದಲ್ಲಿ ಎಚ್. ಎಸ್.ಪ್ರಣಯ್ 13-21, 21-14, 15-21 ಅಂತರದಲ್ಲಿ ಜಪಾನ್‌ನ ಕೆಂಟಾ ನಿಶಿಮೊಟೊ ವಿರುದ್ಧ ಸೋತರು. ಕೆಂಟಾ ವಿರುದ್ಧ ಪ್ರಣಯ್‌ಗೆ ಆರು ಪಂದ್ಯಗಳಲ್ಲಿ ನಾಲ್ಕನೇ ಸೋಲು ಇದಾಗಿದೆ

ಭಾರತದ ಮಹಿಳಾ ಡಬಲ್ಸ್ ಜೋಡಿ ಟ್ರಿಸಾ ಜೋಳಿ ಮತ್ತು ಗಾಯತ್ರಿ ಗೋಪಿಚಂದ್ – ಎಕ್ಸ್ ಚಿತ್ರ

ಜವಾನ್ಸ್, ಸೆಂಚುರಿ ಕ್ಲಬ್ ಪರ ತೀರ್ಪು

ಕ್ರಿಕೆಟ್ ಋತು ವಿಳಂಬಕ್ಕೆ ಕಾರಣವಾಗಿದ್ದ ಪ್ರಕರಣ 'ಇತ್ಯರ್ಥ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಪ್ರಸಕ್ತ ಋತುವಿನ ಕ್ರಿಕೆಟ್ ಟೂರ್ನಿಗಳು ವಿಳಂಬವಾಗಲು ಕಾರಣವಾದ ಮೂರು ಕ್ಲಬ್‌ಗಳ ನಡುವಣ ವಿವಾದವು 'ಇತ್ಯರ್ಥ'ವಾಗಿದೆ. ಇದರಿಂದಾಗಿ ಹೊಸ ಋತುವಿನ ಟೂರ್ನಿಗಳು ಆರಂಭವಾಗುವ ನಿರೀಕ್ಷೆ ಮೂಡಿದೆ.

ಎರಡನೇ ಡಿವಿಷನ್ ಲೀಗ್ (ಎಂ.ಎ.ಟಿ ಆಚಾರ್ಯ ಶೀಲ್ಡ್) ಪಂದ್ಯಗಳಲ್ಲಿ ವಿಸಿಸಿ ತಂಡವು ಗ್ರಾಮಾಂತರ ಆಟಗಾರರನ್ನು ಆಡಿಸಿರುವ ನಿಯಮ ಉಲ್ಲಂಘನೆ ಮಾಡಿದೆ ಎಂದು ಆರೋಪಿಸಿದ್ದ ಜವಾನ್ಸ್ ಕ್ರಿಕೆಟ್ ಕ್ಲಬ್ ಹಾಗೂ ಸೆಂಚುರಿ ಕ್ಲಬ್ ಕೆಎಸ್‌ಸಿಎ ತಾಂತ್ರಿಕ ಸಮಿತಿಗೆ ದೂರು ಸಲ್ಲಿಸಿದ್ದವು. ವಿಸಿಸಿ ತಂಡವು ಜವಾನ್ಸ್ ವಿರುದ್ಧದ ಪಂದ್ಯದಲ್ಲಿ ಮೊದಲ ಇನಿಂಗ್ಸ್ ಮುನ್ನಡೆ ಗಳಿಸಿ 3 ಅಂಕ ಪಡೆದಿತ್ತು. ಸೆಂಚುರಿ ಕ್ಲಬ್ ಎದುರಿನ ಪಂದ್ಯದಲ್ಲಿ ಇನಿಂಗ್ಸ್ ಮತ್ತು 237 ರನ್‌ಗಳಿಂದ ಜಯಿಸಿತ್ತು.

ಈ ಎರಡೂ ದೂರುಗಳ ಕುರಿತು ವಿಚಾರಣೆ ನಡೆಸಿದ ನಂತರ ತಾಂತ್ರಿಕ ಸಮಿತಿಯು ಎರಡೂ ಪಂದ್ಯಗಳ ಫಲಿತಾಂಶಗಳನ್ನು ರದ್ದು ಮಾಡಿದೆ. ಇದರಿಂದಾಗಿ ಜವಾನ್ಸ್ ಕ್ಲಬ್ ಮೊದಲ ಡಿವಿಷನ್ (ಸರ್ ಮಿರ್ಜಾ ಇಸ್ಮಾಯಿಲ್ ಶೀಲ್ಡ್) ಟೂರ್ನಿಗೆ ಬಡ್ತಿ ಗಳಿಸಿತು. ವಿಸಿಸಿ ಎರಡನೇ ಡಿವಿಷನ್‌ನಲ್ಲಿಯೇ ಉಳಿಯಿತು.

ಈ ಕುರಿತು ಪ್ರತಿಕ್ರಿಯಿಸಿರುವ ವಿಸಿಸಿಯ ಪ್ರತಿನಿಧಿ, 'ಇದುವರೆಗೂ ನಮಗೆ ಲಿಖಿತವಾಗಿ ಯಾವುದೇ ಮಾಹಿತಿ ಅಥವಾ ಸೂಚನೆ ಬಂದಿಲ್ಲ. ಏಪ್ರಿಲ್ ತಿಂಗಳಿನಲ್ಲಿ ಈ ದೂರುಗಳ ಕುರಿತು ಪ್ರತಿಕ್ರಿಯೆ ನೀಡುವಂತೆ ನಮಗೆ ತಿಳಿಸಲಾಗಿತ್ತು. ನಾವು ನಿಯಮ ಉಲ್ಲಂಘಿಸಿಲ್ಲವೆಂದು ಸಾಬೀತುಮಾಡುವ ಎಲ್ಲ ಅಂಶಗಳನ್ನು ಸಾಕ್ಷಿ ಸಮೇತ ಉಲ್ಲೇಖಿಸಿ ಐದು ಪುಟಗಳ ಉತ್ತರವನ್ನು ನೀಡಿದ್ದೆವು' ಎಂದಿದ್ದಾರೆ.

'ನಮ್ಮ ಮೇಲೆ ದೂರು ಸಲ್ಲಿಸಿರುವ ಎರಡೂ ಕ್ಲಬ್‌ಗಳ ವಿರುದ್ಧ ಮತ್ತೊಮ್ಮೆ ಪಂದ್ಯಗಳನ್ನು ಆಡಬೇಕು. ಆ ಪಂದ್ಯಗಳಲ್ಲಿ ಕೆಲವು ಗ್ರಾಮಾಂತರ ಆಟಗಾರರನ್ನು ಕೈಬಿಡಬೇಕು ಎಂದು ಸೂಚಿಸಿದರು. ನಾವು ಸಮ್ಮತಿಸಲಿಲ್ಲ. ತದನಂತರದಲ್ಲಿ ಕೆಎಸ್‌ಸಿಎ ನೀಡಿದ್ದ ಎಲ್ಲ ನೋಟಿಸ್‌ಗಳಿಗೂ ಸೂಕ್ತ ಉತ್ತರ ನೀಡಿದ್ದೇವೆ. ಈಗ ಕೆಎಸ್‌ಸಿಎ ಉಪಾಧ್ಯಕ್ಷರು ಕೈಗೊಂಡಿದ್ದಾರೆನ್ನಲಾದ ನಿರ್ಣಯದ ಕುರಿತ ಲಿಖಿತ ಮಾಹಿತಿ ನಮ್ಮ ಕೈಸೇರಿದ ನಂತರ ಮುಂದಿನ ನಡೆಯ ಕುರಿತು ಯೋಚಿಸುತ್ತೇವೆ' ಎಂದಿದ್ದಾರೆ.

ಪ್ರಕರಣದ ಕುರಿತು ಪ್ರತಿಕ್ರಿಯಿಸಿದ ಕೆಎಸ್‌ಸಿಎ ಉಪಾಧ್ಯಕ್ಷ ಸಂಪತ್ ಕುಮಾರ್, 'ಈ ನಿರ್ಣಯದಿಂದಾಗಿ ಒಂದು ಕ್ಲಬ್‌ಗೆ ಸಂತೋಷವಾಗುವುದು ಮತ್ತೊಬ್ಬರಿಗೆ ಬೇಸರವಾಗಿರುವುದು ಸಹಜ. ಆದರೆ ನಾವು ಕಾನೂನುಪ್ರಕಾರ ನಿರ್ಣಯ ನೀಡಿದ್ದೇವೆ. ಇದಕ್ಕೂ ಮುನ್ನ ಆ ಎರಡೂ ಪಂದ್ಯಗಳನ್ನು ಮರು ಆಯೋಜಿಸಲು ಸಿದ್ಧರಾಗಿದ್ದೆವು. ಆದರೆ ಅವರು ಒಪ್ಪಲಿಲ್ಲ. ಆದ್ದರಿಂದ ನಿರ್ಣಯ ಕೈಗೊಂಡು ಹೊಸ ಋತುವಿನ ಆರಂಭಕ್ಕೆ ದಾರಿ ಸುಗಮಗೊಳಿಸಬೇಕಾಯಿತು. ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಗಳೂ ಇಲ್ಲಿ ನಡೆಯುತ್ತಿದ್ದ ಕಾರಣ ಎಲ್ಲರೂ ಕಾರ್ಯನಿರತರಾಗಿದ್ದರು. ಆದ್ದರಿಂದ ವಿಳಂಬವಾಯಿತು' ಎಂದೂ ಸಂಪತ್, ಗುರುವಾರ ಪ್ರಜಾವಾಣಿಗೆ ತಿಳಿಸಿದರು.

'ನಿರ್ಣಯ ಕೈಗೊಂಡಿದ್ದೇವೆ. ಮುಂದಿನ ಋತು ಆರಂಭಿಸಬೇಕಿದೆ. ಮಳೆಗಾಲವೂ ಸಮೀಪಿಸಿದೆ. ಆದ್ದರಿಂದ ಹೊಸ ಋತುವಿನ ಟೂರ್ನಿಗಳನ್ನು ಆಡಿಸಲು ಹೆಚ್ಚು ಗಮನ ನೀಡಲಿದ್ದೇವೆ' ಎಂದು ಕೆಎಸ್‌ಸಿಎ ಅಧ್ಯಕ್ಷ ರಘುರಾಮ್ ಭಟ್ ಹೇಳಿದರು.

ಡಿವಿಷನ್ ಲೀಗ್ ಮತ್ತಿತರ ಟೂರ್ನಿಗಳು ವಿಳಂಬವಾಗುತ್ತಿರುವುದರಿಂದ ಮುಂಬರುವ ರಣಜಿ ಟ್ರೋಫಿ ಸೇರಿದಂತೆ ದೇಶಿ ಕ್ರಿಕೆಟ್ ಟೂರ್ನಿಗಳಿಗೆ ಆಟಗಾರರನ್ನು ಆಯ್ಕೆ ಮಾಡಲು ಸೀನಿಯರ್ ಆಯ್ಕೆ ಸಮಿತಿಗೆ ತೊಡಕಾಗಿದೆ ಎನ್ನಲಾಗಿದೆ.

ರಾಜ್ಯ ರ್‍ಯಾಂಕಿಂಗ್ ಟೆನ್‌ಪಿನ್

ಕಿಶನ್, ಹಿತಾಶಾಗೆ ಪ್ರಶಸ್ತಿ

ಬೆಂಗಳೂರು: ಕಿಶನ್ ಆರ್. ಮತ್ತು ಹಿತಾಶಾ ಸಿಸೋಡಿಯಾ ಅವರು ಇಲ್ಲಿನ ಅಮೀಬಾ ಬೌಲಿಂಗ್ ಸೆಂಟರ್‌ನಲ್ಲಿ ಗುರುವಾರ ಮುಕ್ತಾಯಗೊಂಡ ಕರ್ನಾಟಕ ರಾಜ್ಯ ರ್‍ಯಾಂಕಿಂಗ್ ಟೆನ್‌ಪಿನ್ ಬೌಲಿಂಗ್ ಲೀಗ್‌ನಲ್ಲಿ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ವಿಭಾಗದ ಪ್ರಶಸ್ತಿ ಮುಡಿಗೇರಿಸಿಕೊಂಡರು.

ಪುರುಷರ ವಿಭಾಗದ ಫೈನಲ್‌ನಲ್ಲಿ ಎರಡನೇ ಶ್ರೇಯಾಂಕದ ಕಿಶನ್ (438) ಅವರು, ಮೂರನೇ ಶ್ರೇಯಾಂಕದ ಗಿರೀಶ್ ಗಾಬಾ (404) ಮತ್ತು ಪರ್ವೇಜ್ ಅಹಮ್ಮದ್ (384) ಅವರನ್ನು ಮಣಿಸಿ ಚಾಂಪಿಯನ್ ಆದರು.

ಇದಕ್ಕೂ ಮುನ್ನ ನಡೆದ ನಾಕೌಟ್ ಸುತ್ತಿನಲ್ಲಿ ಪರ್ವೇಜ್ (391) ಅವರು, ಅಕಾಶ್ ಅಶೋಕ್ ಕುಮಾರ್ (351) ಮತ್ತು ಜೇಮ್ಸ್ ಕ್ರಿಸ್ಟಿ ಅವರನ್ನು ಮಣಿಸಿದರು. ಕಿಶನ್ (365) ಅವರು, ಸತೀಶ್ ಎ.ವಿ (363) ಮತ್ತು ಸುರೇಂದ್ರ ಬಾಬು (250) ಅವರನ್ನು ಹಿಂದಿಕ್ಕಿದರು. ಗಿರೀಶ್ (357) ಅವರು, ಅನುರಾಗ್ ಪಿ. (298) ಮತ್ತು ಕಿಶನ್ ಸಿ (363) ಅವರನ್ನು ಸೋಲಿಸಿದ್ದರು.

ಮಹಿಳೆಯರ ವಿಭಾಗದ ಫೈನಲ್‌ನಲ್ಲಿ ಹಿತಾಶಾ (314) ಅವರು, ಪ್ರೀಮಲ್ ಜೆ (303) ಮತ್ತು ಗೀತಾ ಪಿ. (302) ಅವರನ್ನು ಮಣಿಸಿ ಚೊಚ್ಚಲ ಪ್ರಶಸ್ತಿ ಗೆದ್ದರು.

ಪ್ರಶಸ್ತಿ ಗೆದ್ದ ಕಿಶನ್ ಆರ್ ಮತ್ತು ಹಿತಾಶಾ ಸಿಸೋಡಿಯಾ

ಓಪನ್ ಸರ್ಫಿಂಗ್ ಇಂದಿನಿಂದ

ಪ್ರಜಾವಾಣಿ ವಾರ್ತೆ

ಮಂಗಳೂರು: ಕೆಲವು ದಿನಗಳಿಂದ ಸುರಿಯುತ್ತಿರುವ ಮಳೆಯಿಂದಾಗಿ ಕಡಲತಡಿಯ ನಗರಿಯಲ್ಲಿ ವಾತಾವರಣ ಹಿತವಾಗಿದ್ದು ಮುಂಗಾರು ಮಳೆಯ ಸ್ವಾಗತಕ್ಕೆ ಹದಗೊಂಡಿದೆ. ಇಂಥ ಮೋಹಕ ಪರಿಸರದಲ್ಲಿ ರಾಷ್ಟ್ರೀಯ ಓಪನ್ ಸರ್ಫಿಂಗ್ ಚಾಂಪಿಯನ್ ಷಿಪ್ ಶುಕ್ರವಾರ ಆರಂಭಗೊಳ್ಳಲಿದ್ದು ದೇಶದ ಪ್ರಮುಖ ಸರ್ಫರ್‌ಗಳು ರ್‍ಯಾಂಕಿಂಗ್ ಪಾಯಿಂಟ್‌ಗಳ ಮೇಲೆ ಕಣ್ಣಿಟ್ಟು ಕಡಲಿಗೆ ಇಳಿಯಲಿದ್ದಾರೆ.

ಭಾರತ ಸರ್ಫಿಂಗ್ ಫೆಡರೇಷನ್ (ಎಸ್‌ಎಫ್‌ಐ) ಇಲ್ಲಿನ ಸರ್ಫಿಂಗ್ ಸ್ವಾಮಿ ಫೌಂಡೇಷನ್ ಮತ್ತು ಮಂತ್ರ ಸರ್ಫ್ ಕ್ಲಬ್ ಸಹಯೋಗದಲ್ಲಿ ಆಯೋಜಿಸಿರುವ ಚಾಂಪಿಯನ್‌ಷಿಪ್ ಈ ಋತುವಿನ ಎರಡನೇ ಪ್ರಮುಖ ಸ್ಪರ್ಧೆಯಾಗಿದೆ. ಕೇರಳದ ವರ್ಕಲದಲ್ಲಿ ಮಾರ್ಚ್ ತಿಂಗಳಲ್ಲಿ ನಡೆದ ಮೊದಲ ಸ್ಪರ್ಧೆಯಲ್ಲಿ ಉತ್ತಮ ಸಾಮರ್ಥ್ಯ ತೋರಿದ ಸರ್ಫರ್‌ಗಳು ಇಲ್ಲಿಯೂ ಪದಕಗಳನ್ನು ಗೆಲ್ಲುವ ಹುಮ್ಮಸ್ಸಿನಲ್ಲಿದ್ದಾರೆ.

ಮೂರು ದಿನಗಳ ಚಾಂಪಿಯನ್ ಷಿಪ್‌ನ ಪುರುಷರ ವಿಭಾಗದಲ್ಲಿ ಹರೀಶ್ ಎಂ. ಶ್ರೀಕಾಂತ್ ಡಿ ಮತ್ತು ಶಿವರಾಜ್ ಬಾಬು ಅವರ ಮೇಲೆ ಎಲ್ಲರ ಕಣ್ಣು ನೆಟ್ಟಿದೆ. ಈ ಮೂವರು ವರ್ಕಲದಲ್ಲಿ ಉತ್ತಮ ಪ್ರದರ್ಶನ ನೀಡಿದ್ದರು. ಕಮಲಿ ಮೂರ್ತಿ, ಸಂಧ್ಯಾ ಅರುಣ್, ಸೃಷ್ಟಿ ಸೆಲ್ವಂ ಮತ್ತು ಇಶಿತಾ ಮಾಳವಿಯ ಮಹಿಳೆಯರ ವಿಭಾಗದಲ್ಲಿ ಮಿಂಚಿದ್ದು ಸಸಿಹಿತ್ಲು ಕಡಲಿನಲ್ಲಿ ಅಲೆಗಳ ಸವಾಲು ಮೀರಲು ಸಜ್ಜಾಗಿದ್ದಾರೆ. 16 ವರ್ಷದೊಳಗಿನ ಬಾಲಕರು ಮತ್ತು ಬಾಲಕಿಯರ ವಿಭಾಗದಲ್ಲೂ ಭಾರಿ ಪೈಪೋಟಿಯ ನಿರೀಕ್ಷೆ ಇದೆ. ತಯಿನ್ ಅರುಣ್, ಪ್ರಹ್ಲಾದ್ ಶ್ರೀರಾಮ್ ಮತ್ತು ಸೋಮ್ ಸೇಥಿ ಬಾಲಕರ ವಿಭಾಗದಲ್ಲಿ ಗಮನ ಸೆಳೆಯಲು ಸಜ್ಜಾಗಿದ್ದು ಬಾಲಕಿಯರ ವಿಭಾಗದಲ್ಲಿ ಸ್ಥಳೀಯ ಪ್ರತಿಭೆಗಳಾದ ತನಿಷ್ಕಾ ಮೆಂಡನ್ ಮತ್ತು ಸಾನ್ವಿ ಹೆಗಡೆ ಭರವಸೆ ಮೂಡಿಸಿದ್ದಾರೆ.

ಅಭ್ಯಾಸದಲ್ಲಿ ಶ್ರೀಕಾಂತ್

ಸಚಿನ್, ಸಂಜೀತ್, ಅಮಿತ್‌ಗೆ ಜಯ

ಬಾಕ್ಸಿಂಗ್ ಒಲಿಂಪಿಕ್ಸ್ ಕ್ವಾಲಿಫೈಯರ್: ಜಾಸ್ಮಿನ್ ಮುನ್ನಡೆ

ಬ್ಯಾಂಕಾಕ್ (ಪಿಟಿಐ): ಭಾರತದ ಸಚಿನ್ ಸಿವಾಚ್ (57 ಕೆಜಿ), ಸಂಜೀತ್ ಕುಮಾರ್ (92 ಕೆಜಿ), ಅಮಿತ್ ಪಂಗಲ್ (51 ಕೆಜಿ) ಮತ್ತು ಜಾಸ್ಮಿನ್ ಲಂಬೋರಿಯಾ (57 ಕೆಜಿ) ಗುರುವಾರ ನಡೆದ ಎರಡನೇ ವಿಶ್ವ ಬಾಕ್ಸಿಂಗ್ ಅರ್ಹತಾ ಸುತ್ತಿನಲ್ಲಿ ಜಯ ಸಾಧಿಸುವ ಮೂಲಕ ಪ್ಯಾರಿಸ್ ಒಲಿಂಪಿಕ್ಸ್ ಅರ್ಹತೆಯತ್ತ ಮತ್ತೊಂದು ಹೆಜ್ಜೆ ಇಟ್ಟಿದ್ದಾರೆ.

ಪ್ರೀ ಕ್ವಾರ್ಟರ್ ಫೈನಲ್‌ನಲ್ಲಿ ಸಚಿನ್ ಟರ್ಕಿಯ ಒಲಿಂಪಿಯನ್ ಬತುಹಾನ್ ಸಿಫ್ಟ್ಸಿ ವಿರುದ್ಧ 5-0 ಅಂತರದಲ್ಲಿ ಗೆಲುವು ಸಾಧಿಸಿದರೆ, ಸಂಜೀತ್ 32ನೇ ಸುತ್ತಿನಲ್ಲಿ ವೆನೆಜುವೆಲಾದ ಲೂಯಿಸ್ ಸ್ಯಾಂಚೆಜ್ ಅವರ ಸವಾಲನ್ನು ಎದುರಿಸಿದರು.

57 ಕೆ.ಜಿ ತೂಕದ ವಿಭಾಗದಲ್ಲಿ ಕೇವಲ ಮೂವರು ಬಾಕ್ಸರ್‌ಗಳು ಮಾತ್ರ ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಪಡೆಯಲಿದ್ದಾರೆ. ಆದ್ದರಿಂದ, ಅರ್ಹತೆ ಪಡೆಯಲು ಸಚಿನ್ ಇನ್ನೂ ಎರಡು ಪಂದ್ಯಗಳನ್ನು ಗೆಲ್ಲಬೇಕಾಗಿದೆ. ಮೊದಲ ಸುತ್ತಿನಲ್ಲಿ ಸಂಜೀತ್ ಬೈ ಪಡೆದಿದ್ದರು.

ಅನುಭವಿ ಬಾಕ್ಸರ್ ವಿರುದ್ಧ ಸೆಣಸಾಡಿದ ಸಚಿನ್ ಮೊದಲ ಸುತ್ತಿನಲ್ಲಿ ಮಿಂಚಿದರು. ಪಂದ್ಯವನ್ನು ಬಹಳ ಬೇಗ ನಿಯಂತ್ರಣಕ್ಕೆ ತೆಗೆದುಕೊಂಡರು. ಅವರು 2ನೇ ಸುತ್ತಿನಲ್ಲಿಯೂ ಸರ್ವಾನುಮತದ ತೀರ್ಪು ಗಳಿಸಿದರು. ಸಿಫ್ಟ್ಸಿ ಮೂರನೇ ಮತ್ತು ಅಂತಿಮ ಸುತ್ತಿನಲ್ಲಿ ಪುನರಾಗಮನಕ್ಕೆ ಪ್ರಯತ್ನಿಸಿದರೂ ಅದಕ್ಕೆ ಭಾರತದ ಬಾಕ್ಸರ್ ಅವಕಾಶ ನೀಡಲಿಲ್ಲ.

2021ರ ಏಷ್ಯನ್ ಚಾಂಪಿಯನ್‌ಷಿಪ್ ಚಿನ್ನದ ಪದಕ ವಿಜೇತ ಸಂಜೀತ್ ಮತ್ತು ಸ್ಯಾಂಚೆಜ್ ನಡುವಿನ 92 ಕೆ.ಜಿ ತೂಕ ವಿಭಾಗದ ಪಂದ್ಯವು ಇದೇ ಮಾದರಿ ಅನುಸರಿಸಿತು. ಸಂಜೀತ್ ತಮ್ಮ ವೆನೆಜುವೆಲಾದ ಎದುರಾಳಿಗೆ ಮೊದಲ ಸುತ್ತಿನಲ್ಲಿ ಅವಕಾಶ ನೀಡಲಿಲ್ಲ. ಸ್ಯಾಂಚೆಜ್ 2 ಮತ್ತು 3ನೇ ಸುತ್ತಿನಲ್ಲಿ ಹೋರಾಟ ತೋರಿದರು. ಆದರೆ, ಅನುಭವಿ ಸಂಜೀತ್ ಕರಾರುವಾಕ್ ಪಂಚ್‌ಗಳೊಡನೆ ಪ್ರತಿ ದಾಳಿ ನಡೆಸಿ, ಮೇಲುಗೈ ಸಾಧಿಸಿದರು.

ಮಹಿಳೆಯರ 57 ಕೆಜಿ ವಿಭಾಗದ 32ನೇ ಘಟ್ಟದ ಪಂದ್ಯದಲ್ಲಿ ಜಾಸ್ಮಿನ್ ಅವರು 5–0 ಸರ್ವಾನುಮತದ ತೀರ್ಪಿನೊಡನೆ ಅಜರ್‌ಬೈಜಾನ್‌ನ ಮಹ್ಸತಿ ಹಮ್ಜಯೆವಾ ಅವರನ್ನು ಮಣಿಸಿ ಮುಂದಿನ ಸುತ್ತು ಪ್ರವೇಶಿಸಿದರು.

ಪುರುಷರ 51 ಕೆಜಿ ವಿಭಾಗದಲ್ಲಿ 2022ರ ಕಾಮನ್‌ವೆಲ್ತ್ ಗೇಮ್ಸ್ ಚಾಂಪಿಯನ್ ಅಮಿತ್ 4–1ರಿಂದ ಮೆಕ್ಸಿಕೊದ ಮಾರಿಸಿಯೊ ರುಯಿಜ್ ಅವರನ್ನು ಮಣಿಸಿ ಪ್ರಿ ಕ್ವಾರ್ಟರ್ ಫೈನಲ್ ಹಂತ ತಲುಪಿದರು. ರಾಷ್ಟ್ರೀಯ ಚಾಂಪಿಯನ್ ಅಮಿತ್ ಮೊದಲ ಸುತ್ತಿನಲ್ಲಿ ಒತ್ತಡಕ್ಕೆ ಒಳಗಾದರು. ಆದರೆ, ನಂತರದಲ್ಲಿ ಚುರುಕಿನ ಆಟದ ಪ್ರದರ್ಶಿಸಿದರು. ಅಂತಿಮ ಸುತ್ತಿನಲ್ಲಿ ಕರಾರುವಾಕ್ ಪಂಚ್‌ಗಳೊಡನೆ ಗೆಲುವು ಸಾಧಿಸಿದರು.

ಭಾರತದ ಜಾಸ್ಮಿನ್ ಲಂಬೋರಿಯಾ

ಸಂಕ್ಷಿಪ್ತ ಸುದ್ದಿ

ಜರ್ಮನಿ ವಿರುದ್ಧ ಭಾರತಕ್ಕೆ ಜಯ

ಬ್ರೆಡಾ (ನೆದರ್ಲೆಂಡ್ಸ್) (ಪಿಟಿಐ): ಭಾರತ ಜೂನಿಯರ್ ಪುರುಷರ ಹಾಕಿ ತಂಡ ಜರ್ಮನಿ ವಿರುದ್ಧ ಪೆನಾಲ್ಟಿ ಶೂಟೌಟ್ ನಲ್ಲಿ ಭರ್ಜರಿ ಜಯ ಸಾಧಿಸಿದರೆ, ಮಹಿಳಾ ಹಾಕಿ ತಂಡ ಆರೆಂಜ್ ರೂಡ್ ಕ್ಲಬ್ ವಿರುದ್ಧ 2-2 ಗೋಲುಗಳಿಂದ ಡ್ರಾ ಸಾಧಿಸುವ ಮೂಲಕ ಯುರೋಪ್ ಪ್ರವಾಸ ಮುಕ್ತಾಯಗೊಳಿಸಿತು.

ಬ್ರೆಡೇಸ್ ಹಾಕಿ ವೆರೆನಿಜಿಂಗ್ ಪುಷ್‌ನಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಪುರುಷರ ತಂಡವು ಪೆನಾಲ್ಟಿ ಶೂಟೌಟ್ ನಲ್ಲಿ 3-1 ಗೋಲುಗಳಿಂದ ಜಯ ಗಳಿಸಿತು. ನಿಗದಿ ಅವಧಿಯ ಆಟ 1–1 ಗೋಲುಗಳಿಂದ ಸಮನಾಗಿತ್ತು. ಮುಕೇಶ್ ಟೊಪ್ಪೊ 33ನೇ ನಿಮಿಷದಲ್ಲಿ ಪೆನಾಲ್ಟಿ ಕಾರ್ನರ್ ಮೂಲಕ ಗೋಲು ಗಳಿಸಿದರು. ನಂತರ ನಡೆದ ಶೂಟೌಟ್‌ನಲ್ಲಿ ಗುರ್ಜೋತ್ ಸಿಂಗ್, ದಿಲ್ರಾಜ್ ಸಿಂಗ್ ಮತ್ತು ಮನ್ಮೀತ್ ಸಿಂಗ್ ತಲಾ ಒಂದು ಗೋಲು ಗಳಿಸಿದರು. ನಾಲ್ಕನೇ ಕ್ವಾರ್ಟರ್‌ನಲ್ಲಿ ಜರ್ಮನಿ ಸಮಬಲ ಸಾಧಿಸುವವರೆಗೂ ಭಾರತ ನಿಗದಿತ ಸಮಯದಲ್ಲಿ ಮುನ್ನಡೆ ಕಾಯ್ದುಕೊಂಡಿತು.

ಮಹಿಳಾ ತಂಡವು ಎರಡು ಗೆಲುವು, ಎರಡು ಸೋಲು ಮತ್ತು ಬುಧವಾರ ಆರೆಂಜ್ ರೂಡ್ ವಿರುದ್ಧ ಡ್ರಾ ದಾಖಲಿಸಿದೆ. ಆರೆಂಜ್ ರೂಡ್ ವಿರುದ್ಧದ ಪಂದ್ಯದಲ್ಲಿ ಸಂಜನಾ ಹೊರೊ (18ನೇ ನಿಮಿಷ), ಅನಿಶಾ ಸಾಹು (58ನೇ ನಿಮಿಷ) ಗೋಲು ಗಳಿಸಿದರು.

ಬ್ಯಾಸ್ಕೆಟ್‌ಬಾಲ್: ಕೆಎಸ್‌ಪಿ ಸೆಮಿಗೆ

ಬೆಂಗಳೂರು: ಸಾಂಘಿಕ ಆಟವಾಡಿದ ಕೆಎಸ್‌ಪಿ ತಂಡವು ಗುರುವಾರ ಎರಡೂ ಪಂದ್ಯಗಳನ್ನು ಗೆದ್ದು ಎಂ.ಸಿ. ಶ್ರೀನಿವಾಸ ಸ್ಮರಣಾರ್ಥ ರಾಜ್ಯ ಬಿ ಡಿವಿಷನ್ ಬ್ಯಾಸ್ಕೆಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನಲ್ಲಿ ಸೆಮಿಫೈನಲ್ ಪ್ರವೇಶಿಸಿದವು.

ಎಂಎನ್‌ಕೆ ರಾವ್ ಪಾರ್ಕ್ ಬಿ.ಸಿ, ಭಾರತ್ ಸ್ಪೋರ್ಟ್ಸ್ ಯೂನಿಯನ್ ಮತ್ತು ವಿಮಾನಪುರ ಬಿ.ಸಿ ತಂಡಗಳೂ ನಾಲ್ಕರ ಘಟ್ಟ ಪ್ರವೇಶಿಸಿದವು.

ಕಂಠೀರವ ಕ್ರೀಡಾಂಗಣದಲ್ಲಿ ನಡೆದ ಸೂಪರ್ ಲೀಗ್ ಹಂತದ ಪಂದ್ಯಗಳಲ್ಲಿ ಕೆಎಸ್‌ಪಿ ತಂಡವು 99–80ರಿಂದ ಎಂಎನ್‌ಕೆ ರಾವ್ ಪಾರ್ಕ್ ತಂಡವನ್ನು ಮಣಿಸಿತು. ಕೆಎಸ್‌ಪಿ ಪರ ಅಭಿಷೇಕ್ ಗೌಡ ಮತ್ತು ಧೀರಜ್ ರೆಡ್ಡಿ ಕ್ರಮವಾಗಿ 33 ಮತ್ತು 24 ಅಂಕಗಳನ್ನು ಗಳಿಸಿ ಮಿಂಚಿದರು.

ಮತ್ತೊಂದು ಪಂದ್ಯದಲ್ಲಿ ಕೆಎಸ್‌ಪಿ 74–65ರಿಂದ ಭಾರತ್ ತಂಡವನ್ನು ಮಣಿಸಿತು.

ಇತರ ಪಂದ್ಯಗಳಲ್ಲಿ ಕೋರಮಂಗಲ ಎಸ್‌ಸಿ 58– 45ರಿಂದ ದೇವಾಂಗ ಯೂನಿಯನ್ ತಂಡವನ್ನು; ವಿಮಾನಪುರ 90–53ರಿಂದ ದೇವಾಂಗ ತಂಡವನ್ನು ಸೋಲಿಸಿತು.

ಸ್ಕ್ವಾಷ್: ಕ್ವಾರ್ಟರ್‌ಗೆ ರತಿಕಾ

ಹಾಂಗ್‌ಕಾಂಗ್ (ಪಿಟಿಐ): ಭಾರತದ ರತಿಕಾ ಸೀಲನ್ ಅವರು ಹಾಂಗ್‌ಕಾಂಗ್ ಪಿಎಸ್‌ಎ ಚಾಲೆಂಜ್ ಕಪ್ ಸ್ಕ್ವಾಷ್‌ನ ನಾಲ್ಕನೇ ಲೆಗ್‌ನಲ್ಲಿ ಸ್ಥಳೀಯ ಆಟಗಾರ್ತಿ ಕಾ ಹುಯೆನ್ ಲಿಯುಂಗ್ ವಿರುದ್ಧ 3–2 ಅಂತರದಲ್ಲಿ ಗೆದ್ದು ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದಾರೆ.

ಬುಧವಾರ ನಡೆದ ಎರಡನೇ ಸುತ್ತಿನ ಪಂದ್ಯದಲ್ಲಿ ಆರನೇ ಶ್ರೇಯಾಂಕದ ರತಿಕಾ, ಲಿಯುಂಗ್ ಅವರನ್ನು 4-11, 5-11, 11-4, 11-4, 11-7ರಿಂದ ಸೋಲಿಸಿದರು. ಕಳೆದ ವಾರಾಂತ್ಯದಲ್ಲಿ ಇಂದೋರ್‌ನಲ್ಲಿ ನಡೆದ ಎಚ್‌ಸಿಎಲ್ ಸ್ಕ್ವಾಷ್ ಟೂರ್ನಿಯ ಚೊಚ್ಚಲ ವೃತ್ತಿಪರ ಸ್ಕ್ವಾಷ್ ಅಸೋಸಿಯೇಷನ್ ಟೂರ್ ಪ್ರಶಸ್ತಿ ಗೆದ್ದ ರತಿಕಾ, ಕ್ವಾರ್ಟರ್ ಫೈನಲ್‌ನಲ್ಲಿ ಮಲೇಷ್ಯಾದ ಸೆಹ್ವೇತ್ರ ಕುಮಾರ್ ಅವರನ್ನು ಎದುರಿಸಲಿದ್ದಾರೆ.